ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಭಿಮಾನದ ನಮನ...

ಅಭಿಮಾನೋತ್ಸವದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶಿರಬಾಗಿ ನಮಿಸಿ ಅಭಿನಂದಿಸಿದ್ದು ಹೀಗೆ...ಜತೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದರು.

ಮಂಗಳೂರು

ಭಾನುವಾರ, 10 ಮೇ 2026

ಸಂಪುಟ 48, ಸಂಚಿಕೆ 52, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ಚಿತ್ರದುರ್ಗದಲ್ಲಿ ಯಡಿಯೂರಪ್ಪಗೆ ಅದ್ದೂರಿ ಅಭಿಮಾನೋತ್ಸವ | ಲಕ್ಷಾಂತರ ಜನ ಭಾಗಿ | ಶ್ರೀಗಳ ಉಪಸ್ಥಿತಿ


ದಕ್ಷಿಣ ಭಾರತದ ಕೆಚ್ಚೆದೆಯ ಹೋರಾಟಗಾರ, ಸೈಕಲ್‌ನಲ್ಲೇ ಸುತ್ತಿ ಪಕ್ಷ ಕಟ್ಟಿದ ಬಿಎಸ್‌ವೈ: ಶಾ ಗುಣಗಾನ

ಧೀಮಂತ, ಅಭಿಮಾನದ ಶ್ರೀಮಂತ

ಚಿತ್ರದುರ್ಗ: ಬಿಜೆಪಿ ನಾಯಕ ಮತ್ತು ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ 5 ದಶಕಗಳ ಸುದೀರ್ಘ ಸಾರ್ವಜನಿಕ ಜೀವನ, ಹೋರಾಟವು ಯುವಜನತೆಗೆ ಮಾದರಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ.

ನಗರದ ಮಾದಾರ ಚೆನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ ಸುವರ್ಣೋತ್ಸವದ ಅಂಗವಾಗಿ ಏರ್ಪಡಿಸಿದ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಜನಸೇವೆ, ರೈತರ ಕಲ್ಯಾಣಕ್ಕಾಗಿ ಯಡಿಯೂರಪ್ಪ ಅವರು ದುಡಿದವರು. ಕರ್ನಾಟಕದ ಮುಖ್ಯಮಂತ್ರಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಇರುವ ರಸ್ತೆಯಲ್ಲೇ ಚಲಿಸುವವರು, ಹೊಸದಾಗಿ ಮಾರ್ಗದರ್ಶನ ಮಾಡುವವರು ಇರುತ್ತಾರೆ. ಯಡಿಯೂರಪ್ಪ ಅವರು ಮಾರ್ಗದರ್ಶನ ಮಾಡುವ



ನಾಯಕರಾಗಿ ಹೊರಹೊಮ್ಮಿದ್ದಾರೆ. ಅವರು ಸಾಧಾರಣ ಕುಟುಂಬದಿಂದ ಬಂದವರು. ಅವರ ಇಚ್ಛಾಶಕ್ತಿ, ಸಂಘದ ಸಂಸ್ಕಾರ, ರಾಷ್ಟ್ರಭಕ್ತಿಯು ಅವರ ಜೀವನದುದ್ದಕ್ಕೂ ಮಾರ್ಗದರ್ಶನ ನೀಡಿದೆ ಎಂದು ತಿಳಿಸಿದರು. ದಕ್ಷಿಣ ಭಾರತದಲ್ಲಿ ಯಡಿಯೂರಪ್ಪ ಅವರಂಥ ಹೋರಾಟಗಾರ ಯಾರೂ ಇಲ್ಲ. ಬಸ್ಸು ಅಥವಾ ಸೈಕಲ್ಲಿನಲ್ಲಿ ಹಳ್ಳಿಗಳಿಗೆ ತೆರಳಿ ತಮ್ಮ ಹೋರಾಟದ ಜೀವನ ನಡೆಸಿದ್ದಾರೆ. ಸಾವಿರಾರು ಕಿ.ಮೀ. ಪಾದಯಾತ್ರೆ ಮಾಡಿ ರೈತರ ಪರವಾಗಿ ಹೋರಾಟ ಮಾಡಿದವರು. ಈ ಮೂಲಕ ರೈತ ನಾಯಕರಾಗಿ ಹೊರಹೊಮ್ಮಿದರು. ಇದಕ್ಕಾಗಿ ಅವರು ಜೈಲುವಾಸ ಅನುಭವಿಸಬೇಕಾಯಿತು ಎಂದರು.

2014ರಿಂದ ಕರ್ನಾಟಕಕ್ಕೆ ಬರುತ್ತಿದ್ದೇನೆ. ಅಲ್ಲಿಂದ ಈವರೆಗೆ ಸ್ವಾಮೀಜಿಗಳ ಜತೆ ಅನೇಕ ವೇದಿಕೆಗಳನ್ನು ಹಂಚಿಕೊಂಡಿದ್ದೇನೆ. ಯಡಿಯೂರಪ್ಪ ಅವರ ವ್ಯಕ್ತಿತ್ವದಿಂದ ಎಲ್ಲ ಮತ- ಸಂಪ್ರದಾಯಗಳ ಸ್ವಾಮೀಜಿಗಳು ಇಲ್ಲಿದ್ದಾರೆ. ➡ಪುಟ ೪

ಸರ್ವರ ಏಳಿಗೆಗೆ ಶ್ರಮಿಸಿದ ಬಿಎಸ್‌ವೈ • ವಿಶೇಷ ಪುಟ ೫

ಅಮಿತ್ ಶಾ ಹೇಳಿದ್ದು

- ಯಡಿಯೂರಪ್ಪ ಅವರ ಜೇಬಿನಲ್ಲಿ ಸಣ್ಣ ಡೈರಿ ಇರುತ್ತಿತ್ತು. ಅವರನ್ನು ಸಂಪರ್ಕ ಮಾಡುವವರು ಮತ್ತು ಅವರ ಸಮಸ್ಯೆಯನ್ನು ಅದರಲ್ಲಿ ಬರೆಯುತ್ತಿದ್ದರು. ಅವರ ಇಂಥ ಸಂಪರ್ಕ ಸೂತ್ರವು ನನ್ನಂಥವನಿಗೂ ಜನರ ಸಂಪರ್ಕ ಮಾಡುವುದಕ್ಕೆ ಸ್ಫೂರ್ತಿಯಾಗಿದೆ. ಯುವ ಕಾರ್ಯಕರ್ತರು ಯಡಿಯೂರಪ್ಪ ಅವರ ಜೀವನದಿಂದ ಒಂದಲ್ಲ ಒಂದು ಆದರ್ಶವನ್ನು ಪಡೆಯಬೇಕು.
- ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಬಾಗಿಲು ತೆರೆಯುವಂತೆ ಮಾಡಿದ್ದೇ ಯಡಿಯೂರಪ್ಪ. ದಕ್ಷಿಣದ ಬಿಜೆಪಿ ಇತಿಹಾಸದಲ್ಲಿ ಯಡಿಯೂರಪ್ಪ ಅವರ ಪಾತ್ರ ಸುವರ್ಣಾಕ್ಷರಗಳಲ್ಲಿ ದಾಖಲಾಗುವುದು ಖಚಿತ. ಅನೇಕ ದಶಕಗಳಿಂದ ಯಡಿಯೂರಪ್ಪ ಬಿಜೆಪಿಗೆ ಮಾರ್ಗದರ್ಶನ ಮಾಡಿ ಮುನ್ನಡೆಸಿದ್ದಾರೆ. ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.
- ಚಿತ್ರದುರ್ಗದ ಮದಕರಿ ನಾಯಕ ಮತ್ತು ಒನಕೆ ಓಬವ್ವನ ಕಥೆಯನ್ನು ಪ್ರತಿ ಪೋಷಕರು ಮಕ್ಕಳಿಗೆ ಹೇಳಿ ಪ್ರೇರಣೆ ನೀಡಿದ್ದಾರೆ. ಹೈದರಾಲಿಯ ಸೇನೆಗೆ ಮಣ್ಣು ಮುಕ್ಕಿಸಿದ ಯಶೋಗಾಥೆ ಸ್ಫೂರ್ತಿದಾಯಕವಾದದ್ದು. ಇಂತಹ ನೆಲಕ್ಕೆ ನಾನು ಬಂದಿರುವುದು ಸಂತೋಷವಾಗಿದೆ.



ಅಭಿಮಾನಿಗಳ ಜನಸಾಗರ, ಎಲ್ಲೆಲ್ಲೂ ಸಡಗರ...


ಚಿತ್ರದುರ್ಗ: ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರಿಗೆ ಹೊದಿಸಿ ಸನ್ಮಾನಿಸಿದ ಶಾಲನ್ನು ಕಾರ್ಯಕ್ರಮದ ಕೊನೆಯಲ್ಲಿ ಯಡಿಯೂರಪ್ಪ ಅವರು ಮಗ ವಿಜಯೇಂದ್ರ ಅವರ ಹೆಗಲಿಗೆ ಹಾಕಿ ಆಶೀರ್ವದಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವಲಾಗಿರುವ ಸಂದೇಶ ರವಾನಿಸಿದರು. ಈ ನಡುವೆ ಕಾರ್ಯಕರ್ತರೆಲ್ಲರೂ ಒಂದಾಗಿ ಸಂಘಟನೆಗಾಗಿ ಶ್ರಮಿಸುವ ಶುಭ ಸಂದೇಶ ನೀಡಲಾಯಿತು.

• ವಿವರ ಪುಟ ೪

ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ: ಯಡಿಯೂರಪ್ಪ

ನನ್ನ ಜೀವನದ ಪರ್ವ ದಿನ, ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ

ಚಿತ್ರದುರ್ಗ: ನನ್ನ ಜೀವನದ ಕೊನೆಯ ಉಸಿರು ಇರುವವರೆಗೂ ವಿರಮಿಸುವುದಿಲ್ಲ. ದೇಶಕ್ಕಾಗಿ,



ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಇದು ನನ್ನ ಜೀವನದ ಪರ್ವ ದಿನ. ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ. ನಾನಿಂದು ರಾಜಕೀಯ ನಾಯಕನಾಗಿ ನಿಂತಿಲ್ಲ. ನಿಮ್ಮ ಮಗನಾಗಿ ನಿಂತಿದ್ದೇನೆ. ನಿಮ್ಮ ಅಭಿಮಾನದ ಜನಸಾಗರದ ಮುಂದೆ ನನ್ನ ಮಾತು ಬರುತ್ತಿಲ್ಲ, ಜನ್ಮ ಜನ್ಮಾಂತರದಲ್ಲೂ ನಾನು ಋಣಿಯಾಗಿರುತ್ತೇನೆ ಎಂದು ತಿಳಿಸಿದರು. ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿರುವುದರಿಂದ ಹಿಡಿದು, ಅನೇಕ ಹೋರಾಟ ಮಾಡಿ ಬಂದಿದ್ದೇನೆ. ➡ಪುಟ ೪

ಬಿಎಸ್‌ವೈ ಜನನಾಯಕ: ಬಿ.ವೈ.ವಿಜಯೇಂದ್ರ

ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ

ಚಿತ್ರದುರ್ಗ: ನಾಡು ಕಂಡ ಧೀಮಂತ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಕ್ಕಾಗಿ



ಹೋರಾಟ ಮಾಡಲಿಲ್ಲ. ಬದಲಿಗೆ ಜನರಿಗಾಗಿ ಹೋರಾಟ ಮಾಡಿದವರು. ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ಬಿಎಸ್‌ವೈ ಅವರು ಜನನಾಯಕರಾದವರು. ನನ್ನಂತಹ ಅನೇಕರಿಗೆ ಪ್ರೇರಣೆಯಾದವರು. ಇಂದು ಈ ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಜನರು ಬಂದಿರುವುದು ನೋಡಿದರೆ ಬಿಎಸ್‌ವೈ ಅವರ ಮೇಲೆ ಎಂತಹ ಅಭಿಮಾನವಿದೆ ಎಂಬುದು ತಿಳಿಯುತ್ತದೆ. ಇದೊಂದು ಐತಿಹಾಸಿಕ ಕ್ಷಣ. ಬಿಎಸ್‌ವೈ ಅವರ ಐವತ್ತು ವರ್ಷಗಳ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಕ್ಷಣ ಎಂದು ಹೇಳಿದರು. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಇದ್ದಿಲನ್ನು ಆಸಕ್ತಿಯಿಂದ ಸಮುದ್ರದ ನೀರಿನಲ್ಲಿ ತೊಳೆದರೆ ಅದು ಬೆಳ್ಳಗಾಗುವುದೇ?

▲ ನೀತಿಮಂಜರಿ

ಕಿರುಸುದ್ದಿ

ರಾಜ್ಯದಲ್ಲೂ ಬಿಜೆಪಿ ಹವಾ

ಶಿವಮೊಗ್ಗ: ಪಂಚ ರಾಜ್ಯ ಚುನಾವಣೆ ಫಲಿತಾಂಶದ ಬಳಿಕ ಅತೀವ ಉತ್ಸಾಹದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಇದೀಗ ಕರ್ನಾಟಕದಲ್ಲೂ ತನ್ನ ಹವಾ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದೆ.

• ಪುಟ ೫

ಭಾರತ-ಆಫ್ರಿಕಾ ನಡುವಿನ ಸಂಬಂಧ ವೃದ್ಧಿಗೆ ಸಿದ್ಧತೆ

• ಪುಟ ೭

ಹಾರ್ಮುಜ್ ಬಳಿ ಭಾರತೀಯ ನಾವಿಕನ ಸಾವು

• ಪುಟ ೭

ಆಪ್ ಸಚಿವನ ಬಂಧನ

• ಪುಟ ೭

ಸಿಎಂ ಆಗಿ ಸುವೇಂದು, ಸಚಿವರಾಗಿ ಐವರು ಪ್ರಮಾಣ

ಪ.ಬಂಗಾಳದಲ್ಲಿ ಇನ್ನು ಬಿಜೆಪಿ ಶಕೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಶನಿವಾರ ಹೊಸ ಅಧ್ಯಾಯವೊಂದು ಆರಂಭವಾಗಿದೆ. ಕೋಲ್ಕತ್ತಾದ ಐತಿಹಾಸಿಕ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಸುವೇಂದು ಅಧಿಕಾರಿ, ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ರಾಜ್ಯಪಾಲ ಆರ್.ಎನ್. ರವಿ, ಸುವೇಂದು ಅವರಿಗೆ ಗೌಪ್ಯತೆ ಮತ್ತು ಅಧಿಕಾರದ ಪ್ರಮಾಣವಚನ ಬೋಧಿಸಿದರು. ಈ ಐತಿಹಾಸಿಕ ಕ್ಷಣಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿಯ ರಾಷ್ಟ್ರೀಯ ನಾಯಕರು ಹಾಗೂ ಎನ್‌ಡಿಎ ಆಡಳಿತವಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾದರು. ➡ಪುಟ ೪



- ವೇದಿಕೆಯಿಂದ ಬಂಗಾಳ ಜನತೆಗೆ ಶಿರಬಾಗಿ ನಮಸ್ಕರಿಸಿದ ಪ್ರಧಾನಿ
- ಪಕ್ಷದ ಹಿರಿಯ ಕಾರ್ಯಕರ್ತ 94 ವರ್ಷದ ಮಖನ್ಲಾಲ್ ಸರ್ಕಾರ್ ಕಾಲಿಗೆರಗಿ ಆಶೀರ್ವಾದ ಪಡೆದ ಮೋದಿ

ಸರ್ಕಾರ ರಚಿಸಲು ಟಿವಿಕೆಗೆ ರಾಜ್ಯಪಾಲರ ಅನುಮತಿ

ತಮಿಳ್ನಾಡಲ್ಲಿಂದು ದಳಪತಿ ಪ್ರತಿಜ್ಞೆ

ಚೆನ್ನೈ: ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ನಟ ಹಾಗೂ ರಾಜಕಾರಣಿ ಜೋಸೆಫ್ ವಿಜಯ್ ಅವರಿಗೆ ರಾಜ್ಯಪಾಲರು ಶನಿವಾರ ಅನುಮತಿ ನೀಡಿದ್ದಾರೆ. 234 ಸದಸ್ಯ ಬಲದ ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಾದ ಬೆಂಬಲವನ್ನು ಅವರ ಪಕ್ಷ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಡೆದುಕೊಂಡಿದೆ. ವಿಜಯ್ ಅವರು ಭಾನುವಾರ ಬೆಳಗ್ಗೆ 10 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ವಿಜಯ್ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿ 120 ಶಾಸಕರ ಬೆಂಬಲ ಪತ್ರಗಳನ್ನು ಸಲ್ಲಿಸಿದರು. ಬಳಿಕ ವಿದಲೈ ಚಿರುತೈಗಲ್ ಕಚ್ಚಿ (ವಿಸಿಕೆ), ಭಾರತೀಯ ಕಮ್ಯೂನಿಸ್ಟ್ ಪಕ್ಷ (ಸಿಪಿಐ), ಭಾರತೀಯ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್) ಸಿಪಿಐ(ಎಂ) ಮತ್ತು ಕಾಂಗ್ರೆಸ್ ಪಕ್ಷಗಳು ಟಿವಿಕೆ ಮುಖ್ಯಸ್ಥ ವಿಜಯ್ ಅವರಿಗೆ ಬೇಷರತ್ ಬೆಂಬಲ ಘೋಷಿಸಿ ಮೈತ್ರಿ ಸರ್ಕಾರ ರಚನೆಗೆ ಬೆಂಬಲ ನೀಡಿವೆ.




59 ವರ್ಷಗಳ ಬಳಿಕ ತಮಿಳುನಾಡಿಗೆ ಮೊದಲ ಬಾರಿಗೆ ದ್ರಾವಿಡೇತರ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ವಿಜಯ್ ಪಾತ್ರರಾಗಿದ್ದಾರೆ. ಆದರೆ, ಅವರೊಂದಿಗೆ ಸಚಿವ ಸಂಪುಟಕ್ಕೆ ಎಷ್ಟು ಮಂದಿಯನ್ನು ಸೇರಿಸಿಕೊಳ್ಳಲಾಗುತ್ತದೆ ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ➡ಪುಟ ೪

ಸತೀಶನ್ ಆಯ್ಕೆಗೆ ಮುಸ್ಲಿಂ ಒತ್ತಡ

ಹೊಸದಿಲ್ಲಿ/ತಿರುವನಂತಪುರಂ: ಕೇರಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಗೆಲುವು ಸಾಧಿಸಿ ಆರು ದಿನಗಳು ಕಳೆದಿದ್ದು, ಇನ್ನೂ ಸಿಎಂ ಯಾರಾಗಬೇಕು ಎಂಬುದರ ಬಗ್ಗೆ ನಿರ್ಣಯಿಸಲು ಕಾಂಗ್ರೆಸಿನಲ್ಲಿ ತೀವ್ರ ಕಸರತ್ತು ನಡೆದಿದೆ. ಸಿಎಂ ಸ್ಥಾನಕ್ಕೆ ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ರಮೇಶ್ ಚೆನ್ನಿತ್ತಲ ಅವರ ನಡುವೆ ತೀವ್ರ ಪೈಪೋಟಿ ನಡೆದಿದೆ. ಈ ನಡುವೆ ಮುಸ್ಲಿಂಲೀಗ್ ಸೇರಿದಂತೆ ಮತೀಯವಾದಿ ಗುಂಪುಗಳು ವಿ.ಡಿ.ಸತೀಶನ್ ಅವರನ್ನೇ ಸಿಎಂ ಗಾದಿಗೆ ಆಯ್ಕೆ ಮಾಡಬೇಕೆಂದು ತೀವ್ರ ಒತ್ತಡ ಹೇರಿದ್ದು, ಅವರ ಆಯ್ಕೆಗಾಗಿ ಬೀದಿಗಳಲ್ಲಿ ಶಕ್ತಿ ಪ್ರದರ್ಶನಕ್ಕೂ ಸಿದ್ಧ ಎಂಬ ಎಚ್ಚರಿಕೆ ಸಂದೇಶವನ್ನೂ ನೀಡಿವೆ. ➡ಪುಟ ೪

ಕೇರಳ ಸಿಎಂ ಆಯ್ಕೆಗೆ ಕಾಂಗ್ರೆಸ್ ಕಸರತ್ತು, ಕೆ.ಸಿ.ವೇಣುಗೋಪಾಲ್ ಆಯ್ಕೆಯತ್ತ ವಿರುದ್ಧ ಆಕ್ರೋಶ



ಉಡುಪಿ ಜಿಲ್ಲೆಗೇ ಐದು ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ

ಬೆಂಗಳೂರು/ಹೊಸದಿಲ್ಲಿ: ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು 2025ನೇ ಸಾಲಿನ ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ ವಿಜೇತರನ್ನು ಘೋಷಿಸಿದ್ದು, ರಾಜ್ಯದ 6 ಗ್ರಾಮ ಪಂಚಾಯತ್‌ಗಳು ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾಗಿವೆ. ಅದರಲ್ಲೂ ಐದು ಪ್ರಶಸ್ತಿಗಳು ಉಡುಪಿ ಜಿಲ್ಲೆಗೆ ಸಂದಿರುವುದು ಮತ್ತೊಂದು ವಿಶೇಷ. ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣದ 9 ವಿಷಯಗಳಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಗ್ರಾಮ ಪಂಚಾಯತ್‌ಗಳನ್ನು ಗುರುತಿಸುತ್ತದೆ. ಇದರಲ್ಲಿ ಅತ್ಯುತ್ತಮ ಸಾಧನೆ ತೋರಿ ವಿಜೇತರಾಗುವ ಗ್ರಾಮ ಪಂಚಾಯತ್‌ಗಳಿಗೆ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ ವಿಕಾಸ್ ಪುರಸ್ಕಾರಗಳನ್ನು ನೀಡುತ್ತದೆ. ಈ ಬಾರಿ ಕೇಂದ್ರ ಸರ್ಕಾರ ದೇಶಾದ್ಯಂತ ಒಟ್ಟು 42 ಪಂಚಾಯತ್‌ಗಳನ್ನು ಆಯ್ಕೆ ಮಾಡಿದೆ. ಜೂ.3ರಂದು ಹೊಸದಿಲ್ಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ರಾಜ್ಯದ 6 ಗ್ರಾ.ಪಂಗಳು ಪ್ರಶಸ್ತಿಗೆ ಭಾಜನ

ಎರಡು ವಿಭಾಗಗಳಲ್ಲಿ ಪ್ರಶಸ್ತಿ: ಪ್ರಶಸ್ತಿಗಳನ್ನು ಎರಡು ವಿಭಿನ್ನ ವರ್ಗಗಳ ಅಡಿಯಲ್ಲಿ ನೀಡಲಾಗುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣದ 9 ವಿಷಯಗಳಲ್ಲಿನ ಅತ್ಯುತ್ತಮ ಕಾರ್ಯಕ್ಷಮತೆಗಾಗಿ ಗ್ರಾಮ ಪಂಚಾಯತ್‌ಗಳನ್ನು ಗುರುತಿಸುತ್ತದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,61,900 (2,60,200)	ಅಪರಂಜಿ ಚಿನ್ನ 15,000 (15,030)	ಆಭರಣ ಚಿನ್ನ: 13,965 (13,995)	ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.25



ಸಿಂಧೂ ಜಲ ಒಪ್ಪಂದ ರದ್ದತಿಗೆ ಒಂದು ವರ್ಷ

ನೀರಿನ ಹರಿವಿನ ತಡೆಗೆ ಭಾರತ ತೆಗೆದುಕೊಂಡ ಕ್ರಮಗಳೇನು?

ಪಾಕಿಸ್ತಾನ ಕಳೆದುಕೊಂಡಿದ್ದು ಏನು? ಎಷ್ಟು?



ಅಜಿತ್ ಶೆಟ್ಟಿ ಹೆರಂಜೆ

ಸಿಂಧೂ ಜಲ ಒಪ್ಪಂದವು (ಇಂಡಸ್ ವಾಟರ್ ಟ್ರೀಟಿ-ಐಡಬ್ಲ್ಯುಟಿ) 1960ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ವಿಶ್ವ ಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಸ್ಥಾಪಿತವಾದ ಜಲ ಹಂಚಿಕೆ ಒಪ್ಪಂದ. ಸಿಂಧೂ ನದಿ ಮತ್ತು ಅದರ ಉಪನದಿಗಳಾದ ಝೇಲಂ, ಚೆನಾಬ್, ರವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನೀರನ್ನು ಎರಡೂ ದೇಶಗಳ ನಡುವೆ ಹೇಗೆ ಹಂಚಿಕೊಳ್ಳಬೇಕು ಎಂಬ ನಿಯಮಗಳನ್ನು ಈ ಒಪ್ಪಂದ ನಿಗದಿಪಡಿಸಿತ್ತು. ಒಪ್ಪಂದದ ಪ್ರಕಾರ ಮೂರು ಪೂರ್ವ ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನೀರು ಭಾರತಕ್ಕೆ ಸೇರಿದ್ದರೆ, ಝೇಲಂ, ಚೆನಾಬ್ ಮತ್ತು ಸಿಂಧೂ ಎಂಬ ಮೂರು ಪಶ್ಚಿಮ ನದಿಗಳ ನೀರು ಮುಖ್ಯವಾಗಿ ಪಾಕಿಸ್ತಾನಕ್ಕೆ ಸೇರಬೇಕಿತ್ತು.

ಒಪ್ಪಂದದ ಅಡಿಯಲ್ಲಿ ಭಾರತವು ನಿಯಮಿತವಾಗಿ ನದಿ ನೀರಿನ ಹರಿವಿನ ದತ್ತಾಂಶಗಳನ್ನು ಪಾಕಿಸ್ತಾನದೊಂದಿಗೆ ಹಂಚಿಕೊಳ್ಳಬೇಕಾಗಿತ್ತು.

ಸಿಂಧೂ ಜಲ ಒಪ್ಪಂದವು ಕೇವಲ ನದಿ ನೀರು ಹಂಚಿಕೆಯ ಒಪ್ಪಂದವಾಗಿರದೆ ಪಾಕಿಸ್ತಾನದಂತಹ ಕೃಷಿ ಪ್ರಧಾನ ದೇಶಕ್ಕೆ ಅದು ಬದುಕಿನ ಜೀವನಾಡಿಯಾಗಿದೆ. ಪಾಕಿಸ್ತಾನದ ಕೃಷಿ ವಲಯವು ಸಂಪೂರ್ಣವಾಗಿ ಸಿಂಧೂ ಜಲಾನಯನ ನೀರಾವರಿ ವ್ಯವಸ್ಥೆಯ(ಐಬಿಐಎಸ್) ಮೇಲೆ ಅವಲಂಬಿತವಾಗಿದ್ದು, ಈ ವ್ಯವಸ್ಥೆ ಪಾಕಿಸ್ತಾನದ ಸುಮಾರು 16.7 ಮಿಲಿಯನ್ ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. ಪಾಕಿಸ್ತಾನದ ಒಟ್ಟು ಆಹಾರ ಉತ್ಪಾದನೆಯ ಶೇ.90 ಭಾಗ ಈ ನೀರಾವರಿ ಆಧಾರಿತ ಕೃಷಿಯಿಂದಲೇ ಬರುತ್ತದೆ **(ಆಧಾರ: ಪಾಕಿಸ್ತಾನ ಕೃಷಿ ಸಂಶೋಧನಾ ಪರಿಷತ್ತು).**

ರದ್ದತಿ ಎಂದರೇನು?

ಈ ಒಪ್ಪಂದದಲ್ಲಿ ಎರಡು ಮಹತ್ವದ ಬಿಂದುಗಳಿವೆ. 2025ರ ಏಪ್ರಿಲ್‌ನಲ್ಲಿ ಭಾರತ ಸರ್ಕಾರ ಸಿಂಧೂ ಜಲ ಒಪ್ಪಂದದ ನಿಯಮಗಳ ಮರುಪರಿಶೀಲನೆಗೆ ನೋಟಿಸ್ ನೀಡಿ ಅದನ್ನು ಅಮಾನತುಗೊಳಿಸಿದೆ. ರಕ್ತ ಮತ್ತು ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಎಂಬ ಭಾರತ ಸರ್ಕಾರದ ನಿಲುವು ಈ ಅಮಾನತಿಗೆ ಆಧಾರವಾಗಿದ್ದು, ಈ ಅಮಾನತು ಎರಡು ಬಹಳ ಮಹತ್ವದ ಆಯಾಮಗಳನ್ನು ಹೊಂದಿದೆ. ಮೊದಲನೆಯದಾಗಿ, ಭಾರತ ಕಿಶನ್ ಗಂಗಾ ಮತ್ತು ರಾಟಲ್ ಜಲವಿದ್ಯುತ್ ಯೋಜನೆಗಳ ನಿರ್ಮಾಣದ ವೇಗ ಹೆಚ್ಚಿಸಿದ ಪರಿಣಾಮವಾಗಿ ಪಾಕಿಸ್ತಾನಕ್ಕೆ ಹರಿಯುವ ನೀರಿನ ಪ್ರಮಾಣದಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹೋಗುತ್ತಿದ್ದ ನೀರನ್ನು ತಡೆಹಿಡಿಯಲು ಶಹಪುರ್ ಕಿಂಡಿ ಅಣೆಕಟ್ಟು ಮುಕ್ತಾಯದ ಹಂತದಲ್ಲಿದ್ದು, ಇದರ ಪರಿಣಾಮವಾಗಿ ಪ್ರಾಯೋಗಿಕವಾಗಿ ಪಾಕಿಸ್ತಾನಕ್ಕೆ ಈ ನದಿಯ ನೀರಿನ ಹರಿವು ಶೂನ್ಯ ಮಟ್ಟಕ್ಕೆ ಬಂದಿದೆ. ಪಾಕಿಸ್ತಾನದ ನೀರಾವರಿ ಇಲಾಖೆಯ ವರದಿಯ ಪ್ರಕಾರ ದೇಶದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಳೆದ ದಶಕದ ಸರಾಸರಿಗಿಂತ ಶೇ.30ರಷ್ಟು ಕಡಿಮೆಯಾಗಿದೆ.

ಇದರ ಎರಡನೇ ಪ್ರಮುಖ ಅಂಶವೆಂದರೆ ಹರಿವಿನ ದತ್ತಾಂಶ ಹಂಚಿಕೆ ನಿಲ್ಲಿಸುವುದು – ಇದರಿಂದ ಉಂಟಾಗುವ ಅನಿಶ್ಚಿತ ನೀರಿನ ಹರಿವು ನಿಲ್ಲಿಸುವುದಕ್ಕಿಂತಲೂ ಹೆಚ್ಚಿನ ಅಪಾಯಕಾರಿಯಾಗಿದೆ. ಒಪ್ಪಂದದ ಅಮಾನತು ಕೇವಲ ನೀರಿನ ಹರಿವನ್ನು ತಡೆಯುವುದಕ್ಕೆ ಸೀಮಿತವಾಗಿಲ್ಲ ಎಂಬ ವಿಷಯ ಬಹಳ ಮಹತ್ವದ್ದಾಗಿದೆ. ಒಪ್ಪಂದದ ನಿಯಮಗಳ ಅಡಿಯಲ್ಲಿ ಭಾರತ ಪ್ರತಿ ವರ್ಷ ನದಿ ನೀರಿನ ಹರಿವಿನ ಮಾಹಿತಿ, ಮಳೆಯ ಪ್ರಮಾಣ ಮತ್ತು ಅಣೆಕಟ್ಟುಗಳ ನೀರಿನ ಮಟ್ಟದ ದತ್ತಾಂಶಗಳನ್ನು ನಿಯಮಿತವಾಗಿ ಪಾಕಿಸ್ತಾನಕ್ಕೆ ನೀಡಬೇಕಾಗಿತ್ತು. ಈ ಪೂರ್ವ ಮಾಹಿತಿ ರೈತರು ಬಿತ್ತನೆ ಮತ್ತು ನೀರಾವರಿ ಯೋಜನೆ ರೂಪಿಸಲು ಮತ್ತು ಆಚಾನಕ್ ಪ್ರವಾಹ ಅಥವಾ ಬರ ಪರಿಸ್ಥಿತಿ ನಿಭಾಯಿಸಲು ಅತ್ಯಂತ ಅವಶ್ಯಕವಾಗಿತ್ತು. ಈ ದತ್ತಾಂಶ ಹಂಚಿಕೆ ನಿಂತ ನಂತರ ಪಾಕಿಸ್ತಾನದ ಕೃಷಿ ಮತ್ತು ನೀರಾವರಿ ಯೋಜನೆಗಳು ಸಂಪೂರ್ಣ ಅನಿಶ್ಚಿತತೆಯಲ್ಲಿ ನಡೆಯಬೇಕಾದ ಸ್ಥಿತಿ ಬಂದಿದೆ.

ದತ್ತಾಂಶ ಹಂಚಿಕೆ ನಿಂತ ಪರಿಣಾಮ ಎಷ್ಟು ತೀವ್ರವಾಗಿದೆ ಎಂದರೆ ಅದು ಅಂಕಿಅಂಶಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇಂಡಸ್ ರಿವರ್ ಸಿಸ್ಟಮ್



ಅಥಾರಿಟಿ (ಐಆರ್‌ಎಸ್‌ಎ) ವರದಿಯ ಪ್ರಕಾರ ಕಳೆದ ಒಂದು ವರ್ಷದಲ್ಲಿ ಸಿಂಧ್ ಪ್ರಾಂತ್ಯಕ್ಕೆ ಸಿಗಬೇಕಾಗಿದ್ದ ನೀರಿನ ಪ್ರಮಾಣದಲ್ಲಿ ಶೇ.35ರಿಂದ 40ರಷ್ಟು ಕೊರತೆ ಉಂಟಾಗಿದೆ. ನದಿ ನೀರಿನ ಮಟ್ಟ ಮೊದಲೇ ತಿಳಿಯದ ಕಾರಣ ಖಾರಿಫ್ ಮತ್ತು ರಬಿ ಹಂಗಾಮಿನ ಬಿತ್ತನೆ ವೇಳಾಪಟ್ಟಿ ಅಸ್ತವ್ಯಸ್ತವಾಗಿ ಬೆಳೆ ನಷ್ಟ ಭಾರಿ ಪ್ರಮಾಣದಲ್ಲಿ ಸಂಭವಿಸಿದೆ. ಮಾರ್ಚ್ 2026ರ ವಿಶ್ವಸಂಸ್ಥೆ ಸಭೆಯಲ್ಲಿ ಭಾರತ, ಭಯೋತ್ಪಾದನೆ ನಿಲ್ಲದ ಹೊರತು ಈ ವಿಚಾರದಲ್ಲಿ ಭವಿಷ್ಯದಲ್ಲಿ ಯಾವ ಚರ್ಚೆಯೂ ಸಾಧ್ಯವಿಲ್ಲ ಎಂಬ ನಿಲುವನ್ನು ಸ್ಪಷ್ಟಪಡಿಸಿ ಪಾಕ್‌ಗೆ ರಾಜತಾಂತ್ರಿಕ ಸೆಡ್ಡು ಹೊಡೆದಿದೆ.



ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳು

ಸಿಂಧೂ ನದಿ ನೀರಿನ ಹರಿವು ನಿಂತ ನೇರ ಪರಿಣಾಮ ಪಾಕಿಸ್ತಾನದ ಆಹಾರ ಧಾನ್ಯ ಉತ್ಪಾದನೆಯ ಮೇಲೆ ಆಗಿದೆ. ಪಾಕಿಸ್ತಾನದ ಪ್ರಮುಖ ಪತ್ರಿಕೆ ದಿ ಡಾನ್ ಮತ್ತು ಕೃಷಿ ತಜ್ಞರ ವರದಿಯ ಪ್ರಕಾರ, ಪಾಕಿಸ್ತಾನದ ನೀರಾವರಿ ವ್ಯವಸ್ಥೆಯಲ್ಲಿ ನೀರಿನ ಹರಿವು ಕಳೆದ ಒಂದು ವರ್ಷದಲ್ಲಿ ಶೇ.30ರಿಂದ 40 ಕುಂಠಿತವಾಗಿದೆ. ಪ್ರಮುಖ ಆಹಾರ ಬೆಳೆ ಗೋಧಿ ಉತ್ಪಾದನೆಯು 2023–24ರಲ್ಲಿ ದಾಖಲೆಯ 31.8 ಮಿಲಿಯನ್ ಟನ್ ಇದ್ದದ್ದು, 2025–26ರಲ್ಲಿ 28.1 ಮಿಲಿಯನ್ ಟನ್‌ಗೆ ಅಂದರೆ 3.7 ಮಿಲಿಯನ್ ಟನ್ ಕೊರತೆಯಾಗಿದೆ **(ಆಧಾರ: ಯುಎಸ್‌ಡಿಎ ಗ್ರೈನ್ ರಿಪೋರ್ಟ್ ಏಪ್ರಿಲ್ 2026)**. ಇದರ ಪರಿಣಾಮವಾಗಿ, ಪಾಕಿಸ್ತಾನ ಗೋಧಿ ರಫ್ತು ಮಾಡುವ ದೇಶದ ಸ್ಥಾನದಿಂದ ಆಮದು ಮಾಡಿಕೊಳ್ಳುವ ದೇಶವಾಗಿ ಪರಿವರ್ತನೆಗೊಂಡಿದೆ. ಈ ಬಿಕ್ಕಟ್ಟಿನಿಂದಾಗಿ ಪಾಕಿಸ್ತಾನದಲ್ಲಿ ಗೋದಿ ಹಿಟ್ಟಿನ ಬೆಲೆ ಕೆಜಿಗೆ 160 ರೂ. ದಾಟಿದೆ, ಸಬ್ಸಿಡಿ ಹಿಟ್ಟಿಗಾಗಿ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಸಂಕಷ್ಟಕ್ಕೆ ಕೃಷಿ ಉತ್ಪಾದಕತೆಯ ಕುಸಿತವೇ ನೇರ ಕಾರಣ ಪ್ರತಿ ಎಕರೆ ಗೋಧಿ ಇಳುವರಿ ಶೇ.15ರಿಂದ 20 ಕಡಿಮೆಯಾಗಿದ್ದು, ಭತ್ತ ಮತ್ತು ಹತ್ತಿ ಬೆಳೆಗಳ ವ್ಯಾಪ್ತಿ ಸುಮಾರು ಶೇ.20 ಕಡಿಮೆಯಾಗಿದ್ದು, ಸಿಂಧ್ ಪ್ರಾಂತ್ಯದ ಶೇ.33 ನೀರಾವರಿ ಭೂಮಿ ವಿಷಕಾರಿ ಲವಣಾಂಶಗಳ ಪ್ರಮಾಣದಲ್ಲಿ ಹೆಚ್ಚಳ ಕಂಡಿದ್ದು, ಇದು ಕೃಷಿ ಭೂಮಿಯನ್ನು ಬಂಜರು ಮಾಡುತ್ತಿದೆ **(ಆಧಾರ: ಎಂಡಿಪಿಐ ಸಂಶೋಧನಾ ಸಂಸ್ಥೆ).**

ನೀರಿನ ಕೊರತೆಯಿಂದ ಹತ್ತಿ ಬೆಳೆ ನಾಶವಾಗಿ ಜವಳಿಉದ್ಯಮ ತೀವ್ರ ಹೊಡೆತ ಅನುಭವಿಸಿದ್ದು, ಇದು ದೇಶದ ರಫ್ತು ಆದಾಯದ ಶೇ.60 ಭಾಗವನ್ನು ಹೊಂದಿರುವ ಪ್ರಮುಖ ಕ್ಷೇತ್ರವಾಗಿದೆ. ಒಂದೇ ವರ್ಷದಲ್ಲಿ 1.5 ಮಿಲಿಯನ್ ಕಾರ್ಮಿಕರು ಉದ್ಯೋಗ ಕಳೆದುಕೊಂಡು 400ಕ್ಕೂ ಹೆಚ್ಚು ಕೈಗಾರಿಕೆಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ಸಿಂಧೂ ನದಿಯ ಡೆಲ್ಟಾ ಪ್ರದೇಶದಲ್ಲಿ ಸಮುದ್ರದ ಉಪ್ಪುನೀರು 40 ಕಿಲೋಮೀಟರ್ ಒಳಗೆ ನುಗ್ಗಿ ಅಂತರ್ಜಲ ಉಪ್ಪಾಗಿ ಭೂಮಿಯ ಫಲವತ್ತತೆ ನಾಶವಾಗುತ್ತಿದ್ದು, ಲಕ್ಷಾಂತರ ಜನ ವಲಸೆ ಹೋಗುತ್ತಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವಾಗಿ 2026ರ ಜಿಆರ್‌ಎಫ್‌ಸಿ ವರದಿ ಪಾಕಿಸ್ತಾನವನ್ನು ವಿಶ್ವದ ಅಗ್ರ 10 ಆಹಾರ ಬಿಕ್ಕಟ್ಟಿನ ದೇಶಗಳ ಪಟ್ಟಿಯಲ್ಲಿ ಸೇರಿಸುವಂತಾಗಿದ್ದು, 11 ಮಿಲಿಯನ್ ಜನರು ತೀವ್ರ ಆಹಾರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ ಮತ್ತು ಶೇ.40 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ **(ಆಧಾರ: ಐಪಿಸಿ ವಿಶ್ಲೇಷಣೆ, ಫೆಬ್ರವರಿ 2026; ವಿಶ್ವಸಂಸ್ಥೆ)**. ಒಟ್ಟಾರೆ ಸಿಂಧೂ ಜಲ ಒಪ್ಪಂದ ರದ್ದತಿಯಿಂದ ಪಾಕಿಸ್ತಾನದ ಆರ್ಥಿಕತೆಗೆ 27.3 ಬಿಲಿಯನ್ ಡಾಲರ್ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.



ಪಾಕಿಸ್ತಾನದಲ್ಲಿ ಗೋದಿ ಹಿಟ್ಟಿನ ಬೆಲೆ ಕೆಜಿಗೆ 160 ರೂ. ದಾಟಿದೆ


ಪೆಟ್ರೋಲಿಯಂ ಮೇಲೆ ಅಧಿಕ ಅವಲಂಬನೆ ಆರ್ಥಿಕ ಪತನದ ಭಯ



ಜಲವಿದ್ಯುತ್ ಉತ್ಪಾದನೆ ಶೇ.25 ಕುಸಿದ ನಂತರ, ಪಾಕಿಸ್ತಾನವು ವಿದ್ಯುತ್ ಕೊರತೆಯನ್ನು ತುಂಬಲು ಪೆಟ್ರೋಲಿಯಂ ಮತ್ತು ಎಲ್‌ಎನ್‌ಜಿ ಆಮದಿನ ಮೇಲೆ ತೀವ್ರವಾಗಿ ಅವಲಂಬಿತವಾಯಿತು. ಇದರ ಪರಿಣಾಮವಾಗಿ, 2025–26ರಲ್ಲಿ ಇಂಧನ ಆಮದಿಗಾಗಿ ಮಾತ್ರ ಹೆಚ್ಚುವರಿ 1.5 ಬಿಲಿಯನ್ ಡಾಲರ್ ವ್ಯಯವಾಗಿ, ವಿದೇಶಿ ವಿನಿಮಯ ತೀವ್ರ ಒತ್ತಡಕ್ಕೆ ಸಿಲುಕಿ, 4.8 ಬಿಲಿಯನ್ ಸಾಲ ಮರುಪಾವತಿ ಮತ್ತು ಇಂಧನ ಆಮದು ಒತ್ತಡದಿಂದ ಸೌದಿ ಅರೇಬಿಯಾದಿಂದ ತುರ್ತು ನೆರವು ಕೇಳಬೇಕಾದ ಸ್ಥಿತಿ ಬಂದಿದೆ **(ಆಧಾರ: ಐಎಂಎಫ್ ಇಎಫ್‌ಎಫ್ ಪರಾಮರ್ಶೆ 2026)**. ಈ ಸಂಕಷ್ಟದ ನಡುವೆ, 2025–26ರಲ್ಲಿ ಕೊಲ್ಲಿ ಪ್ರದೇಶದಲ್ಲಿ ಉಂಟಾದ ಯುದ್ಧ ಪರಿಸ್ಥಿತಿಯು ಅಂತರಾಷ್ಟ್ರೀಯ ತೈಲ ಬೆಲೆಯನ್ನು ಬ್ಯಾರೆಲ್‌ಗೆ 110–120 ಅಮೆರಿಕನ್ ಡಾಲರ್ ಏರಿತು, ಈಗಾಗಲೇ ದುಬಾರಿಯಾಗಿದ್ದ ಎಲ್‌ಎನ್‌ಜಿ ಆಮದು ವೆಚ್ಚವು ಮತ್ತಷ್ಟು ಹೆಚ್ಚಾಯಿತು. ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 380 ರೂ. ಮೀರಿ ಕೃಷಿ ಮತ್ತು ಸಾರಿಗೆ ವೆಚ್ಚ ಗಗನಕ್ಕೇರಿದ್ದು, ವಿದ್ಯುತ್ ಬೆಲೆ ಯೂನಿಟ್‌ಗೆ 60–70 ರೂ. ತಲುಪಿ ಸಾರಿಗೆ ಹಣದುಬ್ಬರ ಶೇ.12.5 ದಾಟಿದೆ. ಇಂಧನ ಸಾಲ 2.53 ಟ್ರಿಲಿಯನ್ ರೂ. ತಲುಪಿ ದೇಶವು ಐಎಂಎಫ್‌ನ ಕಠಿಣ ಷರತ್ತುಗಳಿಗೆ ಅಡಿಯಾಳಾದ ಸ್ಥಿತಿಯಲ್ಲಿ, ಕೊಲ್ಲಿ ಯುದ್ಧವು ಪಾಕಿಸ್ತಾನದ ಇಂಧನ ಅಭದ್ರತೆಯನ್ನು ಮತ್ತಷ್ಟು ಗಂಭೀರ ಮಟ್ಟಕ್ಕೆ ತಳ್ಳಿದೆ **(ಆಧಾರ: ಎನ್‌ಇಪಿಆರ್‌ಎ ಟ್ಯಾರಿಫ್ ಆರ್ಡರ್ 2026; ಐಎಂಎಫ್ ಕಂಟ್ರಿ ರಿಪೋರ್ಟ್ 2026)**. ಇಂಧನ ಬಿಕ್ಕಟ್ಟು ಎಷ್ಟು ತೀವ್ರವಾಗಿದೆಯೆಂದರೆ, ಪಾಕಿಸ್ತಾನದಲ್ಲಿ ಅಧಿಕೃತ ಘೋಷಣೆ ಇಲ್ಲದೆಯೇ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಆಸ್ಪತ್ರೆ, ಶಾಲೆ ಮತ್ತು ಸರ್ಕಾರಿ ಕಚೇರಿಗಳಲ್ಲಿ ದಿನಕ್ಕೆ 12–16 ಗಂಟೆ ವಿದ್ಯುತ್ ಇಲ್ಲದ ಸ್ಥಿತಿ ಇದ್ದು, ಕೈಗಾರಿಕೆಗಳು ಸ್ಥಗಿತಗೊಂಡು ಲಕ್ಷಾಂತರ ಜನ ರಸ್ತೆಗಿಳಿಯುತ್ತಿದ್ದಾರೆ.



ಪಾಕ್‌ನಲ್ಲಿ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 380 ರೂ. ದಾಟಿದೆ



ಜಲವಿದ್ಯುತ್ ಉತ್ಪಾದನೆ 25% ಕುಸಿತ

ಹೆಚ್ಚುತ್ತಿರುವ ಹಣದುಬ್ಬರ



ದುಬಾರಿ ಜೀವನಕ್ಕೆ ಕಂಗಾಲಾದ ಪಾಕ್

ಜಲ ಮತ್ತು ಇಂಧನ ಬಿಕ್ಕಟ್ಟಿನ ನೇರ ಪರಿಣಾಮ ಪಾಕಿಸ್ತಾನದ ಹಣದುಬ್ಬರದ ಮೇಲೆ ಬಿದ್ದಿದ್ದು, 2026ರ ಆರಂಭದಲ್ಲಿ ದೇಶದ ಒಟ್ಟು ಹಣದುಬ್ಬರ ದರ ಶೇ.6.4 ಇದ್ದರೂ, ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಕಳೆದ 1 ವರ್ಷದಲ್ಲಿ ಶೇ.34–36 ಏರಿಕೆಯಾಗಿ ಸಾರಿಗೆ ಹಣದುಬ್ಬರ ಶೇ.12.5 ತಲುಪಿ ರೈತರು ಮತ್ತು ಕಾರ್ಮಿಕರ ನೈಜ ಜೀವನ ವೆಚ್ಚವು ಭಾರೀ ಒತ್ತಡಕ್ಕೆ ಸಿಲುಕಿದೆ (ಆಧಾರ: ಎಡಿಬಿ ಎಡಿಒ ಏಪ್ರಿಲ್ 2026; ಒಜಿಆರ್‌ಎ ಏಪ್ರಿಲ್ 2026) ಗೋಧಿ ಹಿಟ್ಟು ಕೆಜಿಗೆ 160 ರೂ., ಅಡುಗೆ ಎಣ್ಣೆ ಲೀಟರಿಗೆ 800 ರೂ. ದಾಟಿ ಸಾಮಾನ್ಯ ಜನರ ಕೊಳ್ಳುವ ಶಕ್ತಿ ನಾಶವಾಗಿದ್ದು, ಕಳೆದ 3 ವರ್ಷಗಳಲ್ಲಿ ಪಾಕಿಸ್ತಾನಿ ರೂಪಾಯಿ, ಡಾಲರ್ ಎದುರು ಶೇ.60ರಷ್ಟು ಮೌಲ್ಯವನ್ನು ಕಳೆದುಕೊಂಡಿದೆ (ಆಧಾರ: ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ್). ಈ ಆರ್ಥಿಕ ಸಂಕಷ್ಟವು ದೇಶಾದ್ಯಂತ ತೀವ್ರ ಪ್ರತಿಭಟನೆಗಳಿಗೆ ನಾಂದಿ ಹಾಡಿದೆ. ಕರಾಚಿಯಲ್ಲಿ ವ್ಯಾಪಾರಿಗಳು ಮತ್ತು ಕೈಗಾರಿಕಾ ಕಾರ್ಮಿಕರು ವಿದ್ಯುತ್ ಬೆಲೆ ಏರಿಕೆ ವಿರುದ್ಧ ಬೃಹತ್ ಮುಷ್ಕರ ನಡೆಸಿದ್ದರೆ, ಲಾಹೋರ್ ಮತ್ತು ರಾವಲ್ಪಿಂಡಿಯಲ್ಲಿ ಮಧ್ಯಮ ವರ್ಗದ ಜನರು ಆಹಾರ ಬೆಲೆ ಏರಿಕೆ ವಿರುದ್ಧ ಬೀದಿಗಿಳಿದಿದ್ದಾರೆ. ಖೈಬರ್ ಪಖ್ತುನ್ಖ್ವಾ ಮತ್ತು ಬಲೂಚಿಸ್ತಾನದಲ್ಲಿ ಸರ್ಕಾರಿ ನೌಕರರಿಗೆ ತಿಂಗಳುಗಟ್ಟಲೆ ವೇತನ ಪಾವತಿಸಲು ಸಾಧ್ಯವಾಗದ ಸ್ಥಿತಿ ಎದುರಾಗಿದ್ದು, ಶಿಕ್ಷಕರು ಮತ್ತು ಆರೋಗ್ಯ ಕಾರ್ಯಕರ್ತರು ಕೆಲಸ ಬಿಟ್ಟು ಪ್ರತಿಭಟನೆಗೆ ಇಳಿದಿದ್ದಾರೆ (ಆಧಾರ: ದ ಡಾನ್, ಫೆಬ್ರವರಿ 2026).

ಕಳೆದ 3 ವರ್ಷಗಳಲ್ಲಿ ಪಾಕಿಸ್ತಾನಿ ರೂಪಾಯಿ, ಡಾಲರ್ ಎದುರು **60%** ಮೌಲ್ಯ ಕಳೆದುಕೊಂಡಿದೆ



ಸಾರಿಗೆ ಹಣದುಬ್ಬರ **12.5%**


ಅಡುಗೆ ಎಣ್ಣೆ ಲೀಟರಿಗೆ **800** ರೂ.

ಮಧ್ಯಮ ವರ್ಗದ ಜನರು ಆಹಾರ ಬೆಲೆ ಏರಿಕೆ ವಿರುದ್ಧ ಬೀದಿಗಿಳಿದಿದ್ದಾರೆ



ಪ್ರಾದೇಶಿಕ ಹಿಂಸಾಚಾರ ಬಿಕ್ಕಟ್ಟಿಗೆ ಕಾರಣವಾದ ಜಲದಿಗ್ಬಂಧನ

ಸಿಂಧೂ ನದಿಯ ನೀರನ್ನು ಪಾಕಿಸ್ತಾನದ ಪಂಜಾಬಿನ ಕೃಷಿ ಚಟುವಟಿಗೆ ಹೆಚ್ಚಾಗಿ ಬಳಕೆಯಾಗುತ್ತೆ, ರಾಜಕೀಯವಾಗಿ ಪಾಕಿಸ್ತಾನದ ಈ ರಾಜ್ಯವೇ ಇಡೀ ದೇಶದ ಹಿಡಿತ ಇಟ್ಟಿರುವುದು, ಸಿಂಧೂ ನದಿ ನೀರಿನ ಹರಿವು ಕಡಿಮೆಯಾದ ನಂತರ ಇತರ ಜಲಮೂಲಗಳ ಮೇಲಿನ ಅವಲಂಬನೆ ಹೆಚ್ಚಾಗಿ ಪಾಕಿಸ್ತಾನದಲ್ಲಿ ಉತ್ಪಾದನೆಯಾಗುವ ಬಹುತೇಕ ವಿದ್ಯುತ್ ಪಂಜಾಬ್ ಕೃಷಿ ಕ್ಷೇತ್ರಕ್ಕೆ ಆದ್ಯತೆಯ ಮೇಲೆ ಹರಿದು ಪ್ರಾಂತ್ಯಗಳ ನಡುವೆ ವಿದ್ಯುತ್ ಹಂಚಿಕೆಯ ತೀವ್ರ ಸಂಘರ್ಷ ಉಂಟಾಗಿದೆ.



ಹಾಗಾಗಿ ತಮ್ಮ ವಿದ್ಯುತ್ತಿಗೆ ದುಬಾರಿ ಬೆಲೆ ಕೊಡ ಕೊಡುತ್ತಿದ್ದಾರೆ. ಜನಸಂಖ್ಯೆಯ ಶೇ.60ರಷ್ಟು ಜನರಿಗೆ ಕುಡಿಯುವ ನೀರೂ ಲಭ್ಯವಿಲ್ಲ **(ಆಧಾರ: ಎಎನ್‌ಐ, ಮಾರ್ಚ್ 2026)**. ವಿದ್ಯುತ್ ಬಿಲ್ ದ್ವಿಗುಣವಾದ ನಂತರ 6 ತಿಂಗಳಲ್ಲಿ 200ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದು ನಮ್ಮ ನೀರು ಪಂಜಾಬ್‌ಗೆ, ನಮಗೆ ಕತ್ತಲು ಎಂಬ ಘೋಷಣೆ ಮೊಳಗಿದ್ದು, 2024ರ ಪಿಒಕೆ ಅವಾಮಿ ಆಕ್ಷನ್ ಕಮಿಟಿ ಚಳವಳಿ ಮತ್ತಷ್ಟು ತೀವ್ರ ಸ್ವರೂಪ ಪಡೆದಿದೆ. ಇದೇ ಸಮಯದಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಐಆರ್‌ಎಸ್‌ಎ ದತ್ತಾಂಶದ ಪ್ರಕಾರ ಶೇ.35–40 ನೀರಿನ ಕೊರತೆ ಉಂಟಾಗಿದ್ದು, 1991ರ ಜಲ ಹಂಚಿಕೆ ಒಪ್ಪಂದ ಉಲ್ಲಂಘಿಸಿ ಸಿಂಧ್ ನದಿಯ ಶೇ.70 ನೀರನ್ನು ಪಂಜಾಬ್ ಕೃಷಿ ಮತ್ತು ಸೇನಾ ಒಡೆತನದ ಫಾರ್ಮ್‌ಗಳಿಗೆ ಮೀಸಲಿಡಲಾಗಿದೆ ಎಂದು ದ ಡಾನ್ ವರದಿ ಮಾಡಿದೆ. ಪಾಕಿಸ್ತಾನ ಸೇನೆಯ ವಾಣಿಜ್ಯ ವಿಭಾಗವಾದ ಫೌಜಿ ಫೌಂಡೇಶನ್ ಮತ್ತು ರಕ್ಷಣಾ ಗೃಹ ಪ್ರಾಧಿಕಾರ (ಡಿಎಚ್‌ಎ) ನೀರಾವರಿ ಕಾಲುವೆಗಳ ನಿಯಂತ್ರಣ ಕೈಗೆತ್ತಿಕೊಂಡು ತಮ್ಮ ವಾಣಿಜ್ಯ ಕೃಷಿ ಯೋಜನೆಗಳಿಗೆ ಆದ್ಯತೆಯ ಮೇಲೆ ನೀರು ಪಡೆಯುತ್ತಿದ್ದು, ಸಾಮಾನ್ಯ ರೈತರ ಜಮೀನುಗಳು ಬರಡಾಗುತ್ತಿವೆ. ದೇಶದ ಒಟ್ಟು ಕೃಷಿ ಭೂಮಿಯ ಶೇ.12ರಷ್ಟನ್ನು ಸೇನಾ ಸಂಸ್ಥೆಗಳು ನಿಯಂತ್ರಿಸುತ್ತಿವೆ ಎಂಬ ಅಂದಾಜು ಇದ್ದು **(ಆಧಾರ: ದ ಎಕ್ಸ್‌ಪ್ರೆಸ್ ಟ್ರಿಬ್ಯೂನ್)**, ನಮ್ಮ ಹೊಲಗಳು ಬತ್ತಿಹೋಗುತ್ತಿರುವಾಗ ಸೇನಾ ಫಾರ್ಮ್‌ಗಳು ಹಸಿರಾಗಿರುವುದು ಹೇಗೆ? ಎಂಬ ಪ್ರಶ್ನೆ ಪ್ರತಿಭಟನಾ ಧ್ವನಿಗಳಿಗೆ ಹೊಸ ಚೈತನ್ಯ ನೀಡಿದೆ.

ಪಾಕ್‌ನ ಕಂಠನಾಳ ಕಾಶ್ಮೀರವಲ್ಲ, ಸಿಂಧೂ ನದಿ

ಭಾರತ ಸಿಂಧೂ ಜಲ ಒಪ್ಪಂದ ಅಮಾನತುಗೊಳಿಸಿದ ತಕ್ಷಣ ಪಾಕಿಸ್ತಾನದ ಮಾಜಿ ವಿದೇಶಾಂಗ ಮಂತ್ರಿ ಬಿಲಾವಲ್ ಭುಟ್ಟೋ ಸಿಂಧೂ ನದಿಯಲ್ಲಿ ನಮ್ಮ ನೀರು ಹರಿಯಬೇಕು, ಇಲ್ಲದಿದ್ದರೆ ಅವರ ರಕ್ತ ಹರಿಯುತ್ತದೆಎಂದು ಗುಡುಗಿದರೆ, ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಭಾರತ ಅಣೆಕಟ್ಟು ಕಟ್ಟಿದರೆ 10 ಕ್ಷಿಪಣಿಗಳಿಂದ ನಾಶ ಮಾಡುತ್ತೇವೆ, ನಾವು ಮುಳುಗುತ್ತೇವೆ ಎನಿಸಿದರೆ ಅರ್ಧ ಜಗತ್ತನ್ನು ಮುಳುಗಿಸುತ್ತೇವೆ ಎಂದು ಅಣ್ವಸ್ತ್ರ ಬೆದರಿಕೆ ಒಡ್ಡಿದರು. ಭಾರತ ಈ ಯಾವ ಬೆದರಿಕೆಗೂ ಒಂದೇ ಒಂದು ಪ್ರತಿಕ್ರಿಯೆ ನೀಡದೆ ಮೌನವಾಗಿ ಅಣೆಕಟ್ಟುಗಳ ದ್ವಾರ ಮುಚ್ಚಿತು. ಪಾಕಿಸ್ತಾನ ಸೇನೆ ದಶಕಗಳಿಂದ ಕಾಶ್ಮೀರವನ್ನು ತನ್ನ ಕಂಠನಾಳ (ಜಗುಲಾರ್ ವೇನ್) ಎಂದು ಕರೆಯುತ್ತಿತ್ತು, ಆದರೆ ಆ ದೇಶದ ನಿಜವಾದ ಕಂಠನಾಳ ಕಾಶ್ಮೀರವಲ್ಲ ಸಿಂಧೂ ನದಿ ಎಂಬ ಸತ್ಯವನ್ನು ಮೋದಿ ಸರ್ಕಾರ ಕಳೆದ ಒಂದೇ ವರ್ಷದಲ್ಲಿ ಇಡೀ ವಿಶ್ವಕ್ಕೆ ಸಾಬೀತುಪಡಿಸಿದೆ. ಕೇವಲ ಒಂದು ನದಿಯ ನೀರು ತಡೆದ ಪರಿಣಾಮ ಕೃಷಿ, ಇಂಧನ, ಉದ್ಯಮ, ಹಣದುಬ್ಬರ ಮತ್ತು ಪ್ರಾಂತ್ಯಗಳ ನಡುವಿನ ಸಂಘರ್ಷ ಎಲ್ಲವೂ ಏಕಕಾಲದಲ್ಲಿ ಕುಸಿಯುವ ಸರಣಿ ಕ್ರಿಯೆ ಆರಂಭಗೊಂಡು ದೇಶ ಹಳಿ ತಪ್ಪುವ ಅಂಚಿಗೆ ಬಂದು ನಿಂತಿದೆ. ಈ ಸಂಕಷ್ಟದ ನಡುವೆ ಇರಾನ್–ಅಮೆರಿಕ ಯುದ್ಧ ಎಂಬ ಕೊಲ್ಲಿ ಬಿಕ್ಕಟ್ಟು ಪಾಕಿಸ್ತಾನದ ಮುಸ್ಲಿಂ ಜಗತ್ತಿನಲ್ಲಿನ ಸಮತೋಲನದ ಆಟವನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿ ಗಾಯದ ಮೇಲೆ ಉಪ್ಪು ಸವರಿದಂತಾಯಿತು. ಒಂದು ಕಾಲದಲ್ಲಿ ಅಣ್ವಸ್ತ್ರ ಕೋಟೆ ಎಂದು ಬೀಗುತ್ತಿದ್ದ ಪಾಕಿಸ್ತಾನ 2025ರ ಸೆಪ್ಟೆಂಬರ್‌ನಲ್ಲಿ ಸೌದಿ ಅರೇಬಿಯಾದೊಂದಿಗೆ ರಕ್ಷಣಾ ಒಪ್ಪಂದ ಮಾಡಿಕೊಂಡು 2,600 ಸೈನಿಕರನ್ನು ಡಾಲರ್‌ಗಾಗಿ ನಿಯೋಜಿಸುವ ಅವಮಾನಕ್ಕೆ ತಲೆ ಬಾಗಿದೆ **(ಆಧಾರ: ಎಸ್‌ಎಂಡಿಎ, ಸೆ.17, 2025)**. ಇದು ನಿಜವಾದ ಚಾಣಕ್ಯ ನೀತಿ. ನಮ್ಮ ಒಬ್ಬ ಸೈನಿಕನ ಬೆವರನ್ನೂ ಹರಿಸದೆ, ಒಂದೇ ಒಂದು ಗುಂಡು ಹಾರಿಸದೆ, ಕೇವಲ ನೀರಿನ ದ್ವಾರ ಮುಚ್ಚುವ ಮೂಲಕ ಶತ್ರು ರಾಷ್ಟ್ರವನ್ನು ಮಂಡಿಯೂರುವಂತೆ ಮಾಡಿರುವ ಮೋದಿ ಸರ್ಕಾರದ ಜಲ ದಿಗ್ಬಂದನ ಭಾರತದ ಇತಿಹಾಸದಲ್ಲೇ ಅತ್ಯಂತ ಪ್ರಭಾವಶಾಲಿ ಕಾರ್ಯತಂತ್ರ ವಿಜಯಗಳಲ್ಲಿ ಒಂದಾಗಿ ದಾಖಲಾಗಲಿದೆ.

ಕಿರುಸುದ್ದಿ

ಜೆ.ಇ.ಇ ಮೈನ್ಸ್ ಪ್ರವೇಶ ಪರೀಕ್ಷೆಯಲ್ಲಿ ವಿವೇಕಾನಂದ ವಿದ್ಯಾರ್ಥಿಗಳ ಮಹತ್ತರ ಸಾಧನೆ





ಪುತ್ತೂರು: ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸಿದ 2026ನೇ ಸಾಲಿನ ಜೆ.ಇ.ಇ ಮೈನ್ಸ್ ಪ್ರವೇಶಾತಿ ಪರೀಕ್ಷೆಯಲ್ಲಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಮಡಿಕೇರಿಯ ರಶ್ಮಿ ಕೆ.ಆರ್. ಬಿ.ಪ್ಲಾನಿಂಗ್ 2098ನೇ ರ‍್ಯಾಂಕ್, ಬಿ.ಆರ್ಕ್ 3335 ನೇ ರ‍್ಯಾಂಕ್, ಕಾಸರಗೋಡಿನ ದೀಕ್ಷಾ ಜೆ. ಬಿ.ಪ್ಲಾನಿಂಗ್ 1650ನೇ ರ‍್ಯಾಂಕ್, ಬಿ.ಆರ್ಕ್ 2734ನೇ ರ‍್ಯಾಂಕ್ ಹಾಗೂ ಬೆಂಗಳೂರಿನ ಆದಿತಿ ಯು. ಬಿ.ಪ್ಲಾನಿಂಗ್ 2597ನೇ ರ‍್ಯಾಂಕ್, ಬಿ.ಆರ್ಕ್ 15857ನೇ ರ‍್ಯಾಂಕ್ ಗಳಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಮಂಗಳೂರು: ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 7ಕ್ಕೂ ಅಧಿಕ ಪ್ರಕರಣದಲ್ಲಿ ಭಾಗಿಯಾಗಿ ಬಳಿಕ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹಿನ್ನಲೆಯಲ್ಲಿ ತಲೆಮರೆಸಿಕೊಂಡ ಆರೋಪಿಯನ್ನು ನಗರ ಪೊಲೀಸರು ಬಂಧಿಸಿದ್ದಾರೆ. ಬಂಗ್ರಕುಳೂರು ರಾಯಿಕಟ್ಟೆ ನಿವಾಸಿ ಬಿಜು ಯಾನೆ ವಿಜಯ್ ಬಂಧಿತ ಆರೋಪಿ. ಆರೋಪಿ ವಿಜಯ್ ವಿರುದ್ಧ ನಗರದ ಕಾವೂರು, ಉರ್ವ, ಪಣಂಬೂರು, ಬಂದರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮತೀಯ ಗಲಭೆ, ದರೋಡೆಗೆ ಸಂಚು ಪ್ರಕರಣಗಳು ಸೇರಿದಂತೆ ನಾನಾ ಪ್ರಕರಣಗಳು ಬಾಕಿಯಾಗಿದ್ದವು. ಈತನಿಗೆ ನ್ಯಾಯಾಲಯ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿತ್ತು. ಈ ಹಿನ್ನಲೆಯಲ್ಲಿ ಈತ 2021ರಿಂದ ತಲೆಮರೆಸಿಕೊಂಡಿದ್ದು, ಪೊಲೀಸರು ಆತನಿಗೆ ಶೋಧ ನಡೆಸುತ್ತಿದ್ದರು. ಈತನ ವಿರುದ್ಧ ಕಾವೂರು ಮತ್ತು ಉರ್ವ ಪೊಲೀಸ್ ಠಾಣೆಗಳಲ್ಲಿ 2 ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿತ್ತು.



ಮಹಿಳೆ ಆತ್ಮಹತ್ಯೆ

ಬಂಟ್ವಾಳ: ಮಾಲಾಡಿ ಗ್ರಾಮದ ಕುರಿಯೊಡಿ ಬೈಲು ನಿವಾಸಿ ಶ್ರೀಧರ ದಾಸ್ ಅವರ ಪತ್ನಿ ಜಯಂತಿ (50) ಅವರು ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ಸಂಭವಿಸಿದೆ. ಜಯಂತಿ ಅವರು ಶ್ರೀಧರ ದಾಸ್ ಅವರ ತಮ್ಮ ದಿ.ವಾಸುದಾಸ್ ಅವರ ತಾರದಡ್ಡು ಎಂಬಲ್ಲಿರುವ ಪಾಳುಬಿದ್ದ ಮನೆಯ ಎದುರಿನ ಜಗಲಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾವುದೋ ಕೊರಗಿನಿಂದ ಇಲ್ಲವೇ ವೈಯಕ್ತಿಕ ಕಾರಣದಿಂದ ಆತ್ಮಹತ್ಯೆ ಗೈದಿರಬೇಕೆಂದು ಶಂಕಿಸಲಾಗಿದೆ.

ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಶ್ರೀಗಳಿಂದ ಐತಿಹಾಸಿಕ ಹೆಜ್ಜೆ

ಕೃಷ್ಣನ ಭಕ್ತರಿಗೆ ರೂಫ್‌ನ ವ್ಯವಸ್ಥೆ!



ಉಡುಪಿ: ಧಾರ್ಮಿಕ ನಗರಿ ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಪ್ರತಿದಿನ ಸಾವಿರಾರು ಭಕ್ತರು ದೇಶದ ಮೂಲೆ ಮೂಲೆಗಳಿಂದ ಆಗಮಿಸುತ್ತಾರೆ. ಆದರೆ, ಈ ಬಾರಿ ದಾಖಲೆ ಮಟ್ಟದಲ್ಲಿ ಏರುತ್ತಿರುವ ಉರಿಬಿಸಿಲು ಭಕ್ತರ ದರ್ಶನ ಹಾದಿಗೆ ದೊಡ್ಡ ಸವಾಲಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಪ್ರಸಕ್ತ ಪರ್ಯಾಯ ಶೀರೂರು ಮಠದ ಶ್ರೀಗಳು ಹಾಗೂ ಮಠದ ಆಡಳಿತ ಮಂಡಳಿ, ಭಕ್ತರು ನೆರಳಿನಲ್ಲಿ ನಿಂತು ನಿರಾಳವಾಗಿ ದರ್ಶನ ಪಡೆಯುವಂತೆ ಐತಿಹಾಸಿಕ ಬದಲಾವಣೆ ತಂದಿದ್ದಾರೆ.

ನೆರಳಿನ ಆಸರೆ ಹಾಗೂ ತಂಪು ಪಾನೀಯ

ಬೇಸಿಗೆ ರಜೆಯ ಕಾರಣದಿಂದ ಮಠಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಿದೆ. ಕಾಂಕ್ರೀಟ್ ನೆಲದ ಮೇಲೆ ಬರಿಗಾಲಿನಲ್ಲಿ, ಸುಡುವ ಬಿಸಿಲಿನಲ್ಲಿ ಗಂಟೆಗಟ್ಟಲೆ ನಿಲ್ಲುವುದು ಮಕ್ಕಳು ಮತ್ತು ವೃದ್ಧರಿಗೆ ಅಸಾಧ್ಯವಾಗಿತ್ತು. ಈ ಸಂಕಷ್ಟವನ್ನು ನಿವಾರಿಸಲು ಪರ್ಯಾಯ ಶೀರೂರು ಮಠದ ದಿವಾನರಾದ ಡಾ. ಉದಯ ಕುಮಾರ್ ಸರಳತ್ತಾಯ ನೇತೃತ್ವದ ತಂಡವು ಶ್ರೀಗಳ ಮಾರ್ಗದರ್ಶನದಲ್ಲಿ ಗೀತಾ ಮಂದಿರದ ಮೂಲಕ ಸಾಗುವ ಸರದಿ ಸಾಲಿಗೆ ಶಾಶ್ವತ ಮೇಲ್ಚಾವಣಿಯನ್ನು ಅಳವಡಿಸಿದೆ. ಈ ಶಾಶ್ವತ ಚಪ್ಪರದಿಂದಾಗಿ ಭಕ್ತರು ಬಿಸಿಲಿನ ತಾಪದಿಂದ ರಕ್ಷಣೆ ಪಡೆದಿದ್ದಾರೆ. ಇದರ ಜೊತೆಗೆ, ಸಾಲಿನಲ್ಲಿ ನಿಂತು ಸುಸ್ತಾಗುವ ಭಕ್ತರ ದಾಹ ತಣಿಸಲು ಪ್ರತಿದಿನ ಉಚಿತವಾಗಿ ತಂಪು ಪಾನೀಯ ವಿತರಿಸುವ ವಿಶೇಷ ವ್ಯವಸ್ಥೆಯನ್ನೂ ಮಾಡಲಾಗಿದೆ.

ದರುಶನದ ಹಾದಿಯಲ್ಲಿ ಸುವ್ಯವಸ್ಥಿತ ಬದಲಾವಣೆ

ಸ್ಥಳೀಯ ಭಕ್ತರು ಹಾಗೂ ದೈನಂದಿನ ದರ್ಶನಾರ್ಥಿಗಳ ಹಿತದೃಷ್ಟಿಯಿಂದ ಕನಕನ ಕಿಂಡಿಯ ಮೂಲಕ ದರುಶನ ಪಡೆಯಲು ಈಗ ಪ್ರತ್ಯೇಕ ಸರದಿ ಸಾಲಿನ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲ ಭಕ್ತರಿಗೂ ಸಮಾನವಾಗಿ ಮತ್ತು ಸುವ್ಯವಸ್ಥಿತವಾಗಿ ದರ್ಶನ ಸಿಗಬೇಕು ಎನ್ನುವುದು ಮಠದ ಆಶಯವಾಗಿದೆ. ಇದೇ ಕಾರಣಕ್ಕೆ ಉಚಿತ ದರುಶನ ಪಡೆಯುವ ಭಕ್ತರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ತೀರಾ ತುರ್ತು ಇರುವವರಿಗೆ ಹಾಗೂ ನಿತ್ಯ ಬರುವವರಿಗೆ ಮಾತ್ರ ವಿಶೇಷ ಪಾಸ್ ವ್ಯವಸ್ಥೆ ಮಾಡಲಾಗಿದೆ ಎಂದು ದಿವಾನರಾದ ಡಾ. ಉದಯ ಸರಳತ್ತಾಯ ಅವರು ತಿಳಿಸಿದ್ದಾರೆ. ಈ ಹೊಸ ವ್ಯವಸ್ಥೆಯು ಭಕ್ತರ ಸಂಖ್ಯಾ ಒತ್ತಡವನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿದೆ.

ಹೀಗಿರಲಿದೆ ಶ್ರೀ ಕೃಷ್ಣ ದರುಶನದ ಕ್ರಮಬದ್ಧ ಹಾದಿ

ಶ್ರೀ ಕೃಷ್ಣ ಮಠಕ್ಕೆ ಬರುವ ಭಕ್ತರು ದರ್ಶನ ಪಡೆಯಲು ಕ್ರಮಬದ್ಧವಾದ ಹಾದಿಯನ್ನು ನಿಗದಿಪಡಿಸಲಾಗಿದೆ. ಮೊದಲಿಗೆ ಕನಕ ಕಿಂಡಿಯ ಮೂಲಕ ಶ್ರೀ ಕೃಷ್ಣನ ದರುಶನ ಮಾಡಬೇಕು. ನಂತರ ಕ್ರಮವಾಗಿ ಶ್ರೀ ಚಂದ್ರ ಮೌಳೀಶ್ವರ ಮತ್ತು ಅನಂತೇಶ್ವರ ದೇವರ ದರುಶನ ಮುಗಿಸಿ, ಒಳಾಂಗಣದ ನವಗ್ರಹ ಕಿಂಡಿಯ ಮೂಲಕ ದೇವರನ್ನು ವೀಕ್ಷಿಸಬೇಕು. ತದನಂತರ ಆಯೋಧ್ಯೆಯ ಪ್ರಾಣ ದೇವರು ಮತ್ತು ಗರುಡ ದೇವರ ದರುಶನ ಪಡೆದ ಬಳಿಕ ಮುಖ್ಯಪ್ರಾಣರ ಸನ್ನಿಧಿಯ ಮೂಲಕ ಶ್ರೀ ಕೃಷ್ಣನ ಪೂರ್ಣ ದರುಶನ ಪಡೆಯುವ ವ್ಯವಸ್ಥೆಯನ್ನು ಮಾಡಲಾಗಿದೆ.

ಪರೋಪಕಾರಾರ್ಥಂ ಇದಂ ಶರೀರಂ...

ಉಳ್ಳಾಲ: ಉಳ್ಳಾಲ ತಾಲೂಕಿನ ಕೈರಂಗಳ ನಿವಾಸಿ ಬಾಲಕೃಷ್ಣ ಭಟ್ (57) ಎಂಬವರು ಮೆದುಳಿನ ಒಳ ರಕ್ತಸ್ರಾವದಿಂದ ನಿಧನರಾದ ಬಳಿಕ ಅವರ ಕುಟುಂಬವು ಎಲುಬು ಮತ್ತು ಚರ್ಮದ ದಾನಕ್ಕೆ ಒಪ್ಪಿಗೆ ನೀಡಿದ ಮಹತ್ವದ ಕಾರ್ಯ ಮಂಗಳೂರಿನ ವೆನ್ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ನೆರವೇರಿತು. ದಿವಂಗತ ಬಾಲಕೃಷ್ಣ ಭಟ್ ಅವರು ಜೀವಿತಾವಧಿಯಲ್ಲಿಯೇ ತಮ್ಮ ದೇಹವನ್ನು ಮರಣಾನಂತರ ದಾನ ಮಾಡುವ ಇಚ್ಛೆ ವ್ಯಕ್ತಪಡಿಸಿದ್ದರು. ಅವರ ಮಹತ್ವದ ಆಶಯ ಗೌರವಿಸಿದ ಕುಟುಂಬದವರು ಎಲುಬು ಮತ್ತು ಚರ್ಮದ ದಾನಕ್ಕೆ ಸಮ್ಮತಿ ಸೂಚಿಸಿರುವುದು ಅನೇಕ ರೋಗಿಗಳಿಗೆ ಹೊಸ ಬದುಕಿನ ಆಸೆಯನ್ನು ನೀಡುವುದರ ಜೊತೆಗೆ ವೈದ್ಯಕೀಯ ಶಿಕ್ಷಣ ಮತ್ತು ಚಿಕಿತ್ಸೆಗೆ ಮಹತ್ತರ ಕೊಡುಗೆ ನೀಡಿದಂತಾಗಿದೆ.



ವೆನ್ಲಾಕ್ ಆಸ್ಪತ್ರೆಯ ಟ್ರಾನ್ಸ್‌ಪ್ಲಾಂಟ್ ಸಂಯೋಜಕರಾದ ಪದ್ಮಾವತಿ ಹಾಗೂ ಅಕ್ಷತಾ ಶೆಟ್ಟಿ ಅವರ ತುರ್ತು ಕರೆ ಹಿನ್ನೆಲೆಯಲ್ಲಿ, ದೇರಳಕಟ್ಟೆಯ ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಡಾ.ಶಾಂತರಾಮ ಶೆಟ್ಟಿ ಟಿಷ್ಯೂ ಬ್ಯಾಂಕ್‌ನ ಬಹುಶಾಖಾ ತಜ್ಞರ ತಂಡವು ತಕ್ಷಣ ಕಾರ್ಯಪ್ರವೃತ್ತವಾಯಿತು.ಡಾ.ವರುಣ್ ಶೆಟ್ಟಿ ನೇತೃತ್ವದಲ್ಲಿ ಡಾ.ನಿರ್ಮಲ್ ಬಾಬು,ಡಾ.ವಿನಯ್ ಕುಮಾರ್, ಡಾ.ಅನೂಪ್ ಹೆಗ್ಡೆ ಹಾಗೂ ಪ್ಲಾಸ್ಟಿಕ್ ಸರ್ಜರಿ ತಜ್ಞರಾದ ಡಾ.ಸಂದೇಶ್ ಅವರ ತಂಡವು ಎರಡೂ ಉಲ್ನಾ,ಎರಡೂ ಹ್ಯೂಮರಸ್,ಎರಡೂ ಫೀಮರ್, ಎರಡೂ ಟಿಬಿಯಾ ಎಲುಬುಗಳು , ಚರ್ಮದ ಗ್ರಾಫ್ಟ್‌ಗಳನ್ನು ಸಂಗ್ರಹಿಸಿತು.

ಪ್ಲಾಸ್ಟಿಕ್ ಎಲುಬುಗಳು

ದೇಹದ ಗೌರವವನ್ನು ಕಾಪಾಡುವ ಉದ್ದೇಶ ದಿಂದ ಹಾಗೂ ದೇಹದ ಆಕಾರದಲ್ಲಿ ಯಾವುದೇ ವ್ಯತ್ಯಾಸ ಉಂಟಾಗದಂತೆ ವಿಶೇಷವಾಗಿ ತಯಾರಿಸಲಾದ ಪ್ಲಾಸ್ಟಿಕ್ ಎಲುಬುಗಳ ಮರುಸ್ಥಾಪಿಸಲಾಯಿತು. ಈ ಸಂಪೂರ್ಣ ಪ್ರಕ್ರಿಯೆ ಯಶಸ್ವಿಯಾಗಲು ಸರ್ಕಾರಿ ವೆನ್ಲಾಕ್ ಆಸ್ಪತ್ರೆ ಮತ್ತು ಜಸ್ಟಿಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಆಡಳಿತ ಮಂಡಳಿ, ನರ್ಸಿಂಗ್ ಸಿಬ್ಬಂದಿ,ಸ್ನಾತಕೋತ್ತರ ವಿದ್ಯಾರ್ಥಿಗಳು, ಪ್ಯಾರಾ ಮೆಡಿಕಲ್ ಸಿಬ್ಬಂದಿ ಹಾಗೂ ಟಿಷ್ಯೂ ಬ್ಯಾಂಕ್ ಸಿಬ್ಬಂದಿಯ ಸಮಗ್ರ ಸಹಕಾರ ಲಭಿಸಿತು.

ಫರಂಗಿಪೇಟೆ ದೇವಸ್ಥಾನ ಪಕ್ಕ ಸಿಸಿ ಕ್ಯಾಮರ ಕಣ್ಗಾವಲು: ತ್ಯಾಜ್ಯ ರಾಶಿಗೆ ಮುಕ್ತಿ?

ಬಂಟ್ವಾಳ: ಪುದು ಗ್ರಾಮ ಪಂಚಾಯತ್ ವ್ಯಾಪ್ತಿಯ ಫರಂಗಿಪೇಟೆ–ಕುಂಪಣಮಜಲು ರಸ್ತೆಯ ಶ್ರೀ ಆಂಜನೇಯ ದೇವಸ್ಥಾನದ ಸಮೀಪದ ತೋಡಿನಲ್ಲಿ ಕೊಳೆತ ತ್ಯಾಜ್ಯ ರಾಶಿ ಹಾಕುತ್ತಿರುವ ಹಿನ್ನಲೆಯಲ್ಲಿ ಸಿ. ಸಿ ಕ್ಯಾಮರಾ ಅಳವಡಿಸಿ ಕಣ್ಗಾವಲು ಇರಿಸಲಾಗಿದೆ.

ಕೆಲ ಅವಿವೇಕಿಗಳು ಪ್ಲಾಸ್ಟಿಕ್ ಚೀಲದಲ್ಲಿ ತ್ಯಾಜ್ಯವನ್ನು ತುಂಬಿಸಿ ದೇವಸ್ಥಾನದ ಪಕ್ಕದ ನೀರು ಹರಿಯುವ ತೋಡು ಹಾಗೂ ರಸ್ತೆಯಲ್ಲೇ ಎಸೆದು ವಿಕೃತಿ ಮೆರೆಯುತ್ತಿದ್ದರು. ಈ ಕೊಳೆತ ತ್ಯಾಜ್ಯದ ರಾಶಿ ಹಾಗೂ ಕಸವನ್ನು ಪಂಚಾಯತ್ ವತಿಯಿಂದ ಮಣ್ಣು ಹಾಕಿ ಸಮತಟ್ಟುಗೊಳಿಸಿ ಶುಚಿಗೊಳಿಸಿ ಮುಕ್ತಿ ನೀಡಲಾಗಿದೆ ಹಾಗೂ ಪಕ್ಕದಲ್ಲೇ ಕಸ ಎಸೆಯುವವರನ್ನು ಪತ್ತೆ ಹಚ್ಚಿ ಕ್ರಮಕೈಗೊಳ್ಳುವ ನಿಟ್ಟಿನಲ್ಲಿ ಸಿಸಿ ಕ್ಯಾಮರ ಅಳವಡಿಸಿ ಕಣ್ಗಾವಲು ಇರಿಸಲಾಗಿದೆ.



ಇಲ್ಲಿ ಎಸೆಯಲಾಗುವ ತ್ಯಾಜ್ಯ ವಸ್ತುಗಳು ತೋಡಿನಲ್ಲಿ ಹರಿಯುವ ನೀರಿಗೆ ಸೇರುವುದರಿಂದಾಗಿ ನೀರುಮಲಿನಗೊಂಡು ಸಾಂಕ್ರಾಮಿಕ ರೋಗ ಹರಡುವ ಭೀತಿ ಸ್ಥಳೀಯರನ್ನು ಕಾಡಿತ್ತು. ಇದೀಗ ಪುದು ಗ್ರಾ ಪಂ.ಈ ನಿಟ್ಟಿನಲ್ಲಿ ಕಟ್ಟು ನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ಪುದು ಗ್ರಾ.ಪಂ. ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಈಗಾಗಲೇ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ, ರಾಷ್ಟ್ರೀಯ ಹೆದ್ದಾರಿ ಹಾಗೂ ಇತರ ಕಡೆಗಳಲ್ಲು ತ್ಯಾಜ್ಯವಸ್ತು ಎಸೆಯುವವರ ಬಗ್ಗೆ ಮಾಹಿತಿ ನೀಡಿದವರಿಗೆ ಒಂದು ಸಾವಿರ ರೂ ಬಹುಮಾನ ಘೋಷಿಸಲಾಗಿದೆ ಎಂದು ಗ್ರಾ.ಪಂ.ಅಧ್ಯಕ್ಷ ರಮ್ಲಾನ್ ಮಾರಿಪಳ್ಳ ತಿಳಿಸಿದ್ದಾರೆ. ಕಡೆಗೋಳಿಯಿಂದ ಫರಂಗಿಪೇಟೆ ತನಕ ಹೆದ್ದಾರಿ ಬದಿ ಸ್ವಚ್ಛಗೊಳಿಸಲಾಗಿದೆ ಹಾಗೂ ರಾತ್ರಿ ಹೊತ್ತು ತಂಡವೊಂದು ಗಸ್ತು ತಿರುಗುತ್ತಿದ್ದು, ತ್ಯಾಜ್ಯ ಎಸೆಯುವವರ ಬಗ್ಗೆ ನಿಗಾ ಇಡಲಾಗುತ್ತಿದೆ ಎಂದು ಹೇಳಿದರು.

ಜಪ್ಪಿನಮೊಗರು ಜನತೆಯ ಒತ್ತಾಯ | ರೇಷನಿಂಗ್‌ನಿಂದ ಎಲ್ಲ ಪ್ರದೇಶಗಳಿಗೆ ಬರುತ್ತಿಲ್ಲ ನೀರು

ರೇಷನಿಂಗ್ ಬೇಡ, ಪ್ರತಿದಿನ ನೀರು ಪೂರೈಸಿ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ವಾರ್ಡ್ ನಂಬರ್ 54 ಜಪ್ಪಿನಮೊಗರು

ಮಂಗಳೂರು: ನೀರು ಪೂರೈಕೆಗೆ ರೇಷನಿಂಗ್ ವ್ಯವಸ್ಥೆ ಬೇಡ. ಉತ್ತಮ ಪ್ರೆಶರ್‌ನೊಂದಿಗೆ ದಿನಕ್ಕೆ ಎರಡು ಗಂಟೆ ನೀರು ಸರಬರಾಜು ಮಾಡಿದರೂ ಸಾಕು. ರೇಷನಿಂಗ್‌ನಿಂದ ಎಲ್ಲ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ...

ಇದು ಜಪ್ಪಿನಮೊಗರು ವಾರ್ಡ್ ಜನತೆಯ ಮಾತು.

ನೀರು ಪೂರೈಕೆಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿಕ ಎತ್ತರದ ಸ್ಥಳಗಳಿಗೆ ನೀರು ಬರುತ್ತಿಲ್ಲ. ಎಲ್ಲ ಮನೆಗಳಿಗೂ ನೀರು ತಲುಪುತ್ತಿಲ್ಲ. ಹೀಗಾಗಿ ರೇಷನಿಂಗ್ ವ್ಯವಸ್ಥೆ ಬೇಡ. ಪ್ರತಿದಿನ ನಿರ್ದಿಷ್ಟ ಅವಧಿಯಲ್ಲಿ ನೀರು ನೀಡಿ ಎಂದು ಇಲ್ಲಿನ ಜನರು ಮಹಾನಗರ ಪಾಲಿಕೆಗೆ ಬೇಡಿಕೆ ಇರಿಸಿದ್ದಾರೆ.

ಎಕ್ಕೂರು, ತಂದೊಳಿಗೆ ಗುಡ್ಡೆ, ತಾರ್ದೋಲ್ಯ, ಜಪ್ಪಿನಮೊಗರು, ರೈಸ್‌ಮಿಲ್, ಕಡೆಕಾರ್, ಆಡಂಕುದ್ರು, ಉಳ್ಳಾಲ ಹೊಯಿಗೆ ಪ್ರದೇಶಗಳಲ್ಲಿ ವ್ಯಾಪಿಸಿರುವ ಈ ವಾರ್ಡ್ ನೇತ್ರಾವತಿ ನದಿ ಸನಿಹದಲ್ಲಿದ್ದರೂ ಈ ವಾರ್ಡ್‌ನಲ್ಲಿ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆಯಿದೆ. ರೇಷನಿಂಗ್ ಬಳಿಕ ಆಡಂಕುದ್ರು ಪ್ರದೇಶಕ್ಕೆ ನೀರು ತಲುಪುತ್ತಿಲ್ಲ ಎಂದು ದೂರುಗಳಿವೆ.

ಈ ವಾರ್ಡ್‌ಗೆ ಪಡೀಲು ಹಾಗೂ ಬೆಂದೂರು ವೆಲ್ ಟ್ಯಾಂಕ್‌ನಿಂದ ನೀರು ಒದಗಿಸಲಾಗುತ್ತಿದೆ. ಪಡೀಲ್ ಟ್ಯಾಂಕ್‌ನಿಂದ ಮಸಣಗುಡ್ಡೆ, ತಂದೊಳಿಗೆ, ತಾರ್ದೋಲ್ಯ ಪ್ರದೇಶಗಳಿಗೆ ನೀರು ಬರುತ್ತಿದೆ. ಬೆಂದೂರುವೆಲ್ ಟ್ಯಾಂಕ್‌ನಿಂದ ಜಪ್ಪಿನಮೊಗರು, ಕಡೆಕಾರು, ಆಡಂಕುದ್ರು, ಉಳ್ಳಾಲ ಹೊಯಿಗೆ ಪ್ರದೇಶಗಳಿಗೆ ನೀರು ಪೂರೈಕೆ ಆಗುತ್ತಿದೆ. ಈ ಮೊದಲು ಬೆಳಗ್ಗೆ ಹಾಗೂ ಸಂಜೆ ನೀರು ಬರುತ್ತಿತ್ತು. ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿಕ ನೀರು ಪೂರೈಕೆಗೆ ನಿರ್ದಿಷ್ಟ ಅವಧಿ ನಿಗದಿಯಾಗಿಲ್ಲ.

ಟ್ಯಾಂಕರ್ ಮೂಲಕ ನೀರು

ಈ ವಾರ್ಡ್‌ನ ಜಪ್ಪಿನಮೊಗರು ದ್ವಾರದಿಂದ ಗಣೇಶನಗರವರೆಗಿನ ಪ್ರದೇಶದ ಜನತೆ ಪ್ರಸ್ತುತ ಟ್ಯಾಂಕರ್ ನೀರು ಅವಲಂಬಿಸಿದ್ದಾರೆ. ಜಪ್ಪಿನಮೊಗರು ದ್ವಾರದಿಂದ ಗಣೇಶನಗರ ನಡುವೆ ಡ್ರೈನೇಜ್ ಪೈಪ್ ಲೈನ್ ಸೋರಿಕೆಯಾಗಿ ನೀರು ಕಲುಷಿತಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಪೈಪ್‌ಲೈನ್ ಮೂಲಕ ನೀರು ಪೂರೈಕೆ ನಿಲ್ಲಿಸಲಾಗಿದೆ. ಪರ್ಯಾಯ ವ್ಯವಸ್ಥೆಯಾಗಿ ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ. ಒಂದೂವರೆ ತಿಂಗಳ ಹಿಂದೆ ಈ ಸಮಸ್ಯೆ ಉಂಟಾಗಿತ್ತು. ಬಳಿಕ ಸರಿಪಡಿಸಲಾಗಿದ್ದರೂ, 15 ದಿನಗಳ ಹಿಂದೆ ಮತ್ತೆ ಡ್ರೈನೇಜ್ ನೀರು ಕುಡಿಯುವ ನೀರಿಗೆ ಸೇರ್ಪಡೆಗೊಂಡಿದೆ. ಹೀಗಾಗಿ ಇಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ.

ಜಪ್ಪಿನಮೊಗರು ಶಾಲೆ ಬಳಿ ಸರಕಾರಿ ಬಾವಿ ಇದೆ. ಮುಗೇರು ಮನೆ ಬಳಿಯೂ ಬಾವಿ ಇದ್ದು, ಈ ಹಿಂದೆ ನೀರಿನ ಕೊರತೆ ಉಂಟಾದಾಗ ಊರಿನ ಜನತೆ ಇದರ ನೀರು ಉಪಯೋಗಿಸಿದ್ದರು. ಜಪ್ಪಿನಮೊಗರು ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ. 60ರಷ್ಟು ಪೂರ್ಣಗೊಂಡಿದೆ. ನೀರಿನ ಸಂಪರ್ಕ ಆಗಿಲ್ಲ.



ಜಪ್ಪಿನಮೊಗರಿನ ಕೊಪ್ಪಲ ರಸ್ತೆಗೆ ಕಾಂಕ್ರೀಟ್ ಅಳವಡಿಸಲಾಗಿದೆ.

ಮನೆಗಳು ಜಲಾವೃತ

ಜಪ್ಪಿನಮೊಗರು ವಾರ್ಡ್‌ನ ಎಕ್ಕೂರಿನಿಂದ ನೇತ್ರಾವತಿ ಸೇತುವೆ ವರೆಗೆ ರಾಜಕಾಲುವೆಯಿದೆ. ಮಳೆಗಾಲದಲ್ಲಿ ಒಂದೆರಡು ಗಂಟೆಗಳ ಕಾಲ ನಿರಂತರವಾಗಿ ಭಾರಿ ಮಳೆಯಾದಾಗ ರಾಜಕಾಲುವೆ ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಜಪ್ಪಿನಮೊಗರು, ಗಣೇಶನಗರ ಪ್ರದೇಶ ಜಲಾವೃತಗೊಳ್ಳುತ್ತದೆ. ಗಣೇಶನಗರ ಕಟ್ಟಪುಣಿಯ 20ರಷ್ಟು ಮನೆಗಳಿಗೆ ನೀರು ನುಗ್ಗುತ್ತದೆ.

ಕೊಳವೆಬಾವಿ ನೀರು ಆಸರೆ

ಜಪ್ಪಿನಮೊಗರು ವಾರ್ಡ್‌ನ ತಾರ್ದೋಲ್ಯ, ತಂದೊಳಿಗೆ ಗುಡ್ಡೆ, ಮಸಣಗುಡ್ಡೆಯಲ್ಲಿ ಕೊಳವೆಬಾವಿಗಳಿವೆ. ಇಲ್ಲಿ ಬೋರ್‌ವೆಲ್ ನೀರನ್ನೇ ಪೈಪ್‌ಲೈನ್ ಮೂಲಕ ಒದಗಿಸಲಾಗುತ್ತದೆ. ಗುಡ್ಡ ಪ್ರದೇಶಗಳ ನೀರಿನ ಸಮಸ್ಯೆಯನ್ನು ಕೊಳವೆಬಾವಿ ನೀರು ನೀಡುವ ಮೂಲಕ ಇಲ್ಲಿ ಪರಿಹರಿಸಲಾಗಿದೆ.

ಡ್ರೈನೇಜ್ ಸಮಸ್ಯೆ

ಈ ವಾರ್ಡ್‌ನ ಕಂಬ್ಳ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆಯಿದೆ. ಇಲ್ಲಿ ಯುಜಿಡಿ ಪೈಪ್‌ಲೈನ್ ಸೋರಿಕೆಯಾಗುತ್ತಿದೆ. ಜಪ್ಪಿನಮೊಗರು ಲಯನ್ಸ್‌ಕ್ಲಬ್ ಹಿಂಭಾಗದಲ್ಲೂ ಟ್ರಂಕ್‌ಲೈನ್ ಸಮಸ್ಯೆಯಿಂದ ಗದ್ದೆ ಪ್ರದೇಶದಲ್ಲಿ ಕೊಳಚೆ ನೀರು ತುಂಬಿಕೊಂಡಿದೆ.

“ಜಪ್ಪಿನಮೊಗರು ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಇರಲಿಲ್ಲ. ಆದರೆ, ಜಪ್ಪಿನಮೊಗರು ದ್ವಾರದಿಂದ ಗಣೇಶನಗರವರೆಗೆ ಡ್ರೈನೇಜ್ ಸೋರಿಕೆಯಿಂದ ಕುಡಿಯುವ ನೀರು ಕಲುಷಿತಗೊಂಡು ಸಮಸ್ಯೆ ಉಂಟಾಗಿದೆ. ಇಲ್ಲಿನ ಜನತೆಗೆ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಇಲ್ಲಿ ಹೊಸ ಪೈಪ್‌ಲೈನ್ ಅಳವಡಿಸಲಾಗುತ್ತಿದೆ. ಜಪ್ಪಿನಮೊಗರು ಪ್ರದೇಶದಲ್ಲಿ ರಾಜಕಾಲುವೆಯಿಂದ ನೀರು ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತಿದ್ದು, ಪ್ರವಾಹ ತಡೆಯಲು ಶಾಸಕರ ಸಹಕಾರದೊಂದಿಗೆ 6.50 ಕೋಟಿ ರೂ. ವೆಚ್ಚದಲ್ಲಿ ತಡೆಗೋಡೆ ನಿರ್ಮಿಸಲಾಗಿದೆ. ಇನ್ನೂ ಇಲ್ಲಿ 4 ಕೋಟಿ ರೂ. ವೆಚ್ಚದ ತಡೆಗೋಡೆ ಕಾಮಗಾರಿ ಆಗಬೇಕಿದೆ. ಜಪ್ಪಿನಮೊಗರು ದ್ವಾರದ ಬಳಿ 60 ಲಕ್ಷ ರೂ. ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗಿದ್ದು, ಸಾರ್ವಜನಿಕರಿಗೆ ಬಹಳ ಉಪಯೋಗವಾಗಿದೆ. ಕೊಪ್ಪಲ ರಸ್ತೆ, ನವೋದಯ ಲೇಔಟ್, ಬಜಿಹಿತ್ಲು, ಅಬಕಾರಿ ಇಲಾಖೆ ಬಳಿ, ಆಡಂಕುದ್ರು, ವೈದ್ಯನಾಥ ನಗರ, ವಾಸುಕಿನಗರ, ಬೀದಿ ಬಳಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಕೆವಿಕೆ ಮೈದಾನ ಬಳಿ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ. ತಾರ್ದೋಲ್ಯ ಕೆರೆ, ಕಂಬಿಸ್ಥಾನ ಕೆರೆ, ಕಡೆಕಾರು ಮಲ್ಲಿಕಾರ್ಜುನ ದೇವಸ್ಥಾನ ರಸ್ತೆ ಅಭಿವೃದ್ಧಿ ಮಾಡಲಾಗಿದೆ. ತಾರ್ದೋಲ್ಯ ಕೆಂಗೋಲಿಮಾರ್ ಬಳಿ ಇಂಟರ್‌ಲಾಕ್, ಡ್ರೈನೇಜ್ ವ್ಯವಸ್ಥೆ ಕಲ್ಪಿಸಲಾಗಿದೆ.



■ ವೀಣಾ ಮಂಗಳ, ಜಪ್ಪಿನಮೊಗರು ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಉಡುಪಿ ಜಿಲ್ಲೆಗೇ ಐದು ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ

ಪುಟ ೧➡ ಅವುಗಳೆಂದರೆ, ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯದ ಪಂಚಾಯತ್, ಆರೋಗ್ಯಕರ ಪಂಚಾಯತ್, ಮಕ್ಕಳ ಸ್ನೇಹಿ ಪಂಚಾಯತ್, ನೀರು ಸಮೃದ್ಧ ಪಂಚಾಯತ್, ಸ್ವಚ್ಛ ಮತ್ತು ಹಸಿರು ಪಂಚಾಯತ್, ಮೂಲಸೌಕರ್ಯದಲ್ಲಿ ಸ್ವಾವಲಂಬಿ ಪಂಚಾಯತ್, ಸಾಮಾಜಿಕವಾಗಿ ನ್ಯಾಯಯುತ ಮತ್ತು ಸಾಮಾಜಿಕ ಭದ್ರತೆ ಹೊಂದಿದ ಪಂಚಾಯತ್, ಉತ್ತಮ ಆಡಳಿತ ಹೊಂದಿದ ಪಂಚಾಯತ್ ಮತ್ತು ಮಹಿಳಾ ಸ್ನೇಹಿ ಪಂಚಾಯತ್ ಎಂದು ಗುರುತಿಸುತ್ತದೆ. ವಿಜೇತ ಪಂಚಾಯತ್‌ಗಳಿಗೆ ಅವುಗಳ ಶ್ರೇಣಿ ಮತ್ತು ವರ್ಗವನ್ನು ಅವಲಂಬಿಸಿ ಪ್ರತಿ ಪ್ರಶಸ್ತಿ ವಿಜೇತರಿಗೆ 50 ಲಕ್ಷ ರೂ.ನಿಂದ 5 ಕೋಟಿ ರೂ.ವರೆಗಿನ ಹಣಕಾಸಿನ ಪ್ರೋತ್ಸಾಹಧನವನ್ನು ಪಡೆಯುತ್ತವೆ. ಈ ಪ್ರಶಸ್ತಿಗಳನ್ನು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನದ, ಕೇಂದ್ರ ಪ್ರಾಯೋಜಿತ ಯೋಜನೆಯ ಕೇಂದ್ರ ಘಟಕವಾದ ಪಂಚಾಯತ್‌ಗಳಿಗೆ ಪ್ರೋತ್ಸಾಹ ನೀಡುವ ಯೋಜನೆಯಲ್ಲಿ ನೀಡಲಾಗುತ್ತದೆ.





ಬಿ.ಎಸ್.ಯಡಿಯೂರಪ್ಪ ಅವರಿಗೆ ವಚನಾನಂದ ಶ್ರೀ, ಪೇಜಾವರ ಶ್ರೀಗಳಿಂದ ಆಶೀರ್ವಾದ .

ಅನನ್ಯ ನಾಯಕತ್ವಕ್ಕೆ ಉಡುಗೊರೆ ಭರಪೂರ

◆ **ಚಿತ್ರದುರ್ಗ:** ಬಿಜೆಪಿ ರಾಜ್ಯ ರಾಜಕಾರಣದ ಭೀಷ್ಮ ಬಿ.ಎಸ್. ಯಡಿಯೂರಪ್ಪ ಅವರು ಸಾರ್ವಜನಿಕ ಜೀವನದಲ್ಲಿ 50 ಸಂವತ್ಸರಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇದರಲ್ಲಿ ಸಾರ್ವಜನಿಕವಾಗಿ ಅವರನ್ನು ಗೌರವಿಸಿದರೆ, ಶಾಸಕರು ಮತ್ತು ಪಕ್ಷದ ಮುಖಂಡರು ವೈಯಕ್ತಿಕವಾಗಿಯೂ ಅವರನ್ನು ಅಭಿನಂದಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಯಡಿಯೂರಪ್ಪ ಅವರು ವೇದಿಕೆಗೆ ಆಗಮಿಸುತ್ತಲೇ ಅವರನ್ನು ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಶಾಲು ಹೊದಿಸಿ ಆಶೀರ್ವದಿಸಿದರು.

ನಂತರ ವೇದಿಕೆಯಲ್ಲಿ ಶಾಸಕರು, ಕೇಂದ್ರ ಸಚಿವರು ತಮ್ಮ ಗೌರವವನ್ನು ಸಲ್ಲಿಸುತ್ತಲೇ ಇದ್ದರು. ವೇದಿಕೆಯ ಕಾರ್ಯಕ್ರಮ ಮುಗಿಯುತ್ತಲೇ ಪಕ್ಷದ ಮುಖಂಡರು, ಕಾರ್ಯಕ್ರಮ ಶಾಲು, ಹೂಮಾಲೆ, ನಾನಾ ಉಡುಗೊರೆಗಳೊಂದಿಗೆ ಯಡಿಯೂರಪ್ಪ ಅವರನ್ನು ಅಭಿನಂದಿಸುತ್ತಿದ್ದರು.

ಸೆಲ್ಫಿ ಪಾಯಿಂಟ್ ಆದ ಕಾರು

◆ **ಚಿತ್ರದುರ್ಗ:** ಬಿ.ಎಸ್. ಯಡಿಯೂರಪ್ಪ ಅವರು ಕಾಲಿಗೆ ಚಕ್ರ ಕಟ್ಟಿದಂತೆ ರಾಜ್ಯಾದ್ಯಂತ ಸಂಚರಿಸಿ ಪಕ್ಷ ಸಂಘಟನೆ ಮತ್ತು ಜನಪರ ಹೋರಾಟ ನಡೆಸುತ್ತಿದ್ದರು. ಇದಕ್ಕಾಗಿ ಆರಂಭದಲ್ಲಿ ಅವರು ಸೈಕಲ್ ಬಳಸುತ್ತಿದ್ದರೆ, ನಂತರ ಸಿಕೆಆರ್ 45 ನೋಂದಣಿ ಸಂಖ್ಯೆಯ ಅಂಬಾಸಿಡರ್ ಕಾರನ್ನು ಪ್ರಯೋಗಿಸುತ್ತಿದ್ದರು. ಅವರ ಮೆಚ್ಚಿನ ಕಾರನ್ನು ಈಗಲೂ ಸುಸ್ಥಿತಿಯಲ್ಲಿಟ್ಟಿದ್ದಾರೆ.

ಆಗಾಗ್ಗೆ ಅದನ್ನು ಬಳಸುತ್ತಲೂ ಇದ್ದಾರೆ. ಅವರ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ಕಾರು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಈ ಕಾರ್ ಸೆಲ್ಫಿ ಪಾಯಿಂಟ್ ಆಗಿ ಬಳಕೆಯಾಯಿತು. ಸಾವಿರಾರು ಮಂದಿ ಅದನ್ನು ವೀಕ್ಷಿಸಿದ್ದಲ್ಲದೇ ಅದರ ಜೊತೆಯಲ್ಲಿ ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಿಸಿದರು.

ರಸ್ತೆ ಅಪಘಾತ: ನಾಲ್ವರ ಸಾವು

◆ **ಕುಣಿಗಲ್:** ತಾಲೂಕಿನ ಹೊನ್ನೇನಹಳ್ಳಿ ಬಳಿ ಶನಿವಾರ ಲಾರಿ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿದ್ದು, ಒಂದೇ ಕುಟುಂಬದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗೊಬ್ಬರ ತುಂಬಿದ್ದ ಲಾರಿಗೆ ಆಲ್ಟೋ ಕಾರು ಡಿಕ್ಕಿ ಹೊಡೆದಿದ್ದು, ಡಿಕ್ಕಿಯ ರಭಸಕ್ಕೆ ಕಾರು ಛಿದ್ರ ಛಿದ್ರವಾಗಿದೆ. ಭೀಕರ ಅಪಘಾತದಲ್ಲಿ ಕಾರು ಚಾಲಕ ಸೇರಿದಂತೆ ಮಂಡ್ಯ ಮೂಲದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಂಡ್ಯ ಪಟ್ಟಣದ ಕುಮಾರ ನರಸಿಂಹ ಸ್ವಾಮಿ(65) ಪತ್ನಿ ಗಾಯಿತ್ರಿ(62) ಕುಮಾರ ನರಸಿಂಹ ಸ್ವಾಮಿಯ ತಂಗಿ ಗಾಯಿತ್ರಿ (63) ಚಾಲಕ ರಘು ಕುಮಾರ್(56) ಅಪಘಾತಕ್ಕೀಡಾಗಿ ಮೃತಪಟ್ಟಿದ್ದಾರೆ. ಈ ಬಗ್ಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ಓಂಕಾರದಲ್ಲಿ ಭಗವಂತನಿದ್ದಾನೆ, ಓಂಕಾರ ಜಪಿಸಿದರೆ ಅಹಂಕಾರ ನಿವಾರಣೆಯಾಗುತ್ತದೆ
– ಗುರುದೇವಾನಂದ ಸ್ವಾಮಿಜಿ

– ಅಹಂಕಾರ ನಿವಾರಣೆಯಾದರೆ ಅಜ್ಞಾನವೆಂಬ ಅಂಧಕಾರ ಸರಿಯುತ್ತದೆ, ಅಂಧಕಾರ ಸರಿದಾಗ ಬದುಕು ಸರಿ ದಾರಿಯಲ್ಲಿ ಸಾಗುತ್ತದೆ!

ದಿನ ಭವಿಷ್ಯ

ಮೇಷ
ನಿಮ್ಮ ಪ್ರಗತಿ ಯಾರೂ ತಡೆಯಲಾರರು. ನಿಮ್ಮ ಕಾರ್ಯನಿಷ್ಠೆ ಮೆಚ್ಚುಗೆ ಗಳಿಸುವುದು. ಖರ್ಚು ಏರಿಕೆ ಚಿಂತೆಗೆ ಕಾರಣವಾದೀತು.

ವೃಷಭ
ಹಣದ ಕೊರತೆ ಎದುರಿಸುವಿರಿ. ನಿಮ್ಮ ಮನೋಸ್ಥೈರ್ಯ ಕುಗ್ಗಿಸುವ ಜನರಿಂದ ದೂರವಿರಿ. ಏಕಾಂಗಿಗಳಿಗೆ ವಿವಾಹ ನೆಂಟಸ್ತಿಕೆ.

ಮಿಥುನ
ವೃತ್ತಿಯಲ್ಲೂ ಖಾಸಗಿ ಬದುಕಲ್ಲೂ ಪೂರಕ ಬೆಳವಣಿಗೆ. ಶಂಕಾಸ್ಪದ ವ್ಯವಹಾರದಲ್ಲಿ ಹಣ ಹೂಡಬೇಡಿ. ಕೌಟುಂಬಿಕ ಸಾಮರಸ್ಯ. ಮಿತ್ರ ಭೇಟಿ.

ಕಟಕ
ಹೊರಗೆ ಸಂತೋಷ ಹುಡುಕಬೇಡಿ. ನಿಮ್ಮೊಳಗೇ ಅದು ಇದೆ. ಕುಟುಂಬದ ಜತೆ ಕಾಲ ಕಳೆಯಿರಿ. ಕಲಾವಿದರಿಗೆ ಪ್ರೋತ್ಸಾಹ ಸಿಗಲಿದೆ. ಧನಲಾಭ.

ಸಿಂಹ
ನೆಮ್ಮದಿ ಪಡೆಯಬೇಕೆ? ನಿಮ್ಮ ಕಾರ್ಯವೈಖರಿ, ಚಿಂತನಾ ಶೈಲಿ ಬದಲಿಸಿಕೊಳ್ಳಿ. ಎಲ್ಲರ ಜತೆ ಹೊಂದಾಣಿಕೆ ಮಾಡಿಕೊಳ್ಳಿ.

ಕನ್ಯಾ
ಕೌಟುಂಬಿಕ ಕಾರ್ಯಕ್ರಮದಲ್ಲಿ ಭಾಗಿ. ನಿಮ್ಮ ಕೆಲಸಕ್ಕೆ ಟೀಕೆ ಕೇಳಿಬಂದೀತು. ಲೋಪ ಸರಿಪಡಿಸಿಕೊಳ್ಳಿ. ಹಠ ಹಿಡಿದು ಕೂರಬೇಡಿ.

ತುಲಾ
ವೃತ್ತಿ ಗುರಿ ಸಾಧನೆ. ಸಣ್ಣಪುಟ್ಟ ಜಗಳದಲ್ಲಿ ಭಾಗವಹಿಸಬೇಡಿ. ಹಣಕಾಸು ವ್ಯವಹಾರದಲ್ಲಿ ಏರಿಳಿತ ಕಂಡೀತು. ಆರೋಗ್ಯ ಗಮನಿಸಿ.

ವೃಶ್ಚಿಕ
ಅನರ್ಹರ ಕುರಿತಂತೆ ಅಧಿಕ ಮುತುವರ್ಜಿ ವಹಿಸಿ ನಿಮ್ಮ ಶ್ರಮ ವ್ಯಯಿಸಬೇಡಿ. ಹಿತೈಷಿಗಳ ಮಾತು ಕೇಳಿ. ಕೌಟುಂಬಿಕ ಅಸಮಾಧಾನ.

ಧನು
ಹಣದ ವ್ಯವಹಾರ ತೃಪ್ತಿಕರ. ಕಾರ್ಯಸಾಫಲ್ಯ. ಆತ್ಮೀಯರ ಜತೆ ಕಾಲ ಕಳೆಯುವ ಅವಕಾಶ. ಸಂಬಂಧದಲ್ಲಿ ಪೊಸೆಸಿವ್ ಪ್ರವೃತ್ತಿ ಬಿಟ್ಟುಬಿಡಿ.

ಮಕರ
ಕೆಲಸದಿಂದ ವಿರಾಮ ಪಡೆದು ಪ್ರವಾಸ ಹೊರಡಿ. ಒತ್ತಡ ನಿವಾರಣೆಗೆ ಇದು ದಾರಿ. ನಿರೀಕ್ಷೆ ಈಡೇರಿಸಲು ಹೆಚ್ಚು ಪರಿಶ್ರಮ ಅಗತ್ಯ.

ಕುಂಭ
ಹಣದ ವ್ಯವಹಾರ ನಿರಾಶೆ ತಂದೀತು. ನೀವು ಬಯಸಿದ ಪ್ರಗತಿ ಕಾಣೆಸದು. ಶೀತದಂತಹ ಆರೋಗ್ಯ ಸಮಸ್ಯೆ. ಬಂಧುಗಳ ಜತೆ ಕಲಹ.

ಮೀನ
ನಿಮ್ಮ ಮನಸ್ಸಿನ ಮಾತು ಕೇಳಿ. ಇತರರ ಮಾತಿಗೆ ಮರುಳಾಗಿ ಕೆಟ್ಟ ನಿರ್ಧಾರ ತಾಳಬೇಡಿ. ಸಮಾರಂಭದಲ್ಲಿ ಭಾಗಿ. ಬಂಧುಮಿತ್ರರ ಭೇಟಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 4,9,5,1

ತಮಿಳ್ನಾಡಲ್ಲಿಂದು ದಳಪತಿ ಪ್ರತಿಜ್ಞೆ

ಪುಟ ೧➡ ಕಳೆದ ಒಂದು ವಾರದಲ್ಲಿ ಸರ್ಕಾರ ರಚಿಸಲು ಆಹ್ವಾನ ಕೋರಿ ವಿಜಯ್ ಅವರು ರಾಜ್ಯಪಾಲರನ್ನು ನಾಲ್ಕು ಬಾರಿ ಭೇಟಿ ಮಾಡಿದ್ದರು. ಅಗತ್ಯ ಬೆಂಬಲ ಪತ್ರಗಳ ಕೊರತೆಯಿಂದ ಅವರ ಮೊದಲ ಪ್ರಯತ್ನಗಳು ವಿಫಲವಾಗಿದ್ದವು. ಡಿಎಂಕೆ ಮೈತ್ರಿಕೂಟದ ಪಕ್ಷಗಳು ಅಂತಿಮವಾಗಿ ವಿಜಯ್ ಪಕ್ಷಕ್ಕೆ ಬೆಂಬಲ ನೀಡಿದ ನಂತರ ತಮಿಳುನಾಡಿನ ರಾಜಕೀಯ ಅನಿಶ್ಚಿತತೆಗೆ ತೆರೆ ಬಿದ್ದಿದೆ. ಇದರಿಂದ 234 ಸದಸ್ಯರ ವಿಧಾನಸಭೆಯಲ್ಲಿ ಟಿವಿಕೆ ಬಹುಮತದ ಗಡಿ ದಾಟಲು ಸಾಧ್ಯವಾಗಿದೆ. ಆದಾಗ್ಯೂ ಮೈತ್ರಿಕೂಟವು ಕೇವಲ 120 ಶಾಸಕರ ಅಲ್ಪ ಬಹುಮತವನ್ನೇ ಹೊಂದಿದೆ. ಈ ಬೆಳವಣಿಗೆಯ ನಂತರ ಚೆನ್ನೈನಲ್ಲಿರುವ ಪಕ್ಷದ ಕಚೇರಿ ಹೊರಗೆ ಟಿವಿಕೆ ಕಾರ್ಯಕರ್ತರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಮೊದಲ ಬಾರಿಗೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಅಥಣಿ ರೈತನ ಮಗ ದೇಶಕ್ಕೇ ಪ್ರಥಮ

◆ **ಬೆಳಗಾವಿ:** ಯುಪಿಎಸ್‌ಸಿ ಅಖಿಲ ಭಾರತ ಸೇವಾ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಐಎಫ್ ಎಸ್ (ಇಂಡಿಯನ್ ಫಾರೆಸ್ಟ್ ಸರ್ವೀಸ್) ನಲ್ಲಿ ಜಿಲ್ಲೆಯ ಅಭ್ಯರ್ಥಿ ದೇಶಕ್ಕೇ ಪ್ರಥಮ ಸ್ಥಾನ ಪಡೆದಿದ್ದಾರೆ. 2025ನೇ ಸಾಲಿನ ಐಎಫ್‌ಎಸ್ ಪರೀಕ್ಷೆಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸವದಿ ಗ್ರಾಮದ ಯುವಕ ಬಸವರಾಜ ಕೆಂಪವಾಡ ಇಡೀ ದೇಶಕ್ಕೆ ಪ್ರಥಮ ಸ್ಥಾನ ಗಿಟ್ಟಿಸಿದ್ದಾರೆ.

ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವಲಾಗಿರಲು ಬಿಎಸ್‌ವೈ ಸಂದೇಶ

ಅಭಿಮಾನೋತ್ಸವದಲ್ಲಿ ಜನಸಾಗರ

▸ **ನೆಲ್ಲಿಜೆ ನವ್ಯಜ್ಯೋತಿ**

◆ **ಚಿತ್ರದುರ್ಗ:** ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರಿಗೆ ಹೊದಿಸಿ ಸನ್ಮಾನಿಸಿದ ಶಾಲನ್ನು ಕಾರ್ಯಕ್ರಮದ ಕೊನೆಯಲ್ಲಿ ಯಡಿಯೂರಪ್ಪ ಅವರು ಮಗ ವಿಜಯೇಂದ್ರ ಅವರ ಹೆಗಲಿಗೆ ಹಾಕಿ ಆಶೀರ್ವದಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಸಂಘಟಿಸುವ ಕಾರ್ಯಕ್ಕೆ ಬೆಂಗಾವ ಲಾಗಿರುವ ಸಂದೇಶ ರವಾನಿಸಿದರು. ಈ ನಡುವೆ ಕಾರ್ಯಕರ್ತರೆಲ್ಲರೂ ಒಂದಾಗಿ ಸಂಘಟನೆಗಾಗಿ ಶ್ರಮಿಸುವ ಶುಭ ಸಂದೇಶದೊಂದಿಗೆ ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.

ಶನಿವಾರ ನಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಲಕ್ಷೋಪಲಕ್ಷ ಸಂಖ್ಯೆಯ ಜನಸಾಗರವು ಹರಿದು ಬಂತು. ಎಲ್ಲರೂ ನಾಯಕರ ಪ್ರಖರ ಮಾತುಗಳನ್ನಾಲಿಸಿ, ತೃಪ್ತ ಭಾವನೆಯಲ್ಲಿ ಹಾಗೂ ಹೊಸ ಹುಮ್ಮಸ್ಸಿನಲ್ಲಿದ್ದದ್ದು ಕಂಡುಬಂತು.

ಇದಿಷ್ಟಕ್ಕೇ ಸೀಮಿತವಾಗದ ಕಾರ್ಯಕ್ರಮವು ರಾಜ್ಯದ ಮುನ್ನೂರಕ್ಕೂ ಅಧಿಕ ಸ್ವಾಮೀಜಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿತ್ತು. ಮುಖ್ಯ ವೇದಿಕೆಯಲ್ಲಿ ನಾಡಿನ ಪ್ರಮುಖ 15–20 ಸ್ವಾಮೀಜಿಗಳು ಆಸೀನರಾಗಿ ಯಡಿಯೂರಪ್ಪ ಅವರ ಕೊಡುಗೆಗಳನ್ನು ಮೆಲುಕು ಹಾಕಿದರು. ಜತೆಗೆ ಸಮಾನಾಂತರ ವೇದಿಕೆಯಲ್ಲಿ ಮುನ್ನೂರಕ್ಕೂ ಹೆಚ್ಚಿನ ಸಂತರು ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಅವರ ಜೀವನ ಚರಿತ್ರೆ ಕೆಂದಾವರೆ – ಕಮಲ ಅರಳಿದ ಕಥೆ ಹಾಗೂ ವಿಧಾನ ಮಂಡಲದಲ್ಲಿ ಅವರ ಭಾಷಣಗಳ ಸಂಗ್ರಹ ಸದನ ಶಿಕಾರಿ–ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಡುಗಡೆ ಮಾಡಿದರು.

ನಿಮ್ಮೆಲ್ಲರ ಆಶೀರ್ವಾದ ಇರಲಿ:

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಯಡಿಯೂರಪ್ಪ ಅವರ ಬಗೆಗಿನ ನಿರೀಕ್ಷೆ ಮತ್ತು ಅಪೇಕ್ಷೆಗಳಂತೆ ಜನರ ಪ್ರೀತಿ ವಿಶ್ವಾಸ ಉಳಿಸಿಕೊಂಡು ಕೆಲಸ ಮಾಡುತ್ತೇನೆ. ನನ್ನ ಹಾದಿಯಲ್ಲಿ ಯಾವುದೇ ಸವಾಲು ಎದುರಾದರೂ ಅದನ್ನು ಎದುರಿಸಲು ನಿಮ್ಮ ಆಶೀರ್ವಾದ ಇರಲಿ ಎಂದು ಕೋರಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿ, ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಅಶ್ವಮೇಧ ಬಿಡುತ್ತಿದ್ದೇವೆ. ತಡೆಯುವ ಶಕ್ತಿ ಯಾರಿಗೂ ಇಲ್ಲ. ಹಿಂದು ಧರ್ಮ, ಸನಾತನ ಧರ್ಮ ರಕ್ಷಣೆಗಾಗಿ ಈ ಕರೆ ಕೊಡುತ್ತಿದ್ದೇನೆ ಎಂದು ಪ್ರತಿಪಾದಿಸಿದರು. ಸಂಸದ ಬೊಮ್ಮಾಯಿ ಅವರು, ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ. ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಆಡಳಿತ ನಡೆಸುವಂತಾಗುತ್ತದೆ ಎಂದು ಹೇಳಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಪಶ್ಚಿಮ ಬಂಗಾಳದಲ್ಲಿ ಸುವೇಂದು ಅಧಿಕಾರಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಬಂದಿದೆ. ದಕ್ಷಿಣದಲ್ಲಿ ಏಕೈಕ ರಾಜ್ಯ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಬಂದಿತ್ತು, ಮುಂದೆಯೂ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೈಹಿಡಿದು ಕರೆತಂದ ಅಮಿತ್ ಶಾ

ಯಡಿಯೂರಪ್ಪ ಅವರಿಗೆ ಅಭಿಮಾನದ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಈ ವೇಳೆ ಅವರಿಗೆ ಕುಳಿತುಕೊಳ್ಳಲು ವೇದಿಕೆಯ ಮುಂಭಾಗದಲ್ಲಿ ಆಸನ ತಂದಿರಿಸಿದರು. ಅದನ್ನು ಅಲ್ಲಿಂದ ತೆಗೆಯಲು ಸೂಚಿಸಿದ ಯಡಿಯೂರಪ್ಪ, ತಾನು ಕುಳಿತಲ್ಲಿಯೇ ಸನ್ಮಾನಿಸುವಂತೆ ಸೂಚಿಸಿದರು. ಇದನ್ನು ಗಮನಿಸಿದ ಕೇಂದ್ರ ಸಚಿವ ಅಮಿತ್ ಶಾ ಅವರು ಯಡಿಯೂರಪ್ಪ ಅವರನ್ನು ಕೈಹಿಡಿದು ವೇದಿಕೆಯ ಮುಂದಿರಿಸಿದ ಆಸನದಲ್ಲಿ ಕೂರಿಸಿ ಸನ್ಮಾನ ಮಾಡಿದರು. ಅದಕ್ಕೂ ಮೊದಲು ವೇದಿಕೆಗೆ ಆಗಮಿಸುತ್ತಲೇ ಅಮಿತ್ ಶಾ ಅವರು ಯಡಿಯೂರಪ್ಪ ಅವರ ಕೈ ಹಿಡಿದು ಮೇಲೆತ್ತಿ ಕಾರ್ಯಕರ್ತರತ್ತ ಕೈಬೀಸಿದರು.

ಪ.ಬಂಗಾಳದಲ್ಲಿ ಇನ್ನು ಬಿಜೆಪಿ ಶಕೆ

ಪುಟ ೧➡ ಸುವೇಂದು ಅವರೊಂದಿಗೆ ದಿಲೀಪ್ ಘೋಷ್, ಅಗ್ನಿಮಿತ್ರ ಪಾಲ್, ಅಶೋಕ್ ಕೀರ್ತನಿಯಾ, ಕ್ಷುದಿರಾಮ್ ತುಡು ಮತ್ತು ನಿಸಿತ್ ಪ್ರಮಾಣಿಕ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಸಮತೋಲಿತ ಸಚಿವ ಸಂಪುಟ: ಸದ್ಯ ಆರು ಸದಸ್ಯರನ್ನು ಒಳಗೊಂಡಿರುವ ಈ ಸಚಿವ ಸಂಪುಟದಲ್ಲಿ ಜಾತಿ ಮತ್ತು ಪ್ರಾದೇಶಿಕ ಸಮತೋಲನಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬ್ರಾಹ್ಮಣ, ಒಬಿಸಿ, ಕಾಯಸ್ಥ, ಮಟುವಾ, ಬುಡಕಟ್ಟು ಮತ್ತು ರಾಜವಂಶಿ ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ಭೌಗೋಳಿಕವಾಗಿ ಉತ್ತರ ಬಂಗಾಳದ ಇಬ್ಬರು ಹಾಗೂ ದಕ್ಷಿಣ ಬಂಗಾಳದ ಮೂವರು ಶಾಸಕರಿಗೆ ಸಚಿವ ಸ್ಥಾನ ನೀಡಲಾಗಿದ್ದರೂ, ಕೋಲ್ಕತ್ತಾದ ಯಾವುದೇ ಶಾಸಕರಿಗೆ ಮೊದಲ ಹಂತದಲ್ಲಿ ಸ್ಥಾನ ಸಿಕ್ಕಿಲ್ಲ. ಸಚಿವರಿಗೆ ಇಲಾಖೆಗಳ ಹಂಚಿಕೆ ಇನ್ನೂ ಬಾಕಿ ಇದೆ. ಉಳಿದ ಸಚಿವರು ಸೋಮವಾರ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದ್ದು, ಅಂದೇ ಮೊದಲ ಸಂಪುಟ ಸಭೆಯೂ ನಡೆಯಲಿದೆ.

ಕೇಸರಿಮಯವಾದ ಬಂಗಾಳ: ಒಟ್ಟು 294 ಸದಸ್ಯ ಬಲದ ಪ.ಬಂಗಾಳ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನ ಗಳನ್ನು ಗೆಲ್ಲುವ ಮೂಲಕ ಭರ್ಜರಿ ಬಹುಮತ ಸಾಧಿಸಿದೆ. ಈ ಮೂಲಕ ರಾಜ್ಯದಲ್ಲಿದ್ದ ತೃಣಮೂಲ ಕಾಂಗ್ರೆಸ್‌ನ 15 ವರ್ಷಗಳ ಸುದೀರ್ಘ ಆಡಳಿತಕ್ಕೆ ತೆರೆಬಿದ್ದಿದೆ. ಸಿಎಂ ಸುವೇಂದು ಅಧಿಕಾರಿ, ಭವಾನಿಪುರ ಮತ್ತು ನಂದಿಗ್ರಾಮ ಎರಡೂ ಕ್ಷೇತ್ರಗಳಲ್ಲಿ ಅಭೂತಪೂರ್ವ ಜಯ ಸಾಧಿಸಿದ್ದಾರೆ.

ಮೊಳಗಿದ ಜಯಘೋಷ

ಈ ಹಿಂದೆ ಎಡರಂಗ ಮತ್ತು ಟಿಎಂಸಿಯ ಭದ್ರಕೋಟೆಯಾಗಿದ್ದ ಬ್ರಿಗೇಡ್ ಪರೇಡ್ ಮೈದಾನವು ಇಂದು ಕೇಸರಿ ಸಮುದ್ರದಂತೆ ಕಂಗೊಳಿಸುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಬಿಜೆಪಿ ಕಾರ್ಯಕರ್ತರು ಸಮಾರಂಭದಲ್ಲಿ ಭಾಗವಹಿಸಿದ್ದರು. ಪ್ರಮಾಣವಚನ ಸ್ವೀಕಾರದ ವೇಳೆ ಮೈದಾನದಾದ್ಯಂತ ಮೊಳಗಿದ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳು ಗಮನ ಸೆಳೆದವು.

ಧೀಮಂತ, ಅಭಿಮಾನದ ಶ್ರೀಮಂತ

ಪುಟ ೧➡ ಯಡಿಯೂರಪ್ಪ ಅವರದು ಮಾದರಿ ಜೀವನವಾಗಿದೆ. ಬಿಜೆಪಿ, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದವರ ದಾಖಲೆ ಬರೆಯುವಾಗ ದೊಡ್ಡ ನಾಯಕರಾಗಿ ಯಡಿಯೂರಪ್ಪ ಅವರು ಇರುತ್ತಾರೆ. ಸಮಾಜವನ್ನು ಪ್ರೀತಿಸುವ ಯಡಿಯೂರಪ್ಪ ಅವರು ಹಸಿರು ಶಾಲಿನೊಂದಿಗೆ ಕೃಷಿ ಬಜೆಟ್ ಮಂಡಿಸಿದವರು ಎಂದು ವಿವರಿಸಿದರು. ಯಡಿಯೂರಪ್ಪ ಅವರು ಶತಾಯು ವಾಗಲಿ ಎಂದು ಹಾರೈಸಿದರು. ಯಡಿಯೂರಪ್ಪ ಅವರ ಜನಸೇವೆಯಲ್ಲಿ ಸಾರ್ಥಕ 50 ವರ್ಷದ ಸಾಧನೆಗಳ ವಿವರವನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ನೀಡಿದರು. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಬಿ.ವೈ. ರಾಘವೇಂದ್ರ, ಗೋವಿಂದ ಕಾರಜೋಳ ಹಾಗೂ ಗಣ್ಯರು, ಸ್ವಾಮೀಜಿಗಳು ಭಾಗವಹಿಸಿದ್ದರು. ಇದೇ ವೇಳೆ ಅಮಿತ್ ಶಾ ಅವರನ್ನು ಗೌರವಿಸಲಾಯಿತು.

ಶೀಘ್ರದಲ್ಲೇ ಮದಕರಿ ನಾಯಕನ ಸ್ಮಾರಕ: ಚಿತ್ರದುರ್ಗವು ರಾಜಾ ಮದಕರಿ ನಾಯಕನ ನಾಡು. ಚಿತ್ರದುರ್ಗದಲ್ಲಿ ಹಿಂದಿನ ವಿಧಾನಸಭಾ ಚುನಾವಣೆಯ ವೇಳೆ ವೀರ ಮದಕರಿ ನಾಯಕ ಸ್ಮಾರಕ ನಿರ್ಮಿಸುವುದಾಗಿ ಘೋಷಣೆ ಮಾಡಿದ್ದೆ. ಆದರೆ, ಚುನಾವಣೆಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿಲ್ಲ. ಆದ್ದರಿಂದ ಸ್ಮಾರಕ ಮಾಡಲಾಗಿಲ್ಲ. ಈ ಕುರಿತಾಗಿ ಅನೇಕರು ಆಪಾದಿಸುತ್ತಿದ್ದಾರೆ. ಆದರೆ, ಹೆದರಬೇಕಿಲ್ಲ. ಕೇಂದ್ರದಲ್ಲಿ ಪ್ರಧಾನಿ ಮೋದಿ ಅವರಿದ್ದಾರೆ. ಮದಕರಿ ನಾಯಕನ ಸ್ಮಾರಕವನ್ನು ಶೀಘ್ರದಲ್ಲೇ ಮಾಡುತ್ತೇವೆ. ಮದಕರಿ ನಾಯಕ ಹೈದರಾಲಿಯನ್ನು ಸೋಲಿಸಿ ಓಡಿಸಿದ್ದರು. ಈ ಭಾಗವನ್ನು ಸ್ವತಂತ್ರವಾಗಿ ಇಡುವುದರಲ್ಲಿ ದೊಡ್ಡ ಪಾತ್ರ ವಹಿಸಿದ್ದರು. ವೀರ ನಾರಿ ಓಬವ್ವನ ಹೋರಾಟವು ಮಕ್ಕಳಿಗೆ ಪ್ರೇರಣೆ ನೀಡುವಂಥದ್ದು. ಅವರಿಗೆ ನಮನ ಸಲ್ಲಿಸುವುದಾಗಿ ಹೇಳಿದರು.

> **ಪಶ್ಚಿಮ ಬಂಗಾಲದಲ್ಲಿ ಇಂದು ಬಿಜೆಪಿಯ ಮುಖ್ಯಮಂತ್ರಿಯ ಪದಗ್ರಹಣ ನಡೆದಿದೆ. ಇದೇ ದಿನ ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಸೇವೆಗೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿದೆ. ವಿವೇಕಾನಂದರು, ಶ್ಯಾಮಪ್ರಸಾದ ಮುಖರ್ಜಿ ಮೊದಲಾದವರು ಹುಟ್ಟಿದ ನಾಡಿನಲ್ಲಿ ಹೊಸ ಶಕೆ ಆರಂಭವಾಗಿದೆ.**
> ■ **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು


ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸರ್ಕಾರದ ಗೃಹಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ ಅಗರವಾಲ್, ಸುಧಾಕರ ರೆಡ್ಡಿ, ಸಂಸದರಾದ ಗೋವಿಂದ ಕಾರಜೋಳ, ಬಿ.ವೈ. ರಾಘವೇಂದ್ರ, ಡಾ. ಮಂಜುನಾಥ್, ಕೋಟ ಶ್ರೀನಿವಾಸ್ ಪೂಜಾರಿ, ಮಾಜಿ ಮುಖ್ಯಮಂತ್ರಿಗಳಾದ ಸದಾನಂದ ಗೌಡ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮಾಜಿ ಸಂಸದ ಪ್ರಭಾಕರ್ ಕೋರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್, ಪರಿಷತ್ ಸದಸ್ಯ ಸಿ.ಟಿ. ರವಿ, ಮಾಜಿ ಸಚಿವ ಅಶ್ವತ್ಥ ನಾರಾಯಣ, ಎ. ನಾರಾಯಣಸ್ವಾಮಿ, ಶಾಸಕ ಡಾ.ಎಂ. ಚಂದ್ರಪ್ಪ, ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಮಾಜಿ ಸಚಿವ ಬಿ.ಸಿ. ಪಾಟೀಲ್, ರೇಣುಕಾಚಾರ್ಯ ಮತ್ತಿತರರು ಭಾಗವಹಿಸಿದ್ದರು.

ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ: ಯಡಿಯೂರಪ್ಪ

ಪುಟ ೧➡ ನನಗೆ ಸಂಸ್ಕಾರ ಕೊಟ್ಟ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂಸೇವಕ ಸಂಘ)ನ್ನು ಎಂದಿಗೂ ಮರೆಯುವುದಿಲ್ಲ. ನಾನೊಬ್ಬ ಸ್ವಯಂಸೇವಕ ಎನ್ನಲು ನನಗೆ ಹೆಮ್ಮೆ ಇದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಬಳಿಕ, ಉಕ್ಕಿನ ಗೃಹಸಚಿವ ಅಮಿತ್ ಶಾ ಅವರಿಗೆ ಧನ್ಯವಾದಗಳು ಎಂದರು. ಎಲ್ಲಾ ವೇದಿಕೆಯ ಮೇಲಿರುವ ಪೂಜ್ಯರಿಗೆ ನನ್ನ ವಂದನೆಗಳು. ಅಭಿಮಾನೋತ್ಸವ ಬಗ್ಗೆ ಈಗಾಗಲೇ ಅನೇಕರು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಬಸವಣ್ಣ ಅವರ ಇವನಾರವ ಇವನಾರವ ಎನ್ನದೇ ಯಡಿಯೂರಪ್ಪ ನಮ್ಮವ ಎಂದು ಎಲ್ಲರೂ ಭಾವಿಸಿದ್ದೀರಿ. ನನ್ನ ದೇಹದಲ್ಲಿ ಉಸಿರಿರುವವರೆಗೆ ವಿರಮಿಸುವುದಿಲ್ಲ. ರಾಷ್ಟ್ರಕ್ಕಾಗಿ ಮತ್ತು ಪಕ್ಷಕ್ಕಾಗಿ ಶ್ರಮಿಸುವುದಾಗಿ ಯಡಿಯೂರಪ್ಪ ಹೇಳಿದರು.

ಇನ್ನೂ 10 ವರ್ಷ ಮೋದಿ ದೇಶ ಮುನ್ನಡೆಸಲಿ

◆ **ಚಿತ್ರದುರ್ಗ:** ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು ವಿಶ್ವದಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನ ಮಾಡುತ್ತಿದ್ದು ಇನ್ನೂ 10 ವರ್ಷ ಅವರು ದೇಶವನ್ನು ಮುನ್ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟರು.



ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ದೇಶ ಮುನ್ನಡೆಸುವ ಕೆಲಸ ಪ್ರಧಾನಿ ಮೋದಿ ಮಾಡುತ್ತಿದ್ದರೆ, ರಕ್ಷಣೆ ಮಾಡುವ ಕೆಲಸ ಅಮಿತ್ ಶಾ ಮಾಡುತ್ತಿದ್ದಾರೆ. ಈ ಜೋಡಿಯಿಂದ ಭಾರತದ ಚಿತ್ರಣವೇ ಬದಲಾಗಿದೆ. ಇದು ಇನ್ನಷ್ಟು ಕಾಲ ಮುಂದುವರಿಯಬೇಕು ಎಂದರು. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ನುಸುಳುಕೋರರಿಗೆ ಅವಕಾಶವಿತ್ತು. ಅಂತಹ ರಾಜ್ಯದಲ್ಲಿ ಬಿಜೆಪಿ ಆರಿಸಿ ಬಂದಿದ್ದು ಸಂತೋಷಕರ. ಎಲ್ಲ ಅಕ್ರಮಗಳಿಗೂ ಕಡಿವಾಣ ಹಾಕಬೇಕಿದೆ ಎಂದರು.

ಬಿಎಸ್‌ವೈ ಜನನಾಯಕ: ಬಿವೈವಿ

ಪುಟ ೧➡ ಚಿತ್ರದುರ್ಗದ ಪುಣ್ಯಭೂಮಿ ವೀರರ ಭೂಮಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ ಜಾತಿ ಪಂಥಗಳ ಸ್ವಾಮೀಜಿಯವರು ಒಂದೇ ವೇದಿಕೆಯಲ್ಲಿದ್ದಾರೆ. ಕರ್ನಾಟಕದ ಲಕ್ಷಾಂತರ ಅಭಿಮಾನಿಗಳು ಯಡಿಯೂರಪ್ಪ ಅವರನ್ನು ತಮ್ಮ ನಾಯಕರೆಂದು ಕೊಂಡಾಡುತ್ತಿದ್ದಾರೆ ಎಂದರು.

ಜನಹಿತಕ್ಕಾಗಿ ಹೋರಾಟ: ಅಧಿಕಾರಕ್ಕಾಗಿ ಹೋರಾಟ ಅಲ್ಲ, ಜನರ ಹಿತಕ್ಕಾಗಿ ಹೋರಾಟ ನಡೆಸಿದವರು. ಬಿಎಸ್‌ವೈ ಅವರ ಹೋರಾಟಗಳನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಅವರು ತಮ್ಮ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ. ಜೀವನದುದ್ದಕ್ಕೂ ಯಾವುದೇ ಸವಾಲುಗಳು ಬಂದರೂ ಬೆನ್ನು ತೋರಿಸಿ ಓಡಿ ಹೋದವರಲ್ಲ. ಯಾವುದೇ ರಾಜಕೀಯ ಷಡ್ಯಂತ್ರ, ಸವಾಲು ಬಂದರೂ ಅದನ್ನು ಧೈರ್ಯವಾಗಿ ಎದುರಿಸಿದವರು ಎಂದು ವಿವರಿಸಿದರು. ರಾಜ್ಯದ ಇತಿಹಾಸದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ರೈತರಿಗಾಗಿ ಬಜೆಟ್ ಮಂಡಿಸಿದವರು. ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಆರಂಭಿಸಿ ಹೆಣ್ಣು ಶಾಪ ಅಲ್ಲ ಎಂಬ ಭಾವನೆಯನ್ನು ಮೂಡಿಸಿದವರು. ರಾಜ್ಯದ ಎಲ್ಲ ಮಠಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬಿದವರು ಎಂದರು.

> **ರಾಜ್ಯದ ಜನರು ಯಡಿಯೂರಪ್ಪ ಅವರ ಬಗ್ಗೆ ಇಟ್ಟುಕೊಂಡ ನಿರೀಕ್ಷೆ, ಅಪೇಕ್ಷೆಯನ್ನು ಅವರು ಅಧಿಕಾರಾವಧಿಯಲ್ಲಿ ಪೂರೈಸಿದ್ದಾರೆ. ಮಗನಾಗಿ ನಾನು ಕೂಡ ಅವರಂತೆಯೇ ರಾಜ್ಯದ ಜನರ ಕೆಲಸ ಮಾಡುತ್ತೇನೆ.**
> ■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಸತೀಶನ್ ಆಯ್ಕೆಗೆ ಮುಸ್ಲಿಂ ಲೀಗ್ ಒತ್ತಡ

ಪುಟ ೧➡ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ದಿಲ್ಲಿ ನಿವಾಸದಲ್ಲಿ ಶನಿವಾರ ಸಂಜೆ 4 ಗಂಟೆಗೆ ರಾಹುಲ್ ಗಾಂಧಿ, ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ರಮೇಶ್ ಚೆನ್ನಿತ್ತಲ, ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಮುಂತಾದವರ ಉಪಸ್ಥಿತಿಯಲ್ಲಿ ಸಭೆ ನಡೆದಿದೆ. ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್, ಅಜಯ್ ಮಾಕನ್ ಅವರು ಶುಕ್ರವಾರವೇ ಕೇರಳದ ರಾಜಕೀಯ ವಿದ್ಯಮಾನಗಳ ಬಗ್ಗೆ ಖರ್ಗೆ ಅವರಿಗೆ ವರದಿ ನೀಡಿದ್ದು, ಇದು ಕೂಡ ಚರ್ಚೆಯಲ್ಲಿ ಪ್ರಸ್ತಾವವಾಗಿದೆ.

ಗುರುವಾರ ತಿರುವನಂತಪುರಂನ ಇಂದಿರಾ ಭವನದಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರು ಕಾಂಗ್ರೆಸ್ ವೀಕ್ಷಕರನ್ನು ಭೇಟಿ ಮಾಡಿದ್ದು, ಈ ವೀಕ್ಷಕರು ಕಾಂಗ್ರೆಸ್ ಸಂಸದರು ಮತ್ತು ಮಿತ್ರ ಪಕ್ಷಗಳ ನಾಯಕರ ಜತೆಗೂ ಚರ್ಚೆ ನಡೆಸಿದ್ದರು. ಮುಖ್ಯಮಂತ್ರಿ ಆಯ್ಕೆ ಕುರಿತ ಚರ್ಚೆಗಳು 24 ಗಂಟೆಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಕೆ.ಮುರಳೀಧರನ್ ತಿರುವನಂತಪುರಂನಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರೂ, ಸಿಎಂ ಆಯ್ಕೆ ಇನ್ನೂ ಅಂತಿಮಗೊಳ್ಳದೆ ಇರುವುದು ಚರ್ಚೆಗೆ ಕಾರಣವಾಗಿದೆ.

ಸನ್ನಿ ಜೋಸೆಫ್ ವಿರುದ್ಧ ಘೋಷಣೆ: ಮುಖ್ಯಮಂತ್ರಿ ಗಾದಿಗಾಗಿ ಲಾಬಿಗಳು ತೀವ್ರಗೊಂಡಿರುವಂತೆಯೇ ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್ ಅವರು ಶುಕ್ರವಾರ ರಾತ್ರಿಯೇ ದಿಲ್ಲಿ ತಲುಪಿದ್ದರು. ಅಲ್ಲಿ ಸತೀಶನ್ ಅವರಿಗೆ ಮುಸ್ಲಿಂ ಲೀಗ್, ಮುಸ್ಲಿಂ ಸ್ಟೂಡೆಂಟ್ ಫೆಡರೇಶನ್ ಬೆಂಬಲಿಗರಿಂದ ಕೇರಳ ಭವನದಲ್ಲಿ ಭಾರೀ ಸ್ವಾಗತ ನೀಡಲಾಯಿತು. ಇದೇ ವೇಳೆ ಮುಸ್ಲಿಂ ಸ್ಟೂಡೆಂಟ್ ಫೆಡರೇಶನ್ ಕಾರ್ಯಕರ್ತರು ಕಾಂಗ್ರೆಸ್‌ನ ಕೇರಳ ರಾಜ್ಯಾಧ್ಯಕ್ಷ ಸನ್ನಿ ಜೋಸೆಫ್ ವಿರುದ್ಧ ಘೋಷಣೆ ಕೂಗಿದ ಘಟನೆಯೂ ನಡೆಯಿತು. ಇದು ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟದೊಳಗೆ ಹೆಚ್ಚುತ್ತಿರುವ ಗುಂಪುಗಾರಿಕೆಗೂ ಸಾಕ್ಷಿಯಾಯಿತು.

ನಾಯಕರಿಗೆ ದಿಲ್ಲಿ ಬುಲಾವ್: ಇದಕ್ಕೂ ಮೊದಲು ಕಾಂಗ್ರೆಸ್ ಹೈಕಮಾಂಡ್ ಕೇರಳದ ನಾಯಕರಿಗೆ ದಿಲ್ಲಿಗೆ ಬರುವಂತೆ ಬುಲಾವ್ ನೀಡಿತ್ತು. ಕೇರಳದ ಮುಂದಿನ ಮುಖ್ಯಮಂತ್ರಿ ಆಯ್ಕೆ ಕುರಿತ ಅಂತಿಮ ನಿರ್ಣಯಕ್ಕೆ ಮುನ್ನ ಕೇರಳದ ಉಸ್ತುವಾರಿ ದೀಪಾ ದಾಸ್‌ಮುನ್ಷಿ ಅವರ ಜತೆಗೂ ಚರ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಅಂತಿಮವಾಗಿ ಈಗ ರಮೇಶ್ ಚೆನ್ನಿತ್ತಲ ಹೆಸರು ಬದಿಗೆ ಸರಿದು ವಿ.ಡಿ.ಸತೀಶನ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಗಾಂಧಿ ಕುಟುಂಬದ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಅವರ ಹೆಸರು ಉಳಿದಿದೆ ಎನ್ನಲಾಗಿದ್ದು, ಅನಿಶ್ಚಿತತೆ ಮುಂದುವರಿದಿದೆ.

ಸಿಎಂ ಆಯ್ಕೆ ಕಾಂಗ್ರೆಸ್ ಬದಲು ಪಾಣಕ್ಕಾಡ್ ಕೈಯ್ಯಲ್ಲಿ–ಬಿಜೆಪಿ: ಸತೀಶನ್ ಪರವಾಗಿ ಮುಸ್ಲಿಂಲೀಗ್ ಸೇರಿದಂತೆ ಕಾಂಗ್ರೆಸಿನ ಮಿತ್ರಪಕ್ಷಗಳು ಬಲವಾದ ಒತ್ತಡ ಹೇರುತ್ತಿದ್ದರೆ, ಬಹುಸಂಖ್ಯೆಯ ಕಾಂಗ್ರೆಸ್ ಶಾಸಕರು ಗಾಂಧಿ ಕುಟುಂಬದ ಆಪ್ತ ಕೆ.ಸಿ.ವೇಣುಗೋಪಾಲ್ ಪರವಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮುಂದಿನ ಯುಡಿಎಫ್ ಸರಕಾರದ ಮುಖ್ಯಮಂತ್ರಿ ಆಯ್ಕೆ ಮುಸ್ಲಿಂಲೀಗಿನ ಪಾಣಕ್ಕಾಡ್ ತಂಙಳ್ ಹೇಳಿದಂತೆ ನಡೆಯಲಿದೆಯೇ ವಿನಾ ಕಾಂಗ್ರೆಸ್ ಶಾಸಕರ ಬೆಂಬಲದಂತೆ ಅಲ್ಲ ಎಂಬುದಾಗಿ ಬಿಜೆಪಿ ನಾಯಕ ಕೆ.ಸುರೇಂದ್ರನ್ ವ್ಯಂಗ್ಯವಾಡಿರುವುದನ್ನು ಇಲ್ಲಿ ಸ್ಮರಿಸಬಹುದು. ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ತಮ್ಮ ಹಿರಿತನದ ನೆಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಹಕ್ಕು ಮಂಡಿಸಿದ್ದರೂ, ಸತೀಶನ್ ಮತ್ತು ಕೆ.ಸಿ.ವೇಣುಗೋಪಾಲ್ ಅವರ ಪ್ರಭಾವದ ಮುಂದೆ ಚೆನ್ನಿತ್ತಲ ಅವರ ಬೇಡಿಕೆಗೆ ಬೆಂಬಲ ಲಭಿಸುವ ಸಾಧ್ಯತೆ ಎಷ್ಟು ಎಂಬ ಪ್ರಶ್ನೆ ಕೇಳಿಬಂದಿದೆ. ಇದೇ ವೇಳೆ, ಕಾಂಗ್ರೆಸ್ ಬೆಂಬಲಿಗರು ಕೇರಳದಾದ್ಯಂತ ಸಾಮಾಜಿಕ ಮಾಧ್ಯಮಗಳ ಮೂಲಕ ಮತ್ತು ಪ್ರತಿಭಟನಾ ಜಾಥಾಗಳ ಮೂಲಕ ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದು ಒತ್ತಡ ಹೇರುತ್ತಿದ್ದಾರೆ. ಇದರ ಹೊರತಾಗಿ ಉಪಚುನಾವಣೆ ಮೂಲಕ ಅಭ್ಯರ್ಥಿಯೊಬ್ಬರನ್ನು ಈ ಸ್ಥಾನಕ್ಕೆ ಆಯ್ಕೆ ಮಾಡುವ ಯತ್ನದ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಕೆ.ಸಿ.ವೇಣುಗೋಪಾಲ್ ಆಲಪ್ಪುಳದ ಸಂಸದರಾಗಿದ್ದು, ಕಾಂಗ್ರೆಸ್ ಹೈಕಮಾಂಡ್ ಅವರನ್ನು ಸಿಎಂ ಸ್ಥಾನಕ್ಕೆ ಆಯ್ಕೆ ಮಾಡಲು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದೆ ಎಂಬ ವರದಿಗಳ ನಡುವೆ ಈ ವಿದ್ಯಮಾನಗಳು ನಡೆಯುತ್ತಿವೆ.

ಯುಡಿಎಫ್ 102 ಸ್ಥಾನಗಳನ್ನು ಗೆದ್ದಿದ್ದು, ಕಾಂಗ್ರೆಸ್ 63 ಸ್ಥಾನಗಳೊಂದಿಗೆ ದೊಡ್ಡ ಪಕ್ಷವಾಗಿ ಮೂಡಿಬಂದಿದೆ. 2ನೇ ದೊಡ್ಡಪಕ್ಷವಾಗಿ ಮುಸ್ಲಿಂಲೀಗ್ 22 ಸ್ಥಾನಗಳನ್ನು ಗೆದ್ದಿದೆ. ಆಡಳಿತದಲ್ಲಿದ್ದ ಎಡರಂಗ 35 ಸ್ಥಾನಗಳೊಂದಿಗೆ ಹೀನಾಯ ಸೋಲುಂಡಿತ್ತು. ಬಿಜೆಪಿ ಇದೇ ಮೊದಲ ಬಾರಿಗೆ 3 ಸ್ಥಾನಗಳೊಂದಿಗೆ ಕೇರಳದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಗುರುತಿಸಿಕೊಂಡಿದೆ.

ಸತೀಶನ್ ಪರ ಬಲಪ್ರದರ್ಶನ: ವಿ.ಡಿ.ಸತೀಶನ್ ಅವರ ಪರವಾಗಿ ಶುಕ್ರವಾರ ರಾತ್ರಿ ಮಲಬಾರ್ ಜಿಲ್ಲೆಗಳಲ್ಲಿ ಮುಸ್ಲಿಂಲೀಗ್, ತೀವ್ರವಾದಿ ಜಮಾತೆ ಇಸ್ಲಾಮಿ ಬೆಂಬಲಿತ ವೆಲ್ಫೇರ್ ಪಾರ್ಟಿ ಸೇರಿದಂತೆ ವಿವಿಧ ಮುಸ್ಲಿಂ ಸಂಘಟನೆಗಳು ಬೃಹತ್ ಪ್ರದರ್ಶನ ನಡೆಸಿ ಕಾಂಗ್ರೆಸ್ ಹೈಕಮಾಂಡಿಗೆ ಎಚ್ಚರಿಕೆ ಸಂದೇಶ ರವಾನಿಸಿವೆ. ಬೀದಿ ಪ್ರದರ್ಶನಗಳ ವಿರುದ್ಧ ಕಾಂಗ್ರೆಸ್ ಹೈಕಮಾಂಡಿನ ಖಡಕ್ ಎಚ್ಚರಿಕೆಯ ಹೊರತಾಗಿಯೂ ಇಂತಹ ಪ್ರದರ್ಶನಗಳು ನಡೆದಿರುವುದು ಕುತೂಹಲ ಮೂಡಿಸಿದೆ. ಕೋಯಿಕ್ಕೋಡು ಜಿಲ್ಲೆಯ ನಾದಾಪುರಂ, ವಡಗರ, ಪೆರಂಬ್ರ, ತೊಟ್ಟಿಲಪಾಲಮ್ ಮುಂತಾದೆಡೆ ಸತೀಶನ್ ಪರ ಪ್ರದರ್ಶನಗಳು ನಡೆದಿದ್ದು, ಇ.ಟಿ.ಮೊಹಮ್ಮದ್ ಬಶೀರ್ ಮತ್ತಿತರ ಮುಸ್ಲಿಂ ಲೀಗಿನ ನಾಯಕರು ಪ್ರಿಯಾಂಕಾ ವಾದ್ರಾ ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಸತೀಶನ್ ಅವರನ್ನೇ ಸಿಎಂ ಗಾದಿಗೆ ಆಯ್ಕೆ ಮಾಡಬೇಕೆಂದು ಒತ್ತಡ ಹೇರಿದ್ದಾರೆನ್ನಲಾಗಿದೆ.


ಪ್ರಧಾನಿ ಮೋದಿ ಸಂದೇಶ ವಾಚಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ಸರ್ವರ ಏಳಿಗೆಗೆ ಶ್ರಮಿಸಿದ ಬಿಎಸ್‌ವೈ

ಚಿತ್ರದುರ್ಗ: ಸರಳತೆ, ಕಠಿಣ ಪರಿಶ್ರಮ, ಜನರ ಕಡೆ ಅವರ ಪ್ರೀತಿ, ರಾಜ್ಯದ ಏಳಿಗೆಗಾಗಿ ಯಡಿಯೂರಪ್ಪ ಅವರ ಶ್ರಮ ಅಪಾರವಾದುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಪ್ರಧಾನಿಯವರು ಕಳುಹಿಸಿದ ಸಂದೇಶವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಚಿಸಿದರು. ಬಳಿಕ ಪ್ರಧಾನಿಯವರ ಸಂದೇಶವುಳ್ಳ ಸಂದೇಶ ಫಲಕವನ್ನು ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.

ಕರ್ನಾಟಕದಲ್ಲಿ ಬಿಜೆಪಿ ಬೆಳವಣಿಗೆಗೆ ಅವರ ತ್ಯಾಗ, ಬೆವರಿನ ದುಡಿಮೆಯ ಕುರಿತು ಸಂದೇಶದಲ್ಲಿ ಮಾಹಿತಿ ನೀಡಿದ್ದನ್ನು ವಿವರಿಸಿದರು. ಕರ್ನಾಟಕದಲ್ಲಿ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾದುದು, ಪ್ರತ್ಯೇಕ ಕೃಷಿ ಬಜೆಟ್ ನೀಡಿದ್ದಾರೆ. ಕಾರ್ಯಕರ್ತರಿಗೆ ಮತ್ತು ಜನಪ್ರತಿನಿಧಿಗಳಿಗೆ ಅವರ ಮಾರ್ಗದರ್ಶನ ಇರಲಿ ಎಂದು ತಿಳಿಸಿದ್ದನ್ನು ಗಮನಕ್ಕೆ ತಂದರು. ಮೋದಿ ಅವರು ಅತ್ಯಂತ ವಿಶ್ವಾಸಾರ್ಹ ಜಗತ್ತಿನ ನಾಯಕ. ಅವರು ಯಡಿಯೂರಪ್ಪ ಅವರ ಬಗ್ಗೆ ಅತ್ಯಂತ ಉತ್ತಮ ಸಂದೇಶ ನೀಡಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಅಧಿಕಾರ ಪಡೆದಿದೆ. ಎನ್‌ಡಿಎ 21 ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆ. ಕರ್ನಾಟಕದಲ್ಲೂ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಮತ್ತೆ ಬಿಜೆಪಿ ಅಧಿಕಾರ ಪಡೆಯಲಿದೆ ಎಂದು ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.



> ಹಿಂದು ಧರ್ಮ ಮತ್ತು ಸನಾತನ ಧರ್ಮದ ಉಳಿವಿಗಾಗಿ ಸಂಘಟನೆಯ ಅಶ್ವಮೇಧವನ್ನು ಬಿಟ್ಟಿದ್ದೇವೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ. ಯಡಿಯೂರಪ್ಪ ಅವರ ಹೋರಾಟದ ರಾಜಕಾರಣವೆಂದರೆ ಹೌದಪ್ಪಗಳ ಚಾವಡಿಯಲ್ಲ, ಬಡವರ ಪರವಾಗಿ ಹೋರಾಟ ಮಾಡುವಂತಹ ಹೋರಾಟದ ಅಂಗಳ.
>
> ■ **ಕೋಟ ಶ್ರೀನಿವಾಸ ಪೂಜಾರಿ,** ಸಂಸದ

> ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ, ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ಮುಂದಿನವರ ಹಡಗು ಮುಳುಗುತ್ತಿದೆ. ನಮ್ಮ ಹಡಗು ದಡ ಸೇರುತ್ತಿದೆ. ಮುಂಬರುವ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ, ಒಂದಾಗಿ ಯಡಿಯೂರಪ್ಪ ಅವರ ಆಡಳಿತ ಮತ್ತು ಅವರ ಕಾರ್ಯಕ್ರಮಗಳು ಮತ್ತೆ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕು.
>
> ■ **ಬಸವರಾಜ ಬೊಮ್ಮಾಯಿ,** ಸಂಸದ

ಯಡಿಯೂರಪ್ಪ ಅವರಿಗೆ ಆರೋಗ್ಯ, ಆಯಸ್ಸು ಹೆಚ್ಚಾಗಲಿ: ಡಿಸಿಎಂ ಡಿ.ಕೆ.ಶಿವಕುಮಾರ್

ಯಡಿಯೂರಪ್ಪ ಅವರು ರಾಜ್ಯದ ಸೇವೆ ಮಾಡಿದ್ದಾರೆ. ಅವರ ಜನ್ಮದಿನವಿದ್ದರೆ ಅವರಿಗೆ ಒಳ್ಳೆಯದಾಗಲಿ. ಅವರ ಪಕ್ಷದವರು ಪಕ್ಷ ಸಂಘಟನೆ ಹಾಗೂ ಅವರಿಗೆ ಗೌರವ ನೀಡುತ್ತಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಅವರಿಗೆ ಉತ್ತಮ ಆರೋಗ್ಯ ಸಿಗಲಿ ಎಂದು ಆಶಿಸುತ್ತೇನೆ. ಭಗವಂತ ಅವರಿಗೆ ಹೆಚ್ಚಿನ ಆಯಸ್ಸು ನೀಡಲಿ. ರಾಜಕೀಯವಾಗಿ ಅವರ ವಿಚಾರಧಾರೆ ಬೇರೆ, ನಮ್ಮ ವಿಚಾರಧಾರೆ ಬೇರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ಮಾದಾರ ಚೆನ್ನಯ್ಯ ಗುರು ಪೀಠದ ಮೈದಾನದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವದ ವೇದಿಕೆ ಮುಂಭಾಗದಲ್ಲಿ ನೆರದಿದ್ದ ಲಕ್ಷಾಂತರ ಅಭಿಮಾನಿಗಳ ಬಳಗ...

ರಾಜ್ಯದಲ್ಲೂ ಬಿಜೆಪಿ ಹವಾ!

ವಾದಿರಾಜ ಕಮರೂರು

ಶಿವಮೊಗ್ಗ: ಪಂಚ ರಾಜ್ಯ ಚುನಾವಣೆ ಫಲಿತಾಂಶದ ಬಳಿಕ ಅತೀವ ಉತ್ಸಾಹದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಇದೀಗ ಕರ್ನಾಟಕದಲ್ಲೂ ತನ್ನ ಹವಾ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳು ಪೂರೈಸಿರುವ ನಿಮಿತ್ತ ಆಯೋಜಿಸಿದ್ದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ಪರೋಕ್ಷವಾಗಿ ಪಕ್ಷದ ಶಕ್ತಿಪ್ರದರ್ಶನದ ಕಾರ್ಯಕ್ರಮವಾಗಿದ್ದು ಸುಳ್ಳಲ್ಲ. ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನೂ ಎರಡು ವರ್ಷಗಳು ಬಾಕಿ ಇರುವಾಗಲೇ ಬಿಜೆಪಿ ಒಂದರ್ಥದಲ್ಲಿ ಈಗಲೇ ತಾನು ಚುನಾವಣೆಗೆ ಸಿದ್ಧ ಇರುವುದಾಗಿ ರಣಕಹಳೆಯನ್ನು ಕೋಟೆ ನಾಡು ಚಿತ್ರದುರ್ಗದಲ್ಲಿ ಮೊಳಗಿಸಿದೆ.

ದಿಗಂತ ವಿಶ್ಲೇಷಣೆ

ಎಲ್ಲರ ಬಾಯಲ್ಲೂ ಬಂಗಾಳ: ಶನಿವಾರವೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಪ್ರಮಾಣವಚನ ಸ್ವೀಕರಿಸಿದ್ದರಿಂದ ಯಡಿಯೂರಪ್ಪ ಅಭಿಮಾನೋತ್ಸವದ ಇಡೀ ಕಾರ್ಯಕ್ರಮದಲ್ಲಿ ಬಂಗಾಳದ ವಿಜಯೋತ್ಸವವೂ ಮೊಳಗಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಹಿಡಿದು ಮಾತನಾಡಿದ ಎಲ್ಲರೂ ಪಶ್ಚಿಮ ಬಂಗಾಳದ ಬಿಜೆಪಿಯ ವಿಜಯವನ್ನು ಉಲ್ಲೇಖಿಸಿದರು. ಅದೇ ರೀತಿ ಕರ್ನಾಟಕದಲ್ಲೂ ಬಿಜೆಪಿಗೆ ಅಧಿಕಾರ ಬರಬೇಕೆಂಬುದು ಎಲ್ಲರ ಧ್ವನಿಯೂ ಆಗಿತ್ತು.

ದಕ್ಷಿಣ ಭಾರತದಲ್ಲಿ ಮೊದಲು ಕಮಲ ಅರಳಿಸಿದ್ದು ಯಡಿಯೂರಪ್ಪನವರು ಎಂದ ಅಮಿತ್ ಶಾ, ಮತ್ತೆ ಪಕ್ಷಕ್ಕೆ ಅವರ ಮಾರ್ಗದರ್ಶನ ಅವಶ್ಯವೆಂದು ಬಹಿರಂಗವಾಗಿ ಹೇಳಿದರು. ಸುದೀರ್ಘ ಕಾಲ ಬಿಜೆಪಿಗೆ ಮಾರ್ಗದರ್ಶನ ಮಾಡಿದ ಯಡಿಯೂರಪ್ಪರಿಗೆ ಕೃತಜ್ಞತೆಯನ್ನೂ ಸಲ್ಲಿಸಿದರು.

ಎಲ್ಲೂ ಸರ್ಕಾರದ ಪ್ರಸ್ತಾಪವಿಲ್ಲ: ಕಾರ್ಯಕ್ರಮ ಪೂರ್ತಿ ಯಡಿಯೂರಪ್ಪನವರ ರಾಜಕೀಯ ಹಾದಿ, ಅವರ ಸಾಧನೆ, ಅವರ ಅವಧಿಯಲ್ಲಿ ಕೈಗೊಳ್ಳಲಾದ ಯೋಜನೆಗಳ ಕುರಿತಾಗಿಯೇ ಸೀಮಿತವಾಗಿತ್ತು. ಅಮಿತ್ ಶಾ ಕೂಡ ಒಂದರ್ಥದಲ್ಲಿ ಅಭಿನಂದನಾ ಭಾಷಣದಂತೆಯೇ ಮಾತನಾಡಿದರು. ಎಲ್ಲಿಯೂ ಕೂಡ ರಾಜ್ಯದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರದ ಬಗ್ಗೆಯಾಗಲೀ, ಯೋಜನೆಗಳ ಬಗ್ಗೆಯಾಗಲೀ ಚರ್ಚೆಯನ್ನೇ ಮಾಡಲಿಲ್ಲ. ಬದಲಾಗಿ ಬಿಜೆಪಿ ಅಧಿಕಾರಕ್ಕೆ ಬಂದರೆ ರೈತರಿಗೆ, ಸಾಮಾನ್ಯ ಜನರಿಗೆ ಆಗುವ ಲಾಭ ಮತ್ತು ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿದ ಜನೋಪಯೋಗಿ ಕಾರ್ಯಗಳ ಬಗ್ಗೆ ಮಾತ್ರ ಪ್ರಸ್ತಾವ ಮಾಡಲಾಯಿತು.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೂ ಒಂದು ವರ್ಷ ಮುನ್ನ ಅಂದರೆ 2022ರ ಆಗಸ್ಟ್ ತಿಂಗಳಲ್ಲಿ ಸಿದ್ದರಾಮಯ್ಯ ಅವರಿಗೆ 75 ವರ್ಷಗಳಾದ ನಿಮಿತ್ತ ದಾವಣಗೆರೆಯಲ್ಲಿ ಬೃಹತ್ ಕಾರ್ಯಕ್ರಮ ಸಿದ್ದರಾಮೋತ್ಸವ ಆಯೋಜಿಸಲಾಗಿತ್ತು. ಆ ಮೂಲಕ ಕಾಂಗ್ರೆಸ್ ಚುನಾವಣೆಗೆ ತಯಾರಾಗುವಂತೆ ತನ್ನ ಕಾರ್ಯಕರ್ತರನ್ನು ಹುರಿದುಂಬಿಸಿ ನಂತರ ನಡೆದ ಚುನಾವಣೆಯಲ್ಲಿ ಯಶಸ್ವಿಯಾಗಿತ್ತು. ಇದೀಗ ಅಲ್ಲೇ ಪಕ್ಕದ ಚಿತ್ರದುರ್ಗದಲ್ಲಿ ಬಿಜೆಪಿ ಯಡಿಯೂರಪ್ಪನವರ ಅಭಿಮಾನೋತ್ಸವದ ಹೆಸರಲ್ಲಿ ಸಿದ್ದರಾಮೋತ್ಸವಕ್ಕೆ ಕಮ್ಮಿ ಇಲ್ಲದಂತೆಯೇ ಶಕ್ತಿಪ್ರದರ್ಶನ ಮಾಡಿದೆ.



2028ರ ಚುನಾವಣಾ ಪೂರ್ವ ರಂಗಸಜ್ಜಿಕೆಯನ್ನಂತೂ ಬಿಜೆಪಿ ಚೆನ್ನಾಗಿಯೇ ಮಾಡಿಕೊಂಡಿದೆ. ಇನ್ನು ಚುನಾವಣಾ ಕಾಲದಲ್ಲಿ ಮತದಾರನ ಹೇಗೆ ತಲುಪಲಿದೆ? ಯಾವ ವಿಷಯ ಪ್ರಸ್ತಾಪವಾಗಲಿದೆ ಎಂಬುದು ಕೂಡ ಮುಖ್ಯವಾಗುತ್ತದೆ. ಕೇವಲ ಒಳ್ಳೆಯ ರಂಗಸಜ್ಜಿಕೆಯನ್ನು ಮಾತ್ರ ನೆಚ್ಚಿಕೊಂಡರೆ ಪ್ರದರ್ಶನದ ಯಶಸ್ಸಿಗೆ ಅದೊಂದೇ ಕಾರಣ ಆಗಲಾರದು. ಸಾಮೂಹಿಕ ಪ್ರಯತ್ನ, ಅದಕ್ಕೆ ಬೇಕಾದ ಇಚ್ಚಾಶಕ್ತಿ, ಸಾಂಘಿಕ ದೃಷ್ಟಿಕೋನ ಅವಶ್ಯವಾಗುತ್ತದೆ. ಇದಾದರೆ ಮತ್ತೆ ದಕ್ಷಿಣದಲ್ಲಿ ಕಮಲ ಅರಳುವುದು ಕಷ್ಟವೇನಲ್ಲ.

ತಂದೆಯಂತೆ ನನಗೂ ಸಹಕಾರ ಕೊಡಿ



ರಾಜ್ಯ ಬಿಜೆಪಿ ಬೆಳವಣಿಗೆಯಲ್ಲಿ ನಮ್ಮ ತಂದೆಯವರ ಪಾತ್ರ ಎಲ್ಲರಿಗೂ ತಿಳಿದಿದೆ. ಅವರ ಮಾರ್ಗದರ್ಶನದಲ್ಲಿ ನಾನು ಮುನ್ನಡೆಯುತ್ತಿದ್ದೇನೆ. ಎಲ್ಲರೂ ಅವರಿಗೆ ಸಹಕಾರ ನೀಡಿದಂತೆ ನನಗೂ ಹೆಗಲು ಕೊಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಬಿ.ವೈ. ವಿಜಯೇಂದ್ರ ಮನವಿ ಮಾಡಿದರು. ಮತ್ತೊಂದೆಡೆ ಅಮಿತ್ ಶಾ ಅವರೆದುರು ಭಾರೀ ಜನಸಾಗರವನ್ನು ವಿಜಯೇಂದ್ರ ಪ್ರದರ್ಶಿಸಿದ್ದು ರಾಜ್ಯದಲ್ಲಿ ತಮಗಿರುವ ಜನಬೆಂಬಲವನ್ನು ವ್ಯಕ್ತಪಡಿಸಿದರು.

ಬಿಎಸ್‌ವೈ ಆಡಳಿತದಲ್ಲಿ ರಾಜ್ಯ ಸಮೃದ್ಧಿ

ಚಿತ್ರದುರ್ಗ: ರೈತ ನಾಯಕ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಆಡಳಿತ ನಡೆಸುವಾಗ ರಾಜ್ಯ ಸಮೃದ್ಧಿಯಾಗಿತ್ತು. ಅಂತಹ ದಿನಗಳು ರಾಜ್ಯದಲ್ಲಿ ಮತ್ತೆ ಬರಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಯ ವ್ಯಕ್ತಪಡಿಸಿದರು.

ಶನಿವಾರ ನಡೆದ ಬಿಎಸ್‌ವೈ ಅಭಿಮಾ ನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ಪಕ್ಷದ ಹಡಗು ಮುಳುಗುತ್ತಿದೆ. ಹಾಗಾಗಿ ಜನರು ಮನಸ್ಸು ಮಾಡಿ ಮುಂದೆ ಬಿಜೆಪಿ ಅಧಿಕಾರಕ್ಕೆ ತರಬೇಕು. ಯಡಿಯೂರಪ್ಪ ಅವರ ಯೋಜನೆಗಳು ಮತ್ತೆ ಜಾರಿಗೆ ಬರುವಂತಾಗಬೇಕು ಎಂದರು.

ಯಡಿಯೂರಪ್ಪ ಎಂಬ ಹೆಸರಿನಲ್ಲಿ ದೊಡ್ಡ ಶಕ್ತಿಯಿದೆ. ಬಡವರ, ದೀನದಲಿತರ ಮನಗಳಲ್ಲಿ, ಮನೆಯಲ್ಲಿ ಮಿಡಿಯುತಿರುವ ಹೆಸರು ಬಿಎಸ್‌ವೈ. ಚಿತ್ರದುರ್ಗ ಜಿಲ್ಲೆಯ ಮಹತ್ವದ ಭದ್ರಾ ಮೇಲ್ದಂಡೆ ಯೋಜನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ರಾಜ್ಯದಲ್ಲಿ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಯೋಜನೆಗೆ ಯಡಿಯೂರಪ್ಪನವರು ಭೂಮಿಪೂಜೆ ನೆರವೇರಿಸಿದರು. ಅದರಂತೆ ವಾಣಿವಿಲಾಸ ಸಾಗರಕ್ಕೆ ನೀರು ಕೊಟ್ಟರು. ಹಾಗಾಗಿ ಬಿಎಸ್‌ವೈ ಬರದ ನಾಡಿಗೆ ನೀರು ತಂದ ಭಗೀರಥ ಎಂದು ಬಣ್ಣಿಸಿದರು.

ವಿರೋಧ ಪಕ್ಷದಲ್ಲಿದ್ದಾಗ ವಿವಿಧ ವಿಷಯಗಳ ಕುರಿತು ನಿರಂತರ ಹೋರಾಟ ನಡೆಸಿದರು. ಬಳಿಕ ತನಗೇ ಅಧಿಕಾರಕ್ಕೆ ಬಂದಾಗ ಅವನ್ನು ಸಾಕಾರಗೊಳಿಸಿದರು. ನಾಡಿನ ವಿವಿಧ ಕೆರೆಗಳಿಗೆ ನೀರು ತುಂಬಿಸುವ ಅನೇಕ ಯೋಜನೆಗಳನ್ನು ಜಾರಿ ಮಾಡಿದರು. ರಾಜ್ಯದ ಉದ್ದಗಲಕ್ಕೂ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಇದರಿಂದ ಅನೇಕ ರೈತರ ಕೃಷಿ ಜಮೀನುಗಳಿಗೆ ಅನುಕೂಲವಾಯಿತು. ರಾಜ್ಯದ ಜನ ಇದನ್ನು ಸ್ಮರಿಸಬೇಕು ಎಂದು ನೆನಪು ಮಾಡಿದರು.

ಯಡಿಯೂರಪ್ಪನವರು ಅನೇಕ ಹಿಂದುಳಿದ ಮಠಮಾನ್ಯಗಳು, ಹಿಂದುಳಿದವರಿಗೆ ಅಭಿವೃದ್ಧಿ ನಿಗಮ ಮಾಡಿ ಅನುಕೂಲ ಮಾಡಿಕೊಟ್ಟಿದ್ದಾರೆ. 2009ರಲ್ಲಿ ಭೀಕರ ಪ್ರವಾಹವಾದಾಗ 22 ದಿನ ಮನೆ ಸೇರದೆ ರಾಜ್ಯ ಪ್ರವಾಸ ಮಾಡಿ ನೊಂದವರ ಕಣ್ಣೀರು ಒರೆಸಿದರು. ಹಳ್ಳಿ ಹಳ್ಳಿಗೆ ತೆರಳಿ ಜನರ ಅಳಲು ಆಲಿಸಿ 63 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟರು ಎಂದು ಹೇಳಿದರು. ಕೋವಿಡ್ ಸಂದರ್ಭದಲ್ಲಿ ಸಮರ್ಪಕ ಆಕ್ಸಿಜನ್ ಪೂರೈಸಿ ಜನರ ಜೀವ ಉಳಿಸಿದರು. ಇವರ ಸಾಧನೆಗಳ ಬಗ್ಗೆ ಮಾತನಾಡಲು ವಾರಗಟ್ಟಲೆ ಸಮಯ ಸಾಕಾಗುವುದಿಲ್ಲ. ಇದೆ. ನನ್ನ ಮಾರ್ಗದರ್ಶಕರಾದ ಯಡಿಯೂರಪ್ಪನವರಿಗೆ ದೇವರು ನೂರು ವರ್ಷ ಆಯಸ್ಸು ನೀಡಲಿ ಎಂದು ಹೇಳಿದರು.



ನಾಡಿಗಾಗಿ ದುಡಿದ ನಾಯಕ

ಅಧಿಕಾರಕ್ಕೋಸ್ಕರ ಸುಳ್ಳು ಹೇಳಿ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುವ ರಾಜಕೀಯ ನಾಯಕರಿರುವ ಇಂದಿನ ದಿನಗಳಲ್ಲಿ ಬಿ.ಎಸ್. ಯಡಿಯೂರಪ್ಪನವರು ಜನಪರ ಕೆಲಸ ಮಾಡಿದ್ದಾರೆ. ಇದಕ್ಕೆ ನಾಡಿನಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳೇ ಸಾಕ್ಷಿ. ಯಡಿಯೂರಪ್ಪನವರು ಅಧಿಕಾರ ಬಿಟ್ಟು ಅನೇಕ ವರ್ಷಗಳು ಕಳೆದಿವೆ. ಆದಾಗ್ಯೂ ಅವರು ಮಾಡಿರುವ ಕೆಲಸ ಜನಮಾನಸದಲ್ಲಿ ಉಳಿದಿವೆ. ಬಿಎಸ್‌ವೈ ನಾಡಿನ ಏಕೈಕ ಮಾಸ್ ಲೀಡರ್ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿಕೆ

ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ

ಚಿತ್ರದುರ್ಗ: ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹುಟ್ಟು ಹೋರಾಟಗಾರ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡಿ ವಿಧಾನಸೌಧದ ಗದ್ದುಗೆ ಏರಿದರು ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ನಗರದ ಹೊರ ವಲಯದ ಶಿವ ಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಕನಕ ಜಯಂತಿ ಆಚರಣೆ ಬಿ.ಎಸ್. ಯಡಿಯೂರಪ್ಪನವರ ಕೊಡುಗೆ. ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ ನೀಡಿ ರಾಷ್ಟ್ರೀಯ ಪ್ರವಾಸಿ ತಾಣ ಮಾಡಿದರು. ಕೊಟ್ಟ ಮಾತಿನಂತೆ ನಡೆದವರು ಯಡಿಯೂರಪ್ಪ. ಮೈಲಾರದಲ್ಲಿ ಶಾಲೆ ಆರಂಭಿಸಲು ಅಗತ್ಯ ಅನುದಾನಕ್ಕೆ 10 ಕೋಟಿ ಹಣ ನೀಡಿದರು. ಇವರ ಬಗ್ಗೆ ಮಾತನಾಡಲು ಸಮಯ ಸಾಕಾಗುವುದಿಲ್ಲ. ದೇವರು ಇವರಿಗೆ ನೂರಾರು ವರ್ಷ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ. ಇವರಿಂದ ರಾಜ್ಯಕ್ಕೆ ಇನ್ನೂ ಉತ್ತಮ ಸೇವೆ ದೊರೆಯುವಂತಾಗಲಿ ಎಂದು ಆಶಿಸಿದರು.



> ಧಾರ್ಮಿಕ ಕೇಂದ್ರಗಳಿಗೆ ಅನುದಾನ ನೀಡಿದ ಪ್ರಥಮ ಮುಖ್ಯಮಂತ್ರಿ. ಅವರ ಮೇಲಿನ ಅಭಿಮಾನಕ್ಕೆ ಎಲ್ಲ ಮಠಾಧೀಶರು ಇಲ್ಲಿಗೆ ಆಗಮಿಸಿದ್ದಾರೆ. ಇದೊಂದು ಸಾರ್ಥಕ ಸಮಾರಂಭ. ಮುಂದೊಂದು ದಿನ ಅಮೃತ ಮಹೋತ್ಸವ, ಶತಮಾನೋತ್ಸವ ಆಚರಿಸುವಂತಾಗಲಿ.
>
> ■ **ಶ್ರೀ ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ,** ರಂಭಾಪುರೀ ಪೀಠ

ಇತಿಹಾಸ ಪುಟ ಸೇರುವ ಕಾರ್ಯಕ್ರಮ: ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಇದೊಂದು ಇತಿಹಾಸ ಪುಟ ಸೇರುವ ಕಾರ್ಯಕ್ರಮ. ಬಿಎಸ್‌ವೈ ಅಭಿಮಾನಿಗಳ ಜನಸಾಗರವೇ ಇಲ್ಲಿ ಸೇರಿದೆ. ಹಾಗಾಗಿ ಅಭಿಮಾನೋತ್ಸವವನ್ನು 8ನೇ ಅದ್ಭುತ ಎಂದು ಹೇಳಬಹುದು. ಶ್ರೀರಾಮನ ಪಟ್ಟಾಭಿಷೇಕದ ನಂತರ ಈ ದೇಶದಲ್ಲಿ ನಡೆದ ಅತಿದೊಡ್ಡ ಕಾರ್ಯಕ್ರಮ ಈ ಅಭಿಮಾನೋತ್ಸವ. ಅಭಿಮಾನಿಗಳು ಸ್ವಯಂಪ್ರೇರಣೆಯಿಂದ ಬಂದು ಇಲ್ಲಿ ಸೇರಿದ್ದಾರೆ. ರೈತಪರ ಹೋರಾಟಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟವರು ಬಿಎಸ್‌ವೈ. ಎಷ್ಟೋ ಜನ ಅವರನ್ನು ಮುಗಿಸಲು ನೋಡಿದರು. ಆದರೆ ಜನರ ಪ್ರೀತಿಯಿಂದ ಅದು ಸಾಧ್ಯವಾಗಿಲ್ಲ ಎಂದರು. ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದ ಸ್ವಾಮೀಜಿ, ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿದರು.

ವಾರಣಾಸಿ ಕಾಶೀ ಪೀಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಬೆಕ್ಕಿನಕಲ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಬಸವಕುಮಾರ ಸ್ವಾಮೀಜಿ, ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಸಿರಿಗೆರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಉಡುಪಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಶಾಂತವೀರ ಸ್ವಾಮೀಜಿ, ಶ್ರೀ ಸೋಮಶೇಖರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಶ್ರೀ ಬಸವ ಗುಂಡಯ್ಯ ಸ್ವಾಮೀಜಿ, ಭಗೀರಥ ಗುರುಪೀಠದ ಶ್ರೀಪುರುಷೋತ್ತಮಾನಂದ ಸ್ವಾಮೀಜಿ, ಡಾ. ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ನಾಡಿನ ನೂರಾರು ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

224 ವಿಧಾನ ಸಭಾ ಕ್ಷೇತ್ರಗಳಿಂದ ಅಭಿಮಾನಿಗಳ ಆಗಮನ.

3,000 ಪ್ರಬಂಧಕರಿಂದ ಹದಿನೈದು ದಿನಗಳಿಂದ ಹಗಲು ರಾತ್ರಿ ಕೆಲಸ.

10 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳಿಗೆ ಶುಚಿ-ರುಚಿ ಊಟ

40 ಕಿ.ಮೀ. ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ.

ಅಭಿಮಾನದ ಹೊಳೆಯಲ್ಲಿ ಮಿಂದ ಅಭಿಮಾನಿ ಬಳಗ

ಎನ್.ಜಿ. ತಿಪ್ಪೇಸ್ವಾಮಿ

ಚಿತ್ರದುರ್ಗ: ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನ 50 ವರ್ಷ ಪೂರೈಸಿರುವ ಅಂಗವಾಗಿ ನಗರದ ಹೊರವಲಯದ ಮದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಸಚಿವರು, ನಾಡಿನ ಅನೇಕ ಮಠಾಧೀಶರು ಆಗಮಿಸಿದ್ದರು.

ಇದಲ್ಲದೇ ನಾಡಿನ ಮೂಲೆ ಮೂಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳ ದಂಡು ಚಿತ್ರದುರ್ಗಕ್ಕೆ ಹರಿದುಬಂದಿತ್ತು. ಎತ್ತ ನೋಡಿದರೂ ಜನವೋ ಜನ. ನಗರ ಸೇರಿದಂತೆ ನಗರದ ಹೊರವಲಯದ ಹೆದ್ದಾರಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ನಗರದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಸುಮಾರು 40 ಕಿಮೀ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಪೊಲೀಸರು ಅಭಿಮಾನಿಗಳನ್ನು ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಲ್ಲಿ ಸಾಕು ಸಾಕಾಗಿ ಹೋದರು.



ರಾಜ್ಯದ 224 ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ಪ್ರತಿ ಕ್ಷೇತ್ರಗಳಿಂದ ಸಾವಿರ ಸಾವಿರ ಸಂಖ್ಯೆಯ ಅಭಿಮಾನಿಗಳು ಕಾರ್ಯಕ್ರಮಕ್ಕೆ ನಾಡಿನ ವಿವಿಧೆಡೆಗಳಿಂದ ಜನಸಾಗರವೇ ಹರಿದುಬಂದಿತ್ತು. ಶನಿವಾರ ಮುಂಜಾನೆಯಿಂದಲೇ ಅಭಿಮಾನಿಗಳು ಕಾರ್ಯಕ್ರಮ ನಡೆಯುವ ಮೈದಾನಕ್ಕೆ ದಾಂಗುಡಿ ಇಟ್ಟಿದ್ದರು. ಇವರ ನಿರ್ವಹಣೆಗೆ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ನಾಡಿನ ವಿವಿಧ ಜಿಲ್ಲೆಗಳಿಂದ ಬಂದ ಅಭಿಮಾನಿಗಳಿಗೆ ಅಚ್ಚುಕಟ್ಟಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅನೇಕ ಪ್ರಬಂಧಕರು ಸ್ವಯಂಪ್ರೇರಿತರಾಗಿ ಅಭಿಮಾನಿಗಳಿಗೆ ಅಗತ್ಯ ಸೇವೆ ಒದಗಿಸಿದರು. ಊಟದ ನಿರ್ವಹಣೆಗೆ ಕಾರ್ಯಕ್ರಮ ವೇದಿಕೆಯ ಒಂದೆರಡು ಕಡೆ ವ್ಯವಸ್ಥೆ ಮಾಡಲಾಗಿತ್ತು. ಊಟ ತಯಾರಿಸಲು ಐದಾರು ಕಡೆ ದೊಡ್ಡ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಪ್ರತಿಯೊಂದು ಕಡೆ ನೂರಾರು ಕೌಂಟರ್‌ಗಳನ್ನು ತೆರೆದು ಜನರಿಗೆ ಊಟ, ತಿಂಡಿ ನೀಡಲಾಯಿತು. ಬೆಳಿಗ್ಗೆ ತಿಂಡಿಗೆ ಉಪ್ಪಿಟ್ಟು, ಕೇಸರಿಬಾತ್, ಇಡ್ಲಿ, ವಡೆ, ಸಾಂಬಾರ್ ನೀಡಲಾಯಿತು. ಬಳಿಕ 11 ಗಂಟೆಯ ನಂತರ ಟೊಮೋಟೋ ಬಾತ್, ಪೊಲಾವ್, ಮೊಸರನ್ನ, ಮೈಸೂರುಪಾಕ್ ನೀಡಲಾಯಿತು. ಅಭಿಮಾನಿಗಳು ಹೊಟ್ಟೆತುಂಬ ಊಟ ಮಾಡಿ ಸಂತೃಪ್ತರಾದರು.

ಸಾಗರೋಪಾದಿಯಲ್ಲಿ ಅಭಿಮಾನಿಗಳು ನೆರೆದಿದ್ದ ಪರಿಣಾಮ, ಅವರಿಗೆ ನೀಡಲು ತಂದಿದ್ದ ಪರಿಕರಗಳನ್ನು ಪೆಂಡಾಲ್‌ನಲ್ಲಿ ಅಲ್ಲಲ್ಲಿ ರಾಶಿ ಹಾಕಲಾಗಿತ್ತು. ನೆರೆದಿದ್ದ ಜನರಿಗೆ ಅಲ್ಲಲ್ಲಿ ಕುಡಿಯುವ ನೀರು, ಮಜ್ಜಿಗೆ ಪ್ಯಾಕೇಟ್‌ಗಳನ್ನು ವಿತರಿಸಲಾಗುತ್ತಿತ್ತು. ಬಿಸಿನಿನ ಝಳ ತಪ್ಪಿಸಲು ಅಲ್ಲಲ್ಲಿ ಏರ್ ಕೂಲರ್‌ಗಳು, ಬೃಹತ್ ಗಾತ್ರದ ಫ್ಯಾನ್‌ಗಳನ್ನು ಅಳವಡಿಸಲಾಗಿತ್ತು.



ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ನಿಮಿತ್ತ ಹೊಸ ದಿಗಂತ ಹೊರತಂದಿರುವ ವಿಶೇಷ ಸಂಚಿಕೆಯನ್ನು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ನೀಡಲಾಯಿತು. ದಾವಣಗೆರೆ ಜಿಲ್ಲಾ ಪ್ರಸರಣ ಪ್ರತಿನಿಧಿ ನಿಂಗಪ್ಪ, ಚಿತ್ರದುರ್ಗ ಜಿಲ್ಲಾ ಜಾಹೀರಾತು ಪ್ರತಿನಿಧಿ ಅನಿಲ್ ಇದ್ದರು.



ಕೋಟೆ ನಾಡಲ್ಲಿ ನಡೆದ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಶನಿವಾರ ಹರಿದು ಬಂದ ಅಪಾರ ಜನಸಾಗರ.

ಚಿತ್ರಗಳು: ಮೋಹನ್ ಕುಮಾರ್ ಬಿ.ಎನ್.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ವಿಪತ್ತು ಯಾರನ್ನು ತಟ್ಟುವುದಿಲ್ಲ?

▸ಜಿತೇಂದ್ರಿಯನನ್ನು ಮತ್ತು ಜ್ಞಾನ ಮತ್ತು ವಯಸ್ಸಿನಿಂದ ಕೂಡಿದ ವೃದ್ಧರ ಮಾತನ್ನು ಕೇಳುವವನನ್ನು.

ವಿಪತ್ತು, ಆಪತ್ತು, ತೊಂದರೆ, ತಾಪತ್ರಯ, ವಿಘ್ನ ಇವುಗಳೆಲ್ಲವೂ ಪರ್ಯಾಯಪದಗಳು. ಇವು ಬರಲು ಏನು ಕಾರಣ? ಮತ್ತುಇವು ಬರದಿರಲು ಏನು ಕಾರಣ ಎಂಬ ವಿಷಯ ಈ ಪ್ರಶ್ನೋತ್ತರದಲ್ಲಿ ಅಡಕವಾಗಿದೆ.

ಒಬ್ಬ ಜಿತೇಂದ್ರಿಯನಾದವನು ಮತ್ತು ಯಾರಲ್ಲಿ ಜ್ಞಾನವಿದೆಯೋ ಮತ್ತು ವಯಸ್ಸಿನಿಂದಲೂ ಶ್ರೇಷ್ಠನಾಗಿದ್ದಾನೋ ಅಂತವರಿಗೆ ಗೌರವವನ್ನು ಕೊಡುವವನು ವಿಪತ್ತಿಗೆ ಒಳಗಾಗುವುದಿಲ್ಲ ಎಂಬುದಾಗಿ ಇಲ್ಲಿ ಹೇಳಲಾಗಿದೆ. ಇವು ಆಪತ್ತನ್ನು ದೂರ ಮಾಡುತ್ತವೆ ಎಂಬುದಾಗಿ ಅರ್ಥ. ಅತ್ಯಂತ ಸುಲಭವಾದ ಉತ್ತರ. ಒಂದು ಮಾತು ಹೀಗಿದೆ –" ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬುದಾಗಿ. ಇದು ಇಂದ್ರಿಯ ಜಯವನ್ನು ಸಾರುವ ಗಾದೆಮಾತಾಗಿದೆ. ಊಟವನ್ನು ಹೇಗೆ ಮಾಡಬೇಕು? ಯಾವಾಗ ಮಾಡಬೇಕು? ಯಾವುದನ್ನು ಮಾಡಬೇಕು? ಎಂಬುದರ ಬಗ್ಗೆ ಇರುವ ಪರಿಜ್ಞಾನ. ಇದು ಊಟವನ್ನು ಉಚಿತವಾಗಿಯೂ ಉತ್ಕೃಷ್ಟವಾಗಿಯೂ ಮಾಡುವ ಬಗೆಗೆ ಇರುವ ಜ್ಞಾನ. ಅಂದರೆ ಆಯುರ್ವೇದ ಊಟದ ಬಗ್ಗೆ ಹೀಗೆ ಹೇಳುತ್ತದೆ – 'ಹಸಿದಾಗ ಊಟ ಮಾಡು, ದಿನಕ್ಕೆ ಎರಡು ಹೊತ್ತು ಊಟ ಮಾಡು' ಎಂದು. ಆದರೆ ನಾವಿಂದು ನಮ್ಮ ಇಂದ್ರಿಯ ಚಾಪಲ್ಯದಿಂದ ಅಕಾಲದಲ್ಲಿ ಅಮಿತವಾಗಿ ಊಟವನ್ನು ಮಾಡುತ್ತಿದ್ದೇವೆ. ಅಂದರೆ ನಮ್ಮ ಇಂದ್ರಿಯ ಚಾಪಲ್ಯ ಮಿತಿಮೀರಿದೆ ಎಂಬುದು ಇದರ ತಾತ್ಪರ್ಯ. ಇದರಿಂದಾಗಿ ನಮಗಿಂದು ರೋಗಬಾಹುಲ್ಯ ಉಂಟಾಗಿದೆ. ಮಾತನಾಡುವಾಗ ಹೇಗೆ ಮಾತನಾಡಬೇಕು? ಎಷ್ಟು ಮಾತನಾಡಬೇಕು? ಯಾವುದನ್ನು ಮಾತನಾಡಬೇಕು? ಯಾವ ಶಬ್ದವನ್ನು ಉಪಯೋಗಿಸಿ ಮಾತನಾಡಿದರೆ ಅದು ಎಷ್ಟು ಉಚಿತವಾಗುತ್ತದೆ? ಎಂಬಿತ್ಯಾದಿ ವಿಷಯವನ್ನು ಅರಿಯುವುದೇ ಮಾತಿನ ಬಗೆಗೆ ಇರುವ ಜಯ ಎಂಬುದಾಗಿ ಭಾವಿಸಬೇಕು. ಹಾಗೆ ಮಾತನಾಡುವವನಿಗೆ ಜಗಳ ಅಸಾಧ್ಯ. ಹಾಗಾಗಿ ಇಲ್ಲಿ ಒಂದು ಕರ್ಮೇಂದ್ರಿಯದ, ಇನ್ನೊಂದು ಜ್ಞಾನೇಂದ್ರಿಯದ ಪರಿಮಿತಿಯನ್ನು ಮತ್ತು ಅದರ ಸಾಧಕತೆಯನ್ನು ವಿವರಿಸಲಾಗಿದೆ. ಹೀಗಿದ್ದಾಗ ಅವನಿಗೆ ರೋಗ ಬರುವುದೆಂತು? ಹೀಗಿದ್ದಾಗ ಅವನಿಗೆ ಜಗಳವಾಗುವುದೆಂತು? ಜಗಳಕ್ಕೂ ರೋಗಕ್ಕೂ ಅವಕಾಶವೇ ಇಲ್ಲವಾದಂತಾಗುತ್ತದೆ. ಇದು ಆಪತ್ತಿನ ನಿವಾರಣೆ ಅಲ್ಲವೇ?

ಇನ್ನೊಂದು ಅತಿ ಮುಖ್ಯವಾದ ವಿಷಯ – ಜ್ಞಾನವೃದ್ಧರಿಗೂ ಮತ್ತು ವಯೋವೃದ್ಧರಿಗೂ ಕೊಡುವಂತಹ ಗೌರವ ಮತ್ತು ಅವರು ಹೇಳುವುದನ್ನು ಕೇಳುವಂಥದ್ದು. ಇದೂ ಕೂಡ ನಮ್ಮ ಆರೋಗ್ಯಕ್ಕೆ ಅನುಕೂಲಕರ ಎಂಬುದಾಗಿ ತಿಳಿಯಬೇಕು. ಎಲ್ಲವನ್ನೂ ನಾವೇ ಮಾಡಿ ತಿಳಿಯಲು ಅಸಾಧ್ಯ. ಹಾಗಾಗಿ ಮಾಡಿ ತಿಳಿದವರಿಂದ ಒಂದಷ್ಟನ್ನು ತಿಳಿಯಬಹುದು. ಅಥವಾ ಓದಿ ಕಲಿತವರಿಂದ ನಾವು ತಿಳಿದರೆ ಅಷ್ಟು ಸಾಧನದ ಸಮಯ ನಮಗೆ ಉಳಿದಂತಾಗುತ್ತದೆ. ಮತ್ತು ಅವರಿಗೆ ಗೌರವವನ್ನು ಸಲ್ಲಿಸಿದಂತಾಗುತ್ತದೆ. ಅಷ್ಟೇ ಅಲ್ಲ ಅದರಿಂದ ನಮಗೆ ಅತ್ಯುಪಯೋಗವೂ ಆದಂತಾಗುತ್ತದೆ. ಹಾಗಾಗಿ ಹಿರಿಯರ ಮಾತನ್ನು ಕೇಳುವುದು ಅತ್ಯಂತ ಸೌಜನ್ಯದ ಸಂಕೇತ ಎಂಬುದಾಗಿ ಎಲ್ಲ ಕಡೆ ಸಾರಲಾಗಿದೆ. ಆಯುಷ್ಯ, ವಿದ್ಯೆ, ಯಶಸ್ಸು ಮತ್ತು ಬಲ ಈ ನಾಲ್ಕೂ ಕೂಡ ವೃದ್ಧರನ್ನು ಗೌರವಿಸುವುದರಿಂದ ಬರುತ್ತದೆ ಎಂಬುದಾಗಿ ಒಂದು ಸುಭಾಷಿತವೂ ಕೂಡ ಸಾರುತ್ತದೆ. ಈ ಬಗೆಯ ವ್ಯಕ್ತಿಗೆ ಯಾವ ಬಗೆಯ ತೊಂದರೆ, ತಾಪತ್ರಯ, ವಿಘ್ನಗಳೂ ಇರುವುದಿಲ್ಲ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಅಪ್ಪನಿಗೆ ಉತ್ತರಕ್ರಿಯೆ-ಮಗನಿಗೆ ಪಟ್ಟಾಭಿಷೇಕ

ಕೃಷ್ಣನ ಕೃಪೆಯಿಂದಾಗಿ ಸೆರೆಯಿಂದ ಬಿಡುಗಡೆಹೊಂದಿದ ಅರಸರು ತಮ್ಮ ಕೃತಜ್ಞತೆಯ ನುಡಿಯನ್ನು ಹೀಗೆ ಮುಗಿಸಿದರು:

"ನಮ್ಮಿಷ್ಟು ಮಂದಿಗೆ ನೀ ದಯಪಾಲಿಸಿದ ಈ ಸ್ವಾತಂತ್ರ್ಯದಿಂದಾಗಿ, ದೀಪ್ತವಾದ ಯಶಸ್ಸು – ಎಂದರೆ ಬೆಳಗುವ ಕೀರ್ತಿಯು – ನಿನಗೆ ಲಬ್ಧವಾಯಿತು, ಓ ಯದುನಂದನನೇ! ಕೃತಜ್ಞರಾದ ನಮಗೆ ನಿನ್ನ ಅಪ್ಪಣೆಯಾಗಬಹುದು: ಅದೆಂತಹ ಕಷ್ಟವಾದ ಕಾರ್ಯವೇ ಆದರೂ ರಾಜರುಗಳಾದ ನಾವು ನೆರವೇರಿಸಿಕೊಡುವೆವು.

ಅವರು ಹೀಗೆ ಹೇಳಲಾಗಿ, ಮಹಾಮನಸ್ಕನಾದ ಕೃಷ್ಣನು, ಅವರಿಗೆ ಆಶ್ವಾಸನೆ ಕೊಡುತ್ತಾ ಹೀಗೆ ಹೇಳಿದನು: ರಾಜರೇ, ಯುಧಿಷ್ಠಿರನು ರಾಜಸೂಯ–ಯಜ್ಞವನ್ನು ಮಾಡಲು ಇಷ್ಟಪಟ್ಟಿದ್ದಾನೆ. ಆತನ ಪ್ರವೃತ್ತಿಯು ಧರ್ಮಮಯವಾದುದು. ಆತನು ಸಮ್ರಾಟ್ – ಎಂಬ ಪದವಿಯನ್ನು ಸಂಪಾದಿಸಿಕೊಳ್ಳಲು ಬಯಸಿದ್ದಾನೆ. ಇದನ್ನರಿತು ನೀವೆಲ್ಲರೂ ಆತನಿಗೆ ಸಾಹಾಯ್ಯವನ್ನು ಮಾಡಿರಿ. ಆಗ ಆ ರಾಜರೆಲ್ಲರೂ ತುಂಬ ಸಂತೋಷಗೊಂಡರು. ಆತನ ಮಾತನ್ನೊಪ್ಪಿ, ಹಾಗೆಯೇ ಆಗಲಿ ಎಂದು ಒಪ್ಪಿಗೆ ಸೂಚಿಸಿದರು. ಅನೇಕ ರತ್ನಗಳನ್ನು ಕೃಷ್ಣನಿಗೆ ಸಲ್ಲಿಸಿದರು. ಅವರ ಮೇಲಿನ ಕರುಣೆಯಿಂದ, ಮತ್ತು ಅವರ ಒತ್ತಾಯಕ್ಕೆ ಮಣಿದು, ಕೃಷ್ಣನು ಅವನ್ನು ಸ್ವೀಕರಿಸಿದನು. ಆ ಬಳಿಕ ಜರಾಸಂಧ–ಪುತ್ರನಾದ ಸಹದೇವನು, ತನ್ನ ಪುರೋಹಿತನನ್ನು ಮುಂದಿಟ್ಟುಕೊಂಡು, ಮಂತ್ರಿಗಳೊಂದಿಗೆ ನಗರದಾಚೆಗೆ ಹೊರಟನು. ವಾಸುದೇವನಲ್ಲಿಗೆ ಬಂದು ಅತ್ಯಂತ–ನಮ್ರತೆಯಿಂದ ನಮಸ್ಕರಿಸಿದನು. ಮತ್ತು ಹೇಳಿದನು: ನರಶ್ರೇಷ್ಠನೇ, ನನ್ನ ತಂದೆ ಮಾಡಿದುದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಳ್ಳಬೇಡ. ನಾನು ನಿನಗೆ ಶರಣನಾಗಿದ್ದೇನೆ. ನನ್ನ ವಿಷಯದಲ್ಲಿ ಪ್ರಸನ್ನನಾಗು. ನನ್ನ ತಂದೆಯ ಸಂಸ್ಕಾರವನ್ನು ನಾನು ಮಾಡಲಿಚ್ಛಿಸುತ್ತೇನೆ. ಅದಕ್ಕಾಗಿ ನಿನ್ನಿಂದಲೂ ಭೀಮಾರ್ಜುನರಿಂದಲೂ ಅನುಮತಿಯನ್ನು ಯಾಚಿಸುತ್ತೇನೆ. ಮುಂದೆ ನಾನು ಯಥೇಚ್ಛವಾಗಿ ಹಾಗೂ ಸುಖವಾಗಿ ಓಡಾಡಿಕೊಂಡಿರಲು ನಿಮ್ಮಿಂದ ಅಭಯವನ್ನು ಯಾಚಿಸುತ್ತಿದ್ದೇನೆ. ಸಹದೇವನ ಈ ಮಾತುಗಳಿಂದ ಕೃಷ್ಣನೂ ಭೀಮಾರ್ಜುನರೂ ಸಂತೋಷಗೊಂಡರು. ನಿನ್ನ ತಂದೆಗೆ ಸಂಸ್ಕಾರವನ್ನು ನೀ ಮಾಡಪ್ಪಾ – ಎಂದರು. ಆತನೂ ಅಂತೆಯೇ ಒಡನೆಯೇ ನಗರವನ್ನು ಪ್ರವೇಶಿಸಿದನು. ಮಂತ್ರಿಗಳೊಂದಿಗೆ ಸೇರಿ ಚಿತೆಯನ್ನೇರ್ಪಡಿಸಿದನು.

ಚಿತೆಗಾಗಿ ಚಂದನದ ಕಟ್ಟಿಗೆಗಳು, ದೇವದಾರು, ಕಾಲಾಗರು(ಎಂದರೆ ಕಪ್ಪುಬಣ್ಣದ ಅಗರು)ವೆಂಬ ಸುಗಂಧ, ಬಗೆಬಗೆಯ ತೈಲಗಳು, ತುಪ್ಪದ ಧಾರೆ, ಇವುಗಳನ್ನು ಬಳಸಲಾಯಿತು. ಆಮೇಲೆ ಉರಿಯುತ್ತಿದ್ದ ಆ ಜರಾಸಂಧನ ಕಾಯದ ಸುತ್ತಲೂ ಅಕ್ಷತೆಯ ಕಾಳುಗಳು ಹಾಗೂ ಹೂಗಳ ಮಳೆಯನ್ನೇ ಕರೆಯಲಾಯಿತು.

ಬಳಿಕ, ಸಹದೇವನು ತನ್ನ ತಮ್ಮಂದಿರೊಂದಿಗೆ ಜಲಾಂಜಲಿಯನ್ನಿತ್ತನು. ಹೀಗೆ ತಂದೆಗೆ ಸ್ವರ್ಗ–ಗತಿಗಾಗಿ ಮಾಡಬೇಕಾದುದನ್ನು ಮಾಡಿ, ಮತ್ತೆ ಶ್ರೀಕೃಷ್ಣನೂ ಭೀಮಾರ್ಜುನರೂ ಇರುವೆಡೆಗೆ ಬಂದನು. ಹಾಗೂ ಕೈಜೋಡಿಸಿ ನಮ್ರತೆಯಿಂದ ಕೃಷ್ಣನಲ್ಲಿ ಹೀಗೆ ವಿಜ್ಞಾಪನೆ ಮಾಡಿಕೊಂಡನು: ಇದೋ ಭೂರಿಯಾದ ರತ್ನಗಳು ಇವು. ಇದೋ ಗೋವುಗಳು, ಆಡು–ಮೇಕೆಗಳು, ಮಹಿಷಗಳು, ಆನೆಗಳು ಹಾಗೂ ಕುದುರೆಗಳು, ಹಾಗೂ ಬಗೆಬಗೆಯ ವಸ್ತ್ರಗಳು. ಇವೆಲ್ಲವನ್ನೂ ಧರ್ಮರಾಜನಿಗೆ ಕೊಡೋಣವಾಗಲಿ. ಅಥವಾ ನಿನಗೆ ಬೇರೆ ಬಗೆಯು ತೋರಿದರೆ ಹಾಗೂ ಮಾಡಬಹುದು ಎಂದನು. ಹೆದರಿಕೆಯಿಂದ ತತ್ತರಿಸಿದ್ದ ಆತನಿಗೆ ಕೃಷ್ಣನು ಅಭಯವನ್ನಿತ್ತನು. ಆ ಮಹಾರ್ಹವಾದ, ಎಂದರೆ ಬಹುಬೆಲೆಬಾಳುವ, ರತ್ನಗಳನ್ನು ಸ್ವೀಕರಿಸಿದನು. ಹಾಗೂ ಅಲ್ಲಿಯೇ ಸಹದೇವನ ಪಟ್ಟಾಭಿಷೇಕವನ್ನೂ ನೆರವೇರಿಸಿದನು. ಭೀಮಾರ್ಜುನರು ಆತನನ್ನು ಸತ್ಕರಿಸಿದರು. ಸಂತೃಪ್ತನಾದ ಜಾರಾಸಂಧಿಯು, ಎಂದರೆ ಜರಾಸಂಧ–ಪುತ್ರನು, ತನ್ನ ತಂದೆಯ ನಗರವನ್ನು ಮಹಾತ್ಮರೊಂದಿಗೆ ಪ್ರವೇಶಿಸಿದನು.

ಅಂತ್ಯೇಷ್ಟಿಯ ಅವಾಂತರಗಳು



ವಕ್ರದೃಷ್ಟಿ

• ಎನ್. ರಾಮನಾಥ್
anakuramanath@gmail.com

ಆಪ್ತೀಯರೊಬ್ಬರು ನಿಧನರಾದ ಸುದ್ದಿ ಕೇಳಿದ ವೆಂಕಟ್ರಾಮ ಭಟ್ಟರು ಅಂತಿಮ ದರ್ಶನ ಪಡೆಯಲೆಂದು ಮೃತರ ಮನೆಯನ್ನು ತಲುಪಿದಾಗ ರಾತ್ರಿಯಾಗಿತ್ತು. ಮರುದಿನದ ಅಂತ್ಯಸಂಸ್ಕಾರದ ವರೆಗೆ ಮೃತರ ಮನೆಯಲ್ಲಿಯೇ ಉಳಿಯುವುದೆಂದು ತೀರ್ಮಾನಿಸಿದ ಭಟ್ಟರು ವೆರಾಂಡದಲ್ಲಿಯೇ ಚಾಪೆಯೊಂದನ್ನು ಹಾಸಿಕೊಂಡು, ಪಂಚೆಯೊಂದನ್ನು ಹೊದ್ದು ಮಲಗಿದರು. ಸರಿರಾತ್ರಿಯಲ್ಲಿ ಸೊಳ್ಳೆಕಾಟ ಹೆಚ್ಚಾದ್ದರಿಂದ ತಲೆ ಮುಚ್ಚುವವರೆಗೆ ಹೊದ್ದು ಮಲಗಿದರು.

ಬೆಳಗಿನ ಜಾವದಲ್ಲಿ ಮೃತರನ್ನು ಕಾಣಲು ಬಂದವರು ವೆರಾಂಡದಲ್ಲಿ ಅಲುಗದೆ ಮಲಗಿದ್ದ ಭಟ್ಟರಿಗೆ ಮಾಲಾರ್ಪಣೆ ಮಾಡಿ, ಊದಿನ ಕಡ್ಡಿಯನ್ನು ಹಚ್ಚಿ ಪಕ್ಕದಲ್ಲಿರಿಸುತ್ತಿದ್ದಾಗ ಭಟ್ಟರು ಕೊಂಚ ಅಲುಗಾಡಿದರು. ಭೀತಿಗೊಂಡ ಮೃತರ ಆಪ್ತರು ಕಿರುಚಿದ ಸದ್ದಿಗೆ ಮನೆಯವರು ಹೊರಗಿಣುಕಿ, "ಓಹ್! ಸತ್ತಿರುವವರು ಅವರಲ್ಲ, ಒಳಗಿದ್ದಾರೆ ಬನ್ನಿ" ಎಂದು ಕರೆದರು.

ವೆಂಕಟ್ರಾಮ ಭಟ್ಟರಿಗೆ ಇದ್ದಾಗಲೇ ಹೊಗೆ ಹಾಕಿಸಿಕೊಳ್ಳುವ ಯೋಗ!

ಸಾವಿನ ಮನೆಯಲ್ಲಿ ಹೀಗೆ ನಡೆದಿದ್ದರೆ ಮಸಣದಲ್ಲಿ ಕಾರ್ಯ ನಡೆಸುತ್ತಿದ್ದ ಸಮಯದಲ್ಲಿ ನಡೆದ ಪ್ರಸಂಗವೊಂದನ್ನು ಪರಾಂಬರಿಸಿ :

"ಗೋತ್ರ ಯಾವುದು?"

"ಕಾಶ್ಯಪ"

"ಪ್ರವರ?"

ನನ್ನ ಸೋದರಮಾವನು ತನ್ನ ಅಕ್ಕನ ಅಂತ್ಯಸಂಸ್ಕಾರಕ್ಕೆಂದು ಶಾಸ್ತ್ರಿಗಳ ಮುಂದೆ ಕುಳಿತಿದ್ದ. ಶಾಸ್ತ್ರಿಗಳು ಮೇಲ್ಕಂಡ ಪ್ರಶ್ನೆಗಳನ್ನು ಅವನತ್ತ ಒಗೆಯುತ್ತಿದ್ದರು. ಎಲ್ಲಕ್ಕೂ ಉತ್ತರಿಸುತ್ತಿದ್ದ ಮಾವನು ಪ್ರವರವನ್ನೂ ಒಪ್ಪಿಸಿದ.

"ಹೆಸರು?"

ಹೇಳಿದ. ಬುಲೆಟ್ ಟ್ರೈನ್ ವೇಗದಲ್ಲಿ ಮಂತ್ರಗಳನ್ನು ಮಣಮಣಿಸುತ್ತಾ ಶಾಸ್ತ್ರಿಗಳು ಅಂತ್ಯಕರ್ಮಗಳನ್ನು ಮುಗಿಸಿದರು. ಮಸಣದಿಂದ ಹೊರಡುವಾಗ "ಏಳನೆಯ ದಿನದಿಂದ ಕಾರ್ಯಗಳನ್ನು ಆರಂಭಿಸೋಣ. ನಿಮ್ಮ ಫೋನ್ ನಂಬರ್ ಕೊಡಿ" ಎಂದ ಶಾಸ್ತ್ರಿಗಳು ಇವನು ಹೇಳಿದ ಸಂಖ್ಯೆಗಳನ್ನು ತಮ್ಮ ಮೊಬೈಲಲ್ಲಿ ಫೀಡ್ ಮಾಡಿಕೊಂಡು, ಮತ್ತೆ "ಹೆಸರು?" ಎಂದರು.

"ಕಿರಣ್."

"ತೀರಿಕೊಂಡವರ ಹೆಸರನ್ನೂ ಕಿರಣ್ ಅಂತ ಹೇಳಿದಿರಲ್ಲ!" ಶಾಸ್ತ್ರಿಗಳಿಗೆ ಏನೋ ಅನುಮಾನ. "ನೀವೆಲ್ಲಿ ಕೇಳಿದಿರಿ ಅವಳ ಹೆಸರನ್ನು?" ಮಾವ ಗೊಂದಲಕ್ಕೆ ಬಿದ್ದ. "ಅಷ್ಟು ಚೆನ್ನಾಗಿ ಹೆಸರು, ಗೋತ್ರ, ಪ್ರವರ ಎಲ್ಲಾ ಕೇಳಿದೆನಲ್ಲ ಸ್ವಾಮಿ!"

"ಅವೆಲ್ಲ ನನ್ನವೇ. ನನ್ನಕ್ಕನ ಹೆಸರು ನಾಗವೇಣಿ."

ಶಾಸ್ತ್ರಿಗಳು ತಲೆಯ ಮೇಲೆ ಕೈಹೊತ್ತರು. "ದೈವೇಚ್ಛೆ" ಎನ್ನುತ್ತಾ ಮುಂದೆ ಸಾಗಿದರು. ಅವಸರದ ಶಾಸ್ತ್ರಿಗಳು ನನ್ನ ದೊಡ್ಡಮ್ಮನ ಅಂತ್ಯಸಂಸ್ಕಾರದ ಬದಲು ಕಲ್ಲುಗುಂಡಿನಂತೆ ಕುಳಿತಿದ್ದ ನನ್ನ ಮಾವನ ಅಂತ್ಯಸಂಸ್ಕಾರವನ್ನು ಮುಗಿಸಿದ್ದರು!

"ಹೀಗಾಗ್ಹೋಯ್ತಲ್ಲ ಶಾಸ್ತ್ರಿಗಳೆ! ಮಾವನಿಗೇನೂ ತೊಂದರೆ ಆಗುವುದಿಲ್ಲವೆ?" ಎಂದು ಕೇಳಿದೆ.

"ಮಾವನ ವಿಷಯ ಮುಂಡಾಮೋಚ್ತು! ನನ್ನ ವಿಷಯ ಹೇಳಯ್ಯಾ! 'ನನ್ನ ಗತಿ ಏನು ಶಾಸ್ತ್ರಿಗಳೇ?' ಅಂತ ನಿನ್ನ ದೊಡ್ಡಮ್ಮನ ಆತ್ಮ ಈವತ್ತು ರಾತ್ರಿ ನನ್ನ ಕನಸಲ್ಲಿ ಬಂದು ಕಾಡಿದರೆ ಏನು ಉತ್ತರ ಹೇಳೋದಯ್ಯ!"

ಶಾಸ್ತ್ರಿಗಳದು ನಿಜಕ್ಕೂ ಒರಿಜಿನಲ್ ಟ್ರಬಲ್!

ಕಿರಣನ ಕಥೆ ಇಂತಾದರೆ ಕಿರಣನ ಸ್ನೇಹಿತ ಪರೋಪಕಾರಿ ಪಾಪಣ್ಣನದು ಮತ್ತೊಂದು ವಿಧದ ಕಥೆ. ಯಾರೇ ಸತ್ತರೂ ಹೆಗಲು ಕೊಡಲು ಮುಂದಾಗುತ್ತಿದ್ದ ಅವನು ಅಂದು ತನ್ನ ನೆರೆಮನೆಗೆ ಹೊಸದಾಗಿ ಬಂದಿದ್ದ ಹಿರಿಯರು ಕಂತೆ ಒಗೆದಾಗ ತಾನೇ ಮಸಣಕ್ಕೆ ಮುಂದಾಗಿ ಹೋಗಿ, ಹಣ ಕಟ್ಟಿ, ರಸೀದಿ ಪಡೆದುದಲ್ಲದೆ, ಕಾರ್ಪೊರೇಷನ್ನಿಗೆ ಓಡಾಡಿ ಡೆತ್ ಸರ್ಟಿಫಿಕೇಟನ್ನೂ ಪಡೆದೊಯ್ದು ನೆರೆಮನೆಯವರ ಕೈಗಿತ್ತ.

"ಏನಿದು?"

"ಡೆತ್ ಸರ್ಟಿಫಿಕೇಟು."

"ಯಾರದು?"

"ನಿಮ್ಮ ತಂದೆಯವರದು."

"ಯಾವಾನ್ಹೇಳಿದ್ದು?"

"ಅಂದರೆ...?"

"ನನ್ನ ತಂದೆಯವರ ಹೆಸರು ಕೃಷ್ಣಾಚಾರ್. ಅವರ ತಂದೆಯ ಹೆಸರು ಭೀಮಾಚಾರ್."

"ಈಗ ಏನಾಗಿದೆ ಸಾರ್?" ಪಾಪಣ್ಣನಿಗೆ ಏನೋ ವ್ಯತ್ಯಾಸವಾಗಿರುವುದರ ವಾಸನೆ ಬಡಿಯಿತು. "ರಾಮಾಚಾರ್ ಸನ್ ಆಫ್ ಕೃಷ್ಣಾಚಾರ್ ಅಂತ ಸರ್ಟಿಫಿಕೇಟ್ ಮಾಡಿಸಿದ್ದೀರಿ."

"ತಪ್ಪಾ ಸಾರ್?"

"ಮತ್ತೇನ್ರೀ! ರಾಮಾಚಾರ್ ನಾನೇ!"

ಮುಂದೆ ರಾಮಾಚಾರ್ ಆಡಿದ ಮಾತುಗಳು ಯಾವುದೇ ಪೀತಪತ್ರಿಕೆಯೂ ಪ್ರಿಂಟ್ ಮಾಡಲು ಆಗದಷ್ಟು ಹೊಲಸಾಗಿದ್ದವು.

ಕರ್ಮ ಮಾಡುವ ಸ್ಥಳಗಳಲ್ಲಿಯೂ ವಿಚಿತ್ರ ಸನ್ನಿವೇಶಗಳನ್ನು ಕಾಣಬಹುದು. ಚಾರ್ ಧಾಮ್ ಯಾತ್ರೆಯ ಅಂಗವಾಗಿ ಅಂದು ನಾವುಗಳು ಬದರಿನಾಥವನ್ನು ತಲುಪಿದ್ದೆವು. ನನ್ನೊಡನೆ ಬಂದಿದ್ದ ಹಿರಿಯರೊಬ್ಬರು ತಮ್ಮ ಪಿತೃಗಳಿಗಾಗಿ ಪಿಂಡಪ್ರದಾನ ಮಾಡಿಸಲೆಂದು ಅಲ್ಲಿನ ಪುರೋಹಿತರನ್ನು ನೇಮಿಸಿಕೊಂಡರು. ನದಿಯ ಬದಿಯ ಪಾವಟಿಗೆಗಳ ಮೇಲೆ ಕುಳಿತ ಹಿರಿಯರು ತಾವು ಕಟ್ಟಿದ್ದ ಪಿಂಡದುಂಡೆಗಳನ್ನು ಸಾಲಾಗಿ ಇರಿಸಿದ್ದರು. ಪುರೋಹಿತರಿಗೆ ಕೊಡಬೇಕಾದ ದಕ್ಷಿಣೆಯನ್ನು ಮರೆತಿದ್ದರಿಂದ, ಅದನ್ನು ತರಲೆಂದು ತಮ್ಮ ಬಟ್ಟೆಗಳಿದ್ದ ಸ್ಥಳಕ್ಕೆ ಹೋಗಿ ಬರುವಷ್ಟರಲ್ಲಿ ಪಕ್ಕದವನು ಇವರು ಕಟ್ಟಿದ್ದ ಪಿಂಡಗಳಲ್ಲಿ ಒಂದೆರಡನ್ನು ಹಾರಿಸಿಕೊಂಡಿದ್ದ.

"ಎಲ್ಲಿ ನನ್ನ ಪಿಂಡ?" ಎಂದರು ಹಿರಿಯರು.

"ಅದನ್ನು ನಿಮ್ಮ ಮಕ್ಕಳು ಆಮೇಲೆ ಇಡುತ್ತಾರೆ" ಎಂದ ಪಿಂಡಾಪಹಾರಿ.

"ಅವರ ಕೈಯಲ್ಲೇ ನಿನ್ನದನ್ನೂ ಇಡಿಸುತ್ತೀನಿ. ಈಗ ನನ್ನ ಪಿಂಡವನ್ನು ವಾಪಸ್ ಕೊಡು" ಹಾರಿದರು ಹಿರಿಯರು.

"ಇರೋ ಪಿಂಡಗಳದೇ ಸೈಜ್ ಕಡಿಮೆ ಮಾಡಿಕೊಂಡು ನಂಬರ್ ಜಾಸ್ತಿ ಮಾಡ್ಕೊಳಿ" ಎಂದು ಸಲಹೆ ನೀಡಿದ ಪಿಂಡಲೂಟಿಗ.

"ಅವೆಲ್ಲ ಆಗಲ್ಲಯ್ಯ! ನನ್ನ ಪಿಂಡ ನನಗೆ ಕೊಡು ಅಷ್ಟೆ!"

ಹಾರಿಹೋಗುತ್ತಿದ್ದ ಕಾಗೆಯತ್ತ ಕೈತೋರುತ್ತಾ "ಬೇಕಾದ್ರೆ ಅವುಗಳಿಂದ ವಾಪಸ್ ಇಸ್ಕೊಳಿ" ಎನ್ನುತ್ತಾ ದೂರ ಸರಿದನವ. ಹಿರಿಯರು "ಅಯ್ಯೋ ನನ್ನ ಪಿಂಡ! ಅಯ್ಯೋ ನನ್ನ ಪಿಂಡ!" ಎಂದು ಹಲುಬುತ್ತಾ, ಅತ್ತಿತ್ತ ನೋಡಿ, ಎತ್ತಲೋ ನೋಡುತ್ತಿದ್ದ ಮತ್ತೊಬ್ಬ ಪಿಂಡಪ್ರದಾನಿಯ ಎರಡು ಉಂಡೆಗಳನ್ನು ಕಸಿದು ತಮ್ಮ ಕಾರ್ಯ ಮುಗಿಸಿಕೊಂಡರು.

ಹೋದ ತಿಂಗಳು. ಕೆಂಗೇರಿಯ ರುದ್ರಭೂಮಿ; ಗತಿಸಿದ ಗರತಿಯೊಬ್ಬರ ಅಂತ್ಯಸಂಸ್ಕಾರ ಜರುಗುತ್ತಿತ್ತು. ಕಾರ್ಯಗಳನ್ನು ಮಾಡಿಸುತ್ತಿದ್ದ ಭಟ್ಟರು ಪದೇ ಪದೇ 'ಲಲಿತಾ ಎಂಬ ಹೆಸರಿನ ಪತ್ನಿಯ...' ಎನ್ನುತ್ತಿದ್ದರು. ಸಂದೇಹಿತರಾದ ಹೆಣ್ಣಿನ ಪತಿಯು 'ಲಲಿತಾ ಯಾರು?' ಎಂದರು.

"ಈಕೆಯೇ. ನಿಮ್ಮ ಪತ್ನಿ" ಎಂದು ಕಳೇಬರದತ್ತ ಕೈ ತೋರಿದರು.

"ಅವಳ ಹೆಸರು ಲಲಿತಾ ಅಲ್ಲ, ವಿಮಲ!" ಕ್ರುದ್ಧರಾದರು ವೃದ್ಧರು.

"ಪ್ರತಿ ದಿನ ಮಾಡ್ಸೀ ಮಾಡ್ಸೀ ಹೆಸರಿನ ಗೊಂದಲ ಆಗ್ಬಿಡತ್ತೆ ಸ್ವಾಮೀ. ಕ್ಷಮಿಸಿ. ನಿಮ್ಮಾಕೆಯ ಹೆಸರನ್ನೇ ಹೇಳ್ತೀನಿ. ಕಮಲಾ ಎಂಬ ಹೆಸರಿನ ಪತ್ನಿಯ...' ಎಂದು ಮುಂದುವರಿಸಿದರು. ವೃದ್ಧರು "ಭಟ್ಟರೇ, ನೀವು ನಿಮ್ಮ ಎಷ್ಟು ಜನ ಹೆಂಡತಿಯರ ತಿಥಿ ಮುಗಿಸಬೇಕೋ ಮೊದಲು ಮುಗಿಸಿ. ಆಮೇಲೆ ನನ್ನ ಹೆಂಡತಿಯಾದ ವಿಮಲಳ ತಿಥಿ ಮಾಡಿ. ಲಲಿತಾ, ಕಮಲ ಅಲ್ಲದೆ ಇನ್ನೂ ಹೆಂಡತಿಯರು ಇದ್ದರೇನು ನಿಮಗೆ?" ಎಂದು ಸಿಡುಕಿದ ನಂತರವೇ ಭಟ್ಟರ ಬಾಯಲ್ಲಿ ವಿಮಲೆ ಸರಿಯಾಗಿ ಮೂಡಿದ್ದು.

ಸಾವಿನ ಸಂದರ್ಭದಲ್ಲಿ ಇಂತಹ ಪ್ರಸಂಗಗಳು ಮೂಡಿದರೆ ಅನಂತರದ ದಿನಗಳಲ್ಲಿನ ಪಾಡೇ ಬೇರೆಯ ವಿಧದ್ದು. ನನ್ನ ತಾತನವರು ಅವರ ತಂದೆಯ ವಾರ್ಷಿಕ ಶ್ರಾದ್ಧವನ್ನು ಮಾಡಿಸಲೆಂದು ಪ್ರತಿವರ್ಷದಂತೆ ಆ ವರ್ಷವೂ ಸೋಮನಹಳ್ಳಿಯ ಸುಬ್ರಹ್ಮಣ್ಯಶಾಸ್ತ್ರಿಗಳಿಗೇ ಹೇಳಿದ್ದರು. ಅಪರಕರ್ಮವಾದ್ದರಿಂದ ಮಧ್ಯಾಹ್ನದ ಮೇಲೆಯೇ ಮಾಡುವುದು ಅವರ ಪದ್ಧತಿಯಾಗಿತ್ತು.

ತಾತನವರು ತಿಥಿಗೆ ಬೇಕಾದ ಎಲ್ಲವನ್ನೂ ಅಣಿಗೊಳಿಸಿ ಶಾಸ್ತ್ರಿಗಳಿಗಾಗಿ ಹೊರಬಾಗಿಲಲ್ಲಿ ಕಾಯುತ್ತಾ ನಿಂತರು. ಅಂದು ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಬೆಳ್ಳಂಬೆಳಗ್ಗೇ ಒಂದು ಚೌಲಕರ್ಮದ ಕೆಲಸವೂ ಸಿಕ್ಕಿದ್ದರಿಂದ 'ಹೇಗೂ ತಿಥಿ ಮಧ್ಯಾಹ್ನಕ್ಕೆ. ಚೌಲ ಮುಗಿಸಿ ತುತ್ತಿನ ಚೀಲ ತುಂಬಿಸಿಕೊಳ್ಳಕ್ಕೆ ಹೋದರಾಯ್ತು' ಎಂದೆಣಿಸಿ ಆ ಕಾರ್ಯಕ್ರಮದಲ್ಲಿ ತೊಡಗಿಕೊಂಡರು. ಆದರೆ ಚೌಲ ಮಾಡಿಸಿಕೊಳ್ಳಬೇಕಾದ ಮಗು ವಿಪರೀತ ಹಠ ಮಾಡಿದುದರ ಪರಿಣಾಮ ಬಹಳ ವಿಳಂಬವಾಯಿತು.

ತಾತನವರು ಹನ್ನೆರಡು ಒಂದಾಗಿ, ಒಂದು ಒಂದೂವರೆ ಆಗುವವರೆಗೆ ಕಾದರು. 'ಏಮಾಯ ಈ ಶಾಸ್ತ್ರಿಕು?' ಎಂದು ಚಡಪಡಿಸಿದರು. ಒಂದೂಮುಕ್ಕಾಲರ ಹೊತ್ತಿಗೆ ಪಕ್ಕದ ಬೀದಿಗೆ ಹೋಗಿ ಇಬ್ಬರು ಬ್ರಾಹ್ಮಣರನ್ನು ಬ್ರಾಹ್ಮಣಾರ್ಥಕ್ಕೆಂದು ಕರೆದು, ಮಂತ್ರಾರ್ಥಗಳನ್ನು ತಿಳಿದಿದ್ದ ತಾತನೇ ತಿಥಿಯ ಸಕಲ ವಿಧಿಗಳನ್ನು ಮುಗಿಸಿ, ಊಟವನ್ನೂ ಮಾಡಿಬಿಟ್ಟರು.

ಸುಬ್ರಹ್ಮಣ್ಯಶಾಸ್ತ್ರಿಗಳು ಮಧ್ಯಾಹ್ನ ಒಂದು ಗಂಟೆಗೆ ಸೋಮನಹಳ್ಳಿಯ ಬಸ್ ಸ್ಟ್ಯಾಂಡಿಗೆ ಬಂದು, ಎರಡು ಗಂಟೆಯ ಬಸ್ ಹಿಡಿದು, ಎರಡೂ ಮುಕ್ಕಾಲಿಗೆ ಜಯನಗರದಲ್ಲಿ ಬಸ್ ಇಳಿದು, ತಾತನವರ ಮನೆಯನ್ನು ತಲುಪಿದಾಗ ಗಂಟೆ ಮೂರೂಕಾಲು. "ಶಾಸ್ತ್ರಿಲು ಒಚ್ಚಿನ್ನಾರು(ಶಾಸ್ತ್ರಿಗಳು ಬಂದಿದ್ದಾರೆ)" ಎಂದು ಅಜ್ಜಿ ಘೋಷಿಸಿದರು.

ತಾತನವರು ತಮ್ಮ ಬೆಳ್ಳಿಯ ಕೋಲನ್ನು ಝಳಪಿಸುತ್ತಾ "ವಸ್ತ್ವೇಮ್ರಾ! ರಾ! ಇಪ್ಪುಡು ತಾ ನಾ ತಂಡ್ರಿ ಪಿಂಡಮು ಪೆಟ್ಟಿನ್ನಾನು. ಇಪ್ಪುಡು ನೀ ಪಿಂಡಮು ಪೆಟ್ತಾನು. (ಬಂದೆಯಾ, ಬಾ! ಈಗಷ್ಟೇ ನನ್ನಪ್ಪನಿಗೆ ಪಿಂಡ ಇಟ್ಟೆ. ಈಗ ನಿನ್ನ ಪಿಂಡ ಇಡ್ತೀನಿ)' ಎನ್ನುತ್ತಾ ಶಾಸ್ತ್ರಿಗಳನ್ನು ಅಟ್ಟಿಸಿಕೊಂಡು ಹೋದರು. ಪಂಚೆಯ ಚುಂಗನ್ನು ಎತ್ತಿ ಹಿಡಿದು ಓಡುತ್ತಿದ್ದ ಶಾಸ್ತ್ರಿಗಳು, ಎತ್ತಿದ ಕೋಲಿನೊಡನೆ ಅವರ ಬೆನ್ನು ಹತ್ತಿದ ಎಪ್ಪತ್ತರ ಹರೆಯದ ಕಟ್ಟುಮಸ್ತಾದ ತಾತನವರ ದೃಶ್ಯವು ನನ್ನ ಸ್ಮೃತಿಪಟಲದಿಂದ ಎಂದಿಗೂ ಮರೆಯಾಗದು.

ಈಶಾನ್ಯ ಭಾರತದ ಪಾಲಿನ ಹನುಮಂತ ಈ ಹಿಮಂತ!

▸ ಅರ್ಜುನ್ ಶೆಣೈ

ಸ್ವಾತಂತ್ರ್ಯಾನಂತರ ಭಾರತದ ಭೌಗೋಳಿಕ ಪ್ರಾಂತ್ಯಗಳಲ್ಲಿ ಅಭಿವೃದ್ಧಿಯ ವಿಚಾರದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಪ್ರಾಂತ್ಯವಿದ್ದರೆ ಅದು ಈಶಾನ್ಯ ಭಾರತ ಎಂದು ಅನುಮಾನವಿಲ್ಲದೇ ಹೇಳಬಹುದು. ಈಶಾನ್ಯ ರಾಜ್ಯಗಳು, ಅವುಗಳ ಇತಿಹಾಸ, ಭೌಗೋಳಿಕ ವ್ಯಾಪ್ತಿ, ಜನಜೀವನ, ಸಂಸ್ಕೃತಿಯ ಬಗ್ಗೆ ನಾವು ತಿಳಿದುಕೊಂಡಿರುವುದು ಅಷ್ಟಕ್ಕಷ್ಟೇ! ಆ ಕೆಲಸದಲ್ಲಿ ನಿರತರಾಗಬೇಕಿದ್ದ ಅಲ್ಲಿನ ಜನಪ್ರತಿನಿಧಿಗಳೂ ಆ ಗೋಜಿಗೇ ಹೋಗಿಲ್ಲ. ಈಶಾನ್ಯ ರಾಜ್ಯಗಳ ಪ್ರಸಿದ್ಧ, ಜನಪ್ರಿಯ ವ್ಯಕ್ತಿಗಳ ಹೆಸರುಗಳನ್ನೂ ನಾವು ಊಹಿಸಲು ಸಾಧ್ಯವಾಗಲಿಕ್ಕಿಲ್ಲ. ನಮ್ಮ ಶಾಲಾ ಪಠ್ಯಗಳಲ್ಲಿಯೂ ಈಶಾನ್ಯಕ್ಕೆ ಪ್ರಾತಿನಿಧ್ಯತೆ ಕಡಿಮೆ. ಅಷ್ಟೇ ಏಕೆ? ಘೋರಿ, ಘಜ್ನಿಗಳ ಶೌರ್ಯವನ್ನು ಮೆಚ್ಚಿ, ಅವರನ್ನು ಹೊಗಳಿಕೆಯ ಅಟ್ಟಕ್ಕೆ ಕೂರಿಸುವ ನಮಗೆ ಇದೇ ಭರತಖಂಡದ ಈಶಾನ್ಯ ಭಾಗವನ್ನು ಆಳುತ್ತಿದ್ದ ಅಹೋಂ ಎಂಬ ಸಾಮ್ರಾಜ್ಯವೊಂದು ತಮ್ಮೆಡೆಗೆ ದಂಡೆತ್ತಿ ಬಂದ ಮೊಘಲರನ್ನು 17 ಬಾರಿ ಹಿಮ್ಮೆಟ್ಟಿಸಿತ್ತು ಎಂದು ಅರಿಯಲು ಪಠ್ಯೇತರ ಪುಸ್ತಕಗಳನ್ನು ಕೊಡವಿ ಓದುವ ಪ್ರಸಂಗ ಬಂದಿರುವುದು ಈ ಭಾಗಕ್ಕೆ ನಾವು ತೋರಿರುವ ಉದಾಸೀನಭರಿತ ವೈರಾಗ್ಯತನವೇ ಹೌದು!

ದಶಕಗಳ ಹಿಂದೆ ಈ ರಾಜ್ಯಗಳು ಸುದ್ದಿಯಾಗುತ್ತಿದ್ದುದು ಹಿಂಸಾಚಾರ, ಬಂಡಾಯ, ಚಳುವಳಿಗಳಂತಹ ಕೋಲಾಹಲಕ್ಕೆ ಮಾತ್ರ! ಪ್ರಾಕೃತಿಕ ಸೌಂದರ್ಯವನ್ನು ತನ್ನೊಳಗೆ ಅವಿತಿಟ್ಟರೂ, ದೇಶದ ಗಮನವನ್ನು ತನ್ನತ್ತ ಸೆಳೆಯಲು ವಿಫಲಗೊಂಡಿದ್ದಕ್ಕೆ ಅಲ್ಲಿನ ರಾಜಕೀಯ ಸನ್ನಿವೇಶವೂ ದೊಡ್ಡ ಕಾರಣವಲ್ಲದೇ ಇಲ್ಲ. ನಾಯಕತ್ವದ ಕೊರತೆ, ದೂರದೃಷ್ಟಿತ್ವ ಹೀನತೆಯ ಜೊತೆಗೆ ಅವ್ಯಾಹತ ಮತಾಂತರ, ದೊಂಬಿಗಳಿಗೆ ಸಿಲುಕಿ ದಿಕ್ಕಿಲ್ಲದ ಗಾಳಿಪಟದಂತಾಗಿದ್ದ ಅಲ್ಲಿಗೆ ಅಭಿವೃದ್ಧಿಯ ಸೂತ್ರ ಒದಗಿದ್ದು ಕಳೆದೊಂದು ದಶಕದಿಂದಲಷ್ಟೇ. ಸಪ್ತ ಸಹೋದರಿಯರ ರಾಜ್ಯಗಳಿಗೆ ಮುಖ್ಯದ್ವಾರವೆಂಬಂತೆ ನಿಲ್ಲುವ ಅಸ್ಸಾಂನಲ್ಲಾದ ಅಭಿವೃದ್ಧಿ ಮತ್ತು ಈಗಷ್ಟೇ ಬಂದ ಚುನಾವಣಾ ಫಲಿತಾಂಶ ಬದಲಾಗುತ್ತಿರುವ ಈಶಾನ್ಯ ಭಾರತದ ಪ್ರತೀಕವೇ ಹೌದು!

ಅಸ್ಸಾಂ ಇದೀಗ ಬಂಡುಕೋರರ ಲೂಟಿ–ಗದ್ದಲದಿಂದ ದೂರಸರಿದು, ವಿಕಾಸದೆಡೆಗೆ ದಾಮುಗಾಲಿಕ್ಕಿದೆ. ಅಷ್ಟೇ ಅಲ್ಲ, ಈ ಸಪ್ತ ಸಹೋದರಿಯರ ನಾಯಕತ್ವದ ಸ್ಥಾನದಲ್ಲಿ ಅಸ್ಸಾಂ ಗುರುತಿಸಿಕೊಳ್ಳುತ್ತಿದೆ. ಈಶಾನ್ಯ ಭಾರತದಲ್ಲಿ ಹೂಡಿಕೆಯಾಗಲಿ, ಸಮ್ಮೇಳನಗಳಾಗಲಿ ಜರುಗಬೇಕೆಂದರೆ ಮೊದಲು ಆಯೋಜಕರ ಗಮನ ಗುವಾಹಟಿಯತ್ತ ಸೆಳೆಯುತ್ತಿದೆ. ರಾಜಕೀಯ ಮತ್ತು ಪ್ರಗತಿಯ ದೃಷ್ಟಿಕೋನದಿಂದ ನೋಡಿದರೆ, ಕಳೆದ ದಶಕದಿಂದ ಅಸ್ಸಾಂ ದೇಶದ ಗಮನವನ್ನೇ ತನ್ನತ್ತ ಸೆಳೆಯುತ್ತಿದೆ. ಇಂದು ನಳನಳಿಸುತ್ತಿರುವ ಅಸ್ಸಾಮಿನ ಇತಿಹಾಸದಲ್ಲಿ ಹೋರಾಟ, ಚಳುವಳಿಗಳ ಕಾವಿದೆ. ಹಾಗೆ ನೋಡಿದರೆ, ಅಸ್ಸಾಂ ಅನ್ನು ಅತಿ ಹೆಚ್ಚು ಬಾರಿ ಆಳಿದ ಕೀರ್ತಿ ಕಾಂಗ್ರೆಸ್, ಬಿಟ್ಟರೆ ಸ್ಥಳೀಯ ಪಕ್ಷ ಅಸ್ಸಾಂ ಗಣ ಪರಿಷದ್‌ನದ್ದು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರು 1991ರಿಂದ 2019ರವರೆಗೆ ರಾಜ್ಯ ಸಭೆಗೆ ಆಗಮಿಸಿದ್ದು ಇದೇ ಅಸ್ಸಾಂ ರಾಜ್ಯದ ಮೂಲಕ. ಹಾಗಂತ ಕೇಂದ್ರದಲ್ಲಿ ಅದೆಷ್ಟೇ ಸರ್ಕಾರಗಳು ಬಂದು ಹೋದರೂ ಅಸ್ಸಾಂ ಸೇರಿ ಇತರೆ ರಾಜ್ಯಗಳಿಗೂ ಸಿಕ್ಕ ಪ್ರಾಧಾನ್ಯತೆ ಮಾತ್ರ ಅಷ್ಟಕ್ಕಷ್ಟೆ! ಬ್ರಹ್ಮಪುತ್ರ ನದಿಯನ್ನು ತನ್ನ ರಾಜಧಾನಿಯ ಭೂಪದುದ್ದಕ್ಕೂ ವಿಸ್ತರಿಸಿಕೊಂಡಿರುವ ಅಸ್ಸಾಂ ಅನೇಕ ಸವಾಲುಗಳನ್ನು ಮಡಿಲಿಗೆ ಹಾಕಿಕೊಂಡು ನವಶಕೆಗೆ ಶತಾಯಗತಾಯ ಯತ್ನಿಸುತ್ತಲಿತ್ತು. ಗುವಾಹಟಿ ನಗರದ ಸುತ್ತಲೂ ಹರಿಯುತ್ತಿದ್ದ ಬ್ರಹ್ಮಪುತ್ರ ನದಿಗೆ ಇದ್ದ ಒಂದೇ ಒಂದು ಸೇತುವೆ ನಗರದ ಎರಡು ಭಾಗಗಳಿಗೆ ಏಕೈಕ ಕೊಂಡಿಯಂತಿತ್ತು. ರಾಷ್ಟ್ರೀಯ ಹೆದ್ದಾರಿಗಳು 2–ಲೇನ್ ಮಾದರಿಯಲ್ಲಿದ್ದವು. ಗುವಾಹಟಿಯ ವಿಮಾನ ನಿಲ್ದಾಣ ಈಶಾನ್ಯ ಭಾರತಕ್ಕೆ ಪ್ರಪಂಚವನ್ನು ಜೋಡಿಸುವ ಏಕೈಕ ನಿಲ್ದಾಣ ವಾಗಿದ್ದು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂಬ ಮಾನ್ಯತೆಯಿದ್ದೂ ಮೂಲಸೌಕರ್ಯಕ್ಕೂ ಸೌಖ್ಯವಾಗಿದ್ದಿಲ್ಲ.



2014ರಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವಾಗ ಅಧಿಕಾರಕ್ಕೆ ಬಂತೋ, ಈಶಾನ್ಯ ರಾಜ್ಯಗಳ ಅದೃಷ್ಟ ಒಮ್ಮೆಲೇ ಖುಲಾಯಿಸಿತು. ಅದು ವರೆಗೂ ಲೆಕ್ಕಕ್ಕಿರದ ಈಶಾನ್ಯ ರಾಜ್ಯಗಳು ಕೆಲವಾರು 'ಮೊದಲು'ಗಳಿಗೆ ಸಾಕ್ಷಿ ಯಾದವು. ಗದ್ದಲ, ಗೊಂದಲಗಳಲ್ಲೇ ಜೀವನ ಕಳೆದಿದ್ದ ಬಂಡುಕೋರರು ಹಂತ ಹಂತವಾಗಿ ಶಸ್ತ್ರ ತೊರೆದು ಸಮಾಜದ ಮುಖ್ಯವಾಹಿನಿಗೆ ಬಂದರು. ಭದ್ರತೆಯ ವಿಚಾರದಲ್ಲಿ ಅಸ್ಸಾಂ ಇದೀಗ ದಾಖಲೆಯತ್ತ ದಾಮುಗಾಲಿಕ್ಕಿದೆ. ಇತಿಹಾಸದುದ್ದಕ್ಕೂ ಹೋರಾಟದಲ್ಲೇ ಮುಳುಗಿದ್ದ ರಾಜ್ಯ, ಕಳೆದ ಕೆಲವಾರು ವರ್ಷಗಳಿಂದ ಸರ್ಕಾರದ ವಿರುದ್ಧದ ಧರಣಿಗಳಲ್ಲಾಗಲಿ, ಸಾಮಾಜಿಕ ಹಿಂಸಾಚಾರಗಳಲ್ಲಾಗಲಿ ಕಳೆದಿಲ್ಲ. ವರ್ಷಂಪ್ರತಿ ಒಂದೂವರೆ ಲಕ್ಷಕ್ಕೂ ಮಿಕ್ಕಿ ಅಪರಾಧ ಪ್ರಕರಣಗಳು ದಾಖಲಾಗುತ್ತಿದ್ದುದು ಇತ್ತೀಚಿನ ವರ್ಷಗಳಲ್ಲಿ 47 ಸಾವಿರಕ್ಕಿಳಿದಿದೆಯೆಂದು ವರದಿಗಳು ಹೇಳುತ್ತವೆ. ಕೇವಲ 2–ಲೇನ್ ಮಾದರಿಯಲ್ಲಿದ್ದ ರಾಷ್ಟ್ರೀಯ ಹೆದ್ದಾರಿಗಳು ಈಗ 6–ಲೇನ್ ಹೆದ್ದಾರಿಗಳಾಗಿ ಮಾರ್ಪಡುತ್ತಲಿವೆ. ಇಂದು ಅತೀ ಉದ್ದನೆಯ ರೈಲ್ವೇ ಮತ್ತು ರಸ್ತೆ ಸೇತುವೆ ಎಂಬ ದಾಖಲೆ ಅಸ್ಸಾಮಿನ ಬೋಗಿಬೀಲ್‌ನದ್ದು. ಧೋಲಾ–ಸದಿಯಾ ಎಂಬ ಸೇತುವೆ ಅಸ್ಸಾಂ ಅನ್ನು ಅರುಣಾಚಲ ಪ್ರದೇಶದೊಂದಿಗೆ ಜೋಡಿಸುತ್ತಿದೆ. ಬ್ರಹ್ಮಪುತ್ರ ನದಿಗೆ ಇದ್ದ ಒಂದೇ ಒಂದು ಸೇತುವೆ ಇದೀಗ ನಾಲ್ಕಕ್ಕೇರಿದೆ.

ಈಶಾನ್ಯದ ಯುವಜನತೆ ಎದುರಿಸುತ್ತಿದ್ದ ಬಹುಮುಖ್ಯ ಸಮಸ್ಯೆಯೆಂದರೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ದೇಶದ ನಾನಾ ಕಡೆಗೆ ವಲಸೆ ಹೋಗಬೇಕಿದ್ದುದು. ಇಂದು ಅಸ್ಸಾಂನಲ್ಲಿ ಅನೇಕ ಸ್ಥಳೀಯ ಅವಕಾಶಗಳು ಸೃಷ್ಟಿಯಾಗುತ್ತಿವೆ. ಆ ಮೂಲಕ ತಮ್ಮದೇ ನೆಲದಲ್ಲಿ ಸದೃಢರಾಗಿ ನೆಲೆಯೂರುವಂತೆ ಮಾಡಿದೆ. ಕೇವಲ ಮೂರು ಮೆಡಿಕಲ್ ಕಾಲೇಜುಗಳಿದ್ದ ಅಸ್ಸಾಂನಲ್ಲಿ ಈಗ 14 ಕಾಲೇಜುಗಳ ಸ್ಥಾಪನೆಯಾಗಿದೆ. 2029ರೊಳಗೆ ಅದು 29ಕ್ಕೇರಲಿದೆ. ಬಹುಷಃ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಮೆಡಿಕಲ್ ಕಾಲೇಜುಗಳಾಗುವಷ್ಟರ ಮಟ್ಟಿಗಿನ ವೇಗ ಪಡೆದಿವೆ. ಅಸ್ಸಾಂನ ಗುವಾಹಟಿ ವಿಮಾನ ನಿಲ್ದಾಣ ಇಂದು ದೇಶದ ಜನನಿಬಿಡ ವಿಮಾನ ನಿಲ್ದಾಣಗಳಲ್ಲಿ ಒಂದಾಗಿದೆ. ಅಸ್ಸಾಂ ಇಂದು ಶೇಕಡ 50ರಷ್ಟು ನೈಸರ್ಗಿಕ ಗ್ಯಾಸನ್ನು ತನ್ನಲ್ಲೇ ಉತ್ಪಾದಿಸುತ್ತಿದೆ. ಹೂಡಿಕೆಗಾಗಿ ಕೈಬೀಸಿ ಕರೆಯುತ್ತಿರುವ ಅಸ್ಸಾಂ ಟಾಟಾ ಸಂಸ್ಥೆಯ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಭಾರತದ ಮೊಟ್ಟಮೊದಲ ಸೆಮಿಕಂಡಕ್ಟರ್ ಘಟಕವನ್ನು ತೆರೆಯುವ ಮೂಲಕ ಇತಿಹಾಸ ರಚಿಸಿದೆ. ಈ ನಿಮಿತ್ತ ಸುಮಾರು 27 ಸಾವಿರ ಕೋಟಿ ರೂಪಾಯಿ ಹೂಡಿ, ಸ್ಥಳೀಯ ಪ್ರತಿಭಾವಂತರಿಂದ ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಿದೆ. ರಕ್ಷಣಾ ಸಾಮಾಗ್ರಿಗಳಿಗೆ ಸಂಬಂಧಿಸಿದ ಹೂಡಿಕೆಗಾಗಿ ರಾಜ್ಯ ಸರ್ಕಾರ ಉದ್ದಿಮೆದಾರರನ್ನು ಕೈಬೀಸಿ ಕರೆಯುತ್ತಿದೆ. ಭೂತಾನ್, ನೇಪಾಳ ಮತ್ತು ಬಾಂಗ್ಲಾದೇಶಕ್ಕೆ ರಫ್ತುದಾರಿಕೆಯ ಕೇಂದ್ರ ತಾನಾಗಬೇಕೆಂದು ಉಮೇದುವಾರಿಕೆ ತೋರಿ ಕಾರ್ಯಸಾಧನೆಗಿಳಿದಿದೆ. ಕ್ರೀಡೆಗೆ ವಿಶೇಷ ಪ್ರಾತಿನಿಧ್ಯತೆ ನೀಡಿರುವ ಅಸ್ಸಾಂ ಇದೀಗ ಅಂತಾರಾಷ್ಟ್ರೀಯ ಮಟ್ಟದ ಮೂಲಸೌಕರ್ಯ ಕೇಂದ್ರಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿಸುತ್ತಿದೆ. ಈಶಾನ್ಯದ ನಗರ ಪ್ರದೇಶಗಳಲ್ಲಿಯೂ ಇಂಟರ್‌ನೆಟ್‌ನ ಸಂಪರ್ಕ ಅಚ್ಚುಕಟ್ಟಾಗಿರಲಿಲ್ಲ. ಇದೀಗ ಈಶಾನ್ಯ ಅಂತರ್ಜಾಲದ ದುನಿಯಾಕ್ಕೂ ಹೆಜ್ಜೆಯಿಟ್ಟಿದೆ. ಪ್ರಾಯಶಃ ಸ್ವತಂತ್ರ ಭಾರತದ ಯಾವ ಪ್ರಧಾನಿಯೂ ಈಶಾನ್ಯಕ್ಕೆ ಅಷ್ಟೊಂದು ಬಾರಿ ಭೇಟಿ ಕೊಟ್ಟಿರಲಿಕ್ಕಿಲ್ಲ, ಕಳೆದ ವರ್ಷಕ್ಕೆ ಸರಿಯಾಗಿ ಲೆಕ್ಕ ಹಾಕಿದರೆ, ಮೋದಿ ಬರೋಬ್ಬರಿ 68 ಬಾರಿ ಈಶಾನ್ಯ ರಾಜ್ಯಗಳಿಗೆ ಭೇಟಿ ಕೊಟ್ಟಿದ್ದಾರೆ.

ಆರ್‌ಬಿಐನ ಇತ್ತೀಚಿನ ಪ್ರಕಟಣೆಯ ಪ್ರಕಾರ ಅಸ್ಸಾಂ ಇದೀಗ ಶರವೇಗದಲ್ಲಿ ಬೆಳೆಯುತ್ತಿರುವ ಆರ್ಥಿಕತೆಯ ರಾಜ್ಯಗಳ ಪೈಕಿ ಅಗ್ರಸ್ಥಾನದಲ್ಲಿದೆ. ಇವೆಲ್ಲ ಕಾರಣಕ್ಕೆ ಬಿಜೆಪಿ ಅಸ್ಸಾಂನಲ್ಲಿ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ತನ್ನ ಭರ್ಜರಿ ಸಾಧನೆಯನ್ನು ತೋರಿದೆ. ಮೊಟ್ಟಮೊದಲ ಬಾರಿಗೆ ತನ್ನ ಸ್ವಂತಬಲದ ಮೇಲೆ ಅಧಿಕಾರದ ಗದ್ದುಗೆಯನ್ನೇರಿದೆ. ಇವೆಲ್ಲದರ ಹಿಂದೆ ಮುಖ್ಯಮಂತ್ರಿ ಹಿಮಂತ್ ಬಿಸ್ವಾಶರ್ಮರಪಾತ್ರ ಬಹುಮುಖ್ಯವಾಗಿದೆಎನ್ನುವುದರಲ್ಲಿ ಅತಿಶಯ ವಿರದು! ಮೂಲ ಕಾಂಗ್ರೆಸ್ಸಿಗರಾದರೂ, 2015ರ ಬಳಿಕ ಪಕ್ಷತೊರೆದು ಬಿಜೆಪಿಯ ತತ್ತ್ವ–ಸಿದ್ಧಾಂತಗಳನ್ನು ಒಪ್ಪಿ ಇಡೀ ಈಶಾನ್ಯದಲ್ಲಿ ಎನ್‌ಡಿಎ ಒಕ್ಕೂಟದ ಬಲ ವರ್ಧನೆಗೆ ಅವರನ್ನು 'ಈಶಾನ್ಯ ಎನ್‌ಡಿಎ' ಒಕ್ಕೂಟಕ್ಕೆ ಮುಖ್ಯಸ್ಥರನ್ನಾಗಿ ನೇಮಿಸ ಲಾಯಿತು. ಪಕ್ಷದ ಬಲವರ್ಧನೆಗೆ ಅವರು ಪಟ್ಟ ಶ್ರಮ ಕ್ರಮೇಣ ಫಲಿಸಿರುವುದು ಅಲ್ಲಿನ ಚುನಾವಣಾ ಫಲಿತಾಂಶಗಳಲ್ಲಿ ನಿಚ್ಚಳವಾಗಿ ಗೋಚರವಾಗಿದೆ. 2014 ರಲ್ಲಿ ಈಶಾನ್ಯದ ಒಂದೇ ಒಂದು ರಾಜ್ಯದಲ್ಲಿಯೂ ಅಧಿಕಾರದಲ್ಲಿರದ ಬಿಜೆಪಿ ಇಂದು ನಾಲ್ಕು ರಾಜ್ಯಗಳಲ್ಲಿ ಸ್ವಂತಬಲದ ಮೇಲೆಯೂ ಇನ್ನುಳಿದ ನಾಲ್ಕು ರಾಜ್ಯಗಳಲ್ಲಿ ಎನ್‌ಡಿಎ ಒಕ್ಕೂಟದೊಂದಿಗೂ ಅಧಿಕಾರ ಹಂಚಿಕೊಂಡಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಈ ರಾಜ್ಯಗಳ ಒಟ್ಟು 25 ಲೋಕಸಭಾ ಕ್ಷೇತ್ರಗಳ ಪೈಕಿ 8 ಸ್ಥಾನವನ್ನಷ್ಟೇ ಪಡೆದುಕೊಂಡಿದ್ದ ಪಕ್ಷವಿಂದು, 2024ರಲ್ಲಿ 16 ಲೋಕಸಭಾ ಕ್ಷೇತ್ರವನ್ನು ತನ್ನದಾಗಿಸಿಕೊಂಡಿದ್ದು, ಈಶಾನ್ಯ ರಾಜ್ಯಗಳೂ ಬಿಜೆಪಿಯನ್ನು ಒಪ್ಪಿಕೊಂಡಿರುವುದು ಪ್ರತ್ಯಕ್ಷ ಸಾಕ್ಷಿಯೇ ಹೌದು. ತಮಗೆ ಅಧಿಕಾರ ದೊರೆತ ಕೆಲವೇ ವರ್ಷಗಳಲ್ಲಿ ಹಿಮಂತರು ತಮ್ಮ ಸಾಮರ್ಥ್ಯವನ್ನು ಮರಾವಿಕರಿಸಿದ್ದಾರೆ. ಕೇವಲ ಅಸ್ಸಾಂನಲ್ಲಷ್ಟೇ ಅಲ್ಲದೇ, ಅವರ ಖ್ಯಾತಿ ಇಂದು ದೇಶದ ಉದ್ದಗಲಕ್ಕೂ ಹರಡಿದೆ. ಸ್ಥಳೀಯರ ಪಾಲಿಗೆ ತಮ್ಮ ಪ್ರೀತಿಪೂರ್ವಕ ನಡತೆಗೆ 'ಮಾಮ' ಎಂದು ಗುರುತಿಸಿಕೊಳ್ಳುವ ಅವರು, ಮುಸ್ಲಿಂ ಮೂಲಭೂತವಾದಕ್ಕೆ ಮತ್ತು ದೇಶವಿರೋಧಿಗಳಿಗೆ ಸಿಂಹಸ್ವಪ್ನರಾಗಿದ್ದು, ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಗೃಹಖಾತೆಗೆ ಅತ್ಯಂತ ಯೋಗ್ಯರು ಎಂದೂ ಬಿಂಬಿಸಲಾಗುತ್ತಿದೆ.

ಆಧುನಿಕತೆ ಮತ್ತು ಶಿಥಿಲವಾಗುತ್ತಿರುವ ತಾಯಿ-ಮಗುವಿನ ಬಂಧ

▸ ಡಾ. ಮೈತ್ರಿ ಭಟ್, ವಿಟ್ಲ

'ಅಮ್ಮಾ' ಎನ್ನಲು ಅದೇನು ಹರುಷ, ಅದೆಷ್ಟು ಸಂಭ್ರಮ. ಈ ಎರಡಕ್ಷರದ ಪದದಲ್ಲಿ ಅದೆಷ್ಟು ಚೈತನ್ಯ ತುಂಬಿದೆ. 'ಅಮ್ಮ' ಎನ್ನುವ ಪದ ಎಲ್ಲ ಭಾಷೆಯಲ್ಲಿಯೂ ಅತ್ಯಂತ ಮಧುರವಾದ ಶಬ್ದ. ನಮ್ಮ ಭಾರತೀಯ ಸಂಸ್ಕೃತಿಯಲ್ಲಂತೂ 'ಮಾತೃ ದೇವೋಭವ' ಎಂದು ತಾಯಿಗೆ ಅಗ್ರಸ್ಥಾನವನ್ನು ನೀಡಲಾಗಿದೆ. ನವಮಾಸ ಕಂದನನ್ನು ತನ್ನ ಗರ್ಭದಲ್ಲಿ ಹೊತ್ತು ನೋವು, ಯಾತನೆ ಅನುಭವಿಸಿ, ಸೃಷ್ಟಿಗೆ ಕಾರಣಳಾಗಿ ಮಡಿಲಲ್ಲಿಟ್ಟು ಸಣ್ಣ ನೋವೂ ಬರದಂತೆ ಜತನದಿಂದ ಕಾಪಾಡಿ, ತಾನು ಅರೆಹೊಟ್ಟೆ ಇದ್ದರೂ ಮಗುವಿಗೆ ಹೊಟ್ಟೆ ತುಂಬಾ ಕೈತುತ್ತು ಹಾಕಿ ಬೆಳೆಸುವ ತಾಯಿಗೆ ಇನ್ನಾರು ಸಾಟಿ?

ತಾಯಿಗಿಂತ ಮಿಗಿಲಾದ ದೇವರಿಲ್ಲ, ತಾಯಿಯೇ ಪ್ರತ್ಯಕ್ಷ ದೇವತೆ. ಮಗುವನ್ನು ಅಕ್ಕರೆಯಿಂದ ಮುದ್ದಾಡಿ, ಲಾಲಿಸಿ–ಪಾಲಿಸಿ ಮಕ್ಕಳ ಕಷ್ಟಕ್ಕೆ ತಾನೂ ಮರುಗಿ, ಯಶಸ್ಸಿಗೆ ಹಿರಿಹಿರಿ ಹಿಗ್ಗಿ ಹಾರೈಸುವ ತಾಯಿಗಿಂತ ಮಿಗಿಲಾದ ದೇವರು ಇನ್ನೆಲ್ಲಿ ತಾನೇ ಇರಲು ಸಾಧ್ಯ? ಇಂಥ ಮಮತೆಯ ಕಡಲು ವಾತ್ಸಲ್ಯದ ಒಡಲಿಗಾಗಿ ಇತ್ತೀಚೆಗೆ ಒಂದು ದಿನವನ್ನು ಮೀಸಲಾಗಿಟ್ಟು ಆಚರಿಸಲಾಗುತ್ತಿದೆ – ಅದುವೇ 'ಅಮ್ಮಂದಿರ ದಿನ'.

ಇತ್ತೀಚಿನ ಅಮ್ಮಂದಿರ ದಿನವನ್ನು ಪೂರ್ವ ವರ್ಜೀನಿಯಾದ ಅನ್ನಾ ಜಾರ್ವಿಸ್ ತನ್ನ ಮಮತೆಯ ತಾಯಿ ಶ್ರೀಮತಿ ಅನ್ನಾ ರೀಸೆ ಜಾರ್ವಿಸ್‌ಳ ಸವಿನೆನಪಿನ ದ್ಯೋತಕವಾಗಿ ಮೇ 10, 1908 ರಂದು ಆಚರಣೆಗೆ ತಂದಳು. ಮುಂದೆ ಮೇ ತಿಂಗಳ 2ನೇ ಭಾನುವಾರವನ್ನು ಅಧಿಕೃತವಾಗಿ ಅಮ್ಮಂದಿರ ದಿನವೆಂದು ಘೋಷಿಸಿ ಆಚರಿಸಲಾಯಿತು. ಭಾರತವೂ ಸೇರಿದಂತೆ ಸುಮಾರು 46 ದೇಶಗಳಲ್ಲಿ ಮೇ ತಿಂಗಳ 2ನೇ ಭಾನುವಾರವನ್ನು ಅಮ್ಮಂದಿರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇನ್ನೂ ಕೆಲವು ದೇಶಗಳು ಗ್ರೆಗೋರಿಯನ್ ಕ್ಯಾಲೆಂಡರ್‌ನ ಬೇರೆ ಬೇರೆ ತಿಂಗಳುಗಳಲ್ಲಿ ಅಮ್ಮಂದಿರ ದಿನವನ್ನು ಆಚರಿಸುತ್ತವೆ. ಉದಾ: ನಾರ್ವೆ – ಫೆಬ್ರವರಿ 2ನೇ ಭಾನುವಾರ, ಐರ್ಲೆಂಡ್, ನೈಜೀರಿಯಾ, ಯುಕೆ – ಮಾರ್ಚ್ 4ನೇ ಭಾನುವಾರ.

ಅಮ್ಮಂದಿರ ದಿನದ ಆಚರಣೆ ಭಾರತದ ಸಂಸ್ಕೃತಿಗೆ ಹೊಸತೇನಲ್ಲ. ಸಾವಿರಾರು ವರ್ಷಗಳಿಂದ ಹಿಂದೂಗಳು ದುರ್ಗಾ ಪೂಜೆಯ ಹತ್ತು ದಿನಗಳ ಆಚರಣೆಯ ಸಂದರ್ಭದಲ್ಲಿ ದುರ್ಗಾ ದೇವಿಯನ್ನು ಪೂಜಿಸುತ್ತಾರೆ. ತಂತ್ರಜ್ಞಾನ, ಆರ್ಥಿಕ ಪ್ರಗತಿ ಹಾಗೂ ಜಗತ್ತು ಕಿರಿದಾದುದರ ಪರಿಣಾಮ ಅಮ್ಮಂದಿರ ದಿನ, ಪ್ರೇಮಿಗಳ ದಿನ ಮೊದಲಾದ ಆಚರಣೆಗಳು ಭಾರತಕ್ಕೂ ಕಾಲಿಟ್ಟಿವೆ. ಇವು ಭಾರತದ ನಗರ ಪ್ರದೇಶಗಳಲ್ಲಿ ಮಾತ್ರ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಹಳ್ಳಿಗಳತ್ತಲೂ ಮೆಲ್ಲನೇ ಹೆಜ್ಜೆಯಿಡುತ್ತಿವೆ. ಇದೊಂದು ವ್ಯಾವಹಾರಿಕ ಕಾಳಜಿಯಿಂದ ಕೂಡಿದ ಆಚರಣೆಯೆಂದರೂ ತಪ್ಪಾಗಲಾರದು. ಅಮ್ಮನು ನೀಡಿದ ಪ್ರೀತಿ, ಮಮತೆ, ಕಾಳಜಿಗಳಿಗಾಗಿ ಧನ್ಯವಾದ ಹೇಳುವ ಒಂದು ಅವಕಾಶವೆಂದು ಇದನ್ನು ಬಿಂಬಿಸಲಾಗುತ್ತಿದೆ.

ಬಾಲ್ಯದಲ್ಲಿ ನಾವೆಲ್ಲರೂ ಗೋವಿನ ಹಾಡಿನ ಬಗ್ಗೆ ಕೇಳಿದ್ದೇವೆ. ಅಲ್ಲಿಯೂ ತಾಯಿಯ ಮಮತೆಯನ್ನು ಚಿತ್ರಿಸಲಾಗಿದೆ. ಜಗದಲ್ಲಿ ಹುಡುಕಿದರೆ ಹಲವು ಕೆಟ್ಟ ಮಕ್ಕಳು ಸಿಗಬಹುದು. ಆದರೆ ಕೆಟ್ಟ ತಾಯಿ ಸಿಗುವುದು ಅತಿ ವಿರಳ ಎಂಬುದು ಅನುಭಾವ. ಒಬ್ಬ ತಾಯಿ ಹತ್ತು ಮಕ್ಕಳನ್ನು ಸಾಕುತ್ತಾಳೆ. ಆದರೆ ಹತ್ತು ಮಕ್ಕಳಿದ್ದೂ ಒಬ್ಬ ತಾಯಿ ಬೀದಿಗೆ ಬೀಳುವ ಸಂದರ್ಭಗಳಿವೆ. ನಮ್ಮ ಮಧ್ಯೆ ಹೆಚ್ಚುತ್ತಿರುವ 'ವೃದ್ಧಾಶ್ರಮ'ಗಳು ಈ ಮಾತಿಗೆ ಇಂಬು ನೀಡುತ್ತಿವೆ. ದಿನಗಳು ಕಳೆದಂತೆ ನಮ್ಮಲ್ಲೂ ಆಧುನಿಕತೆಯ ಭರಾಟೆಯಲ್ಲಿ ಜಗತ್ತು ಕಿರಿದಾಗಿ ಸಂಬಂಧಗಳ ಕೊಂಡಿ ಶಿಥಿಲವಾಗಿ ಸಡಿಲಗೊಂಡು ಕಳಚಿ ಬೀಳುತ್ತಿವೆ ಎನಿಸುತ್ತಿದೆ. 'ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು ಜನನಿಯಿಂದ ಪಾಠ ಕಲಿತ ಜನರು ಧನ್ಯರು ಎಂಬ ಕಾಲವೊಂದಿತ್ತು'. ಆದರೀಗ..?



ಅಮ್ಮನಿಗಾಗಿ ಒಂದು ದಿನ ಮೀಸಲಿಡ ಬೇಕಾದಂತಹ ಪರಿಸ್ಥಿತಿ (ದುಃಸ್ಥಿತಿ) ನಮ್ಮದೂ ಆಗಿದೆ. ಈಗಿನ ಯಾಂತ್ರೀಕೃತ ಜಗತ್ತಿನಲ್ಲಿ ತಾಯಿ ಮಗುವಿನ ಬಾಂಧವ್ಯ ಅರ್ಥ ಕಳೆದುಕೊಂಡಿದೆಯೇನೋ ಎಂಬ ಅನುಮಾನ ಕಾಡುತ್ತಿದೆ.

ಬದುಕಿನ ಜಂಜಾಟದಲ್ಲಿ ಸದಾ ಕೆಲಸ, ಅದೂ ಇದೂ ಎಂದು ತೊಡಗಿಕೊಂಡಿರುವ ತಾಯಿಯು ತನ್ನ ಎಳೇ ಕಂದಮ್ಮನನ್ನು 'ಮಕ್ಕಳನ್ನು ನೋಡಿಕೊಳ್ಳುವ ಗೂಡಿಗೆ' ಬಿಟ್ಟು ಹೋಗುತ್ತಾಳೆ. ಸಂಜೆ ಆಯಾಸ, ಸುಸ್ತು, ಬಳಲಿಕೆಯಿಂದ ಮನೆ ಸೇರುವ ತಾಯಿಗೆ ಮಕ್ಕಳ ಬಗ್ಗೆ ವಿಚಾರಿಸುವ ಬಿಡುವು, ವ್ಯವಧಾನವಾದರೂ ಇರುತ್ತದೆಯೇ? ಈಗಿನ ಮಕ್ಕಳು ತಂದೆ, ತಾಯಿ, ಅಜ್ಜ ಅಜ್ಜಿಯರಿದ್ದೂ ಅನಾಥರಂತೆ ಎಲ್ಲೋ ಬೆಳೆದು ಸಹಜ ಪ್ರೀತಿ, ವಾತ್ಸಲ್ಯದಿಂದ ವಂಚಿತರಾಗುತ್ತಿದ್ದಾರೆ. ಒಟ್ಟಿನಲ್ಲಿ

> ನಮ್ಮ ಸಂಸ್ಕೃತಿಯನ್ನು ಗೌರವಿಸಿ, ಆಧುನಿಕತೆಯ ಪೊರೆ ಕಳಚಿದಲ್ಲಿ ನಮಗೆ ಈ 'ಅಮ್ಮಂದಿರ ದಿನ'ದ ಆಚರಣೆ ಅರ್ಥಹೀನ ಎಂದೆನಿಸದಿರದು.

ಆಧುನಿಕತೆಯ ಸೋಗಿನಲ್ಲಿ ನಮ್ಮ ಮಾನವ ಸಂಬಂಧಗಳು ಶಿಥಿಲಾವಸ್ಥೆಯತ್ತ ಸಾಗುತ್ತಿವೆ. ಮಗುವಿಗೂ ಹೆತ್ತವಳು ಕೇವಲ ಏಣಿಗೆ ಸಮಾನಳಾಗುತ್ತಿದ್ದಾಳೆ.

ತಾಯ್ತನ ಹೆಣ್ಣಿನ ಬದುಕಿಗೆ ಒಂದು ಅಪೂರ್ವ ಅನುಭವ, ಆನಂದ, ಸಂಭ್ರಮ, ಮುದ ನೀಡುವ ಕ್ಷಣ. ನಾವು ಅಮ್ಮನಿಗೆ ಧನ್ಯವಾದ ಹೇಳಲು ಒಂದು ದಿನ ಮೀಸಲಿಟ್ಟು ಏನೂ ವಿಶೇಷತೆ ಸಾಧಿಸಲಾಗದು. ಪ್ರೀತಿಯೆಂದರೆ ಅಮ್ಮನನ್ನು ಅವಳ ವೃದ್ಧಾಪ್ಯದಲ್ಲಿ ನಿಜವಾದ ಅನಾಥಳನ್ನಾಗಿಸದೆ ಸಂತೋಷವಾಗಿ ಇರುವಂತೆ ನೋಡಿಕೊಳ್ಳುವುದು. ನಾವು ನಮ್ಮ ಸಂಸ್ಕೃತಿಯನ್ನು ಗೌರವಿಸಿ, ಆಧುನಿಕತೆಯ ಪೊರೆ ಕಳಚಿ ಹೊರಬಂದಲ್ಲಿ ನಮಗೆ ಈ 'ಅಮ್ಮಂದಿರ ದಿನ'ದ ಆಚರಣೆ ಅರ್ಥಹೀನ ಎಂದೆನಿಸದಿರದು. ನೀವೇ ಹೇಳಿ? ತನ್ನ ಜೀವನವನ್ನೇ ಮಕ್ಕಳ ಏಳಿಗೆಗಾಗಿ ಮುಡಿಪಾಗಿಡುವ ತಾಯಿಗೆ ಒಂದು ದಿನದ ಕಾರ್ಡು, ಉಡುಗೊರೆ, ಪಾರ್ಟಿಗಳ ಮೂಲಕ ಎಂದಾದರೂ ಬೆಲೆ ಕಟ್ಟಲಾದೀತೇ?

ಜೈ ಶ್ರೀರಾಮ್, ಭಾರತ್ ಮಾತಾಗೆ ಜೈಕಾರ

ವೈಭವೋಪೇತ ಕ್ಷಣಕ್ಕೆ ಸಾಕ್ಷಿಯಾದ ಬಂಗಾಳ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಪ್ರಪ್ರಥಮ ಬಿಜೆಪಿ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಕಾಣಲು, ಕಂಡು ಸಂತಸಪಡಲು ಸಾವಿರಾರು ಅಭಿಮಾನಿಗಳು, ಕಾರ್ಯಕರ್ತರು ಪ್ರವಾಹೋಪಾದಿಯಲ್ಲಿ ನೆರೆದಿದ್ದ, ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನ ಶನಿವಾರ ಅತ್ಯಂತ ವೈಭವೋಪೇತ ಕ್ಷಣಗಳಿಗೆ ಸಾಕ್ಷಿಯಾಯಿತು. ಮೈದಾನ ಪರಿಸರವಿಡೀ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳ ನಿರಂತರ ಅನುರಣನದಿಂದ ತುಂಬು ಪುನೀತವಾಗಿತ್ತು.

ಬಿಜೆಪಿ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಕಣ್ತುಂಬಿಕೊಳ್ಳಲು ನೆರೆದಿದ್ದ ಜನಜಾತ್ರೆಯಲ್ಲಿ ಗಮನ ಸೆಳೆದವರು ದಕ್ಷಿಣ 24 ಪರಗಣ ಜಿಲ್ಲೆಯ ಕುಲ್ತಾಲಿ ಮೂಲದ 80ರ ವೃದ್ಧೆ ಭಗವತಿ ದೇವಿ. ಜನಸಂದಣಿ ಮಧ್ಯೆ ವೇದಿಕೆಯತ್ತ ಸಾಗಲು ಹೆಣಗಾಡುತ್ತಿದ್ದ ಈ ಹಿರಿಯ ಮಹಿಳೆಯ ಸಂಕಷ್ಟ ಕಂಡ ಕಾರ್ಯಕರ್ತರು, ಭದ್ರತಾ ಪಡೆ ತಮ್ಮ ರಕ್ಷಣೆಯಲ್ಲಿ ವೇದಿಕೆಯ ನೇರ ಹತ್ತಿರಕ್ಕೆ ಕರೆದೊಯ್ದು, ಆಸನ ನೀಡಿ ಕುಳ್ಳಿರಿಸಿದರು.

ಕೈಗೂಡಿತು ನಿರೀಕ್ಷೆ: ಈ ಶುಭ ದಿನಕ್ಕಾಗಿ ನಾನು ಸುದೀರ್ಘ ವರ್ಷಗಳಿಂದ ಚಾತಕಪಕ್ಷಿಯಂತೆ ಕಾದು ಕುಳಿತವಳು. ಹಲವು ವರ್ಷಗಳಿಂದ ನನ್ನ ಕುಟುಂಬ ಹಿಂದಿನ ಸರ್ಕಾರದಿಂದ ಮಿತಿಮೀರಿ ದೌರ್ಜನ್ಯ, ಚಿತ್ರಹಿಂಸೆ ಅನುಭವಿಸಿದೆ. ನನ್ನ ಮಗನಂತೂ ಪ್ರಾಣಕ್ಕೆ ಆತಂಕವಿದ್ದ ಹಿನ್ನೆಲೆ ಬಲವಂತ ಹುಟ್ಟೂರು ಬಿಡುವಂತಾಯಿತು. ಇಂದೀಗ ನನ್ನ ನಿರೀಕ್ಷೆಯ ದಿನ ಬಂದೇ ಬಿಡ್ತು. ನಿರೀಕ್ಷೆ ಕೊನೆಗೂ ಸಾಕಾರಗೊಂಡಿತು ಎಂದು ತಲೆಗೆ ಬಿಜೆಪಿಯ ಹೆಡ್‌ಬ್ಯಾಂಡ್ ಧರಿಸಿದ್ದ, ಕೈಯ್ಯಲ್ಲಿ ಬಿಜೆಪಿ ಧ್ವಜಧಾರಿ ಭಗವತಿದೇವಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ನುಡಿದರು.

ತ್ರಿಶೂಲಧಾರಿ ಸಾಧು: ಕೈಯ್ಯಲ್ಲಿ ತ್ರಿಶೂಲ ಹಿಡಿದು ಕಾರ್ಯಕರ್ತರನ್ನು ಹರಸುತ್ತಿದ್ದ ಕೇಸರಿ ವಸ್ತ್ರಧಾರಿ ಸಾಧು ಕೂಡ ಸಮಸ್ತರ ಗಮನಸೆಳೆದರು. ನಬದ್ವಿಪ್ ಪ್ರದೇಶದ ಮಠದಲ್ಲಿರುವ ಈ ಸಾಧುವರ್ಯರ ಅಭಿದಾನ ಪ್ರಗ್ಯಾನ್ ಮಹಾರಾಜ್. ಕಾರ್ಯಕ್ರಮದಲ್ಲಿ ನೆರೆದಿದ್ದ ಅಪಾರ ಜನಸ್ತೋಮವನ್ನು ಈ ಸಾಧುವರ್ಯರು ತ್ರಿಶೂಲದಿಂದ ಹರಸುತ್ತಿದ್ದುದು ಕಂಡು ಬಂತು.

ಕರಿಮೋಡಗಳು ಸರಿದಿವೆ: ಟಿಎಂಸಿ ಸರ್ಕಾರವಿದ್ದಾಗ ನಾನು ತುಟ್ಟಿಭತ್ಯೆಯಲ್ಲಿ ಸಮಾನತೆ ಆಗ್ರಹಿಸುವ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿದ್ದಕ್ಕೆ ನನಗೆ ಜೀವ ಬೆದರಿಕೆಗಳು ಬಂದಿದ್ದವು ಎಂದು ನಿವೃತ್ತ ಸರ್ಕಾರಿ ನೌಕರನೊಬ್ಬ ಟಿಎಂಸಿ ಗೂಂಡಾರಾಜ್‌ನ ಕರಾಳತೆಯನ್ನು ಸುದ್ದಿಗಾರರಲ್ಲಿ ಬಿಚ್ಚಿಟ್ಟರು. ನಾನು ಕಳೆದ ವರ್ಷ ನಿವೃತ್ತನಾದ ನಂತರವೂ ಬೆದರಿಕೆಗಳು ನಿಂತಿರಲಿಲ್ಲ. ಇಂದೀಗ ಕರಿಮೋಡಗಳು ಕೊನೆಗೂ ಸರಿದಿವೆ. ಕೇಂದ್ರ ಸರ್ಕಾರಿ ನೌಕರರ ಸಮಾನ ಡಿಎ ತನಗಿನ್ನು ಲಭಿಸಲಿದೆ ಎಂಬ ಭರವಸೆ ಮೂಡಿದೆ ಎಂದರು ಈ ನಿವೃತ್ತ ಸರಕಾರಿ ನೌಕರ. ಇಂತಹ ಕಹಿ ಅನುಭವ-ಘಟನಾವಳಿಗಳಿಗೆ ಬಲಿಪಶುಗಳಾದ ಅದೆಷ್ಟೋ ಜನ ಬಿಜೆಪಿ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ದುರ್ಗಾಮಾತೆಯ ಆಕೃತಿ: ಮೈದಾನದಾದ್ಯಂತ ಮದನ್‌ಮೋಹನ್ ದೇಗುಲ, ಜಲ್ಪೇಶ್ ಕ್ಷೇತ್ರ, ಕಾಳಿಘಾಟ್ ದೇಗುಲಗಳ ಪ್ರತಿಕೃತಿಗಳು ರಾರಾಜಿಸಿದ್ದವು. ಪ್ರಧಾನ ವೇದಿಕೆಯ ಹಿನ್ನೆಲೆಯಲ್ಲಿದ್ದ ದಕ್ಷಿಣೇಶ್ವರ ಕಾಳಿ ದೇವಾಲಯ ಮತ್ತು ದುರ್ಗಾ ಮಾತೆಯ ಆಕೃತಿಗಳು ಗಮನ ಸೆಳೆದವು. ಜೈಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳ ಜತೆ ಜತೆ ಡ್ರಮ್‌ವಾದನ, ಸಂಗೀತದ ನಿನಾದ, ಬುಡಕಟ್ಟು ಸಮುದಾಯದ ಸಾಂಪ್ರದಾಯಿಕ-ಜಾನಪದ ನೃತ್ಯ ಪ್ರದರ್ಶನಗಳು ಕಾರ್ಯಕ್ರಮಕ್ಕೆ ಹಬ್ಬದ ಕಳೆ ನೀಡಿದ್ದವು.



ವೇದಿಕೆಯಿಂದಲೇ ಬಂಗಾಳ ಜನತೆಗೆ ಶಿರ ಬಾಗಿ ನಮಸ್ಕರಿಸಿದ ಪ್ರಧಾನಿ ಮೋದಿ.

ಕಾಲಿಗೆರಗಿ ಆಶೀರ್ವಾದ ಪಡೆದ ಪ್ರಧಾನಿ ಮೋದಿ

ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೇದಾನದಲ್ಲಿ ಸುವೇಂದು ಅಧಿಕಾರಿ ನೇತೃತ್ವದ ಸರ್ಕಾರದ ಪ್ರಮಾಣವಚನ ಸ್ವೀಕಾರಕ್ಕೆ ಮುನ್ನ, ಪ್ರಧಾನಿ ನರೇಂದ್ರ ಮೋದಿ ಬಿಜೆಪಿಯ ಹಿರಿಯ ನಾಯಕ, 98ರ ಇಳಿವಯಸ್ಸಿನ ಮಖನ್‌ಲಾಲ್ ಸರ್ಕಾರ್ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದರು. ಸರ್ಕಾರ್ ಅವರನ್ನು ಅಪ್ಪಿಕೊಂಡು ಪ್ರಧಾನಿ ಮೋದಿ ಸಂತಸ ಹಂಚಿಕೊಂಡರು. 1952ರಲ್ಲಿ ಕಾಶ್ಮೀರದಲ್ಲಿ ತ್ರಿವರ್ಣ ಧ್ವಜ ಆರಳಿಸಲು ನಡೆದ ಜನಾಂದೋಲನದಲ್ಲಿ ಪಾಲ್ಗೊಂಡು ಜನಸಂಘ ಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಜತೆ ತೆರಳುತ್ತಿದ್ದಾಗ ಸರ್ಕಾರ್ ಅವರನ್ನು ಬಂಧಿಸಲಾಗಿತ್ತು.





ಸುವೇಂದು ಅಧಿಕಾರಿ



ದಿಲೀಪ್ ಘೋಷ್



ನಿಸಿತ್ ಪ್ರಮಾಣಿಕ್



ಕ್ಷುದಿರಾಮ್ ತುಡು



ಅಗ್ನಿಮಿತ್ರ ಪೌಲ್

ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಸುವೇಂದು ಅಧಿಕಾರಿ ಎಂಬ ಹೋರಾಟಗಾರ

ಯಾರು ಈ ಸುವೇಂದು ಅಧಿಕಾರಿ?

ಡಿಸೆಂಬರ್ 15, 1970ರಂದು ಪಶ್ಚಿಮ ಬಂಗಾಳದ ಪೂರ್ವ ಮೇದಿನಿ ಪುರದ ಕರ್ಕುಲಿಯಲ್ಲಿ ಜನಿಸಿದ ಸುವೇಂದು ಅಧಿಕಾರಿ ರಕ್ತದಲ್ಲೇ ರಾಜಕಾರಣವಿದೆ. ಇವರು ಕೇಂದ್ರ ಮಾಜಿ ಸಚಿವ ಶಿಶಿರ ಕುಮಾರ್ ಅಧಿಕಾರಿ ಪುತ್ರ. ಕಂಠಿ ಪ್ರೌಢಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಸುವೇಂದು, ವಿದ್ಯಾಸಾಗರ ವಿಶ್ವವಿದ್ಯಾಲಯದ ಪ್ರವಾತ್ ಕುಮಾರ್ ಕಾಲೇಜಿನಿಂದ ಪದವಿ ಪಡೆದರು. 2011ರಲ್ಲಿ ರವೀಂದ್ರ ಭಾರತಿ ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದ ಸುವೇಂದು, ಸದಾ ತಳಮಟ್ಟದ ಜನರೊಂದಿಗೆ ಸಂಪರ್ಕದಲ್ಲಿರುವ ನಾಯಕ. 55 ವರ್ಷದ ಸುವೇಂದು ಅವಿವಾಹಿತರಾಗಿದ್ದು, ತಮ್ಮ ಸಂಪೂರ್ಣ ಜೀವನವನ್ನು ರಾಜಕೀಯ ಸಂಘಟನೆಗೆ ಮೀಸಲಿಟ್ಟಿದ್ದಾರೆ.

ಸಂಘರ್ಷದಿಂದ ಬೆಳೆದ ನಾಯಕ

ಸುವೇಂದು ಅವರ ರಾಜಕೀಯ ಜೀವನ ಆರಂಭವಾಗಿದ್ದು ಕಾಂಗ್ರೆಸ್‌ನಿಂದ. 1995ರಲ್ಲಿ ಕೌನ್ಸಿಲರ್ ಆಗಿ ಆಯ್ಕೆಯಾದ ಇವರು, ನಂತರ 2006ರಲ್ಲಿ ಮೊದಲ ಬಾರಿಗೆ ಶಾಸಕರಾದರು. ಆದರೆ, ಇಡೀ ಭಾರತ ಸುವೇಂದು ಹೆಸರನ್ನು ಕೇಳಿದ್ದು 2007-08ರ ನಂದಿಗ್ರಾಮ ಚಳವಳಿಯ ಸಮಯದಲ್ಲಿ. ಭೂಸ್ವಾಧೀನ ವಿರೋಧಿ ಸಮಿತಿಯ ನಾಯಕತ್ವ ವಹಿಸಿದ್ದ ಇವರು, ಅಂದಿನ ಎಡರಂಗ ಸರ್ಕಾರವನ್ನು ನಡುಗಿಸಿದ್ದರು. ಮಮತಾ ಬ್ಯಾನರ್ಜಿ ಅಧಿಕಾರಕ್ಕೆ ಬರಲು ಸುವೇಂದು ಹಾಕಿಕೊಟ್ಟ ಈ ಬುನಾದಿಯೇ ಕಾರಣವಾಗಿತ್ತು. ತದನಂತರ ಅವರು ಎರಡು ಬಾರಿ ಲೋಕಸಭಾ ಸದಸ್ಯರಾಗಿ ಮತ್ತು ರಾಜ್ಯದ ಸಾರಿಗೆ, ನೀರಾವರಿ ಸಚಿವರಾಗಿ ಕೆಲಸ ಮಾಡಿದರು. 2020ರಲ್ಲಿ ತೃಣಮೂಲ ಕಾಂಗ್ರೆಸ್‌ನ ವಂಶಾಡಳಿತವನ್ನು ವಿರೋಧಿಸಿ ಬಿಜೆಪಿಗೆ ಸೇರಿದರು.

ಸರಳ ಜೀವನ, ಬಲಿಷ್ಠ ಇಚ್ಛಾಶಕ್ತಿ

ಅಧಿಕಾರಿ ಅವರ ಆಸ್ತಿ ವಿವರಗಳನ್ನು ಗಮನಿಸಿದರೆ, ಅವರು ಸರಳ ಜೀವನ ನಡೆಸುವ ನಾಯಕ ಎಂಬುದು ತಿಳಿಯುತ್ತದೆ. 2026ರ ಅಫಿಡವಿಟ್ ಪ್ರಕಾರ ಅವರ ಒಟ್ಟು ಆಸ್ತಿ 85.87 ಲಕ್ಷ ರೂ.ಗಳು ಮಾತ್ರ. ಇದರಲ್ಲಿ ಬಹುಪಾಲು ಪೂರ್ವಜರಿಂದ ಬಂದ ಜಮೀನು ಮತ್ತು ಮನೆಗಳಾಗಿವೆ. ವಾರ್ಷಿಕ ಸುಮಾರು 17.38 ಲಕ್ಷ ರೂ. ಆದಾಯ ಹೊಂದಿದ್ದು, ಯಾವುದೇ ಸಾಲ ಇಲ್ಲ.

ಭವಾನಿಪುರದ ಐತಿಹಾಸಿಕ ಜಯ: ದೀದಿ ಕೋಟೆಯಲ್ಲಿ ಕಮಲ ಅರಳಿಸಿದ ಸುವೇಂದುಈ ಬಾರಿಯ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಮೂಲಕ ದೊಡ್ಡ ಸಾಹಸಕ್ಕೆ ಕೈಹಾಕಿ ಯಶಸ್ವಿ ಯಾದರು. ತಮ್ಮ ತವರು ಕ್ಷೇತ್ರ ನಂದಿಗ್ರಾಮದ ಜತೆಗೆ, ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ ಭವಾನಿಪುರದಲ್ಲೂ ಕಣಕ್ಕಿಳಿದಿದ್ದರು.

ಭೂಮಿಪುತ್ರನ ಪಟ್ಟಾಭಿಷೇಕ

ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಒಂದು ಸುದೀರ್ಘ ಕಾಲದ ನಂತರ ಹೋರಾಟದ ಹಾದಿಯಿಂದ ಬಂದ ನಾಯಕನೊಬ್ಬ ಮುಖ್ಯಮಂತ್ರಿ ಪೀಠವನ್ನೇರಿದ್ದಾರೆ. ಭೂಮಿಪುತ್ರ(ಮಣ್ಣಿನ ಮಗ) ಎಂದು ಕರೆಯಲ್ಪಡುವ ಸುವೇಂದು ಅಧಿಕಾರಿ ಶನಿವಾರ ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ.



ಸುವೇಂದು ಸಂಪುಟದ ಪಂಚರತ್ನಗಳು

ಸುವೇಂದು ಅಧಿಕಾರಿ ಅವರ ಸಚಿವ ಸಂಪುಟವು ಬಂಗಾಳದ ವಿವಿಧ ಸಮುದಾಯ ಮತ್ತು ಭೌಗೋಳಿಕ ಪ್ರದೇಶಗಳನ್ನು ಪ್ರತಿನಿಧಿಸುವಂತೆ ರಚನೆಯಾಗಿದೆ. ಐವರು ಪ್ರಮುಖ ಸಚಿವರ ವಿವರ ಇಲ್ಲಿದೆ:

1 ದಿಲೀಪ್ ಘೋಷ್

ಬಿಜೆಪಿಯ ಹಿರಿಯ ನಾಯಕ ಮತ್ತು ಮಾಜಿ ರಾಜ್ಯಾಧ್ಯಕ್ಷರಾದ ದಿಲೀಪ್ ಘೋಷ್ ಅವರು ಸಂಘ ಪರಿವಾರದ ಹಿನ್ನೆಲೆಯಿಂದ ಬಂದವರು. ಆರೆಸ್ಸೆಸ್ ಪ್ರಚಾರಕರಾಗಿ ಕೆಲಸ ಮಾಡಿದ್ದ ಇವರು, ಬಂಗಾಳದಲ್ಲಿ ಬಿಜೆಪಿಯ ನೆಲೆಯನ್ನು ಹಳ್ಳಿ ಹಳ್ಳಿಗಳಿಗೆ ತಲುಪಿಸಿದವರು. ಮೇದಿನಿಪುರದ ಸಂಸದರಾಗಿದ್ದ ಇವರು, ಸುವೇಂದು ಸಂಪುಟದ ಅತ್ಯಂತ ಅನುಭವಿ ಮುಖ. ಇವರನ್ನು ಬಂಗಾಳ ಬಿಜೆಪಿಯ ಆರ್ಕಿಟೆಕ್ಟ್ ಎಂದೇ ಕರೆಯಲಾಗುತ್ತದೆ.

2 ಅಗ್ನಿಮಿತ್ರ ಪೌಲ್

ನೂತನ ಸಂಪುಟದ ಏಕೈಕ ಮಹಿಳಾ ಸಚಿವೆ. ವೃತ್ತಿಯಲ್ಲಿ ಪ್ರಸಿದ್ಧ ಫ್ಯಾಷನ್ ಡಿಸೈನರ್ ಆಗಿದ್ದ ಅಗ್ನಿಮಿತ್ರ ಅವರು 2019ರಲ್ಲಿ ರಾಜಕೀಯಕ್ಕೆ ಬಂದರು. ಅತಿ ಕಡಿಮೆ ಅವಧಿಯಲ್ಲಿ ಪಕ್ಷದ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಇವರು, ಅಸನ್ಸೋಲ್ ದಕ್ಷಿಣ ಕ್ಷೇತ್ರದಿಂದ ಸತತ ಎರಡನೇ ಬಾರಿ ಜಯ ಸಾಧಿಸಿದ್ದಾರೆ.

3 ನಿಸಿತ್ ಪ್ರಮಾಣಿಕ್

ಉತ್ತರ ಬಂಗಾಳದ ಯುವ ಶಕ್ತಿ ಎಂದೇ ಗುರುತಿಸಲ್ಪಟ್ಟಿರುವ ನಿಸಿತ್, ಕೇವಲ 35ನೇ ವಯಸ್ಸಿಗೆ ಕೇಂದ್ರ ಸಚಿವರಾದವರು. ಉತ್ತರ ಬಂಗಾಳದ ರಾಜವಂಶಿ ಸಮುದಾಯದ ಪ್ರಭಾವಿ ನಾಯಕರಾದ ಇವರು, ಗೃಹ ಮತ್ತು ಕ್ರೀಡಾ ಇಲಾಖೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಇವರ ಸೇರ್ಪಡೆಯು ಉತ್ತರ ಬಂಗಾಳದ ಅಭಿವೃದ್ಧಿಗೆ ಹೊಸ ವೇಗ ನೀಡಲಿದೆ.

4 ಅಶೋಕ್ ಕೀರ್ತನಿಯಾ

ಉತ್ತರ 24 ಪರಗಣ ಜಿಲ್ಲೆಯ ಬಂಗಾಂವ್ ಉತ್ತರ ಕ್ಷೇತ್ರದ ಶಾಸಕರಾದ ಇವರು ಮಟುವಾ ಸಮುದಾಯದ ಪ್ರಬಲ ಧ್ವನಿ. ವ್ಯಾಪಾರ ಹಿನ್ನೆಲೆಯಿಂದ ಬಂದ ಇವರು ಪಕ್ಷದ ಸಾಂಘಿಕ ಕೆಲಸಗಳಲ್ಲಿ ಮುಂಚೂಣಿಯಲ್ಲಿದ್ದರು. ಮಟುವಾ ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಇವರ ಪಾತ್ರ ಪ್ರಮುಖವಾಗಿದೆ.

5 ಕ್ಷುದಿರಾಮ್ ತುಡು

ಬಂಕುರಾ ಜಿಲ್ಲೆಯ ರಾಣಿಬಂಧ್ ಕ್ಷೇತ್ರವನ್ನು ಪ್ರತಿನಿಧಿಸುವ ಕ್ಷುದಿರಾಮ್ ಅವರು ಪ್ರಬಲ ಬುಡಕಟ್ಟು ನಾಯಕ. ಜಂಗಲ್ ಮಹಲ್ ಪ್ರದೇಶದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಇವರಿಗೆ ಸಚಿವ ಸ್ಥಾನ ನೀಡಿರುವುದು ಬಿಜೆಪಿಯ ಸಾಮಾಜಿಕ ನ್ಯಾಯದ ಭಾಗವಾಗಿದೆ. ಬುಡಕಟ್ಟು ಸಮುದಾಯಗಳನ್ನು ಸರ್ಕಾರದ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಇವರ ಮೇಲಿದೆ.

ಈ ಐವರು ಸಚಿವರ ತಂಡವು ಸುವೇಂದು ಅಧಿಕಾರಿ ಅವರ ನೇತೃತ್ವದಲ್ಲಿ ಸೋನಾರ್ ಬಾಂಗ್ಲಾ ನಿರ್ಮಾಣದ ಗುರಿ ಹೊಂದಿದೆ. ಬಂಗಾಳದ ಕೈಗಾರಿಕೀಕರಣ ಮತ್ತು ಕೇಂದ್ರ ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವುದು ಈ ಹೊಸ ಸರ್ಕಾರದ ಮುಂದಿರುವ ದೊಡ್ಡ ಜವಾಬ್ದಾರಿಗಳಾಗಿವೆ.

ಕಿರುಸುದ್ದಿ

ಭಾರತ-ಆಫ್ರಿಕಾ ನಡುವಿನ ಸಂಬಂಧ ವೃದ್ಧಿಗೆ ಸಿದ್ಧತೆ

ಹೊಸದಿಲ್ಲಿ: ಭಾರತ ಆಫ್ರಿಕಾದೊಂದಿಗಿನ ತನ್ನ ಸಂಬಂಧ ಮತ್ತಷ್ಟು ಬಲಪಡಿಸುವ ಮಹತ್ವಾಕಾಂಕ್ಷೆ ಮಾರ್ಗಸೂಚಿಯನ್ನು ಮೇ 31ರಂದು ನಡೆಯುವ ನಿರ್ಣಾಯಕ ಶೃಂಗಸಭೆಯಲ್ಲಿ ಅನಾವರಣಗೊಳಿಸಲು ಸಜ್ಜಾಗಿದೆ. ಇದು ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಏರಿಳಿತಗಳ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಗುರಿ ಹೊಂದಿದೆ. ದಿಲ್ಲಿಯಲ್ಲಿ ನಡೆಯಲಿರುವ ಭಾರತ -ಆಫ್ರಿಕಾ ಶೃಂಗಸಭೆಯಲ್ಲಿ ಗಣನೀಯ ಸಂಖ್ಯೆಯ ಆಫ್ರಿಕನ್ ರಾಷ್ಟ್ರಗಳ ಉನ್ನತ ನಾಯಕರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಶೃಂಗಸಭೆಯು ಮುಖ್ಯವಾಗಿ ಆರ್ಥಿಕತೆ ಮತ್ತು ವ್ಯಾಪಾರ, ಕೃಷಿ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವತ್ತ ಗಮನ ಹರಿಸುತ್ತದೆ.

ಅನಿಲ್ ಅಂಬಾನಿ ಒಡೆತನದ ಕಂಪನಿ ಮೇಲೆ ಸಿಬಿಐ ದಾಳಿ

ಮುಂಬೈ: ಅನಿಲ್ ಅಂಬಾನಿ ಒಡೆತನದ ಹಲವು ಕಂಪನಿಗಳ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ (ಸಿಬಿಐ) ಮುಂಬೈನ 17 ಸ್ಥಳಗಳ ಮೇಲೆ ದಾಳಿ ನಡೆಸಿದೆ. ದಾಳಿ ರಿಲಯನ್ಸ್ ಎಡಿಎ ಗ್ರೂಪ್ ಕಂಪನಿಗಳಾದ ರಿಲಯನ್ಸ್ ಟೆಲಿಕಾಂ ಲಿಮಿಟೆಡ್, ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್ ಮತ್ತು ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ ಮತ್ತು ಅವುಗಳ ನಿರ್ದೇಶಕರ ವಿರುದ್ಧ ದಾಖಲಾಗಿರುವ ಪ್ರಕರಣಗಳೂ ಒಳಗೊಂಡಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಸಿಬಿಐ, ಸಾವಿರಾರು ಕೋಟಿ ರೂಪಾಯಿಗಳ ವಂಚನೆಗಳಿಗೆ ಸಂಬಂಧಿಸಿದಂತೆ ವಿವಿಧ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಎಲ್‌ಐಸಿ ಸಲ್ಲಿಸಿದ ದೂರುಗಳ ಆಧಾರದ ಮೇಲೆ ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಸಮೂಹದ ವಿರುದ್ಧ ಏಳು ಪ್ರಕರಣಗಳನ್ನು ದಾಖಲಿಸಿತ್ತು.

ದಾಳಿ ಸಾಧ್ಯತೆ: ದಿಲ್ಲಿ ಬಿಜೆಪಿ ಕಚೇರಿ ಸುತ್ತ ಭದ್ರತೆ ಹೆಚ್ಚಳ

ಹೊಸದಿಲ್ಲಿ: ದಿಲ್ಲಿಯ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಚೇರಿಯ ಮೇಲೆ ಸಂಭಾವ್ಯ ದಾಳಿಯ ಬಗ್ಗೆ ಎಚ್ಚರಿಕೆ ನೀಡಲಾಗಿದ್ದು, ಈ ಹಿನ್ನಲ್ಲೆ ಭದ್ರತೆಯನ್ನು ಹೆಚ್ಚಿಸಲಾಗಿದೆ. ದಾಳಿಕೋರರು ಡಿಡಿಯು ಮಾರ್ಗದಲ್ಲಿರುವ ದಿಲ್ಲಿ ಬಿಜೆಪಿ ಪ್ರಧಾನ ಕಚೇರಿ ಮತ್ತು ಆ ಪ್ರದೇಶದ ಇತರ ಸರ್ಕಾರಿ ಕಚೇರಿಗಳನ್ನು ಗುರಿಯಾಗಿಸುವ ಸಾಧ್ಯತೆಯಿದೆ ಎಂದು ಗುಪ್ತಚರ ವರದಿಯಿಂದ ತಿಳಿದು ಬಂದಿದೆ. ಗುಪ್ತಚರ ಮಾಹಿತಿ ಬೆನ್ನಲ್ಲೇ ತಕ್ಷಣ ಭದ್ರತಾ ಸಂಸ್ಥೆಗಳನ್ನು ಹೈ ಅಲರ್ಟ್‌ನಲ್ಲಿ ಇರಿಸಲಾಗಿದೆ.

ಪಿಎಂಎಲ್‌ಎ ಪ್ರಕರಣ: ಆಪ್ ಸಚಿವನ ಬಂಧನ

ಚಂಡೀಗಢ: ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಅವರನ್ನು ಜಾರಿ ನಿರ್ದೇಶನಾಲಯ ಶನಿವಾರ ಬಂಧಿಸಿದೆ.

ಅಧಿಕಾರಿಗಳ ಪ್ರಕಾರ, ಅರೋರಾ(62) ಅವರನ್ನು ಚಂಡೀಗಢದಲ್ಲಿರುವ ಅವರ ಅಧಿಕೃತ ನಿವಾಸದಲ್ಲಿ ಮುಂಜಾನೆ ದಾಳಿ ನಡೆಸಿದ ನಂತರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅನ್ವಯದಲ್ಲಿ ವಶಕ್ಕೆ ತೆಗೆದುಕೊಳ್ಳಲಾಗಿದೆ.



ಈ ಕಾರ್ಯಾಚರಣೆಯ ಭಾಗವಾಗಿ ಇಡಿ ಉತ್ತರ ಭಾರತದಾದ್ಯಂತ ಐದು ಸ್ಥಳಗಳಲ್ಲಿ ಶೋಧ ನಡೆಸಿದ್ದು, ಇದರಲ್ಲಿ ದಿಲ್ಲಿಯ ಎರಡು ಸ್ಥಳಗಳು ಮತ್ತು ಗುರುಗ್ರಾಮದ ಉದ್ಯೋಗ್ ವಿಹಾರದಲ್ಲಿರುವ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಎಂಬ ಕಂಪನಿ ಸೇರಿವೆ. ಇಡಿ ಪಿಎಂಎಲ್‌ಎ ಕ್ರಿಮಿನಲ್ ವಿಭಾಗಗಳಲ್ಲಿ ಹೊಸ ಪ್ರಕರಣವನ್ನು ದಾಖಲಿಸಿದ ನಂತರ ಈ ದಾಳಿಗಳು ನಡೆದಿವೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ನಾಗರಿಕ ನಿಬಂಧನೆಗಳಲ್ಲಿ ಅರೋರಾ ಅವರಿಗೆ ಸಂಬಂಧಿತ ಘಟಕಗಳ ಮೇಲೆ ಕಳೆದ ತಿಂಗಳು ದಾಳಿ ನಡೆಸಿತ್ತು.

ಈ ಕ್ರಮದ ಭಾಗವಾಗಿ, ಅಕ್ರಮ ಮಾರಾಟ ಮತ್ತು ರಫ್ತುಗಳ ಮೂಲಕ ಫೆಮಾ ಉಲ್ಲಂಘನೆಯ ಆರೋಪದ ಮೇಲೆ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್, ಅದರ ನಿರ್ದೇಶಕ ಅರೋರಾ ಮತ್ತು ಅವರೊಂದಿಗೆ ಸಂಬಂಧ ಹೊಂದಿರುವ ಘಟಕಗಳ ಚರ ಮತ್ತು ಸ್ಥಿರ ಆಸ್ತಿಗಳನ್ನು ಇಡಿ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಭ್ರಷ್ಟಾಚಾರ: ಮೂರನೆ ಸ್ಥಾನದಲ್ಲಿದೆ ಕರ್ನಾಟಕ

ಹೊಸದಿಲ್ಲಿ: ಭ್ರಷ್ಟಾಚಾರದಲ್ಲಿ ತೀರಾ ಮುಂಚೂಣಿಯಲ್ಲಿರುವ ಮೂರು ರಾಜ್ಯಗಳ ಪೈಕಿ ಕರ್ನಾಟಕ ತೃತೀಯ ಸ್ಥಾನದಲ್ಲಿದೆ. 2024ರಲ್ಲಿ ಕರ್ನಾಟಕದಲ್ಲಿ ದಾಖಲಾಗಿರುವ ಭ್ರಷ್ಟಾಚಾರ ಪ್ರಕರಣಗಳು 334 ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿರುವ ಅಮಕಿ-ಅಂಶ ಹೇಳಿದೆ.

721 ಪ್ರಕರಣಗಳೊಂದಿಗೆ ಭ್ರಷ್ಟಾಚಾರದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ, 374 ಭ್ರಷ್ಟಾಚಾರ ಪ್ರಕರಣಗಳೊಂದಿಗೆ ತಮಿಳುನಾಡು ದ್ವಿತೀಯ ಸ್ಥಾನದಲ್ಲಿದ್ದರೆ, ಕರ್ನಾಟಕ ತೃತೀಯ ಸ್ಥಾನಿಯಾಗಿದೆ. ಅನಧಿಕೃತ ಆಸ್ತಿಪಾಸ್ತಿ ಪ್ರಕರಣಗಳಲ್ಲಿ ಕರ್ನಾಟಕ 75 ಪ್ರಕರಣಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ನಂತರ 62 ಪ್ರಕರಣಗಳೊಂದಿಗೆ ಒಡಿಶಾ ದ್ವಿತೀಯ ಸ್ಥಾನದಲ್ಲಿದೆ. 44 ಪ್ರಕರಣಗಳೊಂದಿಗೆ ಅಸ್ಸಾಂ ತೃತೀಯ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ 2023ರಲ್ಲಿ ದಾಖಲಾದ ಭ್ರಷ್ಟಾಚಾರ ಪ್ರಕರಣಗಳು 362, 2022ರಲ್ಲಿ ಈ ಸಂಖ್ಯೆ 389 ಇತ್ತು. ಲೋಕಾಯುಕ್ತದ ಮರುಸ್ಥಾಪನೆ ನಂತರದಲ್ಲಿ ಒಂಬುಡ್ಸ್‌ಮನ್ ಸ್ಥಳೀಯವಾಗಿ ಹಾಗೂ ತಳಸ್ತರಗಳಲ್ಲಿ ಬೇಹುಗಾರಿಕೆ ಮುಖೇನ ಮಾಹಿತಿ ಕ್ರೋಢೀಕರಿಸಿ, ಗ್ರೌಂಡ್ ಲೆವೆಲ್ ರಿಸರ್ಚ್‌ನೊಂದಿಗೆ ಹಂಚಿಕೊಳ್ಳುವರು. ನಂತರ ಶಂಕಿತ ಭ್ರಷ್ಟ ಅಧಿಕಾರಿಗಳ ವಿರುದ್ಧ ದಾಳಿ ನಡೆಯುವುದು. ನಿಯತ ದಾಳಿ ಕಾರ್ಯಾಚರಣೆ ಪರಿಣಾಮ, ದಾಖಲಾಗುತ್ತಿರುವ ಭ್ರಷ್ಟಾಚಾರ ಪ್ರಕರಣಗಳ ಸಂಖ್ಯೆ ಹೆಚ್ಚಿದೆ. 334 ಭ್ರಷ್ಟಾಚಾರ ಪ್ರಕರಣಗಳಲ್ಲಿ 237 ಪ್ರಕರಣಗಳು ಲಂಚ ಸ್ವೀಕಾರ ಸಂದರ್ಭ ಅಧಿಕಾರಿಗಳು ಸಿಕ್ಕಿ ಬಿದ್ದ ಪ್ರಕರಣಗಳಿವೆ.

ದೇಶದ ಕಟ್ಟಕಡೆ ವ್ಯಕ್ತಿಗೂ ನ್ಯಾಯದಾನಕ್ಕೆ ನೆರವು

ನಾಂಗ್‌ಪೋಹ್(ಮೇಘಾಲಯ): ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯದಾನಕ್ಕಾಗಿ ಕಾನೂನು ನೆರವು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಸಮಗ್ರಗೊಳಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ನ್ಯಾ.ಸೂರ್ಯಕಾಂತ್ ಹೇಳಿದ್ದಾರೆ. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರೂ ಆಗಿರುವ ಸಿಜೆಐ ಸೂರ್ಯಕಾಂತ್ ಮೇಘಾಲಯದ ರಿ ಭೋಯಿ ಜಿಲ್ಲೆಯಲ್ಲಿ ಜಾಗೃತಿ ಶಿಬಿರವನ್ನು ಉದ್ದೇಶಿಸಿ ಈ ರೀತಿ ಅಭಿಪ್ರಾಯಿಸಿದರು.

ಕಲ್ಯಾಣ ಯೋಜನೆಗಳು ತಳಸ್ತರದ ಜನರಿಗೂ ತಲುಪುವಂತಾಗಲು ಆರೋಗ್ಯ ಸೇವೆಗಳು, ಶೈಕ್ಷಣಿಕ ಬೆಂಬಲ ,ಜೀವನೋಪಾಯದ ಅವಕಾಶಗಳು, ಪುನರ್ವಸತಿ ನೆರವು ಇತ್ಯಾದಿಗಳನ್ನು ಇಂತಹ ಶಿಬಿರಗಳ ಮುಖೇನ ಸಂಯೋಜಿಸಲಾಗುತ್ತದೆ . ಸರಕಾರದ ಇಲಾಖೆಗಳು, ಸಂಘಟನೆಗಳು, ಕಾನೂನು ಸಂಸ್ಥೆಗಳು ಅನುಷ್ಠಾನಿಸಿರುವ ಪ್ರಸ್ತುತ ಎಲ್ಲಾ ಕಲ್ಯಾಣ ಯೋಜನೆಗಳು ಒಂದೇ ಸೂರಿನಡಿ ಎಲ್ಲರಿಗೂ ಲಭಿಸುವಂತಾಗಬೇಕು. ಈ ನಿಟ್ಟಿನಲ್ಲಿ ಶ್ರಮಿಸುವಂತೆ ಅಧಿಕಾರಿವರ್ಗಕ್ಕೆ ಸಿಜೆಐ ಕರೆ ನೀಡಿದರು.

ಮೇಘಾಲಯ ಉಚ್ಚ ನ್ಯಾಯಾಲಯ ಮತ್ತು ಮೇಘಾಲಯ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯ ಸರಕಾರದ ಸಹಯೋಗದೊಂದಿಗೆ, ಬ್ರಿಡ್ಜಿಂಗ್ ದ ಗ್ಯಾಪ್ ಪ್ರಧಾನ ವಿಷಯವಾಗಿರುವಂತೆ, ಎನ್‌ಎಎಲ್‌ಎಸ್‌ಎ ಸ್ಕೀಮ್‌ಗಳು ಮತ್ತು ಸರಕಾರದ ಕಲ್ಯಾಣ ಯೋಜನೆಗಳ ಕುರಿತು ರಿ ಭೋಯಿ ಜಿಲ್ಲೆಯ ಮಂಗಾರ್‌ನಲ್ಲಿ ಬೃಹತ್ ಶಿಬಿರ -ಜಾಗೃತಿ ಕಾರ್ಯಕ್ರಮ ಆಯೋಜಿಸಿತ್ತು.

ಹಾರ್ಮುಜ್ ಬಳಿ ಭಾರತೀಯ ನಾವಿಕನ ಸಾವು

ದುಬೈ: ಹಾರ್ಮುಜ್ ಜಲಸಂಧಿಯ ಬಳಿ ಶುಕ್ರವಾರ ವಾಣಿಜ್ಯ ನೌಕೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಓರ್ವ ಭಾರತೀಯ ನಾವಿಕ ಮೃತಪಟ್ಟಿದ್ದು, ಉಳಿದ 17 ಮಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ. ದುಬೈನಿಂದ ಇರಾನ್‌ನ ಬಂದರ್ ಅಬ್ಬಾಸ್‌ಗೆ ವಾಣಿಜ್ಯ ಸರಕುಗಳನ್ನು ಸಾಗಿಸುತ್ತಿದ್ದ ನೌಕೆಯಲ್ಲಿ ಈ ಬೆಂಕಿ ಕಾಣಿಸಿಕೊಂಡಿದೆ. ಒಟ್ಟು 18 ಸದಸ್ಯರಿದ್ದ ಈ ಹಡಗಿನ ಸಿಬ್ಬಂದಿಯ ರಕ್ಷಣೆಗೆ ಯುನೈಟೆಡ್ ಅರಬ್ ಎಮಿರೇಟ್‌ನ ತುರ್ತು ರಕ್ಷಣಾ ತಂಡಗಳು ಮತ್ತು ಹತ್ತಿರದಲ್ಲಿದ್ದ ಇತರ ವಾಣಿಜ್ಯ ನೌಕೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ. ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದ್ದ 17 ನಾವಿಕರನ್ನು ಸುರಕ್ಷಿತವಾಗಿ ಹೊರತರಲಾಗಿದೆಯಾದರೂ, ಓರ್ವ ನಾವಿಕ ಗಂಭೀರ ಗಾಯಗಳಿಂದಾಗಿ ಮೃತಪಟ್ಟಿದ್ದಾರೆ. ರಕ್ಷಿಸಲಾದ ಉಳಿದ ನಾವಿಕರನ್ನು ಹೆಚ್ಚಿನ ವೈದ್ಯಕೀಯ ತಪಾಸಣೆಗಾಗಿ ಹತ್ತಿರದ ಬಂದರಿಗೆ ರವಾನಿಸಲಾಗಿದೆ.

ಎಫ್‌ಪಿವಿ ಸರಣಿಯ ವೇಗದ ಗಸ್ತು ಹಡಗು ನಿಯೋಜನೆ

ಕರಾವಳಿ ಪಡೆಗೆ ಅಚಲ ಬಲ

ಹೊಸದಿಲ್ಲಿ: ವೇಗದ ಗಸ್ತು ಹಡಗು(ಎಫ್‌ಪಿವಿ) ಅಚಲ್ ಅನ್ನು ಭಾರತೀಯ ಕರಾವಳಿ ಪಡೆಗೆ ನಿಯೋಜಿಸಲಾಗಿದ್ದು, ಇದು ಕಡಲ ಪಡೆಯ ಕಾರ್ಯಾಚರಣೆಯ ಸಾಮರ್ಥ್ಯ ಹೆಚ್ಚಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋವಾ ಶಿಪ್‌ಯಾರ್ಡ್ ಲಿಮಿಟೆಡ್(ಜಿಎಸ್‌ಎಲ್) ಕರಾವಳಿ ಕಾವಲು ಪಡೆಗಾಗಿ ನಿರ್ಮಿಸುತ್ತಿರುವ ಎಂಟು ಎಫ್‌ಪಿವಿಗಳ ಸರಣಿಯಲ್ಲಿ ಅಚಲ್ ಐದನೇಯದಾಗಿದೆ. ಹೊಸ ತಲೆಮಾರಿನ ಅದಮ್ಯಾ ವರ್ಗದ ವೇಗದ ಗಸ್ತು ಹಡಗನ್ನು ಗೋವಾ ಲಿಮಿಟೆಡ್‌ನ ಐಸಿಜಿಗೆ ನಿಯೋಜಿಸಲಾಗಿದ್ದು, ಇದು ಗಮನಾರ್ಹ ಸಾಮರ್ಥ್ಯ ವರ್ಧನೆಯನ್ನು ಸೂಚಿಸುತ್ತದೆ ಎಂದು ಪಡೆಯ ವಕ್ತಾರರು ತಿಳಿಸಿದ್ದಾರೆ.

ರಕ್ಷಣಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮಹಾನಿರ್ದೇಶಕ (ಸ್ವಾಧೀನ) ಎ. ಅನ್ಬರಸು ಅವರು ಕೋಸ್ಟ್ ಗಾರ್ಡ್ ಪ್ರದೇಶದ (ವಾಯುವ್ಯ) ಕಮಾಂಡರ್ ಇನ್ಸ್‌ಪೆಕ್ಟರ್ ಜನರಲ್ ಟೇಕೂರ್ ಶಶಿ ಕುಮಾರ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು ಮತ್ತು ಜಿಎಸ್‌ಎಲ್‌ನ ಪ್ರತಿನಿಧಿಗಳ ಸಮ್ಮುಖದಲ್ಲಿ ಈ ಹಡಗನ್ನು ಔಪಚಾರಿಕವಾಗಿ ಸೇವೆಗೆ ನಿಯೋಜಿಸಿಸಲಾಗಿದೆ. ಈ ಹಡಗು ಗುಜರಾತಿನ ವಾಡಿನಾರ್‌ನಲ್ಲಿ ನೆಲೆಗೊಳ್ಳಲಿದ್ದು, ಕೋಸ್ಟ್ ಗಾರ್ಡ್ ಪ್ರದೇಶದ (ವಾಯುವ್ಯ) ಕಮಾಂಡರ್‌ನ ಆಡಳಿತಾತ್ಮಕ ಮತ್ತು ಕಾರ್ಯಾಚರಣೆಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ವಕ್ತಾರರು ತಿಳಿಸಿದ್ದಾರೆ. ಈ ಹಡಗು ಕಣ್ಗಾವಲು, ಶೋಧ ಮತ್ತು ಪಾರುಗಾಣಿಕಾ (ಎಸ್‌ಎಆರ್), ಕಳ್ಳಸಾಗಣೆ ವಿರೋಧಿ ಕಾರ್ಯಾಚರಣೆಗಳು ಮತ್ತು ಮಾಲಿನ್ಯ ಪ್ರತಿಕ್ರಿಯೆ ಸೇರಿದಂತೆ ವ್ಯಾಪಕ ಶ್ರೇಣಿಯ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತದೆ, ಇದು ಭಾರತದ ಪೂರ್ವ ಕಡಲ ಗಡಿಯನ್ನು ರಕ್ಷಿಸುವಲ್ಲಿ ಭಾರತೀಯ ಕೋಸ್ಟ್ ಗಾಡ್‌ನ ಪಾತ್ರವನ್ನು ಬಲಪಡಿಸುತ್ತದೆ.



ನೌಕಾಪಡೆ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಸ್ವಾಮಿನಾಥನ್ ನೇಮಕ

ಲೆ. ಜ. ಸುಬ್ರಮಣಿ ನೂತನ ಸಿಡಿಎಸ್

ಹೊಸದಿಲ್ಲಿ: ಭಾರತೀಯ ಸಶಸ್ತ್ರ ಪಡೆಗಳ ಉನ್ನತ ಹುದ್ದೆಗಳಿಗೆ ಕೇಂದ್ರ ಸರ್ಕಾರ ಶನಿವಾರ ಪ್ರಮುಖ ನೇಮಕಾತಿಗಳನ್ನು ಪ್ರಕಟಿಸಿದೆ. ದೇಶದ ರಕ್ಷಣಾ ಪಡೆಗಳ ಮುಂದಿನ ಮುಖ್ಯಸ್ಥರಾಗಿ(ಸಿಡಿಎಸ್) ಲೆಫ್ಟಿನೆಂಟ್ ಜನರಲ್ ಎನ್. ಎಸ್. ರಾಜಾ ಸುಬ್ರಮಣಿ(ನಿವೃತ್ತ) ಮತ್ತು ನೌಕಾಪಡೆಯ ಮುಂದಿನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ನೇಮಕ ಮಾಡಲಾಗಿದೆ.

ಪ್ರಸ್ತುತ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಮೇ 30ರಂದು ನಿವೃತ್ತರಾಗಲಿದ್ದು, ಅವರ ಸ್ಥಾನವನ್ನು ಲೆ. ಜನರಲ್ ಸುಬ್ರಮಣಿ ಅಲಂಕರಿಸಲಿದ್ದಾರೆ. ಇವರು ಸೈನಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿಯೂ ಜವಾಬ್ದಾರಿ ನಿರ್ವಹಿಸಲಿದ್ದಾರೆ. ಸಶಸ್ತ್ರ ಪಡೆಗಳಲ್ಲಿ ಸಮಗ್ರ ಸೇನಾ ಪಡೆಗಳ ಏಕೀಕರಣ ಯೋಜನೆಯನ್ನು ಜಾರಿಗೆ ತರುವುದು ಇವರ ಪ್ರಮುಖ ಗುರಿ. ಅದೇ ರೀತಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ, ಮೇ 31ರಂದು ನಿವೃತ್ತರಾಗಲಿದ್ದು, ಅಂದೇ ವೈಸ್ ಅಡ್ಮಿರಲ್ ಸ್ವಾಮಿನಾಥನ್ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಲೆ. ಜನರಲ್ ಸುಬ್ರಮಣಿ: ಜುಲೈ 31, 2024ರಂದು ಸೇನಾಪಡೆಯ ಉಪಮುಖ್ಯಸ್ಥರಾಗಿ ನಿವೃತ್ತರಾಗಿದ್ದ ಸುಬ್ರಮಣಿ, ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿಯ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 1985 ಡಿಸೆಂಬರ್ 14ರಂದು ಗರ್ವಾಲ್ ರೈಫಲ್ಸ್‌ಗೆ ಸೇರ್ಪಡೆಗೊಳ್ಳುವ ಮೂಲಕ ಸೇನಾ ವೃತ್ತಿ ಆರಂಭಿಸಿದ್ದ ಇವರು, ಲಂಡನ್‌ನ ಕಿಂಗ್ಸ್ ಕಾಲೇಜ್‌ನಿಂದ ಎಂ.ಎ ಪದವಿ ಪಡೆದಿದ್ದಾರೆ.





ನೌಕಾಪಡೆಗೆ ನೂತನ ಸಾರಥಿ

1987 ಜುಲೈ 1ರಂದು ನೌಕಾಪಡೆಗೆ ಸೇರಿದ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಕಮ್ಯುನಿಕೇಶನ್ ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ ವಿಭಾಗದಲ್ಲಿ ತಜ್ಞರು. ಐಎನ್‌ಎಸ್ ವಿಕ್ರಮಾದಿತ್ಯ ಸೇರಿದಂತೆ ವಿವಿಧ ಯುದ್ಧ ನೌಕೆಗಳ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ. ಇವರು ಮುಂಬೈ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಹಾಗೂ ಲಂಡನ್‌ನ ಕಿಂಗ್ಸ್ ಕಾಲೇಜ್‌ನಿಂದ ರಕ್ಷಣಾ ಅಧ್ಯಯನದಲ್ಲಿ ಎಂ.ಎ ಪದವಿ ಪಡೆದಿದ್ದಾರೆ.


ಕಿರುಸುದ್ದಿ

ಪಡುಕುತ್ಯಾರು ಶ್ರೀ ಸರಸ್ವತೀ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಬಿ. ಸೂರ್ಯಕುಮಾರ್ ಆಯ್ಕೆ




ಕಾಪು: ಪಡುಕುತ್ಯಾರು ಶ್ರೀ ಸರಸ್ವತಿ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಇದರ ಮೊದಲ ಅಧ್ಯಕ್ಷರಾಗಿ ಬಿ. ಸೂರ್ಯಕುಮಾರ್ ಹಳೆಯಂಗಡಿ ಹಾಗೂ ಉಪಾಧ್ಯಕ್ಷರಾಗಿ ಡಾ.ಎಸ್.ಆರ್. ಹರೀಶ್ ಆಚಾರ್ಯ ಮಂಗಳೂರು ಇವರು ಚುನಾಯಿತರಾಗಿರುತ್ತಾರೆ. ಶ್ರೀಮದ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತಿ ಪೀಠಾಧೀಶ್ವರ ಪರಮ ಪೂಜ್ಯ ಜಗದ್ಗುರು ಅನಂತ ಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ನೂತನ ನಿರ್ದೇಶಕರರಾಗಿ ಅರವಿಂದ ವೈ. ಆಚಾರ್ಯ ಬೆಳುವಾಯಿ, ಪ್ರಕಾಶ್ ಆಚಾರ್ಯ ಕುಂಟಾಡಿ , ಎಂ.ಪಿ. ಮೋಹನ ಆಚಾರ್ಯ ಉಡುಪಿ, ಕೃಷ್ಣ ಎನ್. ಆಚಾರ್ಯ ಉದ್ಯಾವರ, ನಾಗರಾಜ ಆಚಾರ್ಯ ಕಿನ್ನಿಗೋಳಿ, ಭರತ್ ಆರ್. ಆಚಾರ್ಯ, ಬಿ.ಕೆ. ಹರ್ಷರಾಜ್ ಆಚಾರ್ಯ ಎಲ್ಲೂರು, ಸಂಧ್ಯಾ ಲಕ್ಷ್ಮಣ ಆಚಾರ್ಯ ಉಡುಪಿ, ತ್ರಿವೇಣಿ ವಿಶ್ವೇಶ್ವರ ಪುರೋಹಿತ್ ಬಾಳಿಲ ಆಯ್ಕೆಯಾಗಿರುತ್ತಾರೆ. ಪ್ರತಿಷ್ಠಾನದ ಅಧ್ಯಕ್ಷರಾದ ವಿ. ಶ್ರೀಧರ ಆಚಾರ್ಯ ಒಡೆಯರ ಹೋಬಳಿ ಹಾಗೂ ಪ್ರಧಾನ ಕಾರ್ಯದರ್ಶಿಯಾದ ಲೋಕೇಶ್ ಎಂ.ಬಿ ಆಚಾರ್ ಕಂಬಾರು ಇವರ ಮಾರ್ಗದರ್ಶನದಲ್ಲಿ ಈ ಚುನಾವಣಾ ಪ್ರಕ್ರಿಯೆಯು ನಡೆಯಿತು.

ಗಾಳಿ ಮಳೆ: ಮನೆಗೆ ಹಾನಿ



ಕಾರ್ಕಳ: ಕಾರ್ಕಳ ತಾಲೂಕಿನದ್ಯಾಂತ ಶನಿವಾರ ಸಂಜೆ ಬಾರೀ ಗುಡುಗು ಸಹಿತ ಮಳೆ ಬಿದ್ದಿದೆ. ಗಾಳಿ ಮಳೆಯಿಂದ ನಂದಳಿಕೆ ಗ್ರಾಮದ ಬೈರಾಬೆಟ್ಟು ಎಂಬಲ್ಲಿ ಕುಶಲ ಪೂಜಾರ್ತಿ ಅವರ ವಾಸದ ಮನೆಗೆ ಗಾಳಿ ಮಳೆಯಿಂದ ಮೇಲ್ಛಾವಣಿ ಹಾನಿಯಾಗಿ ನಷ್ಟ ಸಂಭವಿಸಿದೆ.

ಕುಳಾಯಿ ಮಹಿಳಾ ಮಂಡಲ: ಶ್ರವಣ ತಪಾಸಣಾ ಶಿಬಿರ



ಸುರತ್ಕಲ್ : ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಇತ್ತೀಚಿಗೆ ಕುಳಾಯಿ ಮಹಿಳಾ ಮಂಡಲದ ಸಭಾಂಗಣದಲ್ಲಿ ಜರಗಿತು. ರೋಟರಿ ಕ್ಲಬ್ ಬೈಕಂಪಾಡಿ ಇದರ ಕಾರ್ಯದರ್ಶಿಯಾದ ಶಿವಪ್ರಸಾದ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಟೀಮ್ ಈಶ್ವರ್ ಮಲ್ಪೆ ತಂಡದ ಸಂಚಾಲಕ ಲವಕುಮಾರ್ , ಮಹಿಳಾ ಮಂಡಲ ಕುಳಾಯಿ ಇದರ ಅಧ್ಯಕ್ಷೆ ರೇವತಿ ನವೀನ್, ಮಾಜಿ ಅಧ್ಯಕ್ಷೆ ರಮಾ ವೆಂಕಟ್ರಾವ್, ರೋಟರಿ ಕ್ಲಬ್ ಬೈಕಂಪಾಡಿ ಗಂಗಾಧರ್ ಬಂಜನ್, ರಮೇಶ್ ಅಳವೆ, ಡಾ. ಅಂಕಿತ್ ಕಲ್ಮಾಡಿ ಹಾಗೂ ಮಹಿಳಾ ಮಂಡಲದ ಸರ್ವ ಸದಸ್ಯೆಯರು ಭಾಗವಹಿಸಿದ್ದರು. ಕಲಾವತಿ ಸ್ವಾಗತಿಸಿ, ವಂದಿಸಿದರು.

ಉಪ್ಪುಂದ ಶ್ರೀ ಭದ್ರಕಾಳಿ –ಭೂತರಾಯ ದೇವಳ ವರ್ಧಂತ್ಯುತ್ಸವ

ಭಕ್ತಿಯ ಪ್ರಾರ್ಥನೆಗೆ ದೇವರ ಅನುಗ್ರಹ ಪ್ರಾಪ್ತಿ



ಬೈಂದೂರು: ದೇವಾಲಯಗಳು ಸಗುಣೋಪಾಸನೆ ಮಾಡುವ ಪವಿತ್ರಸ್ಥಳ. ಇಲ್ಲಿನ ಅರ್ಚಕರು ವೇದ ಮಂತ್ರಗಳಿಂದ ನಿಯಮಾನುಸಾರ ಸಾತ್ವಿಕ ಕಾರ್ಯ ನಡೆಸಬೇಕು. ಉತ್ಸವಾದಿಗಳಿಂದ ಕ್ಷೇತ್ರದ ಅಭಿವೃದ್ಧಿ ಕಾಣಬಹುದು. ಅಲ್ಲದೇ ಭಕ್ತರ ಪಾಲುದಾರಿಕೆಯೂ ಮುಖ್ಯವಾಗಿರುತ್ತದೆ. ದೇವಳಗಳಲ್ಲಿ ನಡೆಯುವ ಕರ್ಮಕ್ಕೆ ವಿಶೇಷ ಫಲ ದೊರಕು ವುದ ಲ್ಲದೇ ಅಚಲವಾದ ನಂಬಿಕೆಯಿಂದ ಪ್ರಾರ್ಥಿಸಿದಲ್ಲಿ ದೇವರ ಪರಿಪೂರ್ಣ ಅನುಗ್ರಹ ವಾಗುತ್ತದೆ ಎಂದು ದಕ್ಷಿಣಾ ಏಮ್ನಾಯ ಶೃಂಗೇರಿ ಶಾರದಾ ಪೀಠಾಶ್ವರರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ತೀರ್ಥ ಮಹಾಸ್ವಾಮಿಗಳು ಹೇಳಿದ್ದಾರೆ.

ಉಪ್ಪುಂದ ಶ್ರೀ ಭದ್ರಕಾಳಿ ಮತ್ತು ಭೂತರಾಯ ದೇವಸ್ಥಾನದ 16ನೇ ವರ್ಷದ ವರ್ಧಂತ್ಯುತ್ಸವ ಹಾಗೂ ಕೋಟಿ ಕುಂಕುಮಾರ್ಚನೆ ಪ್ರಯುಕ್ತ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಯಾವುದೇ ಸಮಾಜ ಉದ್ಧಾರವಾಗಬೇಕಾದರೆ ಅಲ್ಲಿ ಆಚಾರ-ವಿಚಾರ, ದೇವರು, ಧರ್ಮ ವಿರಬೇಕು. ಆಗ ಮಾತ್ರ ಸಮಾಜದ ಸಮೃದ್ಧಿಯಾಗಿರಲು ಸಾಧ್ಯ ಎನ್ನುವುದು ತತ್ವಸಿದ್ಧಾಂತ. ಭಾರತೀಯ ಸಂಸ್ಕೃತಿ ನಮ್ಮ ಹಿರಿಯರ ಕೊಡುಗೆಯಾಗಿದ್ದು, ತಮ್ಮ ಪ್ರಾಣವನ್ನೂ ಲೆಕ್ಕಿಸದೇ ಸಂಸ್ಕೃತಿಯನ್ನು ಕಾಪಿಟ್ಟುಕೊಂಡು ಬಂದಿದ್ದಾರೆ. ನಮ್ಮ ಪೂರ್ವಜರು ದೇವರಿಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಉದ್ದೇಶದಿಂದ ಮಠ, ಮಂದಿರಗಳನ್ನು ನಿರ್ಮಾಣ ಮಾಡಿದ್ದು, ಇವುಗಳನ್ನು ನಾವುಗಳು ಉಳಿಸಿ ಬೆಳೆಸಬೇಕು ಎಂದರು.

ಆನಗಳ್ಳಿ ಚೆನ್ನಕೇಶವ ಗಾಯತ್ರಿ ಭಟ್ ಹಾಗೂ ಶಿರಾಲಿ ವೆಂಕಟಾಪುರದ ರಾಮಚಂದ್ರ ಭಟ್ ಅವರು ಧಾರ್ಮಿಕ ವಿಧಾನ ನೆರವೇರಿಸಿದರು. ಶೃಂಗೇರಿ ಮಠದ ಪ್ರಾಂತೀಯ ಧರ್ಮಾಧಿಕಾರಿ ಲೋಕೇಶ್ ಅಡಿಗ ಬಡಾಕೆರೆ ನಿರ್ವಹಿಸಿದರು. ಶಾಸಕ ಗುರುರಾಜ್ ಗಂಟಿಹೊಳೆ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಸ್. ಪ್ರಕಾಶ್ಚಂದ್ರ ಶೆಟ್ಟಿ, ಶ್ರೀ ವರಲಕ್ಷ್ಮಿ ಚಾರಿಟೇಬಲ್ ಟ್ರಸ್ಟ್‌ನ ಪ್ರವರ್ತಕ ಡಾ. ಗೋವಿಂದ ಬಾಬು ಪೂಜಾರಿ, ಜಿಪಂ ಮಾಜಿ ಸದಸ್ಯರಾದ ಎಸ್. ಮದನ್ ಕುಮಾರ್, ಗೌರಿ ದೇವಾಡಿಗ, ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ನಾಗೇಶ್ ಖಾರ್ವಿ, ಮೀನುಗಾರರ ಒಕ್ಕೂಟ ಅಧ್ಯಕ್ಷ ಕುಮಾರ್ ಖಾರ್ವಿ, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಲಕ್ಷ್ಮಣ ಖಾರ್ವಿ, ಉಪಾಧ್ಯಕ್ಷ ಶೇಖರ ಪೂಜಾರಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ರವಿ ಉಪ್ಪುಂದ ಸ್ವಾಗತಿಸಿ, ಆಚಾರ್ಯ ಕೇಶವ ಬೆಳ್ಳೆ ಕಾರ್ಯಕ್ರಮ ನಿರೂಪಿಸಿದರು.

> **ಶ್ಲಾಘನೀಯ**
>
> ಸದ್ಭಾವನೆ ಸದ್ಭಕ್ತಿ ಹಾಗೂ ಸಂಪ್ರೀತಿಯನ್ನು ಸೇರಿಸಿಕೊಂಡು ಸಮಸ್ತ ಹಿಂದು ಬಾಂಧವರು ಧಾರ್ಮಿಕ ಪೂಜೆ ಮುಖೇನ ಸಮ್ಮಿಲನಗೊಂಡಿರುವುದು ಶ್ಲಾಘನೀಯ. ಇಂದಿನ ಯುವಕರ ಮನಸ್ಥಿತಿಯನ್ನು ಅರ್ಥೈಸಿಕೊಂಡು ಸಮಾಜವನ್ನು ಬೆಳೆಸಬೇಕಾಗಿದೆ. ಯುವಕರ ಕೈಗೆ ಜವಾಬ್ದಾರಿಯನ್ನು ನೀಡಿದಾಗ ಮಾತ್ರ ಅವರ ಬದುಕು ಹಾಗೂ ಸಮಾಜ ಜಾಗೃತಗೊಳ್ಳುತ್ತದೆ.
>
> ■ ಶ್ರೀ ವಿಧುಶೇಖರ ಭಾರತೀತೀರ್ಥ ಮಹಾಸ್ವಾಮಿಗಳು, ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಶ್ವರರಾದ ಜಗದ್ಗುರು

ರೋಡ್ ರೋಲರ್ ಚಲಿಸಿ ಕಾರ್ಮಿಕನ ದುರ್ಮರಣ



ಉಪ್ಪಿನಂಗಡಿ: ರಸ್ತೆ ಕಾಮಗಾರಿಯ ಸಂದರ್ಭ ಬಿಸಿಲ ಬೇಗೆಗೆ ದಣಿದು ಮಲಗಿದ್ದ ಬಿಹಾರ ಮೂಲದ ಕಾರ್ಮಿಕನ ಮೇಲೆ ರೋಡ್ ರೋಲರ್ ಚಲಾಯಿಸಲ್ಪಟ್ಟ ಪರಿಣಾಮ ಕಾರ್ಮಿಕ ದಾರುಣವಾಗಿ ಸಾವನ್ನಪ್ಪಿದ ಘಟನೆ ಶನಿವಾರ ಉಪ್ಪಿನಂಗಡಿ ಗಾಂಧಿಪಾರ್ಕ್ ಬಳಿ ನಡೆದಿದೆ.

ಇಲ್ಲಿ ರಾಷ್ಟ್ರೀಯ ಹೆದ್ದಾರಿಯ ಚತುಷ್ಪಥ ಕಾಮಗಾರಿಯ ಸಲುವಾಗಿ ನಿರ್ಮಿಸಲಾದ ಸರ್ವೀಸ್ ರಸ್ತೆಯ ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದ್ದು, ಕಾಮಗಾರಿ ನಿರತ ಕಾರ್ಮಿಕ ಬಿಹಾರ ಮೂಲದ ರಾಮಚಂದ್ರ ಶಿಖಾರಿ (55) ಎಂಬವರು ಸರ್ವೀಸ್ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ರೋಡ್ ರೋಲರ್‌ನ ನೆರಳು ಆವರಿಸಿದ ಭಾಗದಲ್ಲಿ ರಸ್ತೆಯಲ್ಲಿ ಮಲಗಿದ್ದರೆನ್ನಲಾಗಿದೆ. ಈ ವೇಳೆ ರೋಲರ್ ಚಾಲಕ ನೇರವಾಗಿ ಬಂದವನೇ ರೋಲರನ್ನು ಚಲಾಯಿಸಿದ ಪರಿಣಾಮ ರಸ್ತೆಯಲ್ಲಿ ಮಲಗಿದ್ದ ಕಾರ್ಮಿಕ ರಾಮಚಂದ್ರ ಶಿಕಾರಿರವರ ದೇಹವನ್ನು ಅಪ್ಪಚ್ಚಿಯಾಗಿಸಿ ಚಲಿಸಿತು. ಗಂಭೀರ ಗಾಯಗೊಂಡ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಪುತ್ತೂರು ಸಂಚಾರಿ ಠಾಣಾ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣವನ್ನು ದಾಖಲಿಸಿದ್ದಾರೆ.

ಭಗವತಿ ದೇವಳದ ಶ್ರೀ ದೇವಿಯ ಪುನರ್ ಪ್ರತಿಷ್ಠಾಪನೆ, ಬ್ರಹ್ಮಕಲಶ



ನಾಪೋಕ್ಲು: ಇಲ್ಲಿಗೆ ಸಮೀಪದ ಬಲ್ಲಮಾವಟಿ ಗ್ರಾಮದ ಭಗವತಿ ದೇವಾಲಯದ ಶ್ರೀ ದೇವಿಯ ಪುನರ್ ಪ್ರತಿಷ್ಠಾಪನೆ ಅಷ್ಟಬಂಧಬ್ರಹ್ಮ ಕಲಶ ಹಾಗೂ ವಾರ್ಷಿಕೋತ್ಸವ ದಿವಾಕರ ಭಟ್ ತಂತ್ರಿಗಳ ನೇತೃತ್ವದಲ್ಲಿ ಶ್ರದ್ಧಾ ಭಕ್ತಿ, ವಿಜೃಂಬಣೆಯಿಂದ ಜರುಗಿತು.

ಪ್ರತಿಷ್ಠಾಪನಾ ಅಂಗವಾಗಿ ವಿವಿಧ ದೇವತಾ ಕಾರ್ಯಗಳು ಶುಕ್ರವಾರ ದಿಂದ ಪ್ರಾರಂಭಗೊಂಡು ದೇವಿಯ ಪ್ರತಿಷ್ಠಾಪನೆ, ಎತ್ತುಪೋರಾಟ, ದೇವರ ನೃತ್ಯ ಬಲಿ, ಹಾಗೂ ಮಹಾಪೂಜೆ ತೀರ್ಥ ಪ್ರಸಾದವನ್ನು ವಿತರಿಸಲಾಯಿತು. ಅಧಿಕ ಸಂಖ್ಯೆಯ ಭಕ್ತರು ವಾರ್ಷಿಕ ಉತ್ಸವದಲ್ಲಿ ಪಾಲ್ಗೊಂಡಿದ್ದು ಬಳಿಕ ಸರೋಜಮ್ಮ ಅವರ ವತಿಯಿಂದ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಶನಿವಾರ ತೆಂಗಿನಕಾಯಿ ಗುಂಡು ಹೊಡೆಯುವುದು,ದೇವಿಯ ಅವಭೃತ ಸ್ನಾನ, ನೃತ್ಯ ಬಲಿ ಹಾಗೂ ಮಹಾಪೂಜೆ ದೇವತಾ ಕಾರ್ಯಗಳು ನಡೆದವು .ಈ ಸಂದರ್ಭ ಕಾಫಿಬೆಳೆಗಾರ ಬೊಟ್ಟೋಳಂಡ ದೇವಿ ದೇವಯ್ಯ ಅವರ ವತಿಯಿಂದ ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು.

ಇಂದು ಉತ್ಸವಕ್ಕೆ ತೆರೆ

ಭಾನುವಾರ ದೇವಿಯ ಶುದ್ಧ ಕಲಸ ದೊಂದಿಗೆ ಉತ್ಸವಕ್ಕೆ ತೆರೆ ಬೀಳಲಿದೆ.

ಈ ಸಂದರ್ಭ ದೇವಾಲಯದ ತಕ್ಕ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳು ಪ್ರತಿಷ್ಠಾಪನ ಕಾರ್ಯಕ್ರಮಗಳನ್ನು ಉತ್ತಮವಾಗಿ ನೆರವೇರಿಸಿ ಕೊಟ್ಟರು, ಉತ್ಸವದಲ್ಲಿ ಊರಿನ ಹಾಗೂ ಪರ ಊರಿನ ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಇಷ್ಟಾರ್ಥ ಹರಕೆ ಕಾಣಿಕೆಗಳನ್ನು ಒಪ್ಪಿಸಿ ದೇವರ ಕೃಪೆಗೆ ಪಾತ್ರರಾದರು.

'ಕಾವ್ಯಾಂ ವ್ಹಾಳೊ- 14' ಕೊಂಕಣಿ ಕವಿಗೋಷ್ಠಿ। ಆಲ್ವಾರಿಸ್ ಅಭಿಪ್ರಾಯ

ಕೊಂಕಣಿ ಎಲ್ಲಾ ಚೌಕಟ್ಟುಗಳ ಮೀರಿ ಬೆಳೆದಿದೆ



ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ, ಅಕಾಡೆಮಿ ಸಭಾಂಗಣದಲ್ಲಿ ಶನಿವಾರ 'ಕಾವ್ಯಾಂ ವ್ಹಾಳೊ-14' ಶೀರ್ಷಿಕೆಯಡಿ ಕವಿಗೋಷ್ಠಿ ನಡೆಯಿತು, ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಂಕಣಿ ಭಾಷೆಯು ಜಾತಿ, ಮತ ಬೇಧವಿಲ್ಲದೆ ಎಲ್ಲಾ ಚೌಕಟ್ಟುಗಳನ್ನು ಮೀರಿ ಬೆಳೆದಿದೆ. ಎಲ್ಲಾ ಕೊಂಕಣಿಗರು ಅಕಾಡೆಮಿಯ ಜೊತೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅಥಿತಿ ಪ್ರಕಾಶ್ ನೊರೊನ್ಹಾ ಮಾತಾನಾಡಿ, ಕೊಂಕಣಿ ಒಂದು ಮಹಾನ್ ಭಾಷೆ. ಕರ್ನಾಟಕದ ಪ್ರಮುಖ ಧರ್ಮಗಳಾದ ಹಿಂದು, ಮುಸ್ಲಿಂ, ಕ್ರೈಸ್ತ ಸಮುದಾಯಗಳ ಜನರು ಮಾತಾನಾಡುವ ಭಾಷೆ. ಯಾವುದೇ ಭಾಷೆ ಉಳಿಯಬೇಕಾದರೆ ಭಾಷೆಯ ಬಂಧನವಿಲ್ಲದೆ ಕಾಲಕಾಲಕ್ಕೆ ಬಲಾವಣೆಗಳನ್ನು ಸೇರಿಸಿಕೊಂಡು ಮುಂದೆ ಹೋಗಬೇಕು. ಬೇರೆ ಭಾಷೆಗಳ ಶಬ್ದಗಳನ್ನು ಬಳಸಿ, ನಮ್ಮ ಭಾಷೆಯನ್ನು ಶುದ್ಧವಾಗಿ ಮಾತಾನಾಡಲು ಪ್ರಯತ್ನಿಸಿದರೆ, ಭಾಷೆಯ ಬೆಳವಣಿಗೆ ಯಾಗುತ್ತದೆ ಎಂದರು.

ಕೊಂಕಣಿ ಭಾಷೆ ವಿಸ್ತಾರವಾಗಿ ಖಾರ್ವಿ, ಸಿದ್ದಿ, ಕುಡುಬಿ, ಕಥೋಲಿಕರು ಹೀಗೆ ವಿವಿಧ ಸಮುದಾಯಗಳಲ್ಲಿ ಹರಡಿಕೊಂಡಿದೆ. ಎಲ್ಲ ಕೊಂಕಣಿ ಸಮುದಾಯಗಳು ಕೊಂಕಣಿ ಭಾಷೆಯ ಐಕ್ಯತೆಯನ್ನು ಗೌರವಿಸಿದರೆ, ಕೊಂಕಣಿ ತಾಯಿಯ ಆಶೀರ್ವಾದ ಖಂಡಿತ ನಮ್ಮೆಲ್ಲರ ಮೇಲೆ ಇರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಭಾಷಾ ಬೆಳವಣಿಗೆಯ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎಂದು ಶ್ಲಾಘಿಸಿದರು.

ಕೊಂಕಣಿಭಾಷೆಯಕುಡುಬಿಸಮುದಾಯದ ಹಿರಿಯ ಕಲಾವಿದ ಕೆ.ಸುಂದರ ಗೌಡ ಇವರನ್ನು ಸನ್ಮಾನಿಲಾಯಿತು.

ಪ್ರಮುಖರಾದ ನವೀನ್ ಲೋಬೊ ಉಪಸ್ಥಿತರಿದ್ದರು. ಖ್ಯಾತ ಕವಿಗಳಾದ ಡಾ.ವೆಂಕಟೇಶ್ ನಾಯಕ್ ರವರು ಕವಿಗೋಷ್ಟಿಯನ್ನು ನಡೆಸಿಕೊಟ್ಟರು.

ಅವಿಲ್ ರಸ್ಕಿನ್ಹಾ, ಕುಸುಮ ಕಾಮತ್, ಸಂಜನಾ ಮಥಾಯಸ್, ಜೆರಿ ಬೊಂದೆಲ್, ಸುಮಾ ವಸಂತ್, ಪ್ರವೀಣ್ ತಾವ್ರೊ, ವಿಸ್ಮಯಾ ಲೋಬೊ, ಡಾ. ಸುಮತಿ ಕಾರ್ಕಳ ಇವರು ತಮ್ಮ ಕವಿತೆಗಳನ್ನು ವಾಚಿಸಿದರು. ಅಕಾಡೆಮಿ ಸದಸ್ಯ ರೊನಾಲ್ಡ್ ಕ್ರಾಸ್ತಾ ನಿರೂಪಿಸಿದರು.

ತುಳು ನಾಟಕ ಕಾರ್ಯಾಗಾರ ಉದ್ಘಾಟಿಸಿ ಲಕ್ಷ್ಮಣ ಕುಮಾರ್ ಮಲ್ಲೂರು

ರಂಗಭೂಮಿ ವಿದ್ಯಾರ್ಥಿಗಳ ಸೃಜನಶೀಲತೆಗೆ ಪೂರಕ



ಮಂಗಳೂರು: ಕಾಲೇಜು ವಿದ್ಯಾರ್ಥಿಗಳಿಗೆ ರಂಗಭೂಮಿಯ ಪರಿಚಯ ಮಾಡುವುದು ಹಾಗೂ ನಾಟಕಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಯಲು ಸಾಧ್ಯವಾಗುವುದು ಎಂದು ಹಿರಿಯ ರಂಗಭೂಮಿ ಹಾಗೂ ಸಿನಿಮಾ ನಟ ಲಕ್ಷ್ಮಣ ಕುಮಾರ್ ಮಲ್ಲೂರು ಹೇಳಿದ್ದಾರೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಮಂಗಳೂರಿನ ಅಶೋಕನಗರದ ಎಸ್ .ಸಿ. ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ ಹತ್ತು ದಿನಗಳ ತುಳು ನಾಟಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಫೂರ್ತಿಯಾಗಲಿದೆ

ತುಳು ಅಕಾಡೆಮಿಯ ಸದಸ್ಯ ಹಾಗೂ ರಂಗ ನಿರ್ದೇಶಕ ಉದ್ಯಾವರ ನಾಗೇಶ್ ಕುಮಾರ್ ಮಾತನಾಡಿ, ರಂಗಭೂಮಿಯ ಚಟುವಟಿಕೆಗಳು ವಿದ್ಯಾರ್ಥಿಗಳ ಕಲಿಕೆಗೂ ಸ್ಫೂರ್ತಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ತುಳು ನಾಟಕಗಳ ಕೊಡುಗೆ ಅಪಾರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಮಾತನಾಡಿ, ತುಳು ಭಾಷೆಯ ಬೆಳವಣಿಗೆಗೆ ತುಳು ನಾಟಕಗಳ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಹಾರ್ದಿಕ್ ಚೌಹಾಣ್ ಮಾತನಾಡಿ, ಸ್ಥಳೀಯ ಭಾಷೆ, ಕಲಾ ಪ್ರಕಾರಗಳಿಗೆ ಎಸ್.ಸಿ.ಎಸ್. ಕಾಲೇಜು ನಿರಂತರವಾಗಿ ಬೆಂಬಲ ನೀಡುವುದಾಗಿ ತಿಳಿಸಿದರು.

ನಾಟಕ ಕಾರ್ಯಾಗಾರದ ನಿರ್ದೇಶಕ ಯೋಗೀಶ್ ಶೆಟ್ಟಿ, ರಂಗ ನಿರ್ದೇಶಕ ಜಗನ್ ಪವಾರ್ ಬೇಕಲ್ ಮೊದಲಾದವರು ಈ ಸಂದರ್ಭದಲ್ಲಿ ಉಪಸಿತರಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥೆ ಸುಪ್ರೀತಾ ಶೆಟ್ಟಿ ಸ್ವಾಗತಿಸಿದರು. ತುಳು ಸಂಘದ ಸಂಯೋಜಕಿ ದೀಕ್ಷಿತಾ ವಂದಿಸಿದರು, ವಿದ್ಯಾರ್ಥಿ ರಿತೇಶ್ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

ಮೇ 13ರಂದು ವಿದ್ಯುತ್ ವ್ಯತ್ಯಯ

ಉಡುಪಿ: ನಿಟ್ಟೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮಧ್ಯನಗರ, ಕುಡ್ಸೆಂಪು ಫೀಡರ್ ಮಾರ್ಗದಲ್ಲಿ ಆದಿ ಉಡುಪಿ -ಮಲ್ಪೆ ರಸ್ತೆ ಅಗಲೀಕರಣದ ಪ್ರಯುಕ್ತ ವಿದ್ಯುತ್ ಕಂಬ ಸ್ಥಳಾಂತರಿಸುವ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 13ರಂದು ಬೆಳಿಗ್ಗೆ 9.30ರಿಂದ ಸಂಜೆ 5.30 ಗಂಟೆಯವರೆಗೆ ಕೆಲವೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಮೂಡಬೆಟ್ಟು ಆದಿಉಡುಪಿ, ಚೆನ್ನಂಗಡಿ, ಬಂಕೇರಕಟ್ಟೆ ಸಂಕೇಶ್ ಭಜನಾ ಮಂದಿರ, ಕಲ್ಮಾಡಿ ಗರಡಿ, ಮಲ್ಪೆ ಮುಖ್ಯರಸ್ತೆ, ಪಂದುಬೆಟ್ಟು, ಕಲ್ಮಾಡಿ, ಇನ್ ಕಂ ಟ್ಯಾಕ್ಸ್ ಆಫೀಸ್ ಹತ್ತಿರ, ಕಿದಿಯೂರು, ಬಾಪುತೋಟ, ಬಂಕೇರಕಟ್ಟ, ಕೊಪ್ಪಲತೋಟ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-753) ಡ್ರಾ ಮೇ 09ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KN 844574 (KOTTAYAM)

Consolation Prize Rs.5,000/-
KO 844574 KP 844574 KR 844574 KS 844574
KT 844574 KU 844574 KV 844574 KW 844574
KX 844574 KY 844574 KZ 844574

2nd Prize Rs.25,00,000/- [25 Lakhs]
KU 399061 (PATHANAMTHITTA)

3rd Prize Rs.10,00,000/- [10 Lakhs]
KX 623027 (PATHANAMTHITTA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0462 2819 3356 3435 3454 3457 3642 5211 5394 5425
5496 6022 6605 6616 7835 9171 9539 9809 9990

5th Prize Rs.2,000/-
4318 6976 7043 7760 8929 9343

6th Prize Rs.1,000/-
0501 1278 1767 2405 2612 2771 3353 3700 3821 4032
4909 5005 5792 6205 6804 6838 6912 7045 7310 7526
7582 7595 9506 9860 9914

7th Prize Rs.500/-
0085 0232 0497 0518 1052 1230 1347 1474 1686 1712
1740 1956 2292 2414 2471 2495 2570 2864 2946 3102
3105 3266 3324 3346 3362 3578 3718 3790 4221 4280
4460 4514 4523 4625 4634 4668 4675 4890 4976 5051
5193 5302 5307 5499 5553 5577 5649 5730 5876 5896
5919 6098 6124 6306 6317 6654 6724 6741 7120 7170
7317 7341 7463 7519 7740 7889 7906 8079 8176 8788
8891 8892 9058 9133 9265 9659

8th Prize Rs.200/-
0042 0081 0210 0330 0372 0423 0549 0690 0756 0912
1172 1221 1336 1360 1501 1503 1517 1603 1615 1664
1678 1892 1944 2496 2554 2790 2936 3073 3399 3604
3645 3649 3652 3689 3740 3872 4019 4079 4263 4304
4370 4501 4520 4570 4583 4642 4730 4743 4766 4870
4950 4962 5268 5315 5342 5572 5633 5748 5750 5821
6014 6372 6521 6523 6528 6575 6632 6690 6758 6889
7029 7065 7092 7191 7230 7668 7801 7817 7917 8382
8430 8737 8870 8905 8958 9028 9051 9165 9297 9377
9631 9988

9th Prize Rs.100/-
0000 0073 0112 0114 0130 0169 0514 0610 0633 0780
0901 0992 1031 1133 1183 1216 1257 1325 1451 1645
1661 1675 1746 1814 1831 1927 1931 1938 1990 2082
2099 2123 2172 2319 2322 2337 2444 2453 2614 2707
2845 2912 2915 3028 3133 3230 3258 3361 3381 3462
3504 3516 3570 3725 3754 3764 3814 3945 4060 4140
4146 4167 4184 4286 4296 4325 4360 4421 4571 4629
4709 4768 4819 4940 5106 5184 5212 5287 5357 5608
5609 5611 5745 5766 5818 5850 5873 5880 5958 5985
6019 6060 6095 6285 6337 6438 6765 6801 6845 7019
7044 7106 7232 7353 7371 7389 7407 7412 7426 7525
7618 7709 7744 7811 8060 8076 8226 8293 8331 8602
8681 8703 8840 8899 8968 9053 9094 9124 9198 9227
9253 9334 9390 9409 9445 9583 9596 9603 9670 9717
9756 9773 9801 9968

ಮಂಗಳೂರು ಕೆಎಂಸಿ ಆಸ್ಪತ್ರೆಯಿಂದ ಪುತ್ತೂರಿನ ಮಹಾವೀರ್ ವೈದ್ಯಕೀಯ ಕೇಂದ್ರದಲ್ಲಿ ಸುಸಜ್ಜಿತ ಲ್ಯಾಬೋರೇಟರಿ ಆರಂಭ

ಮಂಗಳೂರು: ಕೆಎಂಸಿ ಆಸ್ಪತ್ರೆ ಮಂಗಳೂರು ವತಿಯಿಂದ ಪುತ್ತೂರಿನ ಮಹಾವೀರ್ ವೈದ್ಯಕೀಯ ಕೇಂದ್ರದಲ್ಲಿ 24X7 ಕೆಎಂಸಿ ಪ್ರಯೋಗಾಲಯ ಸೇವೆಗಳನ್ನು ಆರಂಭಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಹಾವೀರ ವೈದ್ಯಕೀಯ ಕೇಂದ್ರದ ಆಡಳಿತ ನಿರ್ದೇಶಕ ಡಾ. ಅಶೋಕ್ ಪಡಿವಾಳ್ ಹಾಗೂ ಕೆಎಂಸಿ ಆಸ್ಪತ್ರೆಯ ಕ್ಲಸ್ಟರ್ ನಿರ್ದೇಶಕ ಪ್ರಮೋದ್ ಕುಂದರ್ ಮಾಹಿತಿ ನೀಡಿ, ಹೊಸ ಸೌಲಭ್ಯವು ಪುತ್ತೂರು ಮತ್ತು ಹತ್ತಿರದ ಪ್ರದೇಶಗಳ ನಿವಾಸಿಗಳಿಗೆ ಮೂರು ದಶಕಗಳ ಆರೋಗ್ಯ ಸೇವೆಯ ಶ್ರೇಷ್ಠತೆಯ ಬೆಂಬಲದೊಂದಿಗೆ ವಿಶ್ವಾಸಾರ್ಹ, ಸಕಾಲಿಕ ಮತ್ತು ಉತ್ತಮ ಗುಣಮಟ್ಟದ ರೋಗನಿರ್ಣಯ ಸೇವೆಗಳನ್ನು ಸುಲಭವಾಗಿ ನೀಡುವ ಗುರಿ ಹೊಂದಿದೆ ಎಂದರು.

ಪುತ್ತೂರಿನ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಿ 28 ವರ್ಷಗಳನ್ನು ಪೂರೈಸಿದ ಸಂದರ್ಭ, ಮಹಾವೀರ್ ಹೆಲ್ತ್‌ಕೇರ್ ಸೆಂಟರ್ ಮಂಗಳೂರಿನ ಕೆಎಂಸಿ ಆಸ್ಪತ್ರೆಯೊಂದಿಗೆ ಪಾಲುದಾರಿಕೆ ಮಾಡಿಕೊಂಡು ತನ್ನ ಆವರಣದಲ್ಲಿ ಪ್ರಯೋಗಾಲಯ ಕೇಂದ್ರ ಸ್ಥಾಪಿಸುವ ಮೂಲಕ ತನ್ನ ಕಿರೀಟಕ್ಕೆ ಒಂದು ಗರಿಯನ್ನು ಸೇರಿಸಿದೆ. ಡಾ. ಸುರೇಶ್ ಪುತ್ತೂರಾಯ, ಡಾ. ರಾಜೇಶ್ವರಿ ಪಡಿವಾಳ, ಡಾ. ಪ್ರದೀಪ್, ಡಾ. ನಾಗಶ್ರೀ, ಡಾ. ಅರ್ಚನಾ ಮತ್ತು ಡಾ. ಸಚಿನ್ ಅವರಂತಹ ಹಿರಿಯ ವೈದ್ಯರು ಜೀವ ಉಳಿಸಲು ಮತ್ತು ರೋಗಿಗಳ ಜೀವನ' ಗುಣಮಟ್ಟ ಹೆಚ್ಚಿಸಲು ಸೇವೆ ನೀಡುತ್ತಿದ್ದಾರೆ. ಜನರಲ್ ಮೆಡಿಸಿನ್, ಆರ್ಥೋಪೆಡಿಕ್ಸ್, ಸ್ತ್ರೀರೋಗ ಶಾಸ್ತ್ರ, ಇಎನ್‌ಟಿ, ಡಯಾಲಿಸಿಸ್ ಸೌಲಭ್ಯದಂತಹ ವ್ಯಾಪಕ ಶ್ರೇಣಿ ಒಪಿ, ಐಪಿ ಸೇವೆಗಳೊಂದಿಗೆ ಮಹಾವೀರ್ ಮೆಡಿಕಲ್‌ಸೆಂಟರ್ ತನ್ನ 28ನೇ ವಾರ್ಷಿಕೋತ್ಸವದಂದು ಡಾ. ಆಶಾ ಪುತ್ತೂರಾಯ ಅವರ ಪರಿಣತಿಯೊಂದಿಗೆ ನೇತ್ರವಿಜ್ಞಾನ ಸೇವೆ ಸಹ ಸೇರಿಸಿಕೊಂಡಿದೆ.

ಸೇವಾ ಸಹಯೋಗದ ಕುರಿತು ಮಾತನಾಡಿದ ಮಂಗಳೂರು ಕೆಎಂಸಿ ಆಸ್ಪತ್ರೆ ಕ್ಲಸ್ಟರ್ ನಿರ್ದೇಶಕ ಪ್ರಮೋದ್ ಕುಂದರ್, ಸುಸಜ್ಜಿತ ಕೆಎಂಸಿ ಲ್ಯಾಬೋರೇಟರಿಯು ಸಮಯೋಚಿತ ಮತ್ತು ನಿಖರವಾದ ರೋಗನಿರ್ಣಯವನ್ನು ನೀಡಲಿದೆ. ಜನರು ದೂರದ ಪ್ರಯಾಣದ ಅನಿವಾರ್ಯತೆಗೆ ಒಳಗಾಗದೆ ಸ್ಥಳೀಯವಾಗಿ ಗುಣಮಟ್ಟದ ಪ್ರಯೋಗಾಲಯ ಸೇವೆಗಳನ್ನು ಪಡೆದುಕೊಳ್ಳಬಹುದು ಮತ್ತು ರೋಗಿಗಳ ಆರೈಕೆಯ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗಲಿದೆ ಎಂದರು. ಪ್ರಯೋಗಾಲಯ ಸೇವ ನಿಖರತೆ, ದಕ್ಷತೆ ಮತ್ತು ರೋಗಿಯ ಅನುಕೂಲತೆಯ ಮೇಲೆ ದಿನನಿತ್ಯದ ಆರೋಗ್ಯ ತಪಾಸಣೆಗಳು, ದೀರ್ಘಕಾಲದ ಕಾಯಿಲೆಗಳ ಮೇಲ್ವಿಚಾರಣೆ, ತಡೆಗಟ್ಟುವ ತಪಾಸಣೆಗಳು , ವೈದ್ಯರು ಶಿಫಾರಸು ಮಾಡಿದ ತನಿಖೆಗಳನ್ನು ಬೆಂಬಲಿಸಲು ವಿನ್ಯಾಸಗೊಳಿಸಲಾಗಿದೆ ಎಂದರು.

ರೋಗಿಗಳು 24X7 ಪ್ರಯೋಗಾಲಯ ಸೇವೆ ಪಡೆಯಬಹುದು ಮತ್ತು ಅವರ ನೋಂದಾಯಿತ ವಾಟ್ಸಾಪ್ ಸಂಖ್ಯೆಗಳಿಗೆ ನೇರವಾಗಿ ತಡೆರಹಿತ ವರದಿ ತಲುಪಿಸುವುದು ಮತ್ತು ಮಂಗಳೂರಿನ ಕೆಎಂಸಿ ಪ್ರಯೋಗಾಲಯ ಸೇವೆಗಳ ಎನ್‌ಎಬಿಎಲ್ ಮಾನ್ಯತೆ ಪಡೆದ ಸೌಲಭ್ಯಗಳಿಂದ ಬೆಂಬಲಿತ ಪರೀಕ್ಷಾ ಮಾನದಂಡಗಳಿಂದ ಪ್ರಯೋ ಜನ ಪಡೆಯಲಿದ್ದಾರೆ ಎಂದು ಪ್ರಮೋದ್ ಕುಂದರ್ ತಿಳಿಸಿದರು.

ಕೆಎಂಸಿ ಕೇಂದ್ರ ಪ್ರಯೋಗಾಲಯವು ವಾರ್ಷಿಕವಾಗಿ 19 ಲಕ್ಷಕ್ಕೂ ಹೆಚ್ಚು ಪರೀಕ್ಷೆ ನಡೆಸುವ ಸಾಮರ್ಥ್ಯ ಹೊಂದಿದ್ದು, ವರ್ಷಕ್ಕೆ 3.5 ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಸೇವೆ ಸಲ್ಲಿಸುತ್ತಿದೆ. ಈ ಪ್ರಯೋಗಾಲಯ 408ಕ್ಕೂ ಹೆಚ್ಚು ರೀತಿಯ ಪ್ರಯೋಗಾಲಯ ಪರೀಕ್ಷೆ ನಿರ್ವಹಿಸುತ್ತದೆ ಎಂದರು.

ಹಿರಿಯ ವೈದ್ಯ ಡಾ. ಸುರೇಶ್ ಪುತ್ತೂರಾಯ ಮಾತನಾಡಿ, 1998 ರಲ್ಲಿ ಆರಂಭಗೊಂಡ ಮಹಾವೀರ ಆಸ್ಪತ್ರೆ 26 ಬೆಡ್ ವ್ಯವಸ್ಥೆಯಿಂದ ಹಾಲಿ 60 ಬೆಡ್ ಸಾಮರ್ಥ್ಯದ ತನಕ ವಿಸ್ತರಣೆಗೊಂಡಿದೆ. ಆಧುನಿಕ ಆಪರೇಶನ್ ಥಿಯೇಟರ್ ಆರಂಭಿಸಿದ ಹೆಗ್ಗಳಿಕೆ ಹೊಂದಿರುವ ಮಹಾವೀರದಲ್ಲಿ ಈ ವ್ಯವಸ್ಥೆಯನ್ನು ಈಗ ಮತ್ತಷ್ಟು ಉನ್ನತೀಕರಿಸಲಾಗಿದೆ. ಈಗ ರಾಷ್ಟ್ರೀಯ ಮಾನ್ಯತೆ ಹೊಂದಿರುವ ಸುಸಜ್ಜಿತ ಲ್ಯಾಬೋರೇಟರಿ ವ್ಯವಸ್ಥೆ ಹಾಗೂ ಕಣ್ಣಿನ ಚಿಕಿತ್ಸಾ ವಿಭಾಗ ಆರಂಭಗೊಂಡು ಸೇವೆ ನೀಡಲಿದೆ. ಬಿಪಿಎಲ್ ಕಾರ್ಡುದಾರರಿಗೆ ಅರ್ಧ ದರದಲ್ಲಿ ಡಯಾಲಿಸಿಸ್ ಸೇವೆಲಭಿಸುತ್ತಿದೆ ಎಂದರು.

ಪುತ್ತೂರು ಮಾರುಕಟ್ಟೆ ಧಾರಣೆ

09-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475	ಹಳೆ ಕರಿಗೋಟು	255 - 285
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 105
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 320
ಹೊಸ ಪಠೋರ	355 - 405	**ಕಾಳುಮೆಣಸು ಧಾರಣೆ**	
ಹಳೆ ಪಠೋರ	375 - 405	ಕಾಳುಮೆಣಸು	450 - 675
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	248.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	211.00
ಹಳೆ ಕೋಕಾ	325 - 345	ಸ್ಕ್ರಾಪ್ 1	149.00
ಹೊಸ ಕರಿಗೋಟು	255 - 285	ಸ್ಕ್ರಾಪ್ 2	140.00

ಕಿರುಸುದ್ದಿ

ಇಂದು ಡಾ. ರಾಜ್ ಸವಿನೆನಪು ಸಂಗೀತ ಸುಧೆ ಸೀಸನ್ 1 ಕಾರ್ಯಕ್ರಮ

ಮಂಗಳೂರು: ಮೇರು ನಟ ಡಾ. ರಾಜ್‌ಕುಮಾರ್ ಅವರ 97ನೇ ಜನ್ಮದಿನದ ಅಂಗವಾಗಿ ಎಸ್.ಎಲ್. ಶೇಟ್ ಡೈಮಂಡ್ ಹೌಸ್ ಲೇಡಿಹಿಲ್ ಮಂಗಳೂರು ಅರ್ಪಿಸುವ ಡಾ. ರಾಜ್ ಸವಿನೆನಪು ಸಂಗೀತ ಸುಧೆ ಸೀಸನ್ 1 ಕಾರ್ಯಕ್ರಮ ಮೇ 10ರಂದು ಸಂಜೆ 5ಕ್ಕೆ ನಗರದ ಪುರಭವನದಲ್ಲಿ ನಡೆಯಲಿದೆ. ಮಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಪಿ.ಎಲ್. ಧರ್ಮ ಅಧ್ಯಕ್ಷತೆ ವಹಿಸುವರು. ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಕಾರ್ಯಕ್ರಮ ಉದ್ಘಾಟಿಸುವರು.



ಎಸ್.ಎಲ್. ಶೇಟ್ ಡೈಮಂಡ್ ಹೌಸ್ ಲೇಡಿಹಿಲ್‌ನ ಮಾಲಕ ರವೀಂದ್ರ ಎಲ್. ಶೇಟ್, ಚಲನಚಿತ್ರ ನಿರ್ಮಾಪಕ ಎಸ್.ಎ. ಚಿನ್ನೇಗೌಡ, ಡಾ. ರಾಜ್‌ಕುಮಾರ್ ಅವರು ನಟಿಸಿರುವ ಚಿತ್ರಗಳ ನಿರ್ದೇಶಕ, ನಿರ್ಮಾಪಕ ವಿಶ್ವನಾಥ್, ದೊಡ್ಮನೆ ಅಪ್ಪು ಯುವಸೇನೆ ಮಂಗಳೂರು ಅಧ್ಯಕ್ಷ ಕೆ.ಆರ್. ಜನಾರ್ದನ್ ಬಾಬು, ರಂಗಭೂಮಿ ಕಲಾವಿದೆ ಡಾ. ಸುಮತಿಶ್ರೀ ಹಾಗೂ ರಾಜ್‌ಕುಮಾರ್ ಕುಟುಂಬದ ಸದಸ್ಯರು ಭಾಗವಹಿಸಲಿದ್ದಾರೆ ಎಂದು ಡಾ. ರಾಜ್ ಕುಮಾರ್ ಅಭಿಮಾನಿಗಳ ವೇದಿಕೆ, ಕರಾವಳಿ ಕನ್ನಡಿಗರ ಬಳಗ ಮಂಗಳೂರು ಅಧ್ಯಕ್ಷ ನಾಗೇಂದ್ರ ಎನ್. ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಕಾರ್ಯಕ್ರಮದಲ್ಲಿ ಹಿರಿಯ ಅಶಕ್ತ ಕಲಾಸಾಧಕರಿಗೆ ಸನ್ಮಾನ ಹಾಗೂ ಆರ್ಥಿಕ ಸಹಾಯ ಹಸ್ತ ನಡೆಯಲಿದೆ. ಖ್ಯಾತ ಗಾಯಕರಿಂದ ಡಾ. ರಾಜ್ ಅವರ ಜನಪ್ರಿಯ ಹಾಡುಗಳ ರಸಮಂಜರಿ ಹಮ್ಮಿಕೊಳ್ಳಲಾಗಿದೆ. ಎಸ್.ಎಲ್. ಶೇಟ್ ಡೈಮಂಡ್ ಹೌಸ್ ಲೇಡಿಹಿಲ್ ಮಂಗಳೂರು ಕಾರ್ಯಕ್ರಮದ ಮುಖ್ಯ ಪ್ರಾಯೋಜಕರಾಗಿದ್ದಾರೆ ಎಂದರು.

ವೇದಿಕೆ ಕಾರ್ಯದರ್ಶಿ ಕದ್ರಿ ಮನೋಹರ್, ರವೀಂದ್ರ ಎಲ್. ಶೇಟ್, ಶರತ್ ಶೇಟ್ ಉಪಸ್ಥಿತರಿದ್ದರು.

'ಶಿಕ್ಷಣದೊಂದಿಗೆ ಯಕ್ಷಗಾನ' ವಸತಿ ಶಾಲೆ ಅರ್ಜಿ ಆಹ್ವಾನ

ಕೋಟ: ಕಳೆದ 54 ವರ್ಷಗಳಿಂದ ಯಕ್ಷಗಾನ ತರಬೇತಿ ತರಗತಿಯನ್ನು ನಡೆಸುತ್ತಾ ಬಂದ, ಯಕ್ಷಗಾನ ಪ್ರಪಂಚಕ್ಕೆ 3000 ಕ್ಕೂ ಮಿಕ್ಕಿ ಕಲಾವಿದರನ್ನು ನೀಡಿರುವ, ಯಕ್ಷಗಾನ ಚಿಂತಕ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯ ದಿವಂಗತ ಐರೋಡಿ ಸದಾನಂದ ಹೆಬ್ಬಾರರಿಂದ ಸ್ಥಾಪಿಸಲ್ಪಟ್ಟ, ಪ್ರಾಚಾರ್ಯ ನಾರ್ಣಪ್ಪ ಉಪ್ಪೂರರು ಪ್ರಾಚಾರ್ಯರಾಗಿದ್ದ ನಮ್ಮ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆಯು ಶಾಲಾ ಬಾಲಕರಿಗಾಗಿ ಗುರುಕುಲ ಪದ್ಧತಿಯಂತೆ ವಸತಿ ಶಾಲೆಯನ್ನು ಕಳೆದ ಹನ್ನೆರಡು ವರ್ಷಗಳಿಂದ ನಡೆಸುತ್ತಾ ಬಂದಿರುತ್ತದೆ. ಶಿಕ್ಷಣದೊಂದಿಗೆ ಯಕ್ಷಗಾನ ಎಂಬ ಧ್ಯೇಯದೊಂದಿಗೆ ಪ್ರಾರಂಭವಾಗಿರುವ ಈ ವಸತಿ ಶಾಲೆಯಲ್ಲಿ ಆರನೆಯ ತರಗತಿಯಿಂದ ಹತ್ತನೆಯ ತರಗತಿಯ ತನಕದ ಬಾಲಕರಿಗೆ ಪ್ರವೇಶ ನೀಡಲಾಗುವುದು. ಅವಕಾಶ ಪಡೆದ ಬಾಲಕರಿಗೆ ಹತ್ತಿರದ ಶಾಲೆಯಲ್ಲಿ ಶಿಕ್ಷಣ ನೀಡಲಾಗುವುದಲ್ಲದೇ ಉಚಿತ ಊಟ, ಉಪಹಾರ, ವಸತಿಯ ವ್ಯವಸ್ಥೆಯೊಂದಿಗೆ ಯಕ್ಷಗಾನದ ಭಾಗವತಿಗೆ, ಮದ್ದಲೆ. ಚಂಡೆ. ನೃತ್ಯ ಶಿಕ್ಷಣವನ್ನೂ ನೀಡಲಾಗುವುದು. ಅಲ್ಲದೇ ನಮ್ಮ ಸಂಸ್ಥೆಯು ಕರ್ನಾಟಕ ರಾಜ್ಯ ಸರಕಾರದ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದ್ದು,ವಿಶ್ವವಿದ್ಯಾನಿಲಯದ ನಿಯಮದಂತೆ ಯಕ್ಷಗಾನದ ಸರ್ಟಿಫಿಕೇಟ್ ಮತ್ತು ಡಿಪ್ಲಮೋ ಕೋರ್ಸಗಾಗಿ ಪರೀಕ್ಷೆ ನಡೆಸುವುದಲ್ಲದೇ ಉತ್ತೀರ್ಣರಾದವರಿಗೆ ವಿಶ್ವವಿದ್ಯಾನಿಲಯದ ಸರ್ಟಿಫಿಕೇಟ್ ನೀಡಲಾಗುವುದು, ಗುರುಕುಲ ಪದ್ಧತಿಯಂತೆ ನಡೆಸಲುದ್ದೇಶಿಸುವ ಈ ಶಾಲೆಗೆ ಸೇರಬಯಸುವವರು 2026ರ ಮೇ ತಿಂಗಳ 25ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿದ್ದು, ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ ಅಂಚೆ: ಐರೋಡಿ 576226, ಉಡುಪಿ ತಾಲೂಕು ಮತ್ತು ಜಿಲ್ಲೆ, ದೂರವಾಣಿ 9880605610 ಯನ್ನು ಸಂಪರ್ಕಿಸಲು ಕೇಳಿಕೊಳ್ಳಲಾಗಿದೆ ಎಂಬ ಪ್ರಕಟಣೆಯನ್ನು ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ನಳಿನಿ ಗಣೇಶ್ ಶೆಟ್ಟಿ, 'ಶ್ರೀ ಭ್ರಾಮರೀ' ದೋಟ, ಗಾಂಧಿನಗರ, ಕಾವೂರು, ಮಂಗಳೂರು.
2. ನವೀನ್ ಶೆಟ್ಟಿ, ಕುರುಡಾಡಿಗುತ್ತು, ಅರಂಬೋಡಿ ವಯಾ ಸಿದ್ಧಕಟ್ಟೆ, ಬಂಟ್ವಾಳ (ತಾ).
3. ಮಾಲಿನಿ ಪದ್ಮನಾಭ ಎಸ್. ಪಯ್ಯಡೆ, ಕೂರಿಯಾಳಗುತ್ತು, ಪಯ್ಯಡೆ ಹೌಸ್, ಬಂಟ್ವಾಳ (ತಾ).
4. ದಿವ್ಯಾ ಹರಿಪ್ರಸಾದ್, 'ಪಂಚಶಕ್ತಿ', ಕೊಪ್ಪದ ಕುಮೇರು, ಬಡಗಮಿಜಾರು.
5. ಡಾ| ರವಿ ಎನ್., ಉದ್ಭವ ರೌದ್ರನಾಥೇಶ್ವರ ಕ್ಷೇತ್ರ, ನಡುಬೊಟ್ಟು, ಪಾರೆಂಕಿ ವಯಾ ಮಡಂತ್ಯಾರು.
6. ರತ್ನಾಕರ ಶೆಟ್ಟಿ, ಹಿತ್ತಿಲು ಮನೆ, ಮುಂಡಬೆಟ್ಟು ಗುತ್ತು, ಮೂಡುಪೆರಾರ.
7. ನೇಮು ಶೆಟ್ಟಿ, ಪತ್ನಿ, ಮಕ್ಕಳು, ಕುಟುಂಬಸ್ಥರು, ಬೈಲು ಮೂಡುಕೆರೆ ಮನೆ, ಕಂದಾವರ.

ಶ್ರೀ ಧರ್ಮಸ್ಥಳ ಮೇಳ
ಗೇರುಕಟ್ಟೆಯಲ್ಲಿ
ಶ್ರೀ ಸತ್ಯಪ್ರಸಾದ್ ಪಿ. ಜೈನ್
S/o ಶ್ರೀ ಪ್ರವೀಣ್ ಕುಮಾರ್, ಪಾರ್ಶ್ವನಾಥ ಫ್ಯೂಯೆಲ್ಸ್

ಶ್ರೀ ಸಾಲಿಗ್ರಾಮ ಮೇಳ
ಪಾರಂಪಳ್ಳಿ ಪಡುಕೆರೆ ಗುರು ಶನೇಶ್ವರ ದೇವಸ್ಥಾನದಲ್ಲಿ
ಬಯಲಾಟ - **ರಂಗನಾಯಕಿ**

ಶ್ರೀ ಪೆರ್ಡೂರು ಮೇಳ
ಹೊಸಬಾಳೆಯಲ್ಲಿ
ಗುರುದಕ್ಷಿಣೆ, ಲಂಕಾದಹನ

ಶ್ರೀ ಹನುಮಗಿರಿ ಮೇಳ
ಅರ್ಭಿ-ಕುಂತೂರಿನಲ್ಲಿ

ಶ್ರೀ ಪಾವಂಜೆ ಮೇಳ
ಗುಂಡ್ಯಡ್ಕ ಮೈದಾನದಲ್ಲಿ
ಶ್ರೀ ದೇವಿ ಮಹಾತ್ಮೆ



ಕಾಸರಗೋಡು ಕೂಡ್ಲು ವಿವೇಕಾನಂದ ನಗರದ ಶ್ರೀ ನಾಗರಾಜ ಗುಳಿಗ ದೈವ ಸನ್ನಿಧಿಯ ಬ್ರಹ್ಮಕಲಶೋತ್ಸವದ ಪ್ರಯುಕ್ತ ಶನಿವಾರ ಬೆಳಗ್ಗೆ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಿಂದ ಆಕರ್ಷಕ ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆಯು ನಡೆಯಿತು.

ಮೇ 11: ಬಡಗು ಶಬರಿಮಲೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ

ಮಂಗಳೂರು: ಕಾಸರಗೋಡು ಜಿಲ್ಲೆಯ ಕುಂಬಳೆ ಸೀಮೆಯ ಕುಂಬ್ಡಾಜೆ ಪಂಚಾಯತ್ ಉಬ್ರಂಗಳ ಗ್ರಾಮದ 'ಬಡಗು ಶಬರಿಮಲೆ' ಎಂದೇ ಪ್ರಸಿದ್ಧವಾದ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ 101 ಚೆಂಡೆ ವಾದ್ಯಗಳೊಂದಿಗೆ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ ಹಾಗೂ ಶ್ರೀ ದೇವರ ಭವ್ಯ ಮಹೋತ್ಸವ ಮೇ 11ರಂದು ಸಂಜೆ 5ರಿಂದ ನಡೆಯಲಿದೆ.

18 ಮೆಟ್ಟಿಲುಗಳ ಲೋಕಾರ್ಪಣೆ

ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ ಹಾಗೂ ಶ್ರೀ ದೇವರ ಭವ್ಯ ಮಹೋತ್ಸವದಲ್ಲಿ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿ ಹಾಗೂ ಎಡನೀರು ಮಠಾಧೀಶರಾದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದರು ಉದ್ಘಾಟನೆಗೈದು ಆಶೀರ್ವಚನ ನೀಡಲಿರುವರು. ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿ, ಗೌರವ ಸಲಹೆಗಾರ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ, ನಾರಾಯಣ ವರ್ಮ ಪಂದಳಂ ಕೊಟ್ಟಾರಂ ಶಬರಿಮಲೆ, ಕ್ಷೇತ್ರದ ದೈವಜ್ಞ ಕೆ. ಸಿ. ನಾಗೇಂದ್ರ ಭಾರದ್ವಾಜ್ ಸುರತ್ಕಲ್, ಹಿರಿಯ ಗುರು ಸ್ವಾಮಿ ರಾಮ ಗುರುಸ್ವಾಮಿ ಉದಯಗಿರಿ, ದಾನಿ ತಾಳಿಪಾಡಿ ಜಾಹ್ನವಿ ಶಾಸ್ತ್ರಿ ಬೆಂಗಳೂರು, ಹೆಸ್ಕಾಂ ತಾಂತ್ರಿಕ ನಿರ್ದೇಶಕ ಜಗದೀಶ ಎಸ್., ಕ್ಷೇತ್ರದ ಆಡಳಿತ ಮೊಕ್ತೇಸರ ಡಾ. ಕಿಶೋರ್ ಕುಮಾರ್ ಕುಣಿಕುಳ್ಳಾಯ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಕ್ಷೇತ್ರದ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕುಣಿಕುಳ್ಳಾಯ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಜೆ 5 ಗಂಟೆಗೆ ಧಾರ್ಮಿಕ ಸಭೆ, 6.30ಕ್ಕೆ 18 ಮೆಟ್ಟಿಲುಗಳ ದ್ವಾರಪೂಜೆ ಹಾಗೂ ಲೋಕಾರ್ಪಣೆ ಹಾಗೂ ರಾತ್ರಿ 8 ಗಂಟೆಗೆ ಶ್ರೀ ದೇವರ ದಿವ್ಯ ಮಹೋತ್ಸವ ಹಾಗೂ ಭೋಜನ ಪ್ರಸಾದ ನಡೆಯಲಿದೆ ಎಂದರು.

ಕ್ಷೇತ್ರದ ಉತ್ಸವ ಸಮಿತಿ ಉಪಾಧ್ಯಕ್ಷ ಮಧುಸೂದನ ಆಯರ್ ಮಂಗಳೂರು, ಲೆಕ್ಕಪರಿಶೋಧಕ ಪ್ರಶಾಂತ್ ಕುಣಿಕುಳ್ಳಾಯ ಉಬ್ರಂಗಳ, ಪ್ರಚಾರ ಸಮಿತಿ ಅಧ್ಯಕ್ಷ ರಾಜೇಶ್ ಮಾಸ್ತರ್ ಅಗಲ್ಪಾಡಿ, ಸ್ವಾಗತ ಸಮಿತಿ ಅಧ್ಯಕ್ಷ ಗೋವಿಂದರಾಜ್ ಮೈಲ್ತೊಟ್ಟಿ, ಧ್ಯಾನ್ ಕೆ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಖಚಿತವಾದ ಅನುಮಾನ | ಪರೋಕ್ಷ ರಾಜಕೀಯ 'ಹಸ್ತ'ಕ್ಷೇಪ ಶಂಕೆ | ಸದಸ್ಯರಲ್ಲಿ ಸಾಗಿದೆ ಬಿಸಿಬಿಸಿ ಚರ್ಚೆ

ಭೂ ಅಭಿವೃದ್ಧಿ ಬ್ಯಾಂಕ್ ಎಲೆಕ್ಷನ್‌ಗೆ ಬ್ರೇಕ್!

ವೆಂಕಟೇಶ್ ಬಂಟ್ವಾಳ

ಬಂಟ್ವಾಳ: ತಾಲೂಕಿನ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಲ್ಲೊಂದಾದ ಬಂಟ್ವಾಳ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಬಂಟ್ವಾಳ ಭೂ ಅಭಿವೃದ್ಧಿ ಬ್ಯಾಂಕ್)ನ ನೂತನ ಆಡಳಿತ ಮಂಡಳಿಗೆ ಮೇ.24ರಂದು ನಿಗದಿಯಾದ ಚುನಾವಣೆಗೆ ಪರೋಕ್ಷ ರಾಜಕೀಯ 'ಹಸ್ತ'ಕ್ಷೇಪದಿಂದ ಹಠಾತ್ ಬ್ರೇಕ್ ಬಿದ್ದಿದೆ.

ಕಳೆದೊಂದು ವಾರದಿಂದ ಚುನಾವಣೆ ಮುಂದೂಡಲು ತೆರೆಮರೆಯ ಕಸರತ್ತು ಸರಕಾರಿ ಮಟ್ಟದಲ್ಲಿ ನಡೆಯುತ್ತಿರುವ ಬಗ್ಗೆ ಅನುಮಾನ ರೈತ ಸದಸ್ಯರಲ್ಲಿ ಹರಿದಾಡುತ್ತಿತ್ತು. ಇದೀಗ ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿರ್ದೇಶಕರು ಹಾಗೂ ಚುನಾವಣಾಧಿಕಾರಿ ಪ್ರಕಟಿತ ಚುನಾವಣಾ ವೇಳಾಪಟ್ಟಿ ಹಿಂಪಡೆದು ಅಧಿಕೃತ ಆದೇಶ ಹೊರಡಿಸಿದ್ದು, ಸದಸ್ಯರ ಅನುಮಾನ ಖಚಿತ ಪಟ್ಟಿದೆ.

ಮತದಾರರ ಪಟ್ಟಿಯಲ್ಲಿನ ಕೆಲವು ನ್ಯೂನ್ಯತೆ, ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಗೊಂದಲವಿದೆ ಎಂದು ಪ್ರಕಟಿತ ಚುನಾವಣಾ ವೇಳಾಪಟ್ಟಿ ಚುನಾವಣಾಧಿಕಾರಿ, ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿರ್ದೇಶಕರು ಹಿಂಪಡೆದು ಆದೇಶಿಸಿದ್ದಾರೆ.

24ರಂದು ಚುನಾವಣೆ ನಿಗದಿಯಾಗಿತ್ತು

ಪ್ರಕಟಿತ ಚುನಾವಣಾ ವೇಳಾಪಟ್ಟಿಯನ್ವಯ ಮೇ.12 ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಬೇಕಾಗಿತ್ತು, ಮೇ.16 ರಂದು ಸಂಜೆ 3 ಗಂಟೆ ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾಗಿತ್ತು. ಮೇ 18 ರಂದು ನಾಮಪತ್ರದ ಪರಿಶೀಲನೆ ನಡೆಯಬೇಕಾಗಿತ್ತು, ಮೇ 19ರಂದು ಸಂಜೆ 3ಗಂಟೆಗೆ ನಾಮಪತ್ರ ವಾಪಸ್ ಪಡೆಯಲು ಕೊನೆ ದಿನವಾಗಿತ್ತು. ಮೇ 20ರಂದು ಕಣದಲ್ಲಿರುವ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ, ಮೇ 24ರಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆದು, ಅಂದೇ ಮತ ಎಣಿಕೆಯಾಗಿ ಫಲಿತಾಂಶ ಪ್ರಕಟವಾಗಬೇಕಿತ್ತು. ಬಂಟ್ವಾಳ ತಹಶೀಲ್ದಾರ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲಿದ್ದರು. ಆದರೆ ಚುನಾವಣಾಧಿಕಾರಿಯಾಗಿರುವ ತಹಶೀಲ್ದಾರ್ ಇದುವರೆಗೂ ಬ್ಯಾಂಕ್ ಚುನಾವಣೆ ಸಂಬಂಧಿಸಿ ಮಾಧ್ಯಮಗಳಿಗೆ ಯಾವುದೇ ಮಾಹಿತಿ ನೀಡದೆ ಮುಚ್ಚಿಟ್ಟಿದ್ದರು.

ಮತದಾರರಪಟ್ಟಿ ಪರಿಷ್ಕರಿಸಿ, ಮೀಸಲಾತಿ ನಿಗದಿಪಡಿಸಿ ಚುನಾವಣೆಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆ ಮುಗಿಸಿದ ಬಳಿಕವೇ ಚುನಾವಣಾಧಿಕಾರಿಯವರು ಚುನಾವಣಾ ವೇಳಾಪಟ್ಟಿಯ ಪ್ರಕಟಿಸುವುದಾಗಿದೆ. ಇಲ್ಲೂ ಹದಿನೈದು ದಿನದ ಹಿಂದೆಯೇ ಬಂಟ್ವಾಳ ತಹಶೀಲ್ದಾರ್ ಅವರನ್ನಾಗಿಸಿ 'ಚುನಾವಣಾ ವೇಳಾಪಟ್ಟಿ ಏ' ಪ್ರಕಟಿಸಲಾಗಿತ್ತು. ಆದರೆ ಚುನಾವಣೆಗೆ ಸಂಬಂಧಿಸಿ ಯಾವುದೇ ಪ್ರಕ್ರಿಯೆಯನ್ನು ತಹಶೀಲ್ದಾರರು ಮಾಡಿರಲಿಲ್ಲ, ಇದನ್ನು ಪ್ರಶ್ನಿಸಿ ಎರಡು ದಿನಗಳ ಹಿಂದೆ ಬ್ಯಾಂಕಿನ ನಿಕಟ ಪೂರ್ವ ಅಧ್ಯಕ್ಷ ಅರುಣ್ ರೋಶನ್ ಡಿಸೋಜ ಅವರು ಲಿಖಿತವಾಗಿ ಮನವಿ ಸಲ್ಲಿಸಿದ್ದರು.

ಇದೀಗ ಮತದಾರರ ಪಟ್ಟಿಯಲ್ಲಿ ನ್ಯೂನ್ಯತೆ ಹಾಗೂ ಮೀಸಲಾತಿಯ ಗೊಂದಲದ ನೆಪವನ್ನು ಮುಂದಿರಿಸಿಕೊಂಡು ಚುನಾವಣೆಯನ್ನು ಮುಂದೂಡಿರುವುದು ಸಂಸ್ಥೆಯ ರೈತ ಸದಸ್ಯರಲ್ಲಿ ಬಿಸಿಬಿಸಿ ಚರ್ಚೆಗೆ ಗ್ರಾಸವಾಗಿದೆ.

ತಾಲೂಕಿನ 84 ಕಂದಾಯ ಗ್ರಾಮಗಳ ರೈತ ಸದಸ್ಯರನ್ನು ಹೊಂದಿರುವ ಬಂಟ್ವಾಳ ಭೂ ಅಭಿವೃದ್ಧಿ ಬ್ಯಾಂಕಿನ 13 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿತ್ತು. ಸದ್ಯ 1200ರಷ್ಟು ಮಂದಿ ಸದಸ್ಯರು ಮಾತ್ರ ಅಧಿಕೃತ ಮತದಾನದ ಹಕ್ಕು ಹೊಂದಿದ್ದು, ಉಳಿದಂತೆ ಸಾವಿರಕ್ಕೂ ಅಧಿಕ ಮಂದಿ ವಿವಿಧ ಕಾರಣಗಳಿಂದ ಮತದಾನದಿಂದ ವಂಚಿತರಾಗಿದ್ದಾರೆ. ಮತದಾನದ ಆಸಕ್ತಿ ಹೊಂದಿರುವ ಸದಸ್ಯರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿ ಅವರ ಪರವಾದ ಆದೇಶ ಪಡೆದುಕೊಂಡು ಬಂದಲ್ಲಿ ಅವರಿಗೆ ಮತದಾನದ ಹಕ್ಕು ಚಲಾಯಿಸಲು ಅವಕಾಶವಿರುತ್ತದೆ. ಬಂಟ್ವಾಳ ತಾಲೂಕು ಭೂ ಅಭಿವೃದ್ಧಿ ಬ್ಯಾಂಕ್ ವ್ಯಾಪ್ತಿಗೆ ಪುತ್ತೂರು, ಮಂಗಳೂರು ವಿಧಾನಸಭಾ ಕ್ಷೇತ್ರದ ತಲಾ ಒಂದೊಂದು ಜಿ.ಪಂ. ಕ್ಷೇತ್ರವ್ಯಾಪ್ತಿಯ ಗ್ರಾಮ ಗಳನ್ನು ಒಳಗೊಂಡಿರುವುದು ವಿಶೇಷವಾಗಿದೆ. ಬ್ಯಾಂಕಿನ 13 ಸ್ಥಾನಗಳ ಪೈಕಿ 12 ಸ್ಥಾನಗಳಿಗೆ 2020ರ ಜನವರಿಯಲ್ಲಿ ಚುನಾವಣೆ ನಡೆದಿತ್ತು. ಪ.ಜಾತಿ ವರ್ಗದ ಅಭ್ಯರ್ಥಿ ಕಣದಲ್ಲಿ ಇಲ್ಲದಿದ್ದರಿಂದ ಈ ಒಂದು ಸ್ಥಾನಕ್ಕೆ ಚುನಾವಣೆ ನಡೆಯದೆ ಖಾಲಿಯಾಗಿ ಉಳಿದಿತ್ತು. ಕಾಂಗ್ರೆಸ್ ನಾಯಕರಿಗೆ ಚುನಾವಣೆ ಮುಂದೂಡುವ ಸ್ಪಷ್ಟ ಸುಳಿವು ಇದ್ದ ಹಿನ್ನಲೆಯಲ್ಲಿ ಚುನಾವಣಾ ವಿಚಾರದಲ್ಲಿ ಹೆಚ್ಚು ಆಸಕ್ತರಾಗಿರಲಿಲ್ಲ, ಇತ್ತ ಬಿಜೆಪಿ ನಾಯಕರು ಸಿದ್ಧತೆಯಲ್ಲಿ ತೊಡಗಿಸಿಕೊಂಡು ಕೆಲ ಅಭ್ಯರ್ಥಿಗಳನ್ನು ಗುರುತಿಸಿಟ್ಟಿದ್ದರು.

ಗೊಂದಲದ ಗೂಡು

2020ರ ಜನವರಿಯಲ್ಲಿ ಚುನಾವಣೆಯ ದಿನದಿಂದ ಆಡಳಿತಾಧಿಕಾರಿ ಬರುವವರೆಗೂ ಬ್ಯಾಂಕಿನ ಆಡಳಿತ ಗೊಂದಲದ ಗೂಡಾಗಿತ್ತು. ಚುನಾವಣೆಯಲ್ಲಿಅಕ್ರಮ ನಡೆದಿದೆಯೆಂದು ಕಾಂಗ್ರೆಸ್ ಬೆಂಬಲಿತರು ನ್ಯಾಯಾಲಯದ ಕದ ತಟ್ಟಿದರಿಂದ ಗೆಲುವು ಸಾಧಿಸಿದ್ದ ಬಿಜೆಪಿ ಬೆಂಬಲಿತರಿಗೆ ಎರಡು ವರ್ಷಗಳ ಕಾಲ ಆಡಳಿತದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಲಿಲ್ಲ. ನ್ಯಾಯಾಲಯದ ತಡೆ ತೆರವಾದ ಬಳಿಕ ನ್ಯಾಯವಾದಿ ಅರುಣ್ ರೋಶನ್ ಡಿಸೋಜ ಅಧ್ಯಕ್ಷರಾಗಿ, ಚಂದ್ರಶೇಖರ್ ಬಂಗೇರ ಉಪಾಧ್ಯಕ್ಷರಾಗಿ ಮೂರು ವರ್ಷ ಕಾಲ ಸೂಸೂತ್ರವಾಗಿ ಆಡಳಿತ ನಡೆಸಿದರಾದರೂ ಮತ್ತೆ ಇವರ ಆಡಳಿತಕ್ಕೆ ನ್ಯಾಯಾಲಯದಿಂದ ಶಾಕ್ ಎದುರಾಗಿತ್ತು. ಈ ಬಾರಿ 6 ಮಂದಿ ಸಿಬ್ಬಂದಿಗಳನ್ನು ಅಕ್ರಮವಾಗಿ ನೇಮಿಸಲಾಗಿದೆ ಎಂಬ ನೆಪವನ್ನು ಮುಂದಿಟ್ಟು ಕೋರ್ಟ್ ಮೆಟ್ಟಲೇರಲಾಗಿತ್ತು. ಆಗ ಕಾಂಗ್ರೆಸ್ ಬೆಂಬಲಿತ ದೂರುದಾರರನ್ನು ಸೇರಿಸಿದಂತೆ ಸದಸ್ಯರನ್ನು ಅನರ್ಹಗೊಳಿಸಿ ಕೋರ್ಟ್ ಆದೇಶಿಸಿತ್ತು. ಇದಕ್ಕೆ ಬಿಜೆಪಿ ಬೆಂಬಲಿತರು ತಡೆ ತಂದರೂ ಅಧಿಕಾರದ ಕುರ್ಚಿಯಲ್ಲಿ ಮುಂದುವರಿಯಲಿಲ್ಲ, ಈ ಹಿನ್ನಲೆಯಲ್ಲಿ ಅಧಿಕಾರದ ಅವಧಿ ಮೂರು ವರ್ಷಕ್ಕೆ ಸೀಮಿತವಾಗಿ, ಎರಡು ವರ್ಷ ಮೊಟಕುಗೊಂಡಿತು.

ವಿಚಿತ್ರವೆಂದರೆ ಗೊಂದಲ ಬ್ಯಾಂಕಿನ ಮಹಾಸಭೆಯಲ್ಲೂ ಸ್ಫೋಟಗೊಳ್ಳುವಷ್ಟರ ಮಟ್ಟಿಗೂ ಮುಂದುವರಿದಿತ್ತು. ಈಗ ಮತ್ತೆ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ಎದುರಾದರೂ ನಿಗದಿತ ದಿನಾಂಕವನ್ನು ಹಿಂಪಡೆಯಲಾಗಿದೆ.



ಗೊಂದಲ

ಬಂಟ್ವಾಳ ಭೂ ಬ್ಯಾಂಕ್‌ನ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿ ಬೆಂಬಲಿತರು ಅಧಿಕಾರದ ಗದ್ದುಗೆ ಏರಿದರೂ ಗೊಂದಲದಿಂದಾಗಿ ಐದು ವರ್ಷ ಆಡಳಿತವನ್ನು ಪೂರ್ಣಗೊಳಿಸಲು ಅರುಣ್ ರೋಶನ್ ಡಿಸೋಜ ಮತ್ತವರ ತಂಡಕ್ಕೆ ಸಾಧ್ಯವಾಗದಿರುವುದು ಇಲ್ಲಿ ಗಮನಾರ್ಹ ಅಂಶವಾಗಿದೆ.

ಕಳೆದ ಒಂದು ವರ್ಷದಿಂದ ಆಡಳಿತಾಧಿಕಾರಿ!

2025ರ ಮೇ ತಿಂಗಳಿನಲ್ಲೇ ಚುನಾಯಿತ ನಿರ್ದೇಶಕರ ಆಡಳಿತಾವಧಿ ಮುಕ್ತಾಯ ಗೊಂಡಿತ್ತು. ಒಂದು ವರ್ಷಗಳಿಂದ ಚುನಾವಣೆ ತಡೆಹಿಡಿಯಲಾದ ಹಿನ್ನೆಲೆ ಮಂಗಳೂರು ಸಹಕಾರ ಸಂಘದ ಅಧಿಕಾರಿ ಒಬ್ಬರು ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಚುನಾವಣೆಯನ್ನು ಮುಂದೂಡಲ್ಪಟ್ಟದ್ದರಿಂದ ಮತ್ತೆ ಆಡಳಿತಾಧಿಕಾರಿ ಮುಂದುವರಿಯಲಿದ್ದಾರೆ.

ಮೊಬೈಲ್ ದಾಸ್ಯ ಮುಕ್ತವಾಗಿಸಲು ಪುತ್ತಿಗೆ ಮಠದಿಂದ 'ಮೊಬೈಲ್ ವರ್ಜನ ಶಿಬಿರ'

ಉಡುಪಿ: ಎಳೆಯ ವಯಸ್ಸಿನ ಮಕ್ಕಳು ಮೊಬೈಲ್ ಫೋನ್‌ಗಳ ಮಾಯಾಲೋಕಕ್ಕೆ ಮಾರುಹೋಗುತ್ತಿರುವುದು ಮತ್ತು ಅದರಿಂದ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಉಡುಪಿ ಶ್ರೀ ಪುತ್ತಿಗೆ ಮಠವು, ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಹಾಗೂ ಅವರ ಶಿಷ್ಯರಾದ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ, ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಲು ಸನಿವಾಸ ಮೊಬೈಲ್ ವರ್ಜನ ಶಿಬಿರವನ್ನು ಆಯೋಜಿಸಲಾಗಿದೆ.

ಈ ವಿಶೇಷ ಶಿಬಿರವು ಮೇ 14 ರಿಂದ ಮೇ 18 ರವರೆಗೆ ಹಿರಿಯಡ್ಕದಲ್ಲಿರುವ ಶ್ರೀ ಪುತ್ತಿಗೆ ಮೂಲಮಠದ ಪರಿಸರದಲ್ಲಿ ನಡೆಯಲಿದೆ. 8 ರಿಂದ 12 ವರ್ಷದ ವಯೋಮಾನದ ಬಾಲಕ ಹಾಗೂ ಬಾಲಕಿಯರಿಗಾಗಿ ರೂಪಿಸಲಾಗಿರುವ ಈ ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿ ಇರುವವರು ನೋಂದಣಿ ಮಾಡಿಕೊಳ್ಳಲು ಮೇ 11 ಕೊನೆಯ ದಿನಾಂಕ ಎಂದು ಮಠದ ಪ್ರಕಟಣೆ ತಿಳಿಸಿದೆ. ಕೇವಲ 50 ಶಿಬಿರಾರ್ಥಿಗಳಿಗೆ ಮಾತ್ರ ಮೊದಲ ಆದ್ಯತೆಯ ಮೇಲೆ ಅವಕಾಶ ಕಲ್ಪಿಸಲಾಗುತ್ತಿದ್ದು, ಮಕ್ಕಳ ಸರ್ವತೋಮುಖ ಏಳಿಗೆಗಾಗಿ ಹೆತ್ತವರು ಮೇ 17 ರಂದು ನಡೆಯುವ ವಿಶೇಷ ಅವಧಿಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ಸೂಚಿಸಲಾಗಿದೆ.



ಮಣಿಪಾಲದ ಕೆ.ಎಂ.ಸಿ.ಯ ಮನೋಚಿಕಿತ್ಸಾ ವಿಭಾಗ ಮತ್ತು ಉಡುಪಿಯ ಪತಂಜಲಿ ಯೋಗ ಸಮಿತಿಗಳ ತಾಂತ್ರಿಕ ಸಹಯೋಗದೊಂದಿಗೆ ಈ ಶಿಬಿರವು ಸಜ್ಜುಗೊಂಡಿದೆ. ಮೊಬೈಲ್ ಬಳಕೆಯ ಪ್ರಮಾಣವನ್ನು ಕೇವಲ ಅನಿವಾರ್ಯ ಸಂದರ್ಭಗಳಿಗೆ ಮಾತ್ರ ಸೀಮಿತಗೊಳಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು ಈ ಶಿಬಿರದ ಮುಖ್ಯ ಗುರಿಯಾಗಿದೆ. ಇಲ್ಲಿ ಮಕ್ಕಳಿಗೆ ಕೇವಲ ಉಪದೇಶ ನೀಡುವುದಷ್ಟೇ ಅಲ್ಲದೆ, ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಯೋಗ, ಓದು, ಭಜನೆ, ಭಗವದ್ಗೀತೆ ಪಠಣದಂತಹ ಸಾಂಪ್ರದಾಯಿಕ ಕಲೆಗಳ ಜೊತೆಗೆ ಕರಕುಶಲ ಚಟುವಟಿಕೆ, ಮ್ಯಾಜಿಕ್, ಅಡುಗೆ, ಕುಣಿತ ಭಜನೆ ಮತ್ತು ಯಕ್ಷಗಾನದಂತಹ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ವಿಷಯ ತಜ್ಞರಾದ ಡಾ. ಸುಮಾ ಉಡುಪ, ಡಾ. ವ್ಯಾಸರಾಜ ತಂತ್ರಿ, ಡಾ. ಸುಧೀರ್ ರಾಜ್, ಡಾ. ಶ್ರುತಿ ಬಲ್ಲಾಳ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿ, ಮೊಬೈಲ್‌ನಿಂದಾಗುವ ಮಾನಸಿಕ ಹಾನಿ, ಜಂಕ್ ಫುಡ್‌ಗಳ ಅಪಾಯ ಮತ್ತು ಕುಟುಂಬ ಬಾಂಧವ್ಯದ ಮಹತ್ವದ ಬಗ್ಗೆ ಬೆಳಕು ಚೆಲ್ಲಲಿದ್ದಾರೆ. ಶ್ರೀ ಪುತ್ತಿಗೆ ಮಠದ ಆಡಳಿತ ಮಂಡಳಿಯ ನೇತೃತ್ವದಲ್ಲಿ ವಿದ್ವಾನ್ ಕೆ.ವಿ. ರಮಣಾಚಾರ್ಯ ಹಾಗೂ ಉಮಾ ಪ್ರಸಾದ್ ಅವರು ಶಿಬಿರದ ಯಶಸ್ಸಿಗಾಗಿ ಶ್ರಮಿಸುತ್ತಿದ್ದಾರೆ. ಆಸಕ್ತ ಪೋಷಕರು 8792158946 ಅಥವಾ 9880605691 ಸಂಖ್ಯೆಯನ್ನು ಸಂಪರ್ಕಿಸಿ ಅಥವಾ ಆನ್‌ಲೈನ್ ಗೂಗಲ್ ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಸುರತ್ಕಲ್‌ನಲ್ಲಿ ರಾಜ್ಯ ಮಟ್ಟದ ಹಿರಿಯರ ಕ್ರಿಕೆಟ್ ಹಬ್ಬಕ್ಕೆ ಚಾಲನೆ

ಸುರತ್ಕಲ್: ಸುರತ್ಕಲ್ ಸ್ಪೋರ್ಟ್ಸ್ ಕ್ಲಬ್, ಕಲ್ಚರಲ್ ಸೇವಾ ಟ್ರಸ್ಟ್ ನಿರಂತರ ಸಮಾಜಮುಖಿ ಕಾರ್ಯ ಚಟುವಟಿಕೆ ಹಮ್ಮಿಕೊಂಡು ಕ್ರಿಯಾಶೀಲ ಸಂಘಟನೆಯಾಗಿ ಬೆಳೆದಿದೆ ಸಂಘದ ಒಗ್ಗಟ್ಟು ಕಾರ್ಯಸಾಧನೆ ಕ್ರೀಡಾಶಕ್ತಿ ಇತರ ಸಂಘಗಳಿಗೆ ಮಾದರಿಯಾಗಿದೆ ಎಂದು ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರ ವಿದ್ಯೇಂದ್ರ ತೀರ್ಥ ಶ್ರೀ ಹೇಳಿದ್ದಾರೆ.

ಸುರತ್ಕಲ್ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಕ್ಲಬ್ ಮತ್ತು ಸುರತ್ಕಲ್ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಸುರತ್ಕಲ್ ಗೋವಿಂದದಾಸ ಕಾಲೇಜು ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಎರಡು ದಿನದ ಹಿರಿಯರ ಕ್ರಿಕೆಟ್ ಹಬ್ಬ ಪಂದ್ಯಾಟ ಸೀಸನ್ 5 ನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಮೊಯಿದಿನ್ ಬಾವ, ಬಿ.ಎ.ಎಸ್.ಎಫ್ ಸಂಸ್ಥೆಯ ಎಚ್ ಆರ್ ವಿಭಾಗದ ಸೀನಿಯರ್ ಮ್ಯಾನೇಜರ್ ಸಂತೋಷ್ ಪೈ, ಸುರತ್ಕಲ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಅಧ್ಯಕ್ಷ ಅಶೋಕ್ ಶೆಟ್ಟಿ ಸುರತ್ಕಲ್, ಉದ್ಯಮಿ



ಸುರೇಂದ್ರ ಶೆಟ್ಟಿ ಅರಂತಬೆಟ್ಟು, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಸುರತ್ಕಲ್ ಚಾವಡಿ ಹಾಲ್ ಮಾಲಕರಾದ ಡಿ.ಕೆ. ಶೆಟ್ಟಿ ಸೂರಿಂಜೆ, ಕರಾಟೆ ಶಿಕ್ಷಕ ಈಶ್ವರ್ ಕಟೀಲು, ಇಡ್ಯಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕರಾದ ಶಂಕರ್ ನಾರಾಯಣ್ ಭಟ್, ಸುರತ್ಕಲ್ ಲಯನ್ಸ್ ಕ್ಲಬ್ ಅಧ್ಯಕ್ಷೆ ಶಶಿಕಲಾ ಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲಾ ಬಸ್ ಮಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಪಿಲಾರ್, ಸುರತ್ಕಲ್ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಸೇವಾ ಟ್ರಸ್ಟ್ ಅಧ್ಯಕ್ಷ ಮನೋಹರ ಶೆಟ್ಟಿ ಸೂರಿಂಜೆ, ಉಪಾಧ್ಯಕ್ಷ ನಾಗರಾಜ್ ಕಡಂಬೋಡಿ ಮುಂತಾದವರು ಉಪಸ್ಥಿತರಿದ್ದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸುರತ್ಕಲ್ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಕ್ಲಬ್ ಅಧ್ಯಕ್ಷ ಮಹಾಬಲ ಪೂಜಾರಿ ಕಡಂಬೋಡಿ ವಹಿಸಿದರು.

ಕ್ಲಬ್ ಸದಸ್ಯ ಕುಶಲ ಮಣಿಯಾಣಿ ಸ್ವಾಗತಿಸಿ ಸದಸ್ಯ ಪುಷ್ಪರಾಜ್ ಶೆಟ್ಟಿ ಮಧ್ಯ ಧನ್ಯವಾದ ಸಮರ್ಪಿಸಿ ಕ್ಲಬ್‌ನ ಕಾರ್ಯದರ್ಶಿ ಕಿರಣ್ ಆಚಾರ್ಯ ಹೊಸಬೆಟ್ಟು ಕಾರ್ಯಕ್ರಮ ನಿರೂಪಿಸಿದರು.

ಮೊಬೈಲ್‌ನ ಗೀಳಿಗೆ ಬೀಳದೆ ಬೇಸಿಗೆ ರಜೆಯಲ್ಲಿ ಶ್ರಮವಹಿಸಿ ವ್ಯಾಪಾರ, ವ್ಯವಹಾರ ಕಲಿಯುತ್ತಿದ್ದಾರೆ ಈ ಪುಟಾಣಿಗಳು

ನೀರೆಬೈಲೂರಿನಲ್ಲಿ ಗಮನ ಸೆಳೆಯುತ್ತಿದೆ ಮಕ್ಕಳ ವ್ಯಾಪಾರ ಕೇಂದ್ರ!

ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಬನ್ನಿ ಸರ್... ಕೋಕಾಮ್... ರಾಗಿ... ಹೆಸರು ಬೇಳೆ... ತಂಪಾದ ಜ್ಯೂಸ್ ತಗೊಳ್ಳಿ ಸರ್.... ನಾವೇ ಮಾಡಿದ್ದು.....ಬನ್ನಿ ತಗೊಳ್ಳಿ ಬನ್ನಿ..

ಹೌದು! ಇದು ಸಿಗುವುದು ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ನೀರೆಬೈಲೂರು ಸಮೀಪ ರಸ್ತೆ ಬದಿಯಲ್ಲಿ ಸಿಗುವ ಎರಡು ಮಕ್ಕಳ ತಂಡದ ಜ್ಯೂಸ್ ಸೆಂಟರ್ ಮಳಿಗೆಯಲ್ಲಿ.

ನೀರೆಬೈಲೂರು ಸಮೀಪ ಅರ್ವಿ ಶೆಟ್ಟಿ, ಶ್ರೀಕ್ಷಾ, ಆಧ್ಯಾ ಶೆಟ್ಟಿ, ಭಾಗ್ಯ, ಧೃತಿ ಶೆಟ್ಟಿ ಮತ್ತು ಶಾರದಾ ವೇದಿಕೆ ಬಸ್ ನಿಲ್ದಾಣ ಸಮೀಪ ಪ್ರಥಮ್, ವಿಶ್ವಾಸ್, ಆದ್ವಿತ್, ಮನ್ವಿತ್, ಅಭಿರಾಮ್ ಎಂಬವರು ರಜಾ ಸಮಯದಲ್ಲಿ ಮೊಬೈಲ್ ಗೇಮ್‌ಗಳಲ್ಲಿ ಸಮಯ ಕಳೆಯದೆ ಸುಡು ಬಿಸಿಲಿನಲ್ಲಿ ರಸ್ತೆ ಬದಿಯಲ್ಲಿ ಸಣ್ಣ ಟೇಬಲ್ ಇಟ್ಟು ಮಕ್ಕಳು ಮನೆಯಿಂದಲೇ ಪೋಷಕರಿಂದ ತಯಾರಿಸಿಕೊಂಡ ಮಸಾಲಾ ಮಜಿಗೆ, ಪುನರ್ ಪುಳಿ, ರಾಗಿ, ಹೆಸರು ಬೇಳೆ ಜ್ಯೂಸ್, ಮಾವಿನ ಹಣ್ಣು ಪಚೋಡಿ, ಚರಂಬೂರಿ, ತರಕಾರಿ ತರಕಾರಿ ಮಾರಾಟ ಮಾಡುತ್ತಿದ್ದಾರೆ.





ಮಕ್ಕಳ 'ಸಾಹಸ' ದೊಡ್ಡವರಿಗೂ ಮಾದರಿ

ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಲಾಭ-ನಷ್ಟದ ವ್ಯವಹಾರ ಜ್ಞಾನ ಬೆಳೆಸುವ ಸದುದ್ದೇಶ ಹಾಗೂ ಮಾರುಕಟ್ಟೆಯಲ್ಲಿ ಹೇಗೆ ವ್ಯವಹರಿಸಬೇಕು, ವ್ಯಾಪಾರದಿಂದಾಗುವ ಲಾಭ ನಷ್ಟ ಹ್ಯಾಗೆ ತಿಳಿಯಬೇಕು, ಹಾಕಿದ ಬಂಡವಾಳವನ್ನು ಹೇಗೆ ತೆಗೆಯಬೇಕು? ಬಾಲ್ಯದಿಂದಲೇ ಬದುಕಿನ ಕಲೆಗಾಗಿ ಕನಿಷ್ಠ ವ್ಯವಹಾರ ಜ್ಞಾನವನ್ನಾದರೂ ಕಲಿಯಬೇಕು. ಸುತ್ತಮುತ್ತಲ ದೈನಂದಿನ ಬದುಕಿಗೆ ಬೇಕಿರುವ ಸಾಮಾನು, ಸರಂಜಾಮು ಖರೀದಿಸುವ ಜ್ಞಾನ ಕೊಡುವ ಜೊತೆಗೆ ಹಣಕಾಸಿನ ವ್ಯವಹಾರವೂ ಇದರಿಂದ ತಿಳಿಯಲಿದೆ. ಮೊಬೈಲ್ ಮಾಯಾ ಲೋಕದಲ್ಲಿ ಸಮಯ ವ್ಯರ್ಥ ಮಾಡುವ ಬದಲು ಸಮಾಜದ ನಡುವೆ ನಿಂತು ಬದುಕಿನ ಪಾಠ ಕಲಿಯುತ್ತಿರುವ ಈ ಮಕ್ಕಳ ಸಾಹಸ ದೊಡ್ಡವರಿಗೆ ಮಾದರಿಯಾಗಲಿದೆ.

ಪೋಷಕರಿಂದಲೂ ಫುಲ್ ಪ್ರೋತ್ಸಾಹ

ಮಕ್ಕಳನ್ನು ಹೊರಗೆ ಕಳುಹಿಸಲು ಹಿಂದೇಟು ಹಾಕುತ್ತೇವೆ, ಅವರಿಗೆ ಹೊರಗಿನ ಜ್ಞಾನ ಸಿಗುವುದೇ ಇಲ್ಲ, ಮಕ್ಕಳು ಸಂತೆಗೆ ಹೋದರೆ ವ್ಯಾಪಾರಸ್ಥರು ಹೆಚ್ಚಿನ ಹಣ ತೆಗೆದುಕೊಳ್ಳುತ್ತಾರೆ. ಇದರಿಂದ ನಾವೇ ಅವರನ್ನು ವ್ಯವಹಾರ ಜ್ಞಾನದಿಂದ ದೂರ ಇಡುತ್ತೇವೆ. ಮಕ್ಕಳ ವ್ಯವಹಾರದ ಜ್ಞಾನ ಬೆಳೆಯಬೇಕು ಎಂದು ಸಹಕಾರ ನೀಡುತ್ತಿದ್ದೇವೆ ಎಂದು ಮಕ್ಕಳ ಪೋಷಕರು ತಿಳಿಸಿದ್ದಾರೆ.

ಕೌಶಲ ವೃದ್ಧಿ

ಇವುಗಳು ಆತ್ಮಸ್ಥೈರ್ಯ ಕಲಿಸಲಿವೆ. ಹಣದ ಬೆಲೆಯನ್ನು ತಿಳಿಯಬಹುದಾಗಿದೆ. ವ್ಯಾವಹಾರಿಕ ಜ್ಞಾನ, ಅಳತೆ, ತೂಕ ಪ್ರಮಾಣ, ಹೂಡಿಕೆ, ಲಾಭ ನಷ್ಟಗಳ ಅರಿವು, ಸಂವಹನ ಕೌಶಲ ವೃದ್ಧಿಸಲಿದೆ. ವಸ್ತುಗಳ ಬೆಲೆ ನಿರ್ಧಾರ, ಶ್ರಮದ ಬದುಕಿನ ಅರಿವು, ಗಣಿತದ ಮೂಲ ಕ್ರಿಯೆಗಳ ಬಳಕೆ, ನಿತ್ಯ ಜೀವನದಲ್ಲಿ ಗಣಿತ ಬಳಕೆ ಕಲಿಯುವುದರ ಜೊತೆಗೆ ಸುಲಭವಾಗಿ ಕೂಡುವಿಕೆ, ಕಳೆಯುವಿಕೆ, ಗುಣಾಕಾರ, ಭಾಗಾಕಾರವನ್ನು ಖುಷಿಯಿಂದ ಮಕ್ಕಳು ಕಲಿಯಬಹುದಾಗಿದೆ.

ಮಕ್ಕಳಲ್ಲಿ ಆಹಾರದ ಪ್ರಾಮುಖ್ಯತೆ, ವ್ಯವಹಾರಿಕ ಜ್ಞಾನ, ಸಂಘಟನಾ ಶಕ್ತಿ, ಜವಾಬ್ದಾರಿ, ಕೂಡಿ ಬಾಳುವಿಕೆ, ಸೃಜನಾತ್ಮಕತೆ, ಆರ್ಥಿಕ ಜ್ಞಾನ, ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಇಂತಹ ಮಕ್ಕಳ ಉದ್ಯಮಕ್ಕೆ ನಾನು ಸಂಪೂರ್ಣ ಸಹಕಾರ ನೀಡಿದ್ದೇನೆ.

ವಿಜಯ್ ನಾಯ್ಕ್, ವಿಜಯ್ ಶಾಮಿಯಾನ, ನೀರೆಬೈಲೂರು

ಕಿರುಸುದ್ದಿ

ತೋಟದಲ್ಲಿ ಅಕ್ರಮ ಮರಳು ಸಂಗ್ರಹ ಸುಳ್ಯ ಪೊಲೀಸರಿಂದ ದಿಢೀರ್ ದಾಳಿ, ಪ್ರಕರಣ ದಾಖಲು

ಸುಳ್ಯ: ತೊಡಿಕಾನ ಗ್ರಾಮದ ಶೆಟ್ಟಿಯಡ್ಕ ಎಂಬಲ್ಲಿ ತೋಟದಲ್ಲಿ ಅಕ್ರಮವಾಗಿ ಮರಳು ದಾಸ್ತಾನು ಮಾಡಿದ್ದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಸುಳ್ಯ ಪೊಲೀಸರು ದಿಢೀರ್ ದಾಳಿ ನಡೆಸಿ ಸುಮಾರು 1.20 ಲಕ್ಷ ರೂಪಾಯಿಗಳ ಮರಳನ್ನು ವಶಪಡಿಸಿಕೊಂಡು ಆರೋಪಿಗಳ ಮೇಲೆ ಪ್ರಕಣ ದಾಖಲಿಸಿದ ಘಟನೆ ಶುಕ್ರವಾರ ನಡೆದಿದೆ. ಪಯಸ್ವಿನಿ ನದಿಯಿಂದ ಅಕ್ರಮವಾಗಿ ಮರಳನ್ನು ಮನು ಪೆರ್ಮಡ ಮತ್ತು ಚೆಂಬು ಗ್ರಾಮದ ಆ್ಯಂಟನಿ ಎಂಬುವವರು ವಿಶಾಲವಾದ ಜಾಗದಲ್ಲಿ ಮರಳನ್ನು ಸಂಗ್ರಹ ಮಾಡಿಟ್ಟುಕೊಂಡು ಮಾರಾಟ ಮಾಡಿರುವುದು ಕಂಡು ಬಂದಿದ್ದು ಹಾಗೂ ಸ್ಥಳದಲ್ಲಿ ಸುಮಾರು 50–60 ಮೆಟ್ರಿಕ್ ಟನ್ ತೂಕದ ಸುಮಾರು 20 ಟಿಪ್ಪರ್ ಲೋಡ್ ಮರಳು ಸಂಗ್ರಹವಾಗಿರುವುದನ್ನು ಕಂಡು ಆರೋಪಿತನ ತಂದೆಯಲ್ಲಿ ವಿಚಾರಿಸಿದಾಗ ಯಾವುದೇ ಸಮರ್ಪಕ ದಾಖಲೇ ನೀಡದೇ ಇದ್ದು ಈ ಕುರಿತು ವಿಚಾರಿಸಲಾಗಿ ಬಳಿಕ ಒಂದು ಲಕ್ಷ ಇಪ್ಪತ್ತು ಸಾವಿರ ಮೌಲ್ಯದ ಮರಳನ್ನು ಸ್ವಾಧೀನಪಡಿಸಿಕೊಂಡು ಸುಳ್ಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಮೇ 12: ವಿದ್ಯುತ್ ವ್ಯತ್ಯಯ

ಉಡುಪಿ: ನಿಟ್ಟೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಬನ್ನಂಜೆ, ನಿಟ್ಟೂರು, ಅಂಬಲಪಾಡಿ, ಎಸ್‌ಟಿ.ಪಿ ಮೇಲ್ಪೇಟೆ ಫೀಡರ್ ಮಾರ್ಗದಲ್ಲಿ, ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 12ರಂದು ಬೆಳಿಗ್ಗೆ 9.30ರಿಂದ ಸಂಜೆ 5.30 ಗಂಟೆಯವರೆಗೆ ಬನ್ನಂಜೆ, ಶಿರಿಬೀಡು, ಅಜ್ಜರಕಾಡು, ಎಲ್‌ಐಸಿ, ಬ್ರಹ್ಮಗಿರಿ, ನಾಯರ್ ಕೆರೆ, ಕಾಡಬೆಟ್ಟು, ವಿದ್ಯಾರಣ್ಯನಗರ, ಸರ್ವಿಸ್ ಬಸ್ ನಿಲ್ದಾಣ, ಎನ್.ಎಚ್–66, ಬಾಳಿಗ ಫಿಶ್ ನೆಟ್, ಆಭರಣ ಕಾರ್ ಶೋ ರೂಮ್, ನ್ಯೂ ಕಾಲೋನಿ ಕೊಡಂಕೂರು, ಕೊಡಂಕೂರು, ಹನುಮಂತನಗರ, ನಿಟ್ಟೂರು, ಎಸ್.ಟಿ.ಪಿ, ಕರಾವಳಿ ಬೈಪಾಸ್, ಮಠದಂಗಡಿ, ಅಂಕುದ್ರು, ಬೋಲಾರ್ ಗುಡ್ಡೆ, ಬೊಳ್ಜೆ, ಕೇದಾರ್, ಕೊರಂಗ್ರಪಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.



ಅಂತರಕಾಲೇಜು ಮಟ್ಟದ ಸ್ಪರ್ಧೆಯಲ್ಲಿ ದ್ವಿತೀಯ

ಬಂಟ್ವಾಳ: ಮಂಗಳೂರು ವಿಶ್ವವಿದ್ಯಾಲಯದ ಅನ್ವಯಿಕ ಸಸ್ಯಶಾಸ್ತ್ರ ವಿಭಾಗದಲ್ಲಿ ನಡೆದ ಸ್ಪರ್ಧೆಯಲ್ಲಿ ಬಂಟ್ವಾಳ ವಿದ್ಯಾಗಿರಿ ಶ್ರೀ ವೆಂಕಟರಮಣಸ್ವಾಮೀ ಕಾಲೇಜಿನ ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳಾದ ಆಯಿಷಾ ಸಮಿದಾ ಹಾಗೂ ರಾಲ್ವಿನ್ ಲೋಯ್ಡ್ ರಾಡ್ರಿಗಸ್ ಅವರು ರಸಪ್ರಶ್ನೆ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ. ಇವರನ್ನು ಕಾಲೇಜು ಆಡಳಿತಮಂಡಳಿ, ಪ್ರಾಂಶುಪಾಲರು ಹಾಗೂ ಬೋಧಕವರ್ಗದವರು ಅಭಿನಂದಿಸಿದ್ದಾರೆ.


ನಿಧನ ಸುದ್ದಿ

ಕೆ.ಉಮೇಶ್ ಶೇಟ್



ಮಂಗಳೂರು: ನಗರದ ಬಳ್ಳಾಲ್‌ಭಾಗ್‌ನ ನಿವಾಸಿ ಕೆ. ಉಮೇಶ್ ಶೇಟ್ ಕಂಬಳೂರು (57) ಇವರು ಹೃದಯಾಘಾತದಿಂದ ಶನಿವಾರ ಸ್ವಗೃಹದಲ್ಲಿ ನಿಧನರಾದರು. ನಗರದ ದೈವಜ್ಞ ಬ್ರಾಹ್ಮಣ ಯುವಕ ಸಂಘದ ಸಕ್ರೀಯ ಕಾರ್ಯಕರ್ತರಾಗಿದ್ದರು. ಇವರು ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ.

ಕೆ.ಎಂ.ವೆಂಕಟೇಶ್ವರ ಭಟ್



ಬದಿಯಡ್ಕ: ನೀರ್ಚಾಲು ಕುಂಟಿಕಾನ ಮಠ ಮನೆಯ ಕೆ.ಎಂ.ವೆಂಕಟೇಶ್ವರ ಭಟ್ (72) ಶನಿವಾರ ಬೆಳಗ್ಗೆ ನಿಧನ ಹೊಂದಿದರು. ಕಳೆದ ಒಂದು ವಾರದಿಂದ ಅಸೌಖ್ಯ ಉಲ್ಬಣಗೊಂಡು ಅವರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದರು. ಕುಂಟಿಕಾನ ಮಠ ಕ್ಷೇತ್ರದ ಜೀರ್ಣೋದ್ಧಾರ ಬ್ರಹ್ಮಕಲಶೋತ್ಸವದಲ್ಲಿ ಅಹರ್ನಿಶಿಯಾಗಿ ದುಡಿದಿದ್ದರು. ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಹೆಡ್ ಕ್ಲಾರ್ಕ್ ಆಗಿ ನಿವೃತ್ತರಾಗಿದ್ದ ಅವರು ನೀರ್ಚಾಲು ಸಮೀಪದ ಮೊಳೆಯಾರಿನಲ್ಲಿ ವಾಸಿಸುತ್ತಿದ್ದರು. ಮೃತರು ಪತ್ನಿ ಗೀತಾ, ಮಕ್ಕಳಾದ ಶ್ಯಾಮಕುಮಾರ್, ಅಶ್ವಿನಿ ಕೆ.ಎಂ. (ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷರು) ಅವರನ್ನು ಅಗಲಿದ್ದಾರೆ.

ಲಕ್ಷ್ಮಣ ಮೂಲ್ಯ



ಮಂಜೇಶ್ವರ: ಪಾವೂರು ರೆಂಜಪಡ್ಪು ನಿವಾಸಿ, ಹಿರಿಯ ಕೃಷಿಕರಾಗಿದ್ದ ಲಕ್ಷ್ಮಣ ಮೂಲ್ಯ (70) ಗುರುವಾರ ಸಂಜೆ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿ ಲೀಲಾ, ಮಕ್ಕಳಾದ ದಿನೇಶ್, ಶಶಿಕಲಾ, ವಿನೋದ್ (ವರ್ಕಾಡಿ ಸೇವಾ ಸಹಕಾರಿ ಬ್ಯಾಂಕ್ ನಿರ್ದೇಶಕರು) ಅವರನ್ನು ಅಗಲಿದ್ದಾರೆ.

ನಾರಾಯಣ ಗೌಡ

ಮುಳ್ಳೇರಿಯ: ಬೆಳ್ಳೂರು ಬಸ್ತಿ ಭೂತಕೊಟ್ಯ ನಿವಾಸಿ ನಾರಾಯಣ ಗೌಡ (60) ನಿಧನರಾದರು. ಅವರು ಬೆಳ್ಳೂರು ಗ್ರಾಮ ದೈವದ ಪಾತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ ಇಂದಿರಾ, ಮಕ್ಕಳಾದ ಭರತ್, ಅಜಿತ್, ಕವಿತಾ ಅವರನ್ನು ಅಗಲಿದ್ದಾರೆ.

ಮನೋಹರ ಶೆಟ್ಟಿ



ಮಂಗಳೂರು: ಮಂಗಳೂರಿನ ಕೊಡಿಯಾಲಗುತ್ತು ಕೆ.ಕೆ.ಶೆಟ್ಟಿ ಕಂಪೌಂಡ್ ನಿವಾಸಿ ಕಿಲ್ಪಾಡಿಗುತ್ತು ಮನೋಹರ ಶೆಟ್ಟಿ (57) ಅವರು ಹೃದಯಾಘಾತದಿಂದ ಮೇ 8ರಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಸಿವಿಲ್ ಇಂಜಿನಿಯರ್ ಆಗಿದ್ದ ಅವರು ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ.

ಮುತ್ತಮ್ಮ ಬಿ. ವಿ.

ನಾಪೋಕ್ಲು: ಇಲ್ಲಿಗೆ ಸಮೀಪದ ಪಾಲೂರು ಗ್ರಾಮದ ನಿವಾಸಿ ದಿವಂಗತ ವೆಂಕಪ್ಪ ಪೂಜಾರಿ ಅವರ ಪತ್ನಿ ಮುತ್ತಮ್ಮ ಬಿ. ವಿ.(80) ಗುರುವಾರ ನಿಧನರಾದರು. ಮೃತರು ಒಂದು ಗಂಡು ಐದು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.





ಕಾರ್ಕಳದಿಂದ ಮೂಡುಬಿದಿರೆ ಕಡೆಗೆ ತೆರಳುತ್ತಿದ್ದ ಖಾಸಗಿ ಬಸ್ ಬನ್ನಡ್ಕ ಸೋನ್ಸ್ ಫಾರ್ಮ್ ಮುಂಭಾಗದಲ್ಲಿ ಶನಿವಾರ ಪಲ್ಟಿಯಾಗಿದ್ದು, ಪಲ್ಟಿಯಾಗುವ ವೇಳೆ ಸ್ಕೂಟರ್‌ಗೆ ಡಿಕ್ಕಿಹೊಡೆದಿದೆ. ಘಟನೆಯಲ್ಲಿ ಗಂಭೀರ ಗಾಯಗೊಂಡಿದ್ದ ಸ್ಕೂಟರ್‌ನಲ್ಲಿದ್ದ ಸಹ ಸವಾರೆ ಗೀತಾ ಎಂಬವರು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಒಟ್ಟು 16ಕ್ಕೂ ಅಧಿಕ ಮಂದಿ ಮಂದಿ ಗಾಯಗೊಂಡಿದ್ದಾರೆ.

ಪಶು ಸಂಗೋಪನಾ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಖಾಲಿ!

ಒಟ್ಟು 18,508 ಹುದ್ದೆಗಳ ಪೈಕಿ ಭರ್ತಿಯಾಗಿಲ್ಲ 7074 ಹುದ್ದೆ

ಮಂಗಳೂರು: ರಾಜ್ಯದ ಪಶು ಸಂಗೋಪನಾ ಇಲಾಖೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಬಿದ್ದಿದ್ದು, ಇನ್ನೂ ಕೂಡ ಸಂಪೂರ್ಣವಾಗಿ ಭರ್ತಿ ಮಾಡುವ ಗೋಜಿಗೆ ಸರ್ಕಾರ ಮುಂದಾಗಿಲ್ಲ.

ಸರಕಾರಿ ಅಂಕಿ ಅಂಶಗಳೇ ಹೇಳುವಂತೆ ರಾಜ್ಯದ ಪಶು ಸಂಗೋಪನಾ ಇಲಾಖೆಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 18,508. ಎ ದರ್ಜೆಯ ಹುದ್ದೆಯಿಂದ ಹಿಡಿದು ವಿವಿಧ ವಿಭಾಗಗಳಲ್ಲಿ ಒಟ್ಟು ಭರ್ತಿಯಾಗಿರುವ ಹುದ್ದೆಗಳು 7143. ಹೊರಗುತ್ತಿಯಡಿ 4291 ವಿವಿಧ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಉಳಿದಂತೆ 7,074 ಹುದ್ದೆಗಳು ಖಾಲಿಯಾಗಿವೆ!.

ಪಶು ಸಂಗೋಪನಾ ಇಲಾಖೆಯು 400 ಪಶು ವೈದ್ಯಾಽಕಾರಿಗಳ ಖಾಯಂ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕ್ರಿಯೆ ನಡೆಸುತ್ತಿದೆ. ಹೆಚ್ಚುವರಿಯಾಗಿ 400 ಪಶು ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿದೆ. ಖಾಲಿ ಇರುವ ಪಶು ವೈದ್ಯಕೀಯ ಪರೀಕ್ಷಕರ 300 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಪ್ರಸ್ತಾವನೆಯೂ ಆರ್ಥಿಕ ಇಲಾಖೆಯಲ್ಲಿ ಪ್ರಸ್ತಾವನಾ ಹಂತದಲ್ಲಿದೆ.

ಎಲ್ಲಿ ಎಷ್ಟು ಹುದ್ದೆ ಖಾಲಿ ?

ವೃಂದ	ಮಂಜೂರು	ಭರ್ತಿ	ಹೊರಗುತ್ತಿಗೆ	ಖಾಲಿ
ಎ	3432	1990	367	1075
ಬಿ	282	175	0	107
ಸಿ	7423	3839	200	3384
ಡಿ	7371	1139	3724	2508
ಒಟ್ಟು	18508	7143	4291	7074

ಗೇರು ಮೇಳದ ಭಿತ್ತಿಪತ್ರ ಬಿಡುಗಡೆ | ಸ್ಪೀಕರ್ ಖಾದರ್ ಮೆಚ್ಚುಗೆ

ನಿಗಮದ ಕಾರ್ಯ ಶ್ಲಾಘನೀಯ

ಮಂಗಳೂರು: ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ಗೇರು ಬೆಳೆಯ ಮಹತ್ವದ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯ ನಡೆಯಬೇಕಿದೆ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಲ್ಲಿ ಮಂಗಳೂರಿನ ಕದ್ರಿ ಪಾರ್ಕ್‌ನಲ್ಲಿ ಮೂರು ದಿನಗಳ ಕಾಲ ಆಯೋಜನೆಯಾಗಿರುವ ಗೇರು ಮೇಳದಲ್ಲಿ ಶನಿವಾರ ಗೇರು ಮೇಳದ ಭಿತ್ತಿಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕರಾವಳಿಯಲ್ಲಿ ಗೇರು ಉದ್ಯಮ ಸಾಕಷ್ಟು ಕುಟುಂಬಗಳಿಗೆ ಆಧಾರವಾಗಿತ್ತು. ಬೆಳೆ ಕುಂಠಿತವಾದ ಕಾರಣ ದಕ್ಷಿಣ ಆಫ್ರಿಕಾದಿಂದ ಕಚ್ಚಾ ಗೇರು ಇಲ್ಲಿನ ಕಾರ್ಖಾನೆಗಳಿಗೆ ಆಮದಾಗುತ್ತಿದೆ ಮತ್ತು ಸಂಸ್ಕರಿತವಾದ ಗೇರು ಉತ್ಪನ್ನ ವಿದೇಶಕ್ಕೆ ರಫ್ತಾಗುತ್ತಿದೆ. ಈ ಹಿನ್ನಲೆಯಲ್ಲಿ ಹೆಚ್ಚಿನ ಇಳುವರಿ ನೀಡುವ ಗೇರು ತೋಟಗಳ ಕೃಷಿ ಮತ್ತು ಹೆಚ್ಚಿನ ಉತ್ಪಾದಕತೆ ಮತ್ತು ದೀರ್ಘಾವಧಿಯಲ್ಲಿ ಉತ್ತಮ ಲಾಭಕ್ಕಾಗಿ ಅದರ ಪ್ರಯೋಜನಗಳ ಬಗ್ಗೆ ಸಾಮಾನ್ಯ ಜನರಿಗೆ ಮತ್ತು ರೈತರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಗೇರು ಮೇಳ ನಿಗಮದಿಂದ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷೆ ಮಮತಾ ಗಟ್ಟಿ ಮಾತನಾಡಿ, ರಾಜ್ಯ ಮಟ್ಟದ ಗೇರು ಮೇಳ ಮತ್ತು ಕಾರ್ಯಾಗಾರ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಲ್ಲಿ ಮೇ 17,18 ರಂದುನಗರದ ಕದ್ರಿ ಪಾರ್ಕ್ ನಲ್ಲಿ ನಡೆಯಲಿದೆ.



> ಈ ಮೇಳದಲ್ಲಿ ಹೆಚ್ಚಿನ ಇಳುವರಿ ನೀಡುವ ಗೇರು ತೋಟಗಳ ಕೃಷಿ ಮತ್ತು ಹೆಚ್ಚಿನ ಉತ್ಪಾದಕತೆ ಮತ್ತು ದೀರ್ಘಾವಧಿಯಲ್ಲಿ ಉತ್ತಮ ಲಾಭಕ್ಕಾಗಿ ಅದರ ಪ್ರಯೋಜನಗಳ ಬಗ್ಗೆ ಸಾಮಾನ್ಯ ಜನರಿಗೆ ಮತ್ತು ರೈತರಿಗೆ ಅರಿವು ಮೂಡಿಸುವ ಉದ್ದೇಶ ಹೊಂದಿದೆ .
>
> ■ **ಮಮತಾ ಗಟ್ಟಿ,** ಅಧ್ಯಕ್ಷೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ

ರೈತರು ಮನೆಗೆ ಹೋಗುವಾಗ ಹೊಸ ಜ್ಞಾನ, ಸುಧಾರಿತ ತಳಿಯ ಸಸಿಗಳು ಮತ್ತು ಮಾರುಕಟ್ಟೆಯ ಭರವಸೆಯೊಂದಿಗೆ ಹೋಗುವಂತಿರಬೇಕು ಎಂಬ ಉದ್ದೇಶದೊಂದಿಗೆ ಈ ಮೇಳ ಉಚಿತ ಪ್ರವೇಶದೊಂದಿಗೆ ಜನರಿಗೆ ಹಮ್ಮಿಕೊಳ್ಳಲಾಗಿದೆ ಎಂದು ಮಮತಾ ಗಟ್ಟಿ ತಿಳಿಸಿದರು.

ಗೇರು ಬೀಜ ಮತ್ತು ಹಣ್ಣಿನ ಉಪಯೋಗದ ಬಗ್ಗೆ ಮತ್ತು ಗೇರು ಬೆಳೆ ಮತ್ತು ಅದರ ಇಳುವರಿ ಪ್ರಾಮುಖ್ಯತೆ, ಗೇರು ಬೆಳೆಯ ಸಾಂಸ್ಕೃತಿಕ ಆಚರಣೆಗಳ ಪ್ಯಾಕೇಜ್ ವಿವಿಧ ಬಗೆಯ ಗೇರು ಗಿಡಗಳ ಪ್ರದರ್ಶನ ಗೇರು ಹಣ್ಣಿನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ,ಗೇರು ಉತ್ಪಾದನೆಯ ಪ್ರಸ್ತುತ ಸನ್ನಿವೇಶದ ಬಗ್ಗೆ ಕಾರ್ಯಾಗಾರ ಸಸಿ ವಿತರಣೆ, ಮೌಲ್ಯವರ್ಧನೆ ಕಾರ್ಯಾಗಾರ, ಗೇರು ಹಣ್ಣಿನಿಂದ ರಸ, ಜ್ಯಾಮ್ ಮತ್ತು ಇತರ ಉತ್ಪನ್ನಗಳನ್ನು ತಯಾರಿಸುವ ಬಗ್ಗೆ ತರಬೇತಿ. ಪ್ರಗತಿಪರ ರೈತರಿಗೆ ಸನ್ಮಾನ, ಖರೀದಿದಾರ– ಮಾರಾಟಗಾರರ ಸಮಾವೇಶ ನಡೆಯಲಿದೆ. ಗೇರು ಕೃಷಿಕರು ಹಾಗೂ ಸ್ವಸಹಾಯ ಗುಂಪುಗಳ ಮಳಿಗೆ, ಗೋಡಂಬಿ ಪ್ರದರ್ಶನ ಇರುತ್ತದೆ ಎಂದು ಮಮತಾ ಗಟ್ಟಿ ತಿಳಿಸಿದರು.

ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಕಮಲ ಕರಿಕಾಲನ್ ಮಾತನಾಡಿ, ಮನೆಗೊಂದು ಗೇರು ಗಿಡ ಬೆಳೆಸುವ ಯೋಜನೆ ನಿಗಮ ಹೊಂದಿದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸಿ.ರವಿಶಂಕರ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿ.ಕರಿಕಾಲನ್ ಉಪಸ್ಥಿತರಿದ್ದರು.

ರಾಷ್ಟ್ರಮಟ್ಟದ ಬ್ರೈನೋಬ್ರೈನ್ ಸ್ಪರ್ಧೆ: ಮಡಿಕೇರಿಯ ಅನ್ವಿತ್ ಚಾಂಪಿಯನ್

ಮಡಿಕೇರಿ: ಇತ್ತೀಚೆಗೆ ದಿಲ್ಲಿಯ ತ್ಯಾಗರಾಜ ಸ್ಟೇಡಿಯಂನಲ್ಲಿ ನಡೆದ ರಾಷ್ಟ್ರಮಟ್ಟದ 47ನೇ ಬ್ರೈನೋಬ್ರೈನ್ ಸ್ಪರ್ಧೆಯಲ್ಲಿ ಮಡಿಕೇರಿಯ ಅನ್ವಿತ್.ಎಸ್. (9) ಜೂನಿಯರ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ.

ಸ್ಪರ್ಧೆಯಲ್ಲಿ ದೇಶದ 2000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬ್ರೈನೋಬ್ರೈನ್ ಅಂತರಾಷ್ಟ್ರೀಯ ದುಬೈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆನಂದ್ ಸುಬ್ರಮಣ್ಯಂ, ತಾಂತ್ರಿಕ ನಿರ್ದೇಶಕ ಅರುಲ್ ಸುಬ್ರಮಣ್ಯಂ ಹಾಗೂ ರಾಜ್ಯದ ಸ್ಥಳೀಯ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದು, ಅನ್ವಿತ್ ಜಾಣ್ಮೆಗೆ ಶ್ಲಾಘನೆ ವ್ಯಕ್ತಪಡಿಸಿದರು.

ಅನ್ವಿತ್ ಎಸ್. ಮಡಿಕೇರಿಯ ಬ್ರೈನೋಬ್ರೈನ್ ಅಬಾಕಾಸ್ ಸಂಸ್ಥೆಯ ಮಾಪಂಗಡ ಕವಿತಾ ಕರುಂಬಯ್ಯ ಅವರ ಬಳಿ ತರಬೇತಿ ಪಡೆಯುತ್ತಿದ್ದಾನೆ. ಮದೆನಾಡಿನ ಬಿಜಿಎಸ್ ಶಾಲೆಯ 3ನೇ ತರಗತಿಯ ವಿದ್ಯಾರ್ಥಿಯಾಗಿರುವ ಈತ ಮದೆನಾಡಿನ ಮದೆ ಮಹೇಶ್ವರ ಪದವಿಪೂರ್ವ ಕಾಲೇಜ್‌ನ ಉಪನ್ಯಾಸಕ ಶ್ರೀನಿವಾಸ ಎ. ಹಾಗೂ ಪವಿತ್ರ ಎಂ.ಎನ್ ದಂಪತಿಯ ಪುತ್ರ.



ಹೆತ್ತವರ ಪರಿಶ್ರಮ ಕಾರಣ

ಅನ್ವಿತ್ ಸಣ್ಣ ವಯಸ್ಸಿನಲ್ಲೇ ಈ ಮಟ್ಟದ ಯಶಸ್ಸು ಗಳಿಸಲು ಅವರ ತಂದೆ ತಾಯಿಗಳ ಪರಿಶ್ರಮ ಮತ್ತು ಕುಟುಂಬದವರ ಸಹಕಾರ ಮುಖ್ಯ ಕಾರಣವಾಗಿದೆ. ಅನ್ವಿತ್ ನ ರಾಷ್ಟ್ರಮಟ್ಟದ ಯಶಸ್ಸು ಅವರ ಪೋಷಕರಿಗೆ ಸಲ್ಲಬೇಕು ಎಂದು ಮಾರ್ಗದರ್ಶಕರಾದ ಮಾಪಂಗಡ ಕವಿತಾ ಕರುಂಬಯ್ಯ ತಿಳಿಸಿದ್ದಾರೆ.

ಪ್ರತೀ ವೈಫಲ್ಯವೂ ಬದುಕಿನಲ್ಲಿ ಯಶಸ್ಸಿನ ಹಾದಿಗೆ ಮೆಟ್ಟಿಲು: ಲೆ.ಕ.ಅಂಕಿತಾ ಶ್ರೀವಾಸ್ತವ

ಮೂಡುಬಿದಿರೆ: ಪ್ರತಿಯೊಂದು ವೈಫಲ್ಯವೂ ಜೀವನದಲ್ಲಿ ಮಹತ್ವದ ಪಾಠವನ್ನು ಕಲಿಸಿ ವ್ಯಕ್ತಿಯನ್ನು ಯಶಸ್ಸಿಗೆ ಇನ್ನಷ್ಟು ಹತ್ತಿರಕ್ಕೆ ಕರೆದೊಯ್ಯಬಲ್ಲದು ಎಂದು ನಿವೃತ್ತ ಸೇನಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಅಂಕಿತಾ ಶ್ರೀವಾಸ್ತವ ಅಭಿಪ್ರಾಯಪಟ್ಟರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಶನಿವಾರ ರೋಸ್ಟ್ರಮ್ ಸ್ಪೀಕರ್ಸ್ ಕ್ಲಬ್ ವತಿಯಿಂದ ಆಯೋಜಿಸಲಾದ 'ಒಲಿವ್ ಗ್ರೀನ್ ಟು ಬ್ಯೂಟಿ ಕ್ವೀನ್–ಎ ಜರ್ನಿ ವಿದಿನ್" ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವಗಳು, ಎದುರಿಸಿದ ಸವಾಲುಗಳು, ವೈಫಲ್ಯ ಹಾಗೂ ಸಾಧನೆಗಳನ್ನು ಹಂಚಿಕೊಂಡರು. ಸಂಪೂರ್ಣ ಪುರುಷ ಸೈನಿಕರಿಂದ ಕೂಡಿದ ಘಟಕದಲ್ಲಿ ಮಹಿಳಾ ಅಧಿಕಾರಿಯಾಗಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸುವುದು ಅತ್ಯಂತ ದೊಡ್ಡ ಸವಾಲಾಗಿತ್ತು, ಆದರೆ ಆ ಸವಾಲನ್ನು ಸ್ವೀಕರಿಸಿ ಜಯಿಸಿದ ಪರಿ, ಸದಾ ಪ್ರೇರಣಾದಾಯಕ ಎಂದರು. ಯಶಸ್ಸು ಸಾಧಿಸಲು ಏಕಾಗ್ರತೆ, ದೃಢನಿಶ್ಚಯ, ಕ್ರಿಯಾಶೀಲತೆ ಅಗತ್ಯವೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



> ಲೆಫ್ಟಿನೆಂಟ್ ಕರ್ನಲ್ ಅಂಕಿತಾ ಶ್ರೀವಾಸ್ತವ ಅವರ ಜೀವನಗಾಥೆ ಮಹಿಳೆಯರಿಗೆ ಮಾತ್ರವಲ್ಲ, ಪುರುಷರಿಗೂ ಪ್ರೇರಣೆದಾಯಕ. ವಿಮರ್ಶೆ ಮತ್ತು ತಿರಸ್ಕಾರಗಳು ಜೀವನದ ಅವಿಭಾಜ್ಯ ಅಂಗವಾಗಿದ್ದು, ಸಾರ್ವಜನಿಕ ಅಭಿಪ್ರಾಯಗಳಿಗೆ ಮಣಿಯದೆ ತಮ್ಮ ಗುರಿಯತ್ತ ದೃಢವಾಗಿ ಸಾಗಬೇಕು.
>
> ■ **ವಿವೇಕ್ ಆಳ್ವ** , ಟ್ರಸ್ಟಿ , ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ

ಕಾರ್ಗಿಲ್ ಯುದ್ಧದ ಅವಧಿಯಲ್ಲಿ ಭಾರತ–ಚೀನಾ ಗಡಿಭಾಗದಲ್ಲಿ ಸೇವೆ ಸಲ್ಲಿಸಿದ ಸಂದರ್ಭವನ್ನು ನೆನಪಿಸಿ ಕೊಂಡ ಅವರು, ಕರ್ತವ್ಯದ ವೇಳೆ ಗಂಭೀರವಾಗಿ ಗಾಯಗೊಂಡರೂ ತಮ್ಮ ಶಸ್ತ್ರಾಸ್ತ್ರ ನೆಲಕ್ಕೆ ಬೀಳದಂತೆ ಕಾಪಾಡಿ ಕೊಂಡ ನಿದರ್ಶನವನ್ನು ವಿವರಿಸಿದರು.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಮಹಿಳೆಯರು ತಮ್ಮನ್ನು ಸಾಬೀತು ಪಡಿಸಲು ಕೃತಕ ಪುರುಷತ್ವದ ಗುಣಗಳ ಅಳವಡಿಸಿಕೊಳ್ಳುವಬದಲು ತಮ್ಮತನ ಸ್ವೀಕರಿಸಿ ಮತ್ತಷ್ಟು ಬಲಪಡಿಸಿಕೊಳ್ಳಬೇಕು ಎಂದರು. ಮಹಿಳಾ ಸೇನಾ ಅಧಿಕಾರಿಗಳ ಸೇವಾ ಅವಧಿಯನ್ನು 10 ವರ್ಷಗಳಿಂದ 14 ವರ್ಷಗಳಿಗೆ ವಿಸ್ತರಿಸುವ ಹೋರಾಟದಲ್ಲಿ ತಾವು ಪಾತ್ರವಹಿಸಿದ್ದಾಗಿ ತಿಳಿಸಿದರು.

ಫೋರಂ ಅಧ್ಯಕ್ಷೆಡಾ. ದೀಪಾ ಕೊಠಾರಿ, ಸಕ್ಷಮ ಮಹಿಳಾ ಘಟಕದ ಸಂಚಾಲಕಿ ಡಾ ಗ್ರೀಷ್ಮಾ ವಿವೇಕ ಆಳ್ವ ಇದ್ದರು. ಶ್ರದ್ಧಾ ಹೆಗ್ಡೆ ನಿರೂಪಿಸಿ, ಫಾತಿಮಾ ವಂದಿಸಿದರು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಮಾಸ್ಟರ್ ಪ್ಲ್ಯಾನ್ ಯೋಜನೆ

ರೂ.604.65 ಕೋ. ಕಾಮಗಾರಿಗೆ ಕ್ಯಾಬಿನೆಟ್ ಅಸ್ತು

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಮಾಸ್ಟರ್ ಪ್ಲಾನ್ ಯೋಜನೆಯಲ್ಲಿ ರೂ.604.65 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿ ನಡೆಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅನುಮೋದನೆ ದೊರೆತಿದೆ.ಮಾಸ್ಟರ್ ಪ್ಲಾನ್ ಯೋಜನೆಯಂತೆ 604.65 ಕೋಟಿಯ ಯೋಜನೆ ಸಿದ್ದಗೊಂಡು ಹಲವು ಹಂತಗಳಲ್ಲಿ ಅನುಮತಿಗೊಂಡು ಕ್ಯಾಬಿನೆಟ್‌ನಲ್ಲಿ ಅನುಮೋದನೆಗೊಂಡಿದೆ.ಈ ಮೂಲಕ ಸುಮಾರು 19 ವಿವಿಧ ಅಭಿವೃದ್ಧಿ ಕಾಮಗಾರಿಗಳು ನಡೆಯಲಿದೆ ಎಂದು ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ತಿಳಿಸಿದ್ದಾರೆ.

ಅಭಿವೃದ್ಧಿ ಕಾಮಗಾರಿಗಳ ವಿವರ:

ಶ್ರೀ ದೇವಳದ ಸುತ್ತು ಪೌಳಿ ರೂ.32 ಕೋಟಿ ರೂ. ಪ್ರತ್ಯೇಕ ಸರ್ಪಸಂಸ್ಕಾರ ನಡೆಸುವ ಭಕ್ತರಿಗೆ ನೂತನ ಯಾಗಶಾಲಾ ಬ್ಲಾಕ್ 1 ನಿರ್ಮಾಣ ರೂ.5 ಕೋಟಿ, ಪ್ರತ್ಯೇಕ ಸರ್ಪಸಂಸ್ಕಾರ ನಡೆಸುವ ಭಕ್ತರಿಗೆ ನೂತನ ಯಾಗಶಾಲಾ ಬ್ಲಾಕ್ 2 ನಿರ್ಮಾಣ ರೂ.5.50 ಕೋಟಿ, ಪ್ರತ್ಯೇಕ ಸರ್ಪಸಂಸ್ಕಾರ ನಡೆಸುವ ಭಕ್ತರಿಗೆ ನೂತನ ಯಾಗಶಾಲಾ ಬ್ಲಾಕ್ 3 ನಿರ್ಮಾಣ ರೂ.5.90 ಕೋಟಿ,ಶ್ರೀ ದೇವಳದ ಇಂಜಾಡಿಯಲ್ಲಿ ವಸತಿ ಗೃಹ ಬ್ಲಾಕ್ 1 ನಿರ್ಮಾಣ ರೂ.60 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ವಸತಿ ಗೃಹ ಬ್ಲಾಕ್ 2 ನಿರ್ಮಾಣ ರೂ.60 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿವಸತಿಗೃಹಬ್ಲಾಕ್ 3 ನಿರ್ಮಾಣರೂ.60 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಡಾರ್ಮೆಟರಿ ಕಟ್ಟಡ ಬ್ಲಾಕ್ 1 ನಿರ್ಮಾಣ ರೂ.50 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಡಾರ್ಮೆಟರಿ ಕಟ್ಟಡ ಬ್ಲಾಕ್ 2 ನಿರ್ಮಾಣ ರೂ.50 ಕೋಟಿ,ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಸಿ ಗ್ರೂಪ್ ವಸತಿ ಗೃಹ ಬ್ಲಾಕ್ 1 ನಿರ್ಮಾಣ ರೂ.10.75 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಸಿ ಗ್ರೂಪ್ ವಸತಿ ಗೃಹ ಬ್ಲಾಕ್ 2 ನಿರ್ಮಾಣ ರೂ.10.75 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಸಿ ಗ್ರೂಪ್ ವಸತಿ ಗೃಹ ಬ್ಲಾಕ್ 3 ನಿರ್ಮಾಣ ರೂ.10.75 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಡಿ ಗ್ರೂಪ್ ವಸತಿ ಗೃಹ ಬ್ಲಾಕ್ 1 ನಿರ್ಮಾಣ ರೂ.9.25 ಕೋಟಿ, ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಡಿ ಗ್ರೂಪ್ ವಸತಿ ಗೃಹ ಬ್ಲಾಕ್ 2 ನಿರ್ಮಾಣ ರೂ.9.25 ಕೋಟಿ, ,ಶ್ರೀ ದೇವಳದ ಇಂಜಾಡಿಯಲ್ಲಿ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ ಡಿ ಗ್ರೂಪ್ ವಸತಿ ಗೃಹ ಬ್ಲಾಕ್ 3 ನಿರ್ಮಾಣ ರೂ.9.25 ಕೋಟಿ, ಶ್ರೀ ದೇವಳದಲ್ಲಿ ಅನ್ನದಾಸೋಹ ಭವನ ನಿರ್ಮಾಣ ರೂ.77.25 ಕೋಟಿ, ಶ್ರೀ ದೇವಳದಲ್ಲಿ ಪಾರಂಪರಿಕ ರಥಬೀದಿ ನಿರ್ಮಾಣ ರೂ.47.50, ಶ್ರೀ ದೇವಳದ ರಥಬೀದಿಯ ಎಡಭಾಗದಲ್ಲಿ ವಸತಿ ಗೃಹ ಒಳಗೊಂಡ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ ರೂ 82 ಕೋಟಿ, ದೇವಸ್ಥಾನದ ಸಮೀಪ ತುಳಸಿ ತೋಟದಲ್ಲಿ ಆಶ್ಲೇಷ ಬಲಿ ಮಂಟಪ ನಿರ್ಮಾಣ ರೂ.9.50 ಕೋಟಿ ರೂ.ನಲ್ಲಿ ನಡೆಯಲಿದೆ.



ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ನೇವಲ್ ಅಕಾಡೆಮಿ ಪರೀಕ್ಷೆ | ಸಾಧಕ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿಯಿಂದ ಶ್ಲಾಘನೆ

ಆಳ್ವಾಸ್ ಪಿಯು ಕಾಲೇಜ್‌ನ 24 ವಿದ್ಯಾರ್ಥಿಗಳು ಉತ್ತೀರ್ಣ

ಮೂಡುಬಿದಿರೆ: ಕೇಂದ್ರದ ಲೋಕಸೇವಾ ಆಯೋಗದ ಮೂಲಕ ನಡೆಯುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಹಾಗೂ ನೇವಲ್ ಅಕಾಡೆಮಿ ಪರೀಕ್ಷೆಯಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜಿನ 24 ವಿದ್ಯಾರ್ಥಿಗಳು ಉತ್ತೀರ್ಣರಾಗಿ ರಾಷ್ಟ್ರದ ಗಮನ ಸೆಳೆದಿದ್ದಾರೆ.

ಭಾರತೀಯ ಸೇನೆ, ನೌಕಾಪಡೆ ಹಾಗೂ ವಾಯುಪಡೆಯ ಅಧಿಕಾರಿಗಳಾಗಲು ಎನ್‌ಡಿಎ ಪ್ರಮುಖ ಘಟ್ಟವಾಗಿದ್ದು, ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಸಮರ್ಥವಾಗಿ ಸಿದ್ಧಗೊಳಿಸುವ ಕಾರ್ಯವನ್ನು ಆಳ್ವಾಸ್ ಪದವಿಪೂರ್ವ ಕಾಲೇಜು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ.

ವಿದ್ಯಾರ್ಥಿಗಳಾದ ವಿವೇಕ್ ಎ., ಅದ್ವೈತ್ ವಿಕ್ರಾಂತ್ ಶೆಂಡೆ, ಅಮೋಘ್ ನಾಗರಾಜ್ ಬಿಲ್ಲೂರ್, ಮೊಹಮ್ಮದ್ ಯೂಸುಫ್ ನಿಸಾರ್ ಶೇಖ್, ಸಾಯೀಶ್ ಪ್ರಶಾಂತ್ ತಾಳೇಕರ್, ಪ್ರಹ್ಲಾದ್ ದತ್ತ ದೇಸಾಯಿ, ಸಂಹಿತ್ ವಿ ರಾವ್, ಹರ್ಷ ಎಂ., ಕೃತಿಕ್ ಬಿ., ಪ್ರಣವ್ ಎನ್. ಪಂಡಿತ್, ವಿಜಯಕುಮಾರ್ ಸಂಗಯ್ಯ ಚಿಕ್ಕಮಠ, ಪಿಯೂಷ್ ಎಚ್, ಶ್ರೇಯಸ್ ಸಿ. ಕಬ್ಬಿನಕಂತಿಮಠ, ಭರತೇಶ್ ನಾಗೇಶ್ ಮೊಗೇರ್, ಚಿನ್ಮಯ್ ಎಸ್, ಸಂಕೇತ್ ಭಟ್, ಸುಮಿತ್ ವಿ.ಕೆ., ಹರ್ಷ ರೆಡ್ಡಿ, ಮೋಹಿತ್ ಕುಮಾರ್ ಜೆ, ಅಕ್ಷಯ್ ಭಾರದ್ವಾಜ್, ಅನುಷ್ ಅರುಣ್ ಕೆ., ಪಿಯೂಷ್ ಎಚ್., ವಿನ್ಮಯ್ ನಾರಾಯಣ್ ನಾಡಿಗ್,ಮೆಲ್ರಾಯ್ ಕ್ಯಾಸ್ಟೆಲಿನೋ, ಇಶಾನ ಉತ್ತೀರ್ಣರಾಗಿದ್ದಾರೆ.


ಆಳ್ವಾಸ್‌ನಲ್ಲಿ ಎನ್‌ಡಿಎ ಪರೀಕ್ಷೆಗಾಗಿ ವಿಶೇಷ ತರಬೇತಿ: ಆಳ್ವಾಸ್‌ನಲ್ಲಿ ಎನ್‌ಡಿಎ ತರಬೇತಿಗೆ ವಿಶೇಷ ಮಹತ್ವ ನೀಡಲಾಗುತ್ತಿದ್ದು, ಇಲ್ಲಿ ವಿದ್ಯಾರ್ಥಿಗಳಿಗೆ ಪಿಯು ಶಿಕ್ಷಣದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯನ್ನೂ ಸಮನ್ವಯಗೊಳಿಸಲಾಗಿದೆ. ಎನ್‌ಡಿಎ ಪರೀಕ್ಷೆಯ ಗಣಿತ, ಸಾಮಾನ್ಯ ಜ್ಞಾನ, ಇಂಗ್ಲಿಷ್ ಹಾಗೂ ತಾರ್ಕಿಕ ಚಿಂತನೆ ವಿಭಾಗಗಳಿಗೆ ಅನುಭವಸಂಪನ್ನ ಉಪನ್ಯಾಸಕರು ತರಬೇತಿ ನೀಡುತ್ತಾರೆ. ನಿಯಮಿತ ಮಾಕ್ ಟೆಸ್ಟ್‌ಗಳು, ಪ್ರಶ್ನಾಪತ್ರಿಕೆ ವಿಶ್ಲೇಷಣೆ, ಸಮಯ ನಿರ್ವಹಣೆ ಹಾಗೂ ವೈಯಕ್ತಿಕ ಮಾರ್ಗದರ್ಶನ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ. ವಿದ್ಯಾರ್ಥಿಗಳ ದೈಹಿಕ ಕ್ಷಮತೆಯನ್ನು ವೃದ್ಧಿಸಲು ನಿಯಮಿತ ವ್ಯಾಯಾಮ, ಪರೇಡ್ ತರಬೇತಿ ಮತ್ತು ಕ್ರೀಡಾ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗುತ್ತದೆ.

ಆಳ್ವಾಸ್ ಶಿಕ್ಷಣ ಸಂಸ್ಥೆ ಎನ್‌ಡಿಎ ಕನಸು ಕಾಣುವ ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ಮತ್ತು ಅತ್ಯುತ್ತಮ ತರಬೇತಿ ನೀಡುವ ಮೂಲಕ ರಾಷ್ಟ್ರ ಸೇವೆಗೆ ಯೋಗ್ಯ ಯುವಕರನ್ನು ರೂಪಿಸುತ್ತಿದೆ.

ಸಾಧಕ ವಿದ್ಯಾರ್ಥಿಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ ಎಂ ಮೋಹನ ಆಳ್ವ, ಪ್ರಾಚಾರ್ಯ ಪ್ರೊ ಮೊಹಮ್ಮದ್ ಸದಾಕತ್, ಸಂಯೋಜಕ ವರುಣ್ ಪ್ರಭು ಶ್ಲಾಘಿಸಿದ್ದಾರೆ.







ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಹೈದರಾಬಾದ್	11	7	4	0	14	+0.737
ಪಂಜಾಬ್	10	6	3	1	13	+0.571
ಆರ್‌ಸಿಬಿ	10	6	4	0	12	+1.234
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	10	3	7	0	6	-0.649
ಲಖನೌ	10	3	7	0	6	-0.934

ಎಂಐಗೆ ಮಾಡು ಇಲ್ಲವೇ ಮಡಿ ಪಂದ್ಯ | ಗೆಲುವಿನ ಹಾದಿಗೆ ಮರಳಬೇಕಿದೆ ಆರ್‌ಸಿಬಿ

ಮುಂಬೈಗಿಂದು ರಾಯಲ್ ಚಾಲೆಂಜ್

ರಾಯ್ಪುರ: ತನ್ನ ಕಳೆದೆರಡು ಪಂದ್ಯಗಳನ್ನು ಸೋತಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಗೆಲುವಿನ ಲಯ ಕಂಡುಕೊಳ್ಳಬೇಕಿದೆ. ಮುಂದಿನ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕಾದ ಪರಿಸ್ಥಿತಿಯಲ್ಲಿರುವ ಮುಂಬೈ ಇಂಡಿಯನ್ಸ್‌ಗೆ ಭಾನುವಾರ ರಾತ್ರಿ ರಾಯಲ್ ಚಾಲೆಂಜ್ ಎದುರಾಗಿದೆ.

ಮೊದಲ 5 ಪಂದ್ಯಗಳಲ್ಲಿ ನಾಲ್ಕು ಗೆಲುವು ಸಾಧಿಸಿದ್ದ ರಜತ್ ಪಾಟಿದಾರ್ ನಾಯಕತ್ವದ ಆರ್‌ಸಿಬಿ ತನ್ನ ಹಾಲಿ ಚಾಂಪಿಯನ್ ಗತ್ತು ತೋರಿಸಿತ್ತು. ಮುಂದಿನ ಐದು ಪಂದ್ಯಗಳಲ್ಲಿ ಆರ್‌ಸಿಬಿ ಗೆದ್ದಿರುವುದು ಎರಡೇ ಪಂದ್ಯ. ಈ ಬಾರಿ ಪಂಜಾಬ್ ಕಿಂಗ್ಸ್ ಮತ್ತು ಆರ್‌ಸಿಬಿ ತಂಡಗಳೆರಡೇ ಶ್ರೇಷ್ಠ ಪ್ರದರ್ಶನ ನೀಡುತ್ತಿವೆ. ಉಳಿದೆಲ್ಲಾ ತಂಡಗಳ ಸಾಧನೆ ನೀರಸವೆಂದು ಎಲ್ಲರೂ ಲೆಕ್ಕಾಚಾರ ಹಾಕಿಕೊಂಡಿದ್ದರು.

ಆದರೆ ದ್ವಿತೀಯಾರ್ಧ ಬಹಳ ರೋಚಕತೆಯಿಂದ ತುಂಬಿದ್ದು, ಎಲ್ಲಾ ತಂಡಗಳು ಅದ್ಭುತ ಪ್ರದರ್ಶನ ನೀಡುತ್ತ ಅಂಕಪಟ್ಟಿಯಲ್ಲಿ ಮೇಲೇರುವ ಪ್ರಯತ್ನ ಮಾಡುತ್ತಿವೆ. ಈ ವೇಳೆ ಆರ್‌ಸಿಬಿ ಸ್ವಲ್ಪ ಮಂಕಾದಂತೆ ಕಾಣಿಸುತ್ತಿದ್ದು, ಕಳೆದೆರಡು ಪಂದ್ಯಗಳನ್ನು ಸೋತಿದೆ. ಆದರಲ್ಲೂ ಲಖನೌ ವಿರುದ್ಧ ಮಳೆ ಬಾಧಿತ 19 ಓವರ್‌ಗಳ ರೋಚಕ ಪಂದ್ಯದಲ್ಲಿ ಕೊನೆಯ ಓವರ್‌ನಲ್ಲಿ ಆರ್‌ಸಿಬಿ ಗೆಲುವಿಗೆ 19 ರನ್ ಬೇಕಾಗಿತ್ತು. ಆದರೆ ಆರ್‌ಸಿಬಿ 9 ರನ್‌ಗಳಿಂದ ಸೋಲುಂಡಿತು. ಟೈಟಾನ್ಸ್ ಎದುರು ಆರ್‌ಸಿಬಿ ಬ್ಯಾಟರ್ಸ್ 155 ರನ್ ಕಲೆಹಾಕಿದ್ದೇ ಸೋಲಿಗೆ ಕಾರಣವಾಗಿತ್ತು.

ಅಂಕಪಟ್ಟಿಯಲ್ಲಿ ತೀವ್ರ ಪೈಪೋಟಿ: ಆರ್‌ಸಿಬಿ 10 ಪಂದ್ಯಗಳಿಂದ 12 ಅಂಕಗಳನ್ನು ಸಂಪಾದಿಸಿದೆ. ದ್ವಿತೀಯಾರ್ಧ ಸ್ವಲ್ಪ ತಮ್ಮ ಲಯ ಕಳೆದುಕೊಂಡರೂ ಆರ್‌ಸಿಬಿಗೆ ಇನ್ನೂ ಅವಕಾಶಗಳಿವೆ. ಆದರೆ ಸದ್ಯ ಪೈಪೋಟಿ ಹೆಚ್ಚಾಗಿದೆ. ರಾಜಸ್ಥಾನ್ ಮತ್ತು ಗುಜರಾತ್ ತಂಡಗಳೂ 12 ಅಂಕಗಳನ್ನು ಸಂಪಾದಿಸಿವೆ. ಆರ್‌ಸಿಬಿ ನೆಟ್ ರನ್‌ರೇಟ್ ಬಹಳ ಧನಾತ್ಮಕ ಆಗಿರುವುದರಿಂದ ಅಂಕಪಟ್ಟಿಯಲ್ಲಿ ಆರ್‌ಆರ್, ಜಿಟಿಗಿಂತ ಮೇಲಿದೆ. ಶನಿವಾರ ರಾಜಸ್ಥಾನ-ಗುಜರಾತ್ ಸೆಣಸಾಡಲಿದ್ದು, ಪಂದ್ಯ ಗೆದ್ದು 2 ಅಂಕ ಸಂಪಾದಿಸಿದ ತಂಡ ಅಂಕಪಟ್ಟಿಯಲ್ಲಿ ನಮ್ಮ ಬೆಂಗಳೂರು ತಂಡವನ್ನು ಹಿಂದಿಕ್ಕಲಿದೆ.

ಬ್ಯಾಟರ್‌ಗಳು ಮಿಂಚಲಿ: ಆರ್‌ಸಿಬಿ ತನ್ನ ಬ್ಯಾಟಿಂಗ್ ಕ್ರಮಾಂಕದಲ್ಲಿ ಇನ್ನಷ್ಟು ಆಕ್ರಮಣಕಾರಿ ಆಟ ಪ್ರದರ್ಶಿಸುವ ಅಗತ್ಯವಿದೆ. ಬ್ಯಾಟಿಂಗ್ ವಿಭಾಗದಲ್ಲಿ ತನ್ನ ಕಾಂಬಿನೇಶನ್‌ಗಳ ಮೇಲೆ ಪರಿಶೀಲಿಸುವ ಅಗತ್ಯವಿದೆ. ಈ ಬಾರಿ ಸ್ಫೋಟಕ ಬ್ಯಾಟರ್ ರೊಮಾರಿಯೋ ಶೆಫರ್ಡ್ ಯಾವುದೇ ಮ್ಯಾಚ್ ವಿನ್ನಿಂಗ್ ಪ್ರದರ್ಶನ ನೀಡಿಲ್ಲ. ಬೌಲಿಂಗ್‌ನಲ್ಲಂತೂ ರೊಮಾರಿಯೋ ರನ್ ಬಿಟ್ಟುಕೊಡುವುದು ಹೊಸ ವಿಷಯವಲ್ಲ. ಆದರೂ ಸಾಕಷ್ಟು ಅವಕಾಶಗಳನ್ನು ಟೀಮ್ ಮ್ಯಾನೇಜ್‌ಮೆಂಟ್ ನೀಡುತ್ತಿದೆ.

ಗಾಯಾಳು ಫಿಲ್ ಸಾಲ್ಟ್ ಜಾಗಕ್ಕೆ ಬಂದ ಆರಂಭಿಕ ಜೇಕಬ್ ಬೆಥೆಲ್ ಮತ್ತು ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಸಹ ತಂಡಕ್ಕಾಗಿ ದೊಡ್ಡ ಕೊಡುಗೆ ನೀಡಬೇಕಿದೆ. ಕಳೆದ ನಾಲ್ಕು ಇನ್ನಿಂಗ್ಸ್‌ಗಳಲ್ಲಿ ಬೆಥೆಲ್ 14, 20, 5 ಮತ್ತು 4 ರನ್ ಗಳಿಸಿದ್ದಾರೆ. ಇದು ಅನುಭವಿ ವಿರಾಟ್ ಕೊಹ್ಲಿ ಮೇಲೆ ಒತ್ತಡ ಹೆಚ್ಚಿಸುತ್ತಿದೆ. ಕಳೆದ ಪಂದ್ಯದಲ್ಲಿ ವಿರಾಟ್ ಖಾತೆ ತೆರೆಯದೆ ಔಟಾಗಿದ್ದರು. ಕಳೆದ ಆವೃತ್ತಿಯ ಹೀರೋ ಜಿತೇಶ್ ಈ ಆವೃತ್ತಿಯ ಅತ್ಯಧಿಕ ಸ್ಕೋರ್ 23 ರನ್. ಇನ್ನು ನಾಲ್ಕು ಪಂದ್ಯಗಳಷ್ಟೇ ಉಳಿದಿದ್ದು, ಇವರಿಬ್ಬರು ತಮ್ಮ ಶ್ರೇಷ್ಠ ಪ್ರದರ್ಶನ ನೀಡಲೇಬೇಕು.

ಆರ್‌ಸಿಬಿ-ಮುಂಬೈ,
ರಾತ್ರಿ 7.30ರಿಂದ, ರಾಯ್ಪುರ.





ಲಯದಲ್ಲಿ ಹಿಟ್‌ಮ್ಯಾನ್!

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಮುಂಬೈ 228 ರನ್ ಸವಾಲನ್ನು ಯಶಸ್ವಿಯಾಗಿ ಬೆನ್ನತ್ತಿದೆ. ಗಾಯದಿಂದ ಗುಣಮುಖರಾಗಿ ಮೈದಾನಕ್ಕಿಳಿದ ಹಿಟ್‌ಮ್ಯಾನ್ ರೋಹಿತ್ ಶರ್ಮಾ 44 ಎಸೆತಗಳಿಂದ 84 ರನ್ ಸಿಡಿಸಿದ್ದರು. ಹಲವು ಸೋಲುಗಳ ಬಳಿಕ ಈ ಗೆಲುವು ಮುಂಬೈಗೆ ಗ್ಲುಕೋಸ್ ಸಿಕ್ಕಂತಾಗಿದೆ. ರೋಹಿತ್-ರಿಕೆಲ್ಟನ್ ಅವರ ಜೋಡಿ ಆರ್‌ಸಿಬಿ ವೇಗಿಗಳಾದ ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹ್ಯಾಜೆಲ್‌ವುಡ್ ಅವರನ್ನು ಎದುರಿಸಲಿದ್ದಾರೆ. ವೇಗಿ ಬೂಮ್ರಾ, ಕಾರ್ಬಿನ್ ಬಾಶ್, ಫರುಖನ್ನಾರ್ ಮತ್ತು ಜ್ಯಾಕ್ಸ್‌ರನ್ನು ಒಳಗೊಂಡ ಮುಂಬೈ ಬೌಲಿಂಗ್ ವಿಭಾಗವನ್ನು ಆರ್‌ಸಿಬಿ ಬ್ಯಾಟರ್‌ಗಳು ಭಾನುವಾರ ಎದುರಿಸಲಿದ್ದಾರೆ.

ಸೂರ್ಯ ಲಭ್ಯ?

ಬೆನ್ನು ನೋವಿನ ಕಾರಣದಿಂದ ಲಖನೌ ಪಂದ್ಯದಿಂದ ನಾಯಕ ಹಾರ್ದಿಕ್ ಪಾಂಡ್ಯ ಹೊರಗುಳಿದಿದ್ದು, ಸೂರ್ಯಕುಮಾರ್ ಯಾದವ್ ಹಂಗಾಮಿ ನಾಯಕರಾಗಿದ್ದರು. ಸದ್ಯ ರಾಯ್ಪುರ ತಲುಪಿರುವ ಪಾಂಡ್ಯ ಫಿಟ್‌ನೆಸ್ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಮೇ 7ರಂದು ಹೆಣ್ಣು ಮಗುವಿಗೆ ತಂದೆಯಾದ ಸಂಭ್ರಮದಲ್ಲಿರುವ ಸೂರ್ಯಕುಮಾರ್ ಆರ್‌ಸಿಬಿ ಪಂದ್ಯದಿಂದ ಹೊರಗುಳಿಯುವುದಾಗಿ ವರದಿಯಾಗಿತ್ತು. ಆದರೆ ಸೂರ್ಯ ಆರ್‌ಸಿಬಿ ಪಂದ್ಯಕ್ಕೆ ಲಭ್ಯವಿರುವುದಾಗಿ ಟೀಮ್ ಮ್ಯಾನೇಜ್‌ಮೆಂಟ್‌ಗೆ ಶನಿವಾರ ಸೂರ್ಯ ತಿಳಿಸಿದ್ದಾರೆ ಎನ್ನಲಾಗಿದೆ.

ಚೆನ್ನೈ ಪ್ಲೇಆಫ್ ಓಟಕ್ಕೆ ಲಖನೌ ಹಾಕುತ್ತಾ ಬ್ರೇಕ್?

ಪ್ಲೇಆಫ್ ಕನಸು ಕಾಣುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಲಖನೌ ಸೂಪರ್ ಜೈಂಟ್ಸ್ ತಂಡಗಳು ಭಾನುವಾರದ ಮೊದಲ ಪಂದ್ಯದಲ್ಲಿ ಚೆನ್ನೈನ ಚೆಪಾಕ್ ಸ್ಟೇಡಿಯಂನಲ್ಲಿ ಮುಖಾಮುಖಿ ಆಗಲಿವೆ. 6ನೇ ಸ್ಥಾನದಲ್ಲಿರುವ ಸಿಎಸ್‌ಕೆ 10 ಅಂಕಗಳನ್ನು ಸಂಪಾದಿಸಿದ್ದು ಪ್ಲೇಆಫ್ ಆಸೆಯನ್ನು ಜೀವಂತವಾಗಿರಿಸಿದೆ. ನಿಧಾನವಾಗಿ ಲಯಕ್ಕೆ ಮರಳುತ್ತಿರುವ 5 ಬಾರಿಯ ಐಪಿಎಲ್ ಚಾಂಪಿಯನ್ ಗೇನಾದರೂ ರಿಷಭ್ ಪಂತ್ ನೇತೃತ್ವದ ಲಖನೌ ಆಘಾತ ನೀಡುತ್ತಾ ನೋಡಬೇಕಿದೆ. ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರೇ ಸಿಎಸ್‌ಕೆ ಬ್ಯಾಟಿಂಗ್ ಕ್ರಮಾಂಕದ ಆಧಾರ ಸ್ತಂಭವಾಗಿದ್ದು, ನಾಯಕ ಋತುರಾಜ್ ಕಳೆದೆರಡು ಪಂದ್ಯಗಳಲ್ಲಿ ಲಯ ಕಂಡುಕೊಂಡಿದ್ದಾರೆ.



ಎಂ.ಎಸ್. ಧೋನಿ ಆಡುವುದರ ಬಗ್ಗೆ ಸಿಎಸ್‌ಕೆ ರಹಸ್ಯ ಕಾಪಾಡಿಕೊಂಡಿದೆ. ಕಳೆದ ಕೆಲವು ಪಂದ್ಯಗಳಿಗೂ ಮುನ್ನ ನೆಟ್ಸ್ ಅಭ್ಯಾಸದಲ್ಲಿ ಧೋನಿ ಕಾಣಿಸಿದ್ದು, ಆಡುವ ಬಳಗದಲ್ಲಿ ಕಾಣಿಸುತ್ತಿರಲಿಲ್ಲ.

ಆರ್‌ಸಿಬಿ ವಿರುದ್ಧ ಲಖನೌ ಪರ ಶತಕ ದಾಖಲಿಸಿ ಮಿಚೆಲ್ ಮಾರ್ಷ್ ಮಿಂಚಿದ್ದರು. ಸ್ಥಿರತೆಯಿಲ್ಲದೆ ಲಖನೌ ಈ ಬಾರಿ ವೈಫಲ್ಯ ಕಂಡಿದೆ. ದಾಖಲೆಯ 27 ಕೋಟಿ ರೂ. ಬೆಲೆಗೆ ಖರೀದಿಯಾದ ನಾಯಕ ರಿಷಭ್ ಪಂತ್‌ರಿಗೂ ಇದು ಸಹ ಸವಾಲಿನ ಆವೃತ್ತಿಯಾಗಿದೆ. ಗುರುವಾರ ಆರ್‌ಸಿಬಿ ವಿರುದ್ಧ ಪಂತ್ 10 ಎಸೆತಗಳಲ್ಲಿ 32 ರನ್ ಚಚ್ಚಿದ್ದರು. ಕೊನೆಯ ಸ್ಥಾನದಲ್ಲಿರುವ ಲಖನೌ, ಚೆನ್ನೈಗೆ ಆಘಾತ ನೀಡುವ ಅವಕಾಶ ಹೊಂದಿದೆ.

ಸಿಎಸ್‌ಕೆ-ಲಖನೌ
ಮಧ್ಯಾಹ್ನ 3.30ರಿಂದ, ಚೆನ್ನೈ.

ಕಿರುಸುದ್ದಿ

ವಿನೇಶ್ ಫೋಗಾಟ್ ಕುಸ್ತಿ ಕಂಬ್ಯಾಕ್ ಇನ್ನಷ್ಟು ತಡ

- ಶಿಸ್ತು ಮತ್ತು ಡೋಪಿಂಗ್ ವಿರೋಧಿ ನಿಯಮಗಳ ಉಲ್ಲಂಘನೆ
- ಫೋಗಾಟ್‌ಗೆ ಕುಸ್ತಿ ಫೆಡರೇಷನ್‌ನ 15 ಪುಟಗಳ ಶೋಕಾಸ್



ಹೊಸದಿಲ್ಲಿ: ನಿವೃತ್ತಿ ಹಿಂಪಡೆದು ವೃತ್ತಿಪರ ಕುಸ್ತಿಗೆ ಮರಳುವುದಾಗಿ ಘೋಷಿಸಿದ್ದ ಮಹಿಳಾ ಕುಸ್ತಿಪಟು ವಿನೇಶ್ ಫೋಗಾಟ್ ತಮ್ಮ ಕಂಬ್ಯಾಕ್ ಮಾಡುವುದಕ್ಕೆ ಜೂ.26ರವರೆಗೆ ಕಾಯುವ ಸ್ಥಿತಿ ಎದುರಾಗಿದೆ. ಶನಿವಾರ ಭಾರತೀಯ ಕುಸ್ತಿ ಫೆಡರೇಷನ್, ಶಿಸ್ತು ಉಲ್ಲಂಘನೆ ಮತ್ತು ಡೋಪಿಂಗ್ ವಿರೋಧಿ ನಿಯಮಗಳನ್ನು ವಿನೇಶ್ ಉಲ್ಲಂಘಿಸಿದ್ದಾರೆಂದು 15 ಪುಟಗಳ ಶೋಕಾಸ್ ನೋಟಿಸ್ ಕಳುಹಿಸಿದ್ದು, ಜೂ.26ರವರೆಗೆ ದೇಶೀಯ ಕುಸ್ತಿಯಲ್ಲಿ ಸ್ಪರ್ಧಿಸಲು ಅನರ್ಹವೆಂದು ಸ್ಪಷ್ಟವಾಗಿ ಘೋಷಿಸಿದೆ. ನಿವೃತ್ತಿಯಿಂದ ಮರಳುವ ಕ್ರೀಡಾಪಟುಗಳಿಗೆ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಸಂಸ್ಥೆಯು ಡೋಪಿಂಗ್ ವಿರೋಧಿ ನಿಯಮಗಳ ಪ್ರಕಾರ, ಕಡ್ಡಾಯವಾದ 6 ತಿಂಗಳ ನೋಟಿಸ್ ಅವಧಿಯಿದ್ದು, ಇದನ್ನು ವಿನೇಶ್ ಫೋಗಾಟ್ ಪೂರ್ಣಗೊಳಿಸಿಲ್ಲ ಎಂಬ ಆರೋಪವಿದೆ. ಶಿಸ್ತು ಉಲ್ಲಂಘನೆ ಮತ್ತು ಡೋಪಿಂಗ್ ವಿರೋಧಿ ನಿಯಮಗಳನ್ನು ಫೋಗಟ್ ಉಲ್ಲಂಘಿಸಿರುವ ಹಿನ್ನೆಲೆಯಿಂದ ವಿನೇಶ್ ಮರಳುವುದನ್ನು ಭಾರತೀಯ ಕುಸ್ತಿ ಫೆಡರೇಷನ್ ತಡೆಹಿಡಿದಿದೆ.ರಾಷ್ಟ್ರೀಯ ಫೆಡರೇಷನ್‌ನ ಈ ನಿರ್ಧಾರದಿಂದ, 2024ರ ಪ್ಯಾರಿಸ್ ಒಲಿಂಪಿಕ್ ಗೇಮ್ಸ್‌ನಲ್ಲಿ ಅನರ್ಹತೆ ಎದುರಿಸಿದ್ದ ಬಳಿಕ ಕುಸ್ತಿ ತೊರೆದಿದ್ದ ವಿನೇಶ್ ಫೋಗಟ್ ಮರಳುವುದು ಇನ್ನಷ್ಟು ಮುಂದೂಡಲ್ಪಟ್ಟಿದೆ. ಭಾನುವಾರ ನಡೆಯುವ ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಪಂದ್ಯಾವಳಿಯಲ್ಲಿ ಕುಸ್ತಿ ಕಣಕ್ಕಿಳಿಯಲು ವಿನೇಶ್ ಯೋಜನೆ ಹಾಕಿಕೊಂಡಿದ್ದರು. ಆದರೆ ಪ್ಯಾರಿಸ್‌ನಲ್ಲಿ ವಿನೇಶ್ ವರ್ತನೆ ಭಾರತೀಯ ಕುಸ್ತಿಯ ಪ್ರತಿಷ್ಠೆಗೆ ದೀರ್ಘಕಾಲೀನ ಹಾನಿಯನ್ನು ಉಂಟುಮಾಡಿದೆ ಎಂದು ಭಾರತೀಯ ಕುಸ್ತಿ ಫೆಡರೇಷನ್ ಆರೋಪಿಸಿದೆ.

ಆರ್ಚರಿ ವಿಶ್ವಕಪ್: ಸಾಹಿಲ್ ಜಾಧವ್‌ಗೆ ಕಂಚಿನ ಪದಕ

ಶಾಂಘೈ: ಚೀನಾದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ದ್ವಿತೀಯ ಹಂತದಲ್ಲಿ ಭಾರತದ ಆರ್ಚರಿಪಟು ಸಾಹಿಲ್ ಜಾಧವ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಶನಿವಾರ ಡೆನ್ಮಾರ್ಕ್‌ನ ಮಾರ್ಟಿನ್ ಡಮ್ಸ್‌ಬೋ ಅವರನ್ನು 147-144 ಅಂಕಗಳ ಅಂತರದಿಂದ ಸೋಲಿಸಿ ಸಾಹಿಲ್ ಕಂಚಿನ ಪದಕ ಗೆದ್ದಿದ್ದಾರೆ.

ಡೋಪಿಂಗ್ ಟೆಸ್ಟ್‌ಗೆ ಗೈರು: ಯಶಸ್ವಿ, ಶೆಫಾಲಿಗೆ ನೋಟಿಸ್

ಹೊಸದಿಲ್ಲಿ: ಕಳೆದ ವರ್ಷ ಡೋಪಿಂಗ್ ಪರೀಕ್ಷೆಗೆ ಯಾವುದೇ ಸ್ಪಷ್ಟವಾದ ಕಾರಣಗಳನ್ನು ನೀಡದೆ ಗೈರಾಗಿದ್ದ ಭಾರತೀಯ ಕ್ರಿಕೆಟಿಗರಾದ ಯಶಸ್ವಿ ಜೈಸ್ವಾಲ್ ಮತ್ತು ಶೆಫಾಲಿ ವರ್ಮಾ ಅವರಿಗೆ ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ (ನಾಡಾ) ನೋಟಿಸ್ ಜಾರಿಗೊಳಿಸಿದೆ. 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಗೇಮ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಯಾಗಿರುವ ಹಿನ್ನೆಲೆ ನಾವು ಎಲ್ಲಾ ಪ್ರಕ್ರಿಯೆಗಳನ್ನು ಕಡ್ಡಾಯ ಅನುಸರಿಸಬೇಕು ಎಂದು ಬಿಸಿಸಿಐ ಹೇಳಿದೆ. ಮೂರು ಬಾರಿ ಡೋಪಿಂಗ್ ಪರೀಕ್ಷೆಗೆ ಗೈರಾದರೆ ಅಮಾನತು ಶಿಕ್ಷೆಯನ್ನು ವಿಧಿಸಲಾಗುತ್ತದೆ.

ಅಲೆನ್ 47 ಎಸೆತಗಳ ಶತಕ | ಐಪಿಎಲ್ 2026ರ 11ನೇ ಶತಕ

ಕೆಕೆಆರ್ ಪ್ಲೇಆಫ್ ಆಸೆ ಜೀವಂತ

ಹೊಸದಿಲ್ಲಿ: ಫಿನ್ ಅಲೆನ್ 47 ಎಸೆತಗಳಲ್ಲಿ ಚೊಚ್ಚಲ ಐಪಿಎಲ್ ಶತಕ ದಾಖಲಿಸುವ ಮೂಲಕ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸುಮಾರು 6 ಓವರ್‌ಗಳು ಉಳಿದಿರುವಂತೆಯೇ ಕೆಕೆಆರ್ ತಂಡಕ್ಕೆ 8 ವಿಕೆಟ್‌ಗಳ ಗೆಲುವು ಸಾಧಿಸುವಲ್ಲಿ ನೆರವಾದರು.

ಐಪಿಎಲ್ 2026ರಲ್ಲಿ ಸ್ಫೋಟಕ ಬ್ಯಾಟರ್‌ಗಳು ಒಬ್ಬರ ಮೇಲೊಬ್ಬರಂತೆ ಶತಕ ದಾಖಲಿಸುತ್ತಿದ್ದು, ಬ್ಯಾಟಿಂಗ್ ಪಿಚ್‌ಗಳಲ್ಲಿ ಶತಕ ಚಚ್ಚುವುದು ಸರ್ವೇ ಸಾಮಾನ್ಯ ಎಂಬಂತಾಗಿದೆ. ಇದು ಈ ಆವೃತ್ತಿಯಲ್ಲಿನ 11ನೇ ಶತಕವಾಗಿದ್ದು, ಶತಕ ದಾಖಲಿಸಿದ ಫಿನ್ 3ನೇ ವಿದೇಶಿ ಬ್ಯಾಟರ್ ಆಗಿದ್ದಾರೆ.

ಆಧುನಿಕ ಕ್ರಿಕೆಟ್‌ನಲ್ಲಿ 140+ ರನ್ ಅನ್ನು ಸುಲಭ ಗುರಿಯೆಂದೇ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇಂತಹದ್ದರಲ್ಲಿ ದಿಲ್ಲಿ ಕ್ಯಾಪಿಟಲ್ಸ್ ನೀಡಿದ 143 ರನ್ ಸುಲಭ ಗುರಿಯನ್ನು ಅಲೆನ್ ಸ್ಫೋಟಕ ಶತಕದ ನೆರವಿನಿಂದ ಕೋಲ್ಕತ ನೈಟ್‌ರೈಡರ್ಸ್ 14.2 ಓವರ್‌ಗಳಲ್ಲೇ ಚಚ್ಚಿ ಬಿಸಾಕಿ 8 ವಿಕೆಟ್ ಗೆಲುವು ಸಾಧಿಸಿದೆ.

ಕೆಕೆಆರ್ ಪ್ಲೇಆಫ್ ಆಸೆ ಜೀವಂತ: ಇದರೊಂದಿಗೆ ಕೆಕೆಆರ್ 4ನೇ ಗೆಲುವು ಕಂಡಿದ್ದು, 9 ಅಂಕಗಳೊಂದಿಗೆ 7ನೇ ಸ್ಥಾನ ಸಂಪಾದಿಸಿದೆ. ಈ ಗೆಲುವಿನೊಂದಿಗೆ ಕೆಕೆಆರ್ ತನ್ನ ಪ್ಲೇಆಫ್ ಆಸೆಯನ್ನು ಜೀವಂತವಾಗಿ ಇರಿಸಿಕೊಂಡಿದೆ. ಕೆಕೆಆರ್ ಸ್ಪಿನ್ನರ್‌ಗಳು 12 ಓವರ್‌ಗಳನ್ನು ಎಸೆದಿದ್ದು 76 ರನ್‌ಗಳಿಗೆ 3 ವಿಕೆಟ್ ಕಿತ್ತು ಕ್ಯಾಪಿಟಲ್ಸ್ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ದಿಲ್ಲಿ ಸ್ಪಿನ್ನರ್‌ಗಳು 9 ಓವರ್‌ಗಳಲ್ಲಿ 102 ರನ್ ಬಿಟ್ಟುಕೊಟ್ಟಿದ್ದು, 1 ವಿಕೆಟ್ ಅಷ್ಟೇ ಪಡೆದಿದ್ದರು. ಕೆಕೆಆರ್ ಇನ್ನಿಂಗ್ಸ್ ವೇಳೆ ಅಲೆನ್ ಸ್ಫೋಟಕ ಆಟದಿಂದ ಸಂಪೂರ್ಣ ಪ್ರಾಬಲ್ಯ ಸಾಧಿಸಿದ್ದರು.

ಪವರ್‌ಪ್ಲೇನಲ್ಲಿ ಅಲೆನ್ ಸ್ಫೋಟ!: ಐಪಿಎಲ್‌ನಲ್ಲಿ 8ನೇ ಇನ್ನಿಂಗ್ಸ್ ಆಡಿದ ಅಲೆನ್ ಇದೇ ಮೊದಲ ಬಾರಿಗೆ ಸಂಪೂರ್ಣ ಪವರ್‌ಪ್ಲೇ ಓವರ್‌ಗಳಲ್ಲಿ ಬ್ಯಾಟ್ ಬೀಸಿದರು. ಫಿನ್ ಸ್ಟ್ರೈಟ್ ಡ್ರೈವ್ ಆಡಿದಾಗ ಚೆಂಡು ವೇಗಿ ಮಿಚೆಲ್ ಸ್ಟಾರ್ಕ್ ಕೈಗೆ ತಾಗಿ ಸ್ಟಂಪ್‌ಗೆ ತಗುಲಿದ್ದು, ದುರದೃಷ್ಟವಶಾತ್ ನಾಯಕ ಅಜಿಂಕ್ಯಾ ರಹಾನೆ ರನೌಟ್ ಆಗಿದ್ದರು. ಅಲೆನ್ ಸಿಡಿದಿದ್ದರಿಂದ ಕೆಕೆಆರ್ ತಂಡಕ್ಕೇನು ನಷ್ಟವಾಗಲಿಲ್ಲ. ಆರಂಭಿಕ ಹಂತದಲ್ಲಿ 17 ಎಸೆತಗಳಲ್ಲಿ 20 ರನ್ ಗಳಿಸಿದ್ದ ಫಿನ್ ತಾವು ಎದುರಿಸಿದ ಮುಂದಿನ 30 ಎಸೆತಗಳಲ್ಲಿ 80 ರನ್ ಚಚ್ಚಿದ್ದಾರೆ. ಕೆಕೆಆರ್ ಗೆಲುವಿಗೆ 2 ರನ್ ಬೇಕಿದ್ದಾಗ ಸಿಕ್ಸರ್‌ಗೆತ್ತಿ ಚೊಚ್ಚಲ ಐಪಿಎಲ್ ಶತಕ ಪೂರೈಸಿದರು. 47 ಎಸೆತಗಳಲ್ಲಿ 5 ಬೌಂಡರಿ ಮತ್ತು 10 ಸಿಕ್ಸರ್‌ಗಳೊಂದಿಗೆ 100 ರನ್ ಗಳಿಸಿ ಅಜೇಯರಾಗುಳಿದಿದ್ದ ಅಲೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಐಪಿಎಲ್ 2026ರಲ್ಲಿ ಶತಕವೀರರು

ಆಟಗಾರ	ಶತಕಗಳು
ಸಂಜು ಸ್ಯಾಮ್ಸನ್ (ಸಿಎಸ್‌ಕೆ)	2
ಅಭಿಷೇಕ್ ಶರ್ಮಾ (ಸನ್‌ರೈಸರ್ಸ್)	1
ತಿಲಕ್ ವರ್ಮಾ (ಮುಂಬೈ)	1
ಸಾಯಿ ಸುದರ್ಶನ್ (ಗುಜರಾತ್)	1
ಕೆಎಲ್ ರಾಹುಲ್ (ದಿಲ್ಲಿ)	1
ವೈಭವ್ ಸೂರ್ಯವಂಶಿ (ರಾಜಸ್ಥಾನ್)	2
ಕ್ವಿಂಟನ್ ಡಿ ಕಾಕ್ (ಮುಂಬೈ)	1
ಕೂಪರ್ ಕೊನೊಲಿ (ಪಂಜಾಬ್)	1
ಫಿನ್ ಅಲೆನ್ (ಕೆಕೆಆರ್)	1

(ಈ ಆವೃತ್ತಿಯಲ್ಲಿ ಇಲ್ಲಿಯವರೆಗೆ ಶತಕವೀರರಿಲ್ಲದ ಏಕೈಕ ತಂಡ ಆರ್‌ಸಿಬಿ)

ಸಂಕ್ಷಿಪ್ತ ಸ್ಕೋರ್

ದಿಲ್ಲಿ 142/8(20): ನಿಸ್ಸಾಂಕ 50, ಆಶುತೋಷ್ 39 (ತ್ಯಾಗಿ 25ಕ್ಕೆ 2 ರಾಯ್ 31ಕ್ಕೆ 2)
ಕೆಕೆಆರ್ 147/2(14.2): ಅಲೆನ್ 100★, ಗ್ರೀನ್ 33★ (ಅಕ್ಷರ್ 27ಕ್ಕೆ 1).

ರಾಜಸ್ಥಾನದಲ್ಲಿ ಪ್ರಿನ್ಸ್ ಗಿಲ್ ಆರ್ಭಟ

ಜೈಪುರ: ನಾಯಕ ಶುಭ್ಮನ್ ಮತ್ತು ಸುದರ್ಶನ್ ಆರ್ಭಟದ ಪರಿಣಾಮ ಶನಿವಾರದ ಪಂದ್ಯದಲ್ಲಿ ರಾಜಸ್ಥಾನ್ ವಿರುದ್ಧ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 229 ರನ್‌ಗಳ ಬೃಹತ್ ಮೊತ್ತವನ್ನು ಕಲೆಹಾಕಿದೆ. ಇದರಿಂದ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದ ರಾಜಸ್ಥಾನ್ ತಂಡದ ಗೆಲುವಿಗೆ 230 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಬೇಕಿದೆ.



ನಾಯಕ ಶುಭ್ಮನ್ ಗಿಲ್ (84) ಮತ್ತು ಸಾಯಿ ಸುದರ್ಶನ್ (55) ಭರ್ಜರಿ ಅರ್ಧ ಶತಕಗಳ ನೆರವಿನಿಂದ ಗುಜರಾತ್ ಟೈಟಾನ್ಸ್ ತಂಡ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 229 ರನ್ ಕಲೆಹಾಕಿತು. ಶುಭ್ಮನ್-ಸುದರ್ಶನ್‌ರ ಆರಂಭಿಕ ಜೋಡಿ ಮೊದಲ ವಿಕೆಟ್‌ಗೆ 118 ರನ್ ಕಲೆಹಾಕಿತು. ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ರಾಹುಲ್ ತೆವಾಟಿಯಾ ಇನ್ನಷ್ಟು ಆಕ್ರಮಣ ಮಾಡಿದ್ದರಿಂದ ಸ್ಕೋರ್ 220ರ ಗಡಿ ದಾಟಿತು.

ಪೂಂಜಾ ಗೂಗ್ಲಿಗೆ ಸುದರ್ಶನ್ ಔಟ್: ಆರ್‌ಆರ್ ತಂಡದಲ್ಲಿ ಅನುಭವಿ ಲೆಗ್ ಸ್ಪಿನ್ನರ್ ರವೀಂದ್ರ ಜಡೇಜಾರಿಗೆ ಸ್ಪಿನ್ ವಿಭಾಗದಲ್ಲಿ ಸಾಥ್ ನೀಡುತ್ತಿರುವ ಕನ್ನಡಿಗ ಆಫ್‌ಸ್ಪಿನ್ನರ್ ಯಶ್ ಪೂಂಜಾ ಗೂಗ್ಲಿ ಎಸೆಯುವ ಮೂಲಕ ತಂಡಕ್ಕೆ ಬ್ರೇಕ್‌ಥ್ರೂ ನೀಡಿದರು. ಪೂಂಜಾ ಗೂಗ್ಲಿಗೆ ಸ್ಫೋಟಕ ಬ್ಯಾಟರ್ ಸುದರ್ಶನ್ ಹೊಡೆಯುವ ಯತ್ನದಲ್ಲಿ ಆರ್ಚರ್‌ಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರ್

ಗುಜರಾತ್ 229/4 (20)
ಗಿಲ್ 84(44), ಸಾಯಿ 55(36), ಸುಂದರ್ 37(20)*, ತೆವಾಟಿಯಾ 14(4)* (ಪೂಂಜಾ 37ಕ್ಕೆ 1, ಜಡೇಜಾ 34ಕ್ಕೆ 1, ಬ್ರಿಜೇಶ್ 47ಕ್ಕೆ 2).

ತುಮಕೂರು ಓಪನ್: ಸೆಮಿನಲ್ಲಿ ಸೋತ ವೈದೇಹಿ, ಝೀಲ್

ಅಗ್ರ ಶ್ರೇಯಾಂಕಿತೆಯರ ಫೈನಲ್

ತುಮಕೂರು: ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೂರ್ನಿಯಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಜಸ್ಟಿನಾ ಮಿಕುಲ್‌ಸ್ಕೈಟ್ ಮತ್ತು ದ್ವಿತೀಯ ಶ್ರೇಯಾಂಕಿತ ಆಟಗಾರ್ತಿ ಜುರ್ಝೂನಾ ಪಾವ್ಲಿಕೊವ್‌ಸ್ಕಾ ಶನಿವಾರ ತುಮಕೂರು ಜಿಲ್ಲಾ ಟೆನಿಸ್ ಕೋರ್ಟ್‌ನಲ್ಲಿ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಗೆದ್ದು ಬ್ಲಾಕ್‌ಬಸ್ಟರ್ ಫೈನಲ್ ಪಂದ್ಯಕ್ಕೆ ಸಜ್ಜಾಗಿದ್ದಾರೆ. ಭಾನುವಾರ ನಡೆಯಲಿರುವ ಸಿಂಗಲ್ಸ್ ಫೈನಲ್‌ನಲ್ಲಿ, ಪಂದ್ಯಾವಳಿಯ ಅಗ್ರ ಎರಡು ಶ್ರೇಯಾಂಕಿತ ಆಟಗಾರ್ತಿಗಳಾದ ಜಸ್ಟಿನಾ ಮಿಕುಲ್‌ಸ್ಕೈಟ್ ಮತ್ತು ಜುರ್ಝೂನಾ ಪಾವ್ಲಿಕೊವ್‌ಸ್ಕಾ ನಡುವಿನ ರೋಮಾಂಚಕಾರಿ ಮುಖಾಮುಖಿಗೆ ಸಾಕ್ಷಿಯಾಗಲಿದೆ.

ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಲಿಥುವೇನಿಯಾದ ಜಸ್ಟಿನಾ 6-3, 2-6, 6-2 ಸೆಟ್‌ಗಳಿಂದ ಭಾರತದ ವೈದೇಹಿ ಚೌಧರಿ ಅವರನ್ನು ಮಣಿಸಿದರು. ಎರಡನೇ ಸೆಮಿಫೈನಲ್‌ನಲ್ಲಿ ಭಾರತದ ಝೀಲ್ ದೇಸಾಯಿ ಹೃದಯ ವಿದ್ರಾವಕ ದೃಶ್ಯಗಳನ್ನು ಸೃಷ್ಟಿಸಿದರು. ಅವರು ಪೋಲೆಂಡ್‌ನ ಜುರ್ಝೂನಾ ಪಾವ್ಲಿಕೊವ್‌ಸ್ಕಾ ವಿರುದ್ಧ ಮುನ್ನಡೆ ಸಾಧಿಸಿದರೂ ನಿವೃತ್ತಿ ಹೊಂದಬೇಕಾಯಿತು. ಉದ್ವಿಗ್ನ ಟೈಬ್ರೇಕ್‌ನಲ್ಲಿ 11-9ರಿಂದ ಜಯ ಸಾಧಿಸಿದ ಝೀಲ್ ಎರಡನೇ ಸೆಟ್‌ನಲ್ಲಿ 2-1 ಮುನ್ನಡೆ ಸಾಧಿಸಿದ್ದರು. ಪಂದ್ಯಾವಳಿಯ ಆರಂಭದಲ್ಲಿ ಅನೇಕ ಮ್ಯಾರಥಾನ್ ಪಂದ್ಯಗಳ ಮೂಲಕ ಹೋರಾಡಿದ ಭಾರತೀಯ ಆಟಗಾರ್ತಿ, ವೈದ್ಯಕೀಯ ಟೈಮ್ ಔಟ್ ತೆಗೆದುಕೊಂಡರು. ಆದರೆ ದೈಹಿಕ ಸಮಸ್ಯೆಗಳು ಅಂತಿಮವಾಗಿ ಅವರನ್ನು ಹಿಡಿದುಕೊಂಡಿದ್ದರಿಂದ ಕೋರ್ಟ್‌ನಲ್ಲಿ ನಿಲ್ಲಲು ಸಹ ಹೆಣಗಾಡಿದರು. ವಿಪರ್ಯಾಸವೆಂದರೆ, ಪಾವ್ಲಿಕೊವ್‌ಸ್ಕಾ ಸ್ವತಃ ಪಂದ್ಯದ ಸಮಯದಲ್ಲಿ ಭುಜದ ಗಾಯದಿಂದ ಬಳಲುತ್ತಿದ್ದರು. ಈ ಪಂದ್ಯ, ದೈಹಿಕವಾಗಿ ಹೆಣಗಾಡುತ್ತಿರುವ ಇಬ್ಬರು ಆಟಗಾರ್ತಿಯರ ನಡುವಿನ ಹೋರಾಟಕ್ಕೆ ಸಾಕ್ಷಿಯಾಗಿತ್ತು.





ಇಟಾಲಿಯನ್ ಓಪನ್: ಗಾಯದಿಂದ ಮರಳಿದ್ದ ಜೊಕೋಗೆ ಸೋಲು

ಆರು ಬಾರಿಯ ಚಾಂಪಿಯನ್‌ಗೆ ಆಘಾತ!

ರೋಮ್: ಇಟಾಲಿಯನ್ ಓಪನ್ ಟೆನಿಸ್ ಪಂದ್ಯಾವಳಿಯಲ್ಲಿ ಆರು ಬಾರಿಯ ಚಾಂಪಿಯನ್ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಚ್ ಅವರು ಮೊದಲ ಸುತ್ತಿನ ಪಂದ್ಯದಲ್ಲೇ ಸೋಲುಂಡು ಹೊರಬಿದ್ದು ಆಘಾತವನ್ನು ಅನುಭವಿಸಿದ್ದಾರೆ.

ಕಳೆದ ಎರಡು ತಿಂಗಳುಗಳಿಂದ ಭುಜದ ನೋವಿನಿಂದ ಬಳಲುತ್ತಿದ್ದ ಜೊಕೊ ವೃತ್ತಿಪರ ಟೆನಿಸ್‌ಗೆ ಮರಳಿದ್ದು, ಕಳೆದ 11 ತಿಂಗಳಲ್ಲಿ ಆವೆಮಣ್ಣಿನ ಅಂಗಣದಲ್ಲಿ ಜೊಕೊವಿಚ್ ಆಡಿರಲಿಲ್ಲ. ಶುಕ್ರವಾರ ರಾತ್ರಿ ನಡೆದ ಇಟಾಲಿಯನ್ ಓಪನ್ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 79ನೇ ಶ್ರೇಯಾಂಕದ ಡಿನೋ ಪ್ರಿಜ್ಮಿಕ್ ವಿರುದ್ಧ 6-2, 2-6, 4-6 ಸೆಟ್‌ಗಳ ಅಂತರದಿಂದ ಜೊಕೊವಿಚ್ ಸೋಲುಂಡಿದ್ದಾರೆ. ಪೂರ್ಣ ಲಯದಲ್ಲಿಲ್ಲದ ದಂತಕತೆಯನ್ನು ಸೋಲಿಸಿದ ಕಡಿಮೆ ಶ್ರೇಯಾಂಕಿತ ಕ್ರೊವೇಶಿಯಾ ಟೆನಿಸಿಗ ತಮ್ಮ ಕನಸಿನ ಗೆಲುವು ಸಾಧಿಸಿದ್ದಾರೆ. ಅಚ್ಚರಿಯೆಂದರೆ, ಡಿನೋ ಇದೇ ಮೊದಲ ಬಾರಿಗೆ ಇಟಾಲಿಯನ್ ಓಪನ್ ಅರ್ಹತೆ ಪಡೆದುಕೊಂಡಿದ್ದು, ತಮ್ಮ ಚೊಚ್ಚಲ ಇಟಾಲಿಯನ್ ಓಪನ್ ಪಂದ್ಯದಲ್ಲೇ ಜೊಕೊವಿಚ್ ಅವರನ್ನು ಮಣಿಸಿದ ಸಾಧನೆ ಮಾಡಿದ್ದಾರೆ. 24 ಬಾರಿಯ ಗ್ರ್ಯಾಂಡ್ ಸ್ಲಾಮ್ ಹಾಗೂ 6 ಬಾರಿಯ ಇಟಾಲಿಯನ್ ಓಪನ್ ಚಾಂಪಿಯನ್ ಜೊಕೊವಿಚ್ ಈ ಬಾರಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದಾರೆ. ಪ್ರಿಜ್ಮಿಕ್ ಈವರೆಗೆ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯಲ್ಲ, ಸಿಂಗಲ್ಸ್ ಪಂದ್ಯವನ್ನೂ ಗೆದ್ದಿರಲಿಲ್ಲ. ಈ ಪಂದ್ಯಕ್ಕೂ ಮುನ್ನ ಆತ 16 ಟೂರ್ ಲೆವೆಲ್ ಪಂದ್ಯಗಳನ್ನು ಗೆದ್ದುಕೊಂಡಿದ್ದರು. ಪ್ರಿಜ್ಮಿಕ್ ತಮ್ಮ ಟೆನಿಸ್ ವೃತ್ತಿಜೀವನದ ಅತಿ ದೊಡ್ಡ ಗೆಲುವಿನ ಕ್ಷಣ ಅನುಭವಿಸಿದರು.




ಫ್ರೆಂಚ್ ಓಪನ್‌ನಲ್ಲಿ ಸಿನ್ನರ್, ಜೊಕೊ ಫೇವರಿಟ್

ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಕೈ ನೋವಿನ ಕಾರಣದಿಂದ ಮುಂಬರುವ ಫ್ರೆಂಚ್ ಓಪನ್‌ನಿಂದ ಹೊರಗುಳಿದಿದ್ದು, ಇಟಲಿಯ ಯಾನಿಕ್ ಸಿನ್ನರ್ ಮತ್ತು ಮೇ 22ರಂದು 39 ವರ್ಷದವರಾಗುವ ಜೊಕೊವಿಚ್ ಅವರೇ ಪ್ರಶಸ್ತಿ ಗೆಲ್ಲುವ ಫೇವರಿಟ್ ಆಗಿರಲಿದ್ದಾರೆ. ಫ್ರೆಂಚ್ ಓಪನ್ 2026 ಗ್ರ್ಯಾಂಡ್ ಸ್ಲಾಮ್ ಮೇ 18ರಿಂದ ಜೂ.7ರವರೆಗೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5979

5978 ಉತ್ತರ

ಎಡದಿಂದ ಬಲಕ್ಕೆ:
1.ನಿಗಾ 2.ಗಳಿಸು
3.ಪಾಪ 6.ಜಲಪಾತ
7.ವಯೋಗುಣ 8.ಕುಡಿ
9.ಪತಿ 13.ದಕ್ಷ 14.ದ್ವೀಪ
15.ಸಂಬಂಧ 16.ಕಾತರ
17.ಗಂಧರ್ವಗಿರಿ

ಮೇಲಿನಿಂದ ಕೆಳಕ್ಕೆ :
1.ನಿರಂಜನ 2.ಗಣಿತಹಾಕು
3.ಸುಳ್ಳುವದಂತಿ
5.ಪರಿಣಯ
8.ಗಂಧದಗುಡಿ
10.ಪರೋಪಕಾರಿ
11.ಕಾಳಸಂತೆ 12.ಹಗರಣ

ಎಡದಿಂದ ಬಲಕ್ಕೆ
1.ಸಂಪತ್ತು ಗಳಿಕೆಯ ವಿರುದ್ಧ ಮಾಡಿದ ಮುಷ್ಕರ (2)
2.ಸೂರ್ಯದೇವನಲ್ಲಿ ತಿರುಗಿದ್ದಾನೆ (3)
4.ಬಿಂಕದಿಂದ ತಂದ ಉಕ್ಕಿನ ಕೋಲು (2)
6.ಇದು ಧನುಸ್ಸಿನ ಹದೆ (4)
7.ಬಡವರಿಗೆ ಸಹಾಯ ಮಾಡುತ್ತಿರುವ ಭಟ (4)
8.ಮೂರು ಭುಜಗಳುಳ್ಳ ಆಕಾರವಿದು (3)
10.ಕೆಚ್ಚದೆಯ-ಧೈರ್ಯಶಾಲಿಯೀತ (2)
11.ಹಾನಿಕಾರಕವಾದ ಚಟ (3)
13.ತಂದೆಯ ಅಥವಾ ತಾಯಿಯ ತಂದೆ (2)
15.ಅರಸನಿಗೆ ಪರ್ವತದಲ್ಲಿ ಕಂಡ ಸೊಪ್ಪು (4)
16.ಅನುಭವ ಪಡೆ ಎಂಬರ್ಥದ ನುಡಿಗಟ್ಟು (4)

ಮೇಲಿನಿಂದ ಕೆಳಕ್ಕೆ
1.ವಿಜ್ಞಾನಿ ಮಾಡುವ ಅನ್ವೇಷಣೆ (4)
2.ಕಲೆಗಳಲ್ಲಿ ಪಡೆದ ಹೆಚ್ಚಿನ ಜ್ಞಾನ (4)
3.ಕಠಿಣ ಪರೀಕ್ಷೆಗೆ ಒಳಗಾಗು ಎಂಬರ್ಥದ ಶಬ್ದ (4)
5.ವಿಮೋಚನೆ-ಬಂಧಮುಕ್ತಿ (4)
9.ಪೂಜೆಗೆ ಬಳಸುವ ಪವಿತ್ರ ಪಾತ್ರೆ (3)
10.ಹಗಲು-ಇರುಳು ಕೂಡಿ ಕಾಣುತ್ತಿವೆ (4)
11.ವ್ಯಕ್ತ ಪಡಿಸಿದ ಅಭಿಪ್ರಾಯ ಹೀಗೆ ಭಿನ್ನವಾಗಿದೆ (4)
12.ಇರುಳಿನ ಮಧ್ಯಭಾಗವಿದು (4)
14.ಬವಳಿ ಬರುವಿಕೆಯನ್ನು ಹೀಗೆನ್ನಬಹುದು (4)

ಕಿರುಸುದ್ದಿ

ಅಪ್ರಾಪ್ತ ವಯಸ್ಕರ ವಾಹನ ಸವಾರಿ: ಮತ್ತೆ ಎರಡು ವಾಹನ ವಶಕ್ಕೆ, ಆರ್‌ಸಿ ಮಾಲಕರ ವಿರುದ್ಧ ಕೇಸು

ಮಂಜೇಶ್ವರ: ಅಪ್ರಾಪ್ತರು ವಾಹನ ಚಲಾಸುತ್ತಿರುವುದು ವ್ಯಾಪಕಗೊಂಡಿದ್ದು, ಈ ನಿಟ್ಟಿನಲ್ಲಿ ಮಂಜೇಶ್ವರ ಪೊಲೀಸರು ವಾಹನ ತಪಾಸಣೆ ಬಿಗುಗೊಳಿಸಿದ್ದಾರೆ. ಅದರಂತೆ ಮತ್ತೆ ಎರಡು ವಾಹನವನ್ನು ವಶಕ್ಕೆ ತೆಗೆದು ಆರ್‌ಸಿ ಮಾಲಕರ ವಿರುದ್ಧ ಕೇಸು ದಾಖಲಿಸಲಾಗಿದೆ. ಗುರುವಾರ ರಾತ್ರಿ 7.30ಕ್ಕೆ ಪಾವೂರು ಮುಡಿಮಾರಿನಲ್ಲಿ ವಾಹನ ತಪಾಸಣೆ ನಡೆಯುತ್ತಿದ್ದ ವೇಳೆ ಗೇರುಕಟ್ಟೆ ಕಡೆಯಿಂದ ಕೆದುಂಬಾಡಿ ಭಾಗಕ್ಕೆ 17 ವರ್ಷದ ಬಾಲಕ ಚಲಾಯಿಸುತ್ತಿದ್ದ ನ್ಯಾನೋ ಕಾರನ್ನು ವಶಕ್ಕೆ ತೆಗೆಯಲಾಗಿದೆ. ಈ ಸಂಬಂಧ ಆರ್‌ಸಿ ಮಾಲಕಿ, ಬಾಲಕನ ತಾಯಿ, ಪಾವೂರು ಗೇರುಕಟ್ಟೆ ನಿವಾಸಿ ರಸೀನಾ (35) ಎಂಬವರ ವಿರುದ್ಧ ಕೇಸು ದಾಖಲಿಸಲಾಗಿದೆ. ಈ ಮಧ್ಯೆ ಶುಕ್ರವಾರ ಬೆಳಗ್ಗೆ 10.45ಕ್ಕೆ ಮೀಯಪದವು ರಸ್ತೆಯ ಬಾಳಿಯೂರಿನಲ್ಲಿ ವಾಹನ ತಪಾಸಣೆ ವೇಳೆ ಹೊಸಂಗಡಿ ಭಾಗದಿಂದ ಮೀಯಪದವು ಕಡೆಗೆ 14ರ ಬಾಲಕ ಚಲಾಯಿಸುತ್ತಿದ್ದ ಸ್ಕೂಟರ್‌ನ್ನು ವಶಕ್ಕೆ ತೆಗೆದು ಆರ್‌ಸಿ ಮಾಲಕಿಯಾದ ಬಾಲಕನ ತಾಯಿ, ಬಾಳಿಯೂರು ನಿವಾಸಿ ಫಾತಿಮ್ಮತ್ ರಸಿಯಾ ಎಂ. (43) ಎಂಬವರ ವಿರುದ್ಧ ಕೇಸು ದಾಖಲಿಸಲಾಗಿದೆ. ಮಂಜೇಶ್ವರ ಎಸ್‌ಐ ರತೀಶ್ ಕೆ.ಜಿ. ನೇತೃತ್ವದಲ್ಲಿ ವಾಹನ ತಪಾಸಣೆ ನಡೆಸಲಾಯಿತು

ವೀರಾಜಪೇಟೆ-ಗೋಣಿಕೊಪ್ಪಲು ಮುಖ್ಯ ರಸ್ತೆಯಲ್ಲಿ ರಾತ್ರಿ ಹುಲಿರಾಯ ಪ್ರತ್ಯಕ್ಷ

ವೀರಾಜಪೇಟೆ: ವೀರಾಜಪೇಟೆ –ಗೋಣಿಕೊಪ್ಪ ಮುಖ್ಯರಸ್ತೆಯ ವನ ಭದ್ರಾಕಾಳಿ ದೇವಸ್ಥಾನ ಬಳಿಯ ಮೂರ್ವಾಂಡ ಕುಟುಂಬದ ಐನ್ ಮನೆ ರಸ್ತೆಯ ಹತ್ತಿರ ರಾತ್ರಿ ಹುಲಿ ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿದೆ. ಸ್ಥಳಕ್ಕೆ ಆರಣ್ಯ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ವೀರಾಜಪೇಟೆಯ ಆರ್‌ಎಫ್‌ಒ ಶಿವರಾಂ ಹಾಗೂ ಡಿಆರ್ ಎಫ್‌ಒ ಸಂಜೀತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜನರು ಎಚ್ಚರಿಕೆಯಿಂದ ಇರುವಂತೆ ತಿಳಿಸಿದ್ದಾರೆ.

ವಿದ್ಯಾರ್ಥಿನಿಯೊಂದಿಗೆ ಅಸಭ್ಯ ವರ್ತನೆ: ದೂರು

ಬಂಟ್ವಾಳ: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ವಿದ್ಯಾರ್ಥಿನಿಯೊಂದಿಗೆ ಕಂಡಕ್ಟರ್ ಅಸಭ್ಯವಾಗಿ ವರ್ತಿಸಿದ್ದು, ಈಬಗ್ಗೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸಂತ್ರಸ್ಥ ವಿದ್ಯಾರ್ಥಿನಿಯು ಮಧ್ಯಾಹ್ನ ಕಾಲೇಜಿನಿಂದ ಕ್ಲಾಸ್ ಮುಗಿಸಿ ತನ್ನ ಸ್ನೇಹಿತೆಯೊಂದಿಗೆ ಮನೆಗೆ ಹೋಗಲು ಉಜಿರೆಯಿಂದ ಮಂಗಳೂರಿಗೆ ತೆರಳುತ್ತಿದ್ದ ಸರಕಾರಿ ಬಸ್ ನಲ್ಲಿ ಹತ್ತಿ ಸೀಟ್‌ನಲ್ಲಿ ಕುಳಿತುಕೊಂಡಿದ್ದರು. ಬಸ್ ಬೆಳ್ತಂಗಡಿ ಪೇಟೆಯ ಬಳಿ ಸಮೀಪಿಸುತ್ತಿದ್ದಾಗ, ಬಸ್ ನ ಕಂಡಕ್ಟರ್ ಬಸ್‌ನಲ್ಲಿ ಹೆಚ್ಚು ಜನ ಇಲ್ಲದಿದ್ದರೂ ಟಿಕೇಟ್ ಕೊಡುವ ನೆಪದಲ್ಲಿ ಬಂದು ವಿದ್ಯಾರ್ಥಿನಿಯೊಂದಿಗೆ ಆಸಭ್ಯವಾಗಿ ವರ್ತಿಸಿರುತ್ತಾನೆ ಎಂದು ದೂರಲಾಗಿದೆ. ವಿದ್ಯಾರ್ಥಿನಿ ಬೆಳ್ತಂಗಡಿ ಬಸ್ ಸ್ಟಾಪ್ ನಲ್ಲಿ ಇಳಿದು ಈ ವಿಚಾರವನ್ನು ತನ್ನ ಅಣ್ಣನಿಗೆ ಕರೆ ಮಾಡಿ ತಿಳಿಸಿದ್ದು. ಆ ಬಳಿಕ ವಿದ್ಯಾರ್ಥಿನಿ ಬೇರೆ ಬಸ್ ಹತ್ತಿ ಪುಂಜಾಲಕಟ್ಟೆ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದು, ಅದರಂತೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ಪತ್ನಿ ನಾಪತ್ತೆ: ಪತಿಯಿಂದ ದೂರು

ಕುಂಬಳೆ: ಕುಂಬಳೆ ಕೊಯಿಪ್ಪಾಡಿ ನಾರಾಯಣ ಮಂಗಲ ನಿವಾಸಿ 38ರ ಹರೆಯದ ಮಹಿಳೆ ನಾಪತ್ತೆಯಾಗಿರುವುದಾಗಿ ಕುಂಬಳೆ ಪೊಲೀಸರಿಗೆ ದೂರು ನೀಡಲಾಗಿದೆ. ನಾರಾಯಣ ಮಂಗಲದ ಲಕ್ಷ್ಮೀ ನಿವಾಸದ ಶ್ವೇತಾ (38) ಎಂಬಾಕೆ ನಾಪತ್ತೆಯಾಗಿದ್ದು, ಈ ಕುರಿತು ಆಕೆಯ ಪತಿ ಶಶಿಧರ ನೀಡಿದ ದೂರಿನಂತೆ ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ.

ಮೇ 5ರಂದು ಸಂಜೆ ಮನೆಯಿಂದ ಹೊರ ಹೋದ ಆಕೆ ಬಳಿಕ ಮನೆಗೆ ಹಿಂತಿರುಗಲಿಲ್ಲ. ಇದೇ ವೇಳೆ ಕಾಸರಗೋಡು ಚೆನ್ನಿಕೆರೆಯ ಓರ್ವ ವ್ಯಕ್ತಿಯೊಂದಿಗೆ ಆಕೆ ತೆರಳಿರಬಹುದೆಂದು ದೂರಿನಲ್ಲಿ ಸಂಶಯಿಸಲಾಗಿದೆ.

ಮಹಿಳೆ ನಾಪತ್ತೆ: ದೂರು

ಕಾಞಂಗಾಡು: ಆಸ್ಪತ್ರೆಗೆ ತೆರಳುವುದಾಗಿ ತಿಳಿಸಿ ಮನೆಯಿಂದ ಹೊರಟ ಮಹಿಳೆಯು ನಾಪತ್ತೆಯಾಗಿರುವುದಾಗಿ ದೂರು ನೀಡಲಾಗಿದೆ. ಚೀಮೇನಿ ಅತ್ತುಟ್ಟಿ ಕುಂಬಳಂ ತಡತ್ತಿಲ್ ಶಿಹಾಬುದ್ದೀನ್‌ರ ಪತ್ನಿ ರಿಶ್ವಾನ (26) ನಾಪತ್ತೆಯಾದವರು. ಮೇ 7ರಂದು ಬೆಳಗ್ಗೆ 10ಗಂಟೆಗೆ ಪಯ್ಯನ್ನೂರಿನ ಆಸ್ಪತ್ರೆಗೆ ತೆರಳುವುದಾಗಿ ತಿಳಿಸಿ ಮನೆಯಿಂದ ಹೊರಟಿದ್ದರು. ಪತಿ ನೀಡಿದ ದೂರಿನಂತೆ ಚೀಮೇನಿ ಪೊಲೀಸರು ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಕಿಡಿಗೇಡಿ ಕೃತ್ಯಕ್ಕೆ ಸಾವಿರಾರು ಕಾಫಿ ಗಿಡ ಬಲಿ

ಮಡಿಕೇರಿ: ತೋಟದಲ್ಲಿದ್ದ ಸುಮಾರು ಎರಡು ಸಾವಿರಕ್ಕೂ ಅಧಿಕ ಕಾಫಿ, 250ಕ್ಕೂ ಅಧಿಕ ಕಾಳುಮೆಣಸಿನ ಬಳ್ಳಿಗಳನ್ನು ಅಪರಿಚಿತರು ನಾಶಪಡಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಿರುನಾಣಿ ಕಳಕೂರಿನಲ್ಲಿ ನಡೆದಿದೆ.


ಕಳಕೂರು ಗ್ರಾಮದ ಕುಪ್ಪಣಮಾಡ ಗೌತಮ್ ಎಂಬವರಿಗೆ ಸೇರಿದ ಕಾಫಿ ತೋಟದಲ್ಲಿ ಈ ದುಷ್ಕೃತ್ಯ ನಡೆದಿದ್ದು, ಇದರಿಂದ ಹಲವು ಲಕ್ಷ ರೂಪಾಯಿಗಳ ನಷ್ಟವಾಗಿರುವುದಾಗಿ ಅಂದಾಜಿಸಲಾಗಿದೆ.

ಗೌತಮ್ ಅವರು ನಾಲ್ಕು ಎಕರೆ ತೋಟವನ್ನು ಹಲವಾರು ವರ್ಷಗಳಿಂದ ಪೋಷಿಸುತ್ತಿದ್ದರು. ತೋಟದಲ್ಲಿ ಏಳು ವರ್ಷ ಹಳೆಯ ಕಾಫಿ ಗಿಡಗಳು ಮತ್ತು ಮೆಣಸಿನ ಬಳ್ಳಿಗಳಿದ್ದು, ಭದ್ರತೆಗಾಗಿ ಹಲವಾರು ಕಡೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಮೂಲಗಳ ಪ್ರಕಾರ, ಗೌತಮ್ ಮತ್ತು ಅವರ ಕುಟುಂಬ ಮದುವೆ ಸಮಾರಂಭದಲ್ಲಿ ಭಾಗವಹಿಸಲು ಮೈಸೂರಿಗೆ ತೆರಳಿದ್ದಾಗ ಈ ಘಟನೆ ನಡೆದಿದ್ದು, ಶಂಕಿತ ದುಷ್ಕರ್ಮಿಗಳು ತೋಟಕ್ಕೆ ಪ್ರವೇಶಿಸಿ ದೊಡ್ಡ ಪ್ರಮಾಣದ ವಿನಾಶವನ್ನು ಮಾಡಿದ್ದಾರೆ. ಬೆಳೆಗಳಿಗೆ ಹಾನಿ ಮಾಡುವುದರ ಜೊತೆಗೆ, ಆರೋಪಿಗಳು, ಆಸ್ತಿಯಲ್ಲಿ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾಗಳನ್ನು ತೆಗೆದುಹಾಕಿ ಸಂಪರ್ಕ ಕಡಿತಗೊಳಿಸಿ ಸಾಕ್ಷ್ಯ ಗಳನ್ನು ನಾಶಮಾಡಲು ಮತ್ತು ಗುರುತಿಸುವಿಕೆಯನ್ನು ತಪ್ಪಿಸಲು ಪ್ರಯತ್ನಿಸಿದ್ದಾರೆ. ಈ ಕೃತ್ಯದಲ್ಲಿ ಹಲವು ಮಂದಿಯನ್ನು ಬಳಸಿಕೊಂಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಘಟನೆಯು ಸ್ಥಳೀಯ ನಿವಾಸಿಗಳು ಮತ್ತು ಕೃಷಿಕ ಸಮುದಾಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದ್ದು, ಆರೋಪಿಗಳನ್ನು ಶೀಘ್ರವೇ ಪತ್ತೆಹಚ್ಚಿ ಬಂಧಿಸುವಂತೆ ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಹುದಿಕೇರಿ ಕಂದಾಯ ನಿರೀಕ್ಷಕ ಸಂತೋಷ್ ಭೇಟಿ ನೀಡಿ ಹಾನಿಗೊಳಗಾದ ಪ್ರದೇಶದ ಪರಿಶೀಲನೆ ನಡೆಸಿದರು. ಶ್ರೀಮಂಗಲ ಪೊಲೀಸ್ ಠಾಣೆ ನಿರೀಕ್ಷಕ ಎ.ಎಸ್. ರವೀಂದ್ರ ಮತ್ತು ತಂಡ ಕೂಡಾ ಪರಿಶೀಲನೆ ನಡೆಸಿ ತನಿಖೆ ಕೈಗೆತ್ತಿಕೊಂಡಿದ್ದಾರೆ.

ದ.ಕ ಜಿಲ್ಲೆಯಲ್ಲಿದ್ದಾರೆ **18,09,936** ಮತದಾರರು | ಇದುವರೆಗೆ **15,43824**ರಷ್ಟು ಪರಿಷ್ಕರಣೆ ಪೂರ್ಣ

ಬಿಸಿಲನ್ನೂ ಲೆಕ್ಕಿಸದೆ ಸಾಗಿದೆ ಮ್ಯಾಪಿಂಗ್!

ಮಂಗಳೂರು: ಬಿರು ಬಿಸಿಲಿನ ನಡುವೆಯೂ ರಾಜ್ಯದಲ್ಲೀಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್)ಗೆ ಪೂರ್ವಭಾವಿ ಮ್ಯಾಪಿಂಗ್ ಕಾರ್ಯ ನಡೆಯುತ್ತಿದೆ. ಅತೀ ಶೀಘ್ರದಲ್ಲಿ ಈ ಮ್ಯಾಪಿಂಗ್ ಕಾರ್ಯ ಮುಗಿಸುವತ್ತ ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಈ ಕಾರ್ಯ ತ್ವರಿತಗತಿಯಲ್ಲಿ ಸಾಗುತ್ತಿದೆ.



ದ.ಕ.ದಲ್ಲಿ 18,09,936 ಮತದಾರರು

2025ರ ಮತದಾರರ ಪಟ್ಟಿಯಲ್ಲಿ ದ.ಕ. ಜಿಲ್ಲೆಯಲ್ಲಿ ಒಟ್ಟು 18,09,936 ಮತದಾರರಿದ್ದಾರೆ. ಈ ಮತದಾರರ ಮ್ಯಾಪಿಂಗ್ ಕಾರ್ಯ ನಡೆಯುತ್ತಿದ್ದು, ಇದುವರೆಗೆ 15,43824 ರಷ್ಟು ಮತದಾರರ ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ.

ಏನಿದು ಎಸ್‌ಐಆರ್ ಮ್ಯಾಪಿಂಗ್?

ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಇನ್ನಷ್ಟೇ ಭಾರತ ಚುನಾವಣಾ ಆಯೋಗದಿಂದ ಘೋಷಣೆಯಾಗಬೇಕಿದೆ. ಆದರೆ ಇದಕ್ಕೆ ಪೂರ್ವಭಾವಿ ಚಟುವಟಿಕೆಯಾಗಿ ಮ್ಯಾಪಿಂಗ್ ಕಾರ್ಯ ಅಂದರೆ, 2025ರ ಮತದಾರರನ್ನು 2002ರ ಮತದಾರರ ಪಟ್ಟಿಗೆ ಮ್ಯಾಪ್ ಮಾಡುವ ಕಾರ್ಯ ನಡೆಯುತ್ತಿದೆ. 2002ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು 2025ರ ಪಟ್ಟಿಯೊಂದಿಗೆ ಪರಿಶೀಲನೆ ಮಾಡುವ ಕಾರ್ಯ ಇದಾಗಿದ್ದು, ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ವಿಧಾನಸಭಾ ಕ್ಷೇತ್ರದ ಸಂಖ್ಯೆ, ಮತದಾರರ ಪಟ್ಟಿ ಭಾಗ ಸಂಖ್ಯೆ ಮತ್ತು ಮತದಾರರ ಕ್ರಮ ಸಂಖೆಯನ್ನು ಹಾಕಿ ಮ್ಯಾಪ್ ಮಾಡಿಕೊಳ್ಳುತ್ತಾರೆ. ಬಿಎಲ್‌ಒ ಆ್ಯಪ್ ಮೂಲಕ ಈ ಕಾರ್ಯ ನಡೆಯುತ್ತಿದ್ದು, ಮ್ಯಾಪ್ ಮಾಡಿರುವ ಮತದಾರರ ಮಕ್ಕಳು ಮತ್ತು ಮೊಮ್ಮಕ್ಕಳು 40 ವರ್ಷಕ್ಕಿಂತ ಕಡಿಮೆ ಇರುವವರು ಇದ್ದರೆ ಅಂತಹವನ್ನು add progeny optionನಲ್ಲಿ ಅವರ ತಂದೆ ತಾಯಿ ಅಥವಾ ಅಜ್ಜ ಅಜ್ಜಿ ಜತೆ ಪರಿಶೀಲನೆ ಮಾಡಲಾಗುತ್ತದೆ.

ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದಲ್ಲಿ?

40 ವರ್ಷಕ್ಕಿಂತ ಮೇಲ್ಪಟ್ಟ ಮತದಾರರು 2002ರ ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದಲ್ಲಿ ಅವರ ತಂದೆ, ತಾಯಿ ಅಥವಾ ಅಜ್ಜ ಅಜ್ಜಿಯ ಹೆಸರಿದ್ದರೆ mark elector (for self)as progeny optionನಲ್ಲಿ ಅವರ ತಂದೆ ತಾಯಿ ಅಥವಾ ಅಜ್ಜ ಅಜ್ಜಿಗೆ ಮ್ಯಾಪ್ ಮಾಡಬಹುದಾಗಿದೆ.

40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮತದಾರರ ತಂದೆ, ತಾಯಿ ಅಥವಾ ಅಜ್ಜ ಅಜ್ಜಿಯ ಹೆಸರು 2002ರ ಮತದಾರರ ಪಟ್ಟಿಯಲ್ಲಿದ್ದರೆ ಅವರ ಹೆಸರನ್ನು mark elector(for self) option ನಲ್ಲಿ ಅವರ ತಂದೆ ತಾಯಿ ಅಥವಾ ಅಜ್ಜ ಅಜ್ಜಿಗೆ ಮ್ಯಾಪ್ ಮಾಡಬಹುದಾಗಿದೆ.

ವಿಧಾನಸಭಾ ಕ್ಷೇತ್ರವಾರು ಮತದಾರರ ಪಟ್ಟಿ ಮ್ಯಾಪಿಂಗ್ ವಿವರ

ವಿ.ಸ.ಕ್ಷೇತ್ರ	ಮತದಾರರು	ಮ್ಯಾಪಿಂಗ್ ಪೂರ್ಣ
ಬೆಳ್ತಂಗಡಿ	231250	216877
ಮೂಡುಬಿದಿರೆ	209387	184351
ಮಂಗಳೂರು ಉತ್ತರ	254928	188990
ಮಂಗಳೂರು ದಕ್ಷಿಣ	249570	79744
ಮಂಗಳೂರು	212944	178673
ಬಂಟ್ವಾಳ	225991	204390
ಪುತ್ತೂರು	216749	193408
ಸುಳ್ಯ	209117	197391
ಒಟ್ಟು	1809936	1543824

ಲಿಂಕ್ ಆಗದಿದ್ದವರಿಗೆ ನೊಟೀಸ್ ಬರುತ್ತದೆ

ಪ್ರಸಕ್ತ ನಡೆಯುವ ಮ್ಯಾಪಿಂಗ್ ಕಾರ್ಯದಲ್ಲಿ 2002 ಮತ್ತು 2025ರ ಮತದಾರರ ಪಟ್ಟಿಗೆ ಮತದಾರರ ಲಿಂಕ್ ಆಗದಿದ್ದವರಿಗೆ ಎಸ್‌ಐಆರ್ ಘೋಷಣೆಯಾದ ಬಳಿಕ ಇಆರ್ ಒಗಳು ನೋಟೀಸ್ ನೀಡುತ್ತಾರೆ. ಆ ಸಂದರ್ಭ ಅವರು ತಮ್ಮ ಅಧಿಕೃತ ದಾಖಲೆಗಳೊಂದಿಗೆ ಪರಿಶೀಲನೆಗೆ ಅವಕಾಶ ಕಲ್ಪಿಸಲಾಗುತ್ತದೆ. 2002ನಲ್ಲಿ ಎಲ್ಲಿಯಾದರೂ ಹೆಸರು ಮತದಾರರ ಪಟ್ಟಿಯಲ್ಲಿ ಇದ್ದಲ್ಲಿ ಪಟ್ಟಿಯಿಂದ ಹೆಸರು ಬಿಟ್ಟು ಹೋಗುವ ಪ್ರಮೇಯ ಎದುರಾಗುವ ಸಾಧ್ಯತೆ ಬರುವುದಿಲ್ಲ. ವಲಸೆ ಕಾರ್ಮಿಕರ ವಿಷಯದಲ್ಲಿ ಜಿಲ್ಲೆಯಲ್ಲಿ ಸ್ವಲ್ಪ ಸಮಸ್ಯೆ ಆಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಲ್‌ಒಗಳ ಮೂಲಕ ಪ್ರಕ್ರಿಯೆ

2002ರ ಮತದಾರರ ಪಟ್ಟಿಯಲ್ಲಿ ಮದುವೆಯಾಗಿ ಬಂದಿರುವ ಅಥವಾ ಮದುವೆಯಾಗಿ ಹೋಗಿರುವ ಮತದಾರರು ಅವರ ತಂದೆ, ತಾಯಿ ಅಥವಾ ಅಜ್ಜ, ಅಜ್ಜಿಗೆ ಮ್ಯಾಪ್ ಮಾಡಬಹುದು. ಸದ್ಯ ಈ ಪ್ರಕ್ರಿಯೆಗಳು ಜಿಲ್ಲೆಯಲ್ಲಿ ಬಿಎಲ್‌ಒಗಳ ಮೂಲಕ ನಡೆಯುತ್ತಿದೆ.

ಹೆಸರು ಬಿಟ್ಟು ಹೋಗುವ ಆರೋಪ ಇಲ್ಲ

ರಾಜ್ಯದ ಮತದಾರರ ಪಟ್ಟಿ ಹಾಗೂ ಚುನಾವಣಾ ಪ್ರಕ್ರಿಯೆಯಲ್ಲೂ ನಾವು ದೇಶದಲ್ಲಿಯೇ ಉತ್ತಮವಾಗಿದ್ದೇವೆ. ನಮ್ಮಲ್ಲಿ ಮತದಾರರ ಪಟ್ಟಿಯಿಂದ ಹೆಸರು ಬಿಟ್ಟು ಹೋಗುವ ಆರೋಪ ಬರುವ ಸಾಧ್ಯತೆಗಳಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮತ್ತು ಉತ್ತರ ಭಾರತ ಮತ್ತು ಉತ್ತರ ಕರ್ನಾಟಕದಿಂದ ಬಂದಿರುವ ವಲಸೆ ಕಾರ್ಮಿಕರ ಮತದಾರರ ಪಟ್ಟಿಯಲ್ಲಿ ಸಾಮ್ಯತೆಗಳು ಕಂಡು ಬಾರದಿರುವ ಸಾಧ್ಯತೆಗಳಿವೆ ಎನ್ನುತ್ತಾರೆ ಅಧಿಕಾರಿಗಳು.

ಮೂಲ ಊರುಗಳಲ್ಲಿ ಮತದಾನ ಹಕ್ಕು

2002ರಲ್ಲಿ ಅವರು ತಮ್ಮ ಮೂಲ ಊರುಗಳಲ್ಲಿ ಮತದಾನದ ಹಕ್ಕನ್ನು ಪಡೆದು, ಅಲ್ಲಿಯ ಪಟ್ಟಿಯಲ್ಲಿ ಹೆಸರು ಹೊಂದಿರುತ್ತಾರೆ. 2002ರ ಬಳಿಕ ಇಲ್ಲಿಗೆ ಬಂದು ಇಲ್ಲಿ ವಾಸವಾಗಿದ್ದು, ಇಲ್ಲಿ ಪಟ್ಟಿಯಲ್ಲಿ ಹೆಸರು ಇಲ್ಲದಿರುತ್ತದೆ. ಇಂತಹವರ ಲಿಂಕ್ ಪ್ರಕ್ರಿಯೆ ನಡೆಯಬೇಕಾಗಿದೆ.

ಮತದಾರರ ಪಟ್ಟಿಗೆ ಲಿಂಕ್ ಮಾಡುವ ಸಂದರ್ಭ ಮಾಹಿತಿಯ ಕೊರತೆಯಿಂದ ಅವರು ಹಿಂದೆ ಇದ್ದ ವಿಧಾನಸಭಾ ಕ್ಷೇತ್ರದ ಹೆಸರು ಗೊತ್ತಿಲ್ಲದ ಸಂದರ್ಭ ಅದನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಸ್ವಲ್ಪ ಮಟ್ಟಿಗೆ ಪ್ರಕ್ರಿಯೆಗೆ ತೊಡಕುಂಟಾಗುತ್ತಿದೆ ಎನ್ನುತ್ತಾರೆ ಇಲ್ಲಿನ ಅಧಿಕಾರಿಗಳು.

ಕೊರಗಜ್ಜ ಹೆಸರಲ್ಲಿ ವೃತ್ತ ನಿರ್ಮಾಣಕ್ಕೆ ಆಕ್ಷೇಪ: ಸ್ಪೀಕರ್ ಖಾದರ್‌ಗೆ ಘೇರಾವ್





ಉಳ್ಳಾಲ: ನಿಟ್ಟೆ ಪರಿಗಣಿತ ವಿಶ್ವ ವಿದ್ಯಾನಿಲಯವು ಕುತ್ತಾರು ಜಂಕ್ಷನ್‌ನಲ್ಲಿ ವೃತ್ತ ನಿರ್ಮಿಸುತ್ತಿದ್ದು, ಇಲ್ಲಿ ಕೊರಗಜ್ಜನ ಹೆಸರಲ್ಲಿ ವೃತ್ತ ಮಾಡಬಾರದು ಎಂದು ಭಿನ್ನ ಕೋಮಿನ ಗುಂಪೊಂದು ಸ್ಪೀಕರ್ ಖಾದರ್ ಅವರಿಗೆ ಘೇರಾವ್ ಹಾಕಿ ತರಾಟೆಗೈದ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಉಳ್ಳಾಲ ಮಾಸ್ತಿಕಟ್ಟೆಯ ರೆಸಾರ್ಟ್ ಒಂದರಲ್ಲಿ ಗುರುವಾರ ರಾತ್ರಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಿನ್ನ ಕೋಮಿನ ಗುಂಪೊಂದು ಸ್ಪೀಕರ್ ಖಾದರ್ ಅವರಲ್ಲಿ ಕುತ್ತಾರು ಜಂಕ್ಷನ್ ನಲ್ಲಿ ಕೊರಗಜ್ಜನ ವೃತ್ತ ನಿರ್ಮಾಣದ ಬಗ್ಗೆ ಆಕ್ಷೇಪ ಎತ್ತಿದ್ದು ಅದರ ವೀಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದೆ.

'ಸೌಹಾರ್ದ ವೃತ್ತ'ಕ್ಕೆ ಸಿದ್ಧತೆ


ಕುತ್ತಾರು ಕೊರಗಜ್ಜನ ಆದಿಕ್ಷೇತ್ರಕ್ಕೆ ರಾಜ್ಯದ ವಿವಿಧ ಕಡೆಗಳಿಂದ ಬರುವ ಭಕ್ತಾದಿಗಳಿಗೆ ಮಾಹಿತಿ ನೀಡುವುದಕ್ಕಾಗಿ ವರುಷಗಳ ಹಿಂದೆ ಕುತ್ತಾರು ಜಂಕ್ಷನ್ ನಲ್ಲಿ ಸ್ಥಳೀಯ ಬಜರಂಗದಳ ಸಂಘಟನೆಯು ಕೊರಗಜ್ಜನ ಮುಟ್ಟಾಳೆ ಹಾಗೂ ದಂಟೆಯ ಪ್ರತಿಕೃತಿಯುಳ್ಳ ಸಣ್ಣ ವೃತ್ತವೊಂದನ್ನ ನಿರ್ಮಿಸಿತ್ತು. ಇದೀಗ ಆ ಸಣ್ಣ ವೃತ್ತವನ್ನ ತೆರವುಗೊಳಿಸಿ ನಿಟ್ಟೆ ಪರಿಗಣಿತ ವಿವಿಯು ನೂತನ 'ಸೌಹಾರ್ದ ವೃತ್ತ' ನಿರ್ಮಿಸಲು ಮುಂದಾಗಿದ್ದು, ವೃತ್ತದಲ್ಲಿ ಕೊರಗಜ್ಜನ ಆದಿ ಕ್ಷೇತ್ರ ಸೇರಿ ಇತರ ಧರ್ಮೀಯರ ಕ್ಷೇತ್ರದ ಮಾಹಿತಿಯನ್ನು ನೀಡುವ ರೂಪರೇಷೆ ಸಿದ್ಧ ಪಡಿಸಲಾಗಿದೆಯೆಂದು ಹೇಳಲಾಗುತ್ತಿದೆ.

ಇದರ ನಡುವೆ ಭಿನ್ನ ಕೋಮಿನ ಗುಂಪೊಂದು ಸ್ಥಳೀಯ ಶಾಸಕ ಹಾಗೂ ವಿಧಾನಸಭೆಯಸಭಾಧ್ಯಕ್ಷರಾದಯು.ಟಿ. ಖಾದರ್ ಅವರಿಗೆ ಘೇರಾವ್ ಹಾಕಿ ತರಾಟೆಗೈದಿದ್ದಲ್ಲದೆ ಆ ವೀಡಿಯೋವನ್ನು ಜಾಲತಾಣಗಳಲ್ಲಿ ಹರಿಬಿಟ್ಟಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಗುಡುಗಿನ ಸಹಿತ ಸುರಿದ ಮಳೆ!

ಮಂಗಳೂರು: ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಶನಿವಾರ ರಾತ್ರಿ ಗುಡುಗು ಸಹಿತ ಮಳೆ ಸುರಿದಿದೆ.

ರಾತ್ರಿ ಸುಮಾರು 8.25ರ ಸುಮಾರಿಗೆ ಆರಂಭವಾದ ಮಳೆ ಕೆಲವು ತಾಸುಗಳ ಕಾಲ ಸುರಿದಿದೆ. ಮಂಗಳೂರು ನಗರದ ರಸ್ತೆಗಳಂತೂಮೊದಲಮಳೆಗೆನದಿಯಾಗಿ ಹರಿದಿವೆ. ಕೆಲವೆಡೆ ಡ್ರೈನೇಜ್, ಪೈಪ್‌ಲೈನ್ ಸೇರಿದಂತೆ ವಿವಿಧ ಕಾಮಗಾರಿಗಳಿಗಾಗಿ ರಸ್ತೆಯನ್ನು ಅಗೆದು ಹಾಕಲಾಗಿದ್ದು, ಮಳೆಯ ನೀರಿಂದಾಗಿ ರಸ್ತೆಗಳು ಕೆಸರುಮಯವಾಗಿ ಬದಲಾಗಿತ್ತು. ನಗರದ ಕೆ.ಎಸ್.ರಾವ್ ರಸ್ತೆಯ ಎಲ್ ಐಸಿ ಕಚೇರಿ ಮುಂಭಾಗವಂತೂ ಕಳೆದ ಒಂದು ತಿಂಗಳ ಹಿಂದೆ ಕಾಮಗಾರಿಗಾಗಿ ಅಗೆದು ಹಾಕಿರುವ ಮಣ್ಣನ್ನು ಇನ್ನೂ ತೆರವುಗೊಳಿಸಲಾಗಿಲ್ಲ. ಹೀಗೆ ನಗರದ ವಿವಿಧೆಡೆ ಒಂದಲ್ಲಾ ಒಂದು ಕಾಮಗಾರಿಗಳು ನಡೆಯುತ್ತಲೇ ಇವೆ. ಮೊದಲೇ ಹೊಂಡ ಗುಂಡಿಯ ರಸ್ತೆಗಳಲ್ಲಿ ಇನ್ನು ಮಳೆಗಾಲದಲ್ಲಿ ವಾಹನ ಸಂಚಾರ ಮತ್ತಷ್ಟು ದುಸ್ತರಖಚಿತ.



ಉಪ್ಪಿನಂಗಡಿಯಲ್ಲಿ ಅಪಾರ ಹಾನಿ

ಕಳೆದ ಶುಕ್ರವಾರ ಸಾಯಂಕಾಲ ಬೀಸಿದ ಗಾಳಿ ಮಳೆಗೆ ಉಪ್ಪಿನಂಗಡಿ ಮೆಸ್ಕಾಂ ವಿಭಾಗದ ವ್ಯಾಪ್ತಿಯಲ್ಲಿ 48 ವಿದ್ಯುತ್ ಕಂಬಗಳು ತುಂಡರಿಸಲ್ಪಟ್ಟಿದ್ದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವುಂಟಾಗಿದೆ. ಶನಿವಾರವೂ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಕಾಡಿದೆ.

ಹಿರೇಬಂಡಾಡಿ, ಬಜತ್ತೂರು, ಪೆರಿಯಡ್ಕ, ಕೆಮ್ಮಾರ, ಪಂದಾರ್ಜೆ ಸೇರಿದಂತೆ ಹಲವು ಪ್ರದೇಶಗಳಲ್ಲಿ 48 ವಿದ್ಯುತ್ ಕಂಬಗಳು ತುಂಡಾಗಿ ವಿದ್ಯುತ್ ವ್ಯವಸ್ಥೆ ಅಸ್ತವ್ಯಸ್ಥವಾಗಿತ್ತು. ಶನಿವಾರ ದಿನ ತುಂಡಾಗಿರುವ 48 ಕಂಬಗಳಲ್ಲಿ 28 ಕಂಬಗಳನ್ನು ಹಾಕ ಲಾಗಿದ್ದು, 20 ಕಂಬಗಳನ್ನು ಹಾಕಲು ಬಾಕಿಯಿವೆ.

ಕಗ್ಗತ್ತಲೆಯಲ್ಲಿ ಹಲವು ಪ್ರದೇಶಗಳು

ಶುಕ್ರವಾರ ಸಂಜೆಯಿಂದಲೇ ಈ ಭಾಗದಲ್ಲಿವಿದ್ಯುತ್ ವ್ಯತ್ಯಯಗೊಂಡಿದ್ದು, ಕೆಲವು ಪ್ರದೇಶಗಳಲ್ಲಿ ಶನಿವಾರ ವಿದ್ಯುತ್ ಸಮಸ್ಯೆ ಸರಿಯಾದರೆ, ಇನ್ನು ಹಲವು ಪ್ರದೇಶಗಳು ವಿದ್ಯುತ್ ಇಲ್ಲದೆ ಶನಿವಾರ ರಾತ್ರಿ ಕೂಡಾ ಕಗ್ಗತ್ತಲೆಯಲ್ಲೇ ಇರುವಂತಾಗಿದೆ. ವಿದ್ಯುತ್ ಇಲ್ಲದಿರುವುದರಿಂದ ಹಲವು ಕಡೆಗಳಲ್ಲಿ ನೀರಿನ ಸಮಸ್ಯೆ ಕೂಡಾ ಉದ್ಭವವಾಗಿದೆ. ಪುತ್ತೂರಿನಿಂದ ಉಪ್ಪಿನಂಗಡಿ ಬರುವ ಮುಖ್ಯ ವಿದ್ಯುತ್ ಸಂಪರ್ಕ ಲೈನ್ ಶುಕ್ರವಾರದಿಂದ ಶನಿವಾರ ಸಂಜೆಯವರೆಗೆ ಚಾರ್ಜ್ ಆಗದಿರುವುದರಿಂದ ಇದರಿಂದ ಸಂಪರ್ಕ ಪಡೆಯುವ ಹಲವು ಪ್ರದೇಶಗಳಲ್ಲಿ ಕೂಡಾ ವಿದ್ಯುತ್ ಸಮಸ್ಯೆ ಉಂಟಾಗಿದೆ.

ಪುತ್ತೂರಿನ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ | 'ಲೀಗಲ್ ಸ್ಪೆಕ್ಟ್ರಂ' ಪುಸ್ತಕ ಲೋಕಾರ್ಪಣೆ

ನಾವು ಧರ್ಮ ಪಾಲಿಸಿದರೆ ಅದೇ ನಮ್ಮನ್ನು ರಕ್ಷಿಸುತ್ತದೆ: ನ್ಯಾ.ಅಬ್ದುಲ್ ನಝೀರ್

ಪುತ್ತೂರು: ಜೀವನ, ವೃತ್ತಿಯಲ್ಲಿ ಧರ್ಮ ಪಾಲನೆ ಮೊದಲ ಕರ್ತವ್ಯವಾಗಿರಬೇಕು. ಒಳ್ಳೆಯದರ ರಕ್ಷಣೆಗಾಗಿ ಕೆಟ್ಟದ್ದು ನಶಿಸಬೇಕಾಗಿರುವುದು ಅನಿವಾರ್ಯ. ನಾವು ಧರ್ಮ ಪಾಲಿಸಿದರೆ ಅದೇ ನಮ್ಮನ್ನು ರಕ್ಷಿಸುತ್ತದೆ ಎಂದು ಆಂಧ್ರಪ್ರದೇಶದ ರಾಜ್ಯಪಾಲ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಝೀರ್ ಹೇಳಿದ್ದಾರೆ.

ವಿವೇಕಾನಂದ ಕಾನೂನು ಮಹಾವಿದ್ಯಾಲಯದಲ್ಲಿ ಆಯೋಜಿಸಲಾದ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು. ರಾಮಾಯಣ, ಮಹಾಭಾರತದಲ್ಲಿ ಧರ್ಮಪಾಲನೆ ಮಾಡಿದವರು ಗೆಲುವನ್ನೇ ಸಾಧಿಸಿದ್ದಾರೆ ಎನ್ನುವುದನ್ನು ಉಲ್ಲೇಖಿಸಿದರು.



ಶಿಕ್ಷಣ ಮೆದುಳಿಗೆ ತರಬೇತಿಯನ್ನು ನೀಡಬೇಕೇ ವಿನ: ಒತ್ತಡವನ್ನು ಹೇರಬಾರದು ಎಂದು ಸ್ವಾಮಿ ವಿವೇಕಾನಂದರು ಶಿಕ್ಷಣದ ಕುರಿತು ವಿಶ್ಲೇಷಿಸಿದ್ದಾರೆ. ವೇದಗಳು ನ್ಯಾಯಾಂಗದ ಮುಖ್ಯ ಆಧಾರ. ವೇದಗಳು ನ್ಯಾಯಾಂಗಕ್ಕೆ ಶ್ರುತಿ ಇದ್ದಂತೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಗುಣಮಟ್ಟ ಹಾಗೂ ಪ್ರಗತಿಯ ಕಾರಣಕ್ಕೆ ಯುವ ನ್ಯಾಯವಾದಿಗಳಿಗೆ ಅಣಕು ನ್ಯಾಯಾಲಯದಂತಹ ವ್ಯವಸ್ಥೆ ಅಗತ್ಯ. ಇದು ಥಿಯರಿ ಹಾಗೂ ಪ್ರಾಕ್ಟಿಕಲ್ ನಡುವಿನ ಗ್ಯಾಪ್‌ನ್ನು ಭರ್ತಿ ಮಾಡುತ್ತದೆ. ಮಾತಿನ ಚಾಕಚಕ್ಯತೆ, ನ್ಯಾಯಾಧೀಶರ ಪ್ರಶ್ನೆಗಳಿಗೆ ಪರಿಣಾಮಾತ್ಮಕ ಉತ್ತರ ನೀಡಲು ಕಲಿಕೆಯಾಗುತ್ತದೆ ಎಂದರು.

ಸಂವಿಧಾನದ ಮೌಲ್ಯ ಎತ್ತಿ ಹಿಡಿಯೋಣ

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎನ್. ಕೋಟೀಶ್ವರ್ ಸಿಂಗ್ ಮಾತನಾಡಿ, ವಿವಿಧತೆಯಲ್ಲಿ ಏಕತೆಯನ್ನು ಸಾರುವ ನಮ್ಮ ಸಂವಿಧಾನ ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಿದೆ. ಸಾಂಸ್ಕೃತಿಕ ಉತ್ತುಂಗವೆಂದರೆ ಭಾರತ. ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಕೆಲಸವನ್ನು ನ್ಯಾಯಾಂಗದಲ್ಲಿ ತೊಡಗಿಸಿಕೊಂಡವರು ಮಾಡಬೇಕು ಎಂದರು. ವಿವೇಕಾನಂದರ ಹೆಸರಿನ ಶಿಕ್ಷಣ ಸಂಸ್ಥೆ ನೀಡುತ್ತಿರುವ ಶಿಕ್ಷಣದ ಸೇವೆ ಅನನ್ಯ. ಈಗ ಹಮ್ಮಿಕೊಂಡಿರುವ ಅಣಕು ನ್ಯಾಯಾಲಯ ಸ್ಪರ್ಧೆಯು ಯುವ ವಕೀಲರಿಗೆ ಪ್ರೇರಣೆ ತುಂಬುವ ಜತೆಗೆ ಕೌಶಲ್ಯ ವರ್ಧನೆಗೆ ಸಹಾಯಕ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ. ಬಸವರಾಜು ಮಾತನಾಡಿ, ಹಲವರಿಗೆ ಕಾನೂನು ಅರಿವು ಇರುವುದಿಲ್ಲ. ಆದರೆ ಕಾನೂನು ತಿಳಿದುಕೊಂಡಿರುವುದು ಸಾಮಾಜಿಕ ಜವಾಬ್ದಾರಿ. ಕಾನೂನು ವಿದ್ಯಾರ್ಥಿಗಳು ಕಾನೂನು ಅರಿವಿನ ಜಾಗೃತಿ ಮಾಡಬೇಕು. ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಲು ಕಾನೂನಿನಿಂದ ಸಾಧ್ಯ ಎಂದರು.

ರಾಷ್ಟ್ರ ನಿರ್ಮಾಣ ಈ ವಿದ್ಯಾಸಂಸ್ಥೆಯ ಕನಸು

ಅಧ್ಯಕ್ಷತೆಯನ್ನು ವಹಿಸಿದ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ. ಎಂ. ಕೃಷ್ಣ ಭಟ್ ಮಾತನಾಡಿ, ವಿವೇಕಾನಂದ ಗುರಿ ಇಟ್ಟುಕೊಂಡು ಆ ದಿಸೆಯಲ್ಲಿ ಮುನ್ನಡೆಯುತ್ತಿರುವ ವಿದ್ಯಾಸಂಸ್ಥೆ. ಶಿಕ್ಷಣದಿಂದ ವ್ಯಕ್ತಿ ನಿರ್ಮಾಣ, ವ್ಯಕ್ತಿಯಿಂದ ರಾಷ್ಟ್ರ ನಿರ್ಮಾಣ ಈ ವಿದ್ಯಾಸಂಸ್ಥೆಯ ಕನಸು. ಇದೇ ಹಾದಿಯಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನೂ ಬಲಪಡಿಸುವ ಭಾಗವಾಗಿ ಆಯೋಜಿಸಿರುವ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ನ್ಯಾಯಾಂಗ ಕ್ಷೇತ್ರದ ಗಣ್ಯರು ಪಾಲ್ಗೊಂಡಿರುವುದು ಕಾಲೇಜಿಗೆ ಅವಿಸ್ಮರಣೀಯ ಕ್ಷಣ ಎಂದರು.

ಈ ಸಂದರ್ಭ 'ಲೀಗಲ್ ಸ್ಪೆಕ್ಟ್ರಂ' ಪುಸ್ತಕ ಬಿಡುಗಡೆಗೊಳಿಸಲಾಯಿತು. ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶೇಖರ್ ಜಿ. ದೇವಸ, ವಿವೇಕಾನಂದ ಕಾನೂನು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಸುರೇಂದ್ರ ಕಿಣಿ, ವಿವೇಕಾನಂದ ಕಾನೂನು ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಪಿ.ಕೆ. ರವೀಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಅಕ್ಷತಾ ಎ.ಪಿ. ಸ್ವಾಗತಿಸಿ, ಪುತ್ತೂರು ವಕೀಲರ ಸಂಘದ ಅಧ್ಯಕ್ಷ ಮನೋಹರ್ ಕೆ.ವಿ. ವಂದಿಸಿದರು. ದಿವ್ಯಾ ದಾಸ್ ಕಾರ್ಯಕ್ರಮ ನಿರ್ವಹಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಳೆ ಬಂದರೆ ಪಲ್ಗುಣಿ ಹೊಳೆಯ ಪಾಲಾಗಲಿದೆ ಸುಲ್ತಾನ್ ಬತ್ತೇರಿಯಲ್ಲಿ 'ಒತ್ತುವರಿ' ಮಣ್ಣು



ಮಂಗಳೂರಿನ ಸುಲ್ತಾನ್ ಬತ್ತೇರಿ ಬಳಿ ಪಲ್ಗುಣಿ ನದಿಗೆ ಮಣ್ಣು ಹಾಕಿ ಒತ್ತುವರಿ ಮಾಡಲಾಗಿದ್ದು, ಜಿಲ್ಲಾಡಳಿತ ಮಣ್ಣು ತೆರವಿಗೆ ನೋಟಿಸ್ ನೀಡಿದ್ದರೂ ತೆರವು ಕಾರ್ಯಾಚರಣೆ ಮಾತ್ರ ನಿಧಾನಗತಿಯಲ್ಲಿ ಸಾಗುತ್ತಿದೆ. ಇನ್ನು ಮಳೆ ಶುರುವಾಯಿತೆಂದರೆ ಮಣ್ಣು ನದಿಯಲ್ಲೇ ಬಾಕಿಯಾಗುವುದಂತೂ ಖಚಿತ ಎನ್ನುತ್ತಿದ್ದಾರೆ ಇಲ್ಲಿನ ಸ್ಥಳೀಯ ನಾಗರಿಕರು. ಚಿತ್ರ : ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
35° 27°	34° 28°

ಬಿರುಗಾಳಿ, ಸಿಡಿಲ ಆರ್ಭಟ | ಪುತ್ತೂರು, ಕಡಬ ಅಕ್ಷರಶಃ ಕಂಗಾಲು

ಒಂದೇ ಮಳೆಗೆ ನಲುಗಿದ ಇಳೆ

ಅಲ್ಲಲ್ಲಿ ಕೃತಕ ನೆರೆ | ವಿದ್ಯುತ್ ಸ್ಥಗಿತ | ಹೆದ್ದಾರಿ ಸಂಚಾರಕ್ಕೆ ಕುತ್ತು

ಪುತ್ತೂರು/ಕಡಬ: ಪುತ್ತೂರು ಹಾಗೂ ಕಡಬ ತಾಲೂಕಿನ ನಗರ ಹಾಗೂ ಗ್ರಾಮಾಂತರ ಭಾಗಗಳಲ್ಲಿ ಶುಕ್ರವಾರ ಸಂಜೆ ಬಳಿಕ ಹಾಗೂ ಶನಿವಾರ ಸಂಜೆಯ ಬಳಿಕ ಸುರಿದ ಭಾರೀ ಗಾಳಿ, ಸಿಡಿಲು ಸಹಿತದ ಮಳೆಗೆ ಹೆಚ್ಚಿನ ಪ್ರಮಾಣದ ಹಾನಿ ಉಂಟಾಗಿದೆ.

ಹಲವು ಕಡೆಗಳಲ್ಲಿ ಕೃತಕ ನೆರೆ ಸೃಷ್ಟಿಯಾಗಿದೆ. ಮರ ಬಿದ್ದು ಹಲವೆಡೆ ಹಾನಿ ಸಂಭವಿಸಿದೆ. ಹೆಚ್ಚಿನ ಭಾಗಗಳಲ್ಲಿ ಶುಕ್ರವಾರ ಬಳಿಕದ ಮಳೆಗೆ ವಿದ್ಯುತ್ ಸಂಪರ್ಕ ಕಡಿತಗೊಂಡು ನಾಗರಿಕರು ಕತ್ತಲಲ್ಲಿ ದಿನ ಕಳೆಯುವಂತಹ ಸ್ಥಿತಿ ನಿರ್ಮಾಣವಾಗಿತ್ತು.

ನೆಲ್ಲಿಕಟ್ಟೆಯಲ್ಲಿ ರಸ್ತೆಯಲ್ಲೇ ನೀರು

ನೆಲ್ಲಿಕಟ್ಟೆಯಲ್ಲಿ ರಸ್ತೆಯಲ್ಲೇ ನೀರು ಹರಿದು ರಸ್ತೆ ತೋಡಾಗಿ ಪರಿಣಮಿಸಿದೆ. ಮಯೂರ ಇನ್ ಲ್ಯಾಂಡ್ ಬಳಿ ಮಳೆ ನೀರಿನಿಂದ ರಸ್ತೆ ಮುಚ್ಚಿಕೊಂಡು ಈ ಭಾಗದಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಗಾಳಿಯ ರಭಸಕ್ಕೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ರೋಸ್ ಅಪಾರ್ಟ್‌ಮೆಂಟ್ ವಠಾರದಲ್ಲಿನ ಮಾವಿನ ಮರವೊಂದು ಗಾಳಿಗೆ ಮುರಿದು ಬಿದ್ದಿದೆ. ಮಾವಿನ ಮರದ ಅಡಿಯಲ್ಲಿ ಪಾರ್ಕ್ ಮಾಡಲಾಗಿದ್ದ ಎರಡು ಕಾರುಗಳಿಗೆ ಮರದ ಗೆಲ್ಲುಗಳು ಉರುಳಿಬಿದ್ದು ಸಣ್ಣ ಪ್ರಮಾಣದ ಹಾನಿಯಾಗಿದೆ.







ಬನ್ನೂರಿನಲ್ಲಿ ರಸ್ತೆಗೆ ಉರುಳಿ ಬಿದ್ದ ಮರ

ಬನ್ನೂರು ಕುಂಟ್ಯಾನ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮರ ಬಿದ್ದು ಕೆಲ ಹೊತ್ತು ಸಂಪರ್ಕಕ್ಕೆ ಅಡ್ಡಿಯಾಗಿತ್ತು. ಬಳಿಕ ಮರವನ್ನು ತೆರವು ಮಾಡಲಾಗಿದೆ.

ಮೊಣಕಾಲಿನ ತನಕವೂ ರಸ್ತೆಯಲ್ಲಿ ನೀರು

ನೆಲ್ಲಿಕಟ್ಟೆ ಖಾಸಗಿ ಬಸ್ ನಿಲ್ದಾಣದ ಬಳಿ ಪ್ರತಿ ಮಳೆಗೆ ರಸ್ತೆಯಲ್ಲೇ ಮಳೆ ನೀರು ಹರಿಯುತ್ತದೆ. ಈ ಬಾರಿಯೂ ಅದು ಪುನರಾವರ್ತನೆಯಾಗಿದೆ. ಮಳೆ ನೀರು ರಸ್ತೆಯಲ್ಲೇ ಹರಿದು ಕೃತಕ ನೆರೆ ಉಂಟಾಗಿ ಮೊಣಕಾಲಿನ ತನಕವೂ ರಸ್ತೆಯಲ್ಲಿ ನೀರು ನಿಂತಿತ್ತು.

ಪುತ್ತೂರು ತಾಲೂಕಿನಲ್ಲಿ ಶನಿವಾರವೂ ಉತ್ತಮ ಮಳೆ

ಶುಕ್ರವಾರ ರಾತ್ರಿ ಆರ್ಭಟಿಸಿದ ಬಳಿಕ ಶನಿವಾರ ಸಂಜೆ ಸಮಯದಲ್ಲೂ ನಗರ ಸೇರಿದಂತೆ ಗ್ರಾಮಾಂತರ ಭಾಗಗಳಲ್ಲೂ ಉತ್ತಮ ಮಳೆ ಸುರಿದಿದೆ. ಚರಂಡಿ ಅವ್ಯವಸ್ಥೆಯ ಕಾರಣದಿಂದ ಅಲ್ಲಲ್ಲಿ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ಸಮಸ್ಯೆಯಾಗಿದೆ. ಮಳೆಯಿಂದ ಒಂದಿಷ್ಟು ಹಾನಿಯಾದರೂ ಸುಡು ಬಿಸಿಲಿಗೆ ಬಸವಳಿದಿದ್ದ ಇಳೆ ಮಾತ್ರ ಒಂದಿಷ್ಟು ತಂಪಾಗಿದೆ.

ಮನೆಯ ಮೇಲೆ ಉರುಳಿದ ಅಶ್ವತ್ಥ ಮರ

ಬೊಳುವಾರು ಶಾಲೆಯ ಬಳಿಯ ಮನೆಯೊಂದರ ಮೇಲೆ ಅಶ್ವತ್ಥ ಮರ ಬಿದ್ದು ಮನೆಗೆ ಹಾನಿಯಾಗಿದೆ. ಬೊಳುವಾರು ಶಿವರಾಮ ಶೆಟ್ಟಿ ಎಂಬವರ ಮನೆಯ ಎದುರಿನ ಅಶ್ವತ್ಥ ಮರ ಗಾಳಿ ಮಳೆಗೆ ಬಿದ್ದಿದೆ. ಮರ ಬಿದ್ದು ಮನೆಗೆ ಹಾನಿಯಾಗಿದೆ. »ಪುಟ 2

ಬಿರುಗಾಳಿಗೆ ಹಾರಿ ಹೋದ ದೇವಳದ ಕಚೇರಿಯ ಹಂಚು

ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಕಚೇರಿ ಮತ್ತು ಅನ್ನಛತ್ರಕ್ಕೆ ಕಟ್ಟಡದ ಮೇಲೆ ಹಾಕಿದ ಹಂಚುಗಳಲ್ಲಿ ಕೆಲವು ಗಾಳಿಗೆ ಜಾರಿ ಹೋಗಿ ಕೆಳಗೆ ಬಿದ್ದಿವೆ. ಬಿಸಿಲ ಧಗೆಯಿಂದ ಭಕ್ತರಿಗೆ ನೆರಳು ನೀಡಲೆಂದು ದೇವಳದ ರಾಜಾಂಗಣಕ್ಕೆ ಹಾಕಲಾಗಿದ್ದ ಶಾಮಿಯಾನ ಬಿದ್ದು ಹೋಗಿದೆ.

ಅಲ್ಲಲ್ಲಿ ತಂತಿಗಳ ಮೇಲೆ ಗೆಲ್ಲು ಬಿದ್ದು ವಿದ್ಯುತ್ ಸ್ಥಗಿತ

ಹಾರಾಡಿಯಲ್ಲಿ ವಿದ್ಯುತ್ ತಂತಿಯ ಮೇಲೆ ಮರದ ಗೆಲ್ಲು ಬಿದ್ದು ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ವಿದ್ಯುತ್ ತಂತಿಯ ಮೇಲೆ ಮರದ ಗೆಲ್ಲು ಬಿದ್ದ ಪರಿಣಾಮ ವಿದ್ಯುತ್ ತಂತಿಗಳು ಕಡಿದು ಹೋಗಿದೆ. ಕಂಬಗಳಿಗೂ ಹಾನಿಯಾಗಿದೆ. ಪುತ್ತೂರು-ಉಪ್ಪಿನಂಗಡಿ ರಸ್ತೆಯಲ್ಲಿ ಬೆಳ್ಳಿಪ್ಪಾಡಿ ಕ್ರಾಸ್ ಬಳಿಯೂ ಮರದ ಗೆಲ್ಲು ಬಿದ್ದು ವಿದ್ಯುತ್ ತಂತಿಗಳು ಕಡಿದು ಬಿದ್ದು ಸಂಪರ್ಕ ಕಡಿತಗೊಂಡಿದೆ.

ಸುತ್ತಮುತ್ತ

ಬಿಸಿಲು, ಮಳೆ, ಗುಡುಗು, ಸಿಡಿಲ ಆರ್ಭಟಕ್ಕೆ ಬೆಚ್ಚಿಬಿದ್ದ ಮಂಗಳೂರಿನ ಜನತೆ!

ಮಂಗಳೂರು: ಸಹಿಸಲಸಾಧ್ಯ ತಾಪಮಾನದೊಂದಿಗೆ ನಗರದಲ್ಲಿ ಶನಿವಾರ ದಿನ ಆರಂಭಗೊಂಡಿದ್ದು, ಮಧ್ಯಾಹ್ನದ ನೆತ್ತಿ ಸುಡುವ ಬಿಸಿಲಿಗೆ ಜನತೆ ಅಕ್ಷರಶಃ ಕಂಗಾಲಾಗಿದ್ದರೆ ಕತ್ತಲು ಕವಿದ ಬಳಿಕ ಏಕಾಏಕಿ ಆರಂಭಗೊಂಡ ಗುಡುಗು ಸಿಡಿಲು, ಭಾರೀ ಗಾಳಿ ಸಹಿತದ ಮಳೆಗೆ ಮತ್ತೆ ಆತಂಕಕ್ಕೊಳಗಾದರು. ರಾತ್ರಿ ಎಂಟು ಗಂಟೆಯ ಸುಮಾರಿಗೆ ಆರಂಭವಾದ ಮಿಂಚು ಗುಡುಗು ಕೆಲವು ತಾಸುಗಳ ಕಾಲ ಮುಂದುವರಿದಿತ್ತು. ಭಾರೀ ಗಾಳಿಯ ಆರ್ಭಟವೂ ಇತ್ತಾದರೂ ಸಾಧಾರಣ ಮಳೆಯಷ್ಟೇ ಸುರಿಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿಯೂ ಶನಿವಾರ ಸಂಜೆಯ ಬಳಿಕ ಮಳೆಯಾಗಿದೆ. ಕಳೆದ ಕೆಲವು ದಿನಗಳಿಂದ ಅಲ್ಲಲ್ಲಿ ಮಳೆಯಾಗುತ್ತಿದ್ದರೂ ವಾತಾವರಣದ ತಾಪಮಾನ ಮಾತ್ರ ಇಳಿಕೆಯಾಗಿಲ್ಲ. ಶನಿವಾರ ದಕ್ಷಿಣ ಕನ್ನಡ ಜಿಲ್ಲೆಯ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಸುರತ್ಕಲ್ ಸುಭಾಷಿತನಗರ ಸಿಟಿ ಲೇಔಟ್‌ನಲ್ಲಿ ಅವೈಜ್ಞಾನಿಕ ರೀತಿ ತಡೆಗೋಡೆ?

ಮಳೆಗಾಲಕ್ಕೆ ನೆರೆ ಆತಂಕ, ನಾಗರಿಕರ ಆಕ್ರೋಶ

ಸುರತ್ಕಲ್: ಇಲ್ಲಿನ ಸುಭಾಷಿತ ನಗರಕ್ಕೆ ಹೊಂದಿಕೊಂಡ ಸಿಟಿ ಲೇಔಟ್ ಭಾಗದಲ್ಲಿ ಈ ಮಳೆಗಾಲಕ್ಕೂ ಮುನ್ನವೇ ದೊಡ್ಡ ದುರಂತಕ್ಕೆ ಆಹ್ವಾನ ಕೊಡುವ ರೀತಿಯಾಗಿ ಅವೈಜ್ಞಾನಿಕ ತಡೆಗೋಡೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಇದು ಈ ಭಾಗದ ಸ್ಥಳೀಯ ನಾಗರಿಕರನ್ನು ತೀವ್ರ ಆತಂಕಕ್ಕೆ ದೂಡಿದೆ.

ವೈಜ್ಞಾನಿಕವಾದ ಅಧ್ಯಯನವೇ ಇಲ್ಲ?

ಸಿಟಿಲೇಔಟ್‌ಗೆಹೋಗುವರಸ್ತೆಬದಿಯಲ್ಲಿ ಯಾವುದೇ ವೈಜ್ಞಾನಿಕ ಅಧ್ಯಯನವಿಲ್ಲದೆ, ನೀರಿನ ಹರಿವಿಗೆ ಅಡ್ಡಿಯಾಗುವಂತೆ ತಡೆಗೋಡೆ ನಿರ್ಮಿಸಲಾಗುತ್ತಿದೆ. ಒಂದು ಬದಿಯಲ್ಲಿ ಮಾತ್ರ ಈ ತಡೆಗೋಡೆ ಎದ್ದು ನಿಂತರೆ ಮಳೆ ಬಂದ ಕೂಡಲೇ ಪಶ್ಚಿಮ ಭಾಗದ ನೂರಾರು ಮನೆಗಳು ಜಲಾವೃತಗೊಳ್ಳುವುದು ಖಚಿತ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನಗರ ಪಾಲಿಕೆ ಗಮನಕ್ಕೂ ತರಲಾಗಿದೆ

ಈ ಗಂಭೀರ ವಿಷಯವನ್ನು ನಾಗರಿಕರು ಈಗಾಗಲೇ ಮಂಗಳೂರು ಮಹಾ ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಇದುವರೆಗೂ ಯಾವುದೇ ಸೂಕ್ತ ಸ್ಪಂದನೆ ದೊರೆತಿಲ್ಲ. ಸುಭಾಷಿತ ನಗರ ಮತ್ತು ಸಿಟಿಲೇಔಟ್ ನಿವಾಸಿಗಳ ಅಭಿಪ್ರಾಯ ಪಡೆಯದೆ, ಅವರ ಬದುಕಿನ ಮೇಲೆ ನೇರ ಪರಿಣಾಮ ಬೀರುವ ಈ ಕಾಮಗಾರಿ ಏಕಪಕ್ಷೀಯವಾಗಿ ಕೈಗೊಳ್ಳಲಾಗುತ್ತಿದೆ ಎಂಬುದು ನಾಗರಿಕರ ಪ್ರಮುಖ ದೂರು. »ಪುಟ 2

ನೈಸರ್ಗಿಕವಾಗಿ ಹರಿವ ನೀರಿಗೆ ಬಿದ್ದೀತೇ ತಡೆ?

ಈ ಕಾಮಗಾರಿ ನಡೆದಲ್ಲಿ ಹಳೆ ಸುಭಾಷಿತನಗರ ಮತ್ತು ಸಿಟಿ ಲೇಔಟ್‌ನ ಮಧ್ಯೆ, ನೈಸರ್ಗಿಕವಾಗಿ ಹರಿಯುತ್ತಿದ್ದ ನೀರಿಗೆ ಸಂಪೂರ್ಣ ತಡೆ ಉಂಟಾಗಿ, ಮನೆಗಳಿಗೆ ನುಗ್ಗುವ ಅಪಾಯ ಎದುರಾಗಿದೆ.

ಬನ್ನಿ ಬನ್ನಿ... ಬೇಕಾ ಗೇರು, ಮಾವು, ಹಲಸು...




ರೈತ ಕುಡ್ಲ ಪ್ರತಿಷ್ಠಾನ ನೇತೃತ್ವದಲ್ಲಿ ಸಿರಿ ತೋಟಗಾರಿಕಾ ಸಂಘ ಮಂಗಳೂರು, ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಸಹಯೋಗದಲ್ಲಿ ಮಂಗಳೂರಿನ ಕದ್ರಿ ಪಾರ್ಕ್‌ನಲ್ಲಿ ನಡೆಯುತ್ತಿರುವ ಗೇರು, ಮಾವು, ಹಲಸು ಮೇಳ ಜನಾಕರ್ಷಣೆ ಪಡೆದುಕೊಳ್ಳುತ್ತಿದೆ.

ಪ್ರವಾಸಿಗಳನ್ನು ಕಾಡುತ್ತಿದೆ ಮೂಲಭೂತ ಸೌಲಭ್ಯಗಳ ಕೊರತೆ | ಸಮಗ್ರ ಅಭಿವೃದ್ಧಿಗೆ ಬೇಕಿದೆ ಸಮರ್ಥ ಯೋಜನೆ | ಸಾಥ್ ನೀಡೀತೇ ನಗರ ಸಭೆ?

ಕಾಯಕಲ್ಪದ ನಿರೀಕ್ಷೆಯಲ್ಲಿದೆ ಕಣ್ಮನ ಸೆಳೆಯುವ ಕಾಸರಗೋಡಿನ ಸೀ ವ್ಯೂ ಪಾರ್ಕ್

ಕಾಸರಗೋಡು: ಇಲ್ಲಿನ ಕಾಸರಗೋಡು ನಗರದ ರೈಲ್ವೆ ನಿಲ್ದಾಣ ಬಳಿಯಿರುವ 'ಸೀ ವ್ಯೂ ಪಾರ್ಕ್'ನ ಸಮಗ್ರ ಅಭಿವೃದ್ಧಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಸಮರ್ಥ ಯೋಜನೆಗಳ ಅನುಷ್ಠಾನದ ಅಗತ್ಯವಿದೆ. ಈ ಮೂಲಕ ಮಕ್ಕಳು ಸಹಿತ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಸಂಬಂಧಪಟ್ಟವರು ಸೂಕ್ತ ರೀತಿಯ ಒಂದು ಕಾರ್ಯಯೋಜನೆ ತಯಾರಿಸಬೇಕಾಗಿದೆ.

ಸಂಗಮ ವಿಶೇಷ







ಮೂಲಭೂತ ಸೌಲಭ್ಯಗಳ ಕೊರತೆ

ಹೊಳೆ, ಸಮುದ್ರ ಸಂಗಮಿಸುವ ದೃಶ್ಯ ವೀಕ್ಷಿಸಿಕೊಂಡು ತಂಪಾದ ಗಾಳಿ ಆಸ್ವಾದಿಸುತ್ತಾ ಸೂರ್ಯಾಸ್ತಮಾನದ ಸೊಬಗನ್ನು ನೋಡಿಕೊಂಡು ಪ್ರಾಕೃತಿಕ ರಮಣೀಯ ಸನ್ನಿವೇಶಗಳನ್ನು ಗಮನಿಸಿಕೊಂಡು ಸಮಯ ಕಳೆಯುವ ಅತ್ಯಂತ ಸುಂದರ ವ್ಯವಸ್ಥೆ ಕಾಸರಗೋಡು ನಗರದಲ್ಲೇ ಇದ್ದರೂ ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಸೀ ವ್ಯೂ ಪಾರ್ಕ್‌ಗೆ ಆಗಮಿಸಲು ಸಂದರ್ಶಕರಿಗೆ ಸಮಸ್ಯೆಯಾಗುತ್ತಿದೆ.

ಎಲ್ಲಿದೆ ಈ ರಮ್ಯಾದ್ಭುತವಾದ ಸೀ ವ್ಯೂ ಪಾರ್ಕ್?

ನಗರದಿಂದ ಅಲ್ಪದೂರದಲ್ಲಿರುವ ತಾಯಲಂಗಾಡಿ ಕ್ಲಾಕ್ ಟವರ್ ಮೂಲಕ ರೈಲು ನಿಲ್ದಾಣ ಹಳೆಯ ರಸ್ತೆಗೆ ಪ್ರವೇಶಿಸಿ ಬಲಭಾಗದ ಒಳದಾರಿಯಲ್ಲಿ ಪ್ರವೇಶಿಸಿದರೆ ಕಾಸರಗೋಡು ನಗರಸಭಾ ಅಧೀನದ ಈ ಅದ್ಭುತವಾದ ಸೀ ವ್ಯೂ ಪಾರ್ಕ್ ತಲುಪಬಹುದಾಗಿದೆ. ಹಿರಿಯ ನಾಗರಿಕರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಇತರರಿಗೆ ಸಂಜೆ ವೇಳೆಯಲ್ಲಿ ತಂಗಾಳಿಗೆ ಮೈಯೊಡ್ಡಿ ಈ ಪಾರ್ಕ್‌ನಲ್ಲಿ ಕುಳಿತು ಕೊಳ್ಳಬಹುದು. ಆದರೆ ಆಸನ ವ್ಯವಸ್ಥೆಗಳು ಅಸಮರ್ಪಕವಾಗಿವೆ. ಈ ಮಧ್ಯೆ ಇಲ್ಲಿ ಕೆಲವು ಆಸನಗಳನ್ನು ದುರಸ್ತಿಗೊಳಿಸಲಾಗಿದ್ದರೂ ಇನ್ನೂ ಕೆಲವು ಹಾಗೆಯೇ ಉಳಿದುಕೊಂಡಿವೆ. ಈ ಪಾರ್ಕ್‌ನಲ್ಲಿ ಅಳವಡಿಸಿದ ಹೂದೋಟವು ಚಂದಗಾಣಿಸುವ ನಿಟ್ಟಿನಲ್ಲಿ, ಪ್ರಕೃತಿಯ ಸೊಬಗನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಉತ್ತಮವಾದ ಕಾರ್ಯವಿಧಾನವಾಗಿದ್ದರೂ ಉರಿಬಿಸಿಲಿಗೆ ಎಲ್ಲವೂ ಒಣಗಿ ಹೋಗಿರುವುದು ಗೋಚರಿಸುತ್ತಿದೆ.

ಕಾರ್ಯಗತವಾಗಲೇ ಇಲ್ಲ ತೂಗು ಸೇತುವೆ ಯೋಜನೆ

ವರ್ಷಗಳ ಹಿಂದೆ ಸೀ ವ್ಯೂ ಪಾರ್ಕ್‌ನಿಂದ ಕಡಪ್ಪುರಕ್ಕೆ ತೂಗು ಸೇತುವೆ ಎಂಬ ವಿನೂತನ ಯೋಜನೆಯನ್ನು ಇಲ್ಲಿನ ನಗರಸಭಾ ಆಡಳಿತವು ಜಾರಿಗೊಳಿಸಲು ಪ್ರಯತ್ನಿಸಿದ್ದರೂ ಕಾರ್ಯಗತಗೊಂಡಿಲ್ಲ.

ಬೇಸಿಗೆಯಲ್ಲಿ ಒಣಗಿಹೋದ ಕೊಳಗಳು

ಪಾರ್ಕ್‌ನಲ್ಲಿ ನೀರು ತುಂಬಿಸಿದ ಸಣ್ಣಪುಟ್ಟ ಕೊಳಗಳಿವೆ. ಆದರೆ ಬೇಸಿಗೆ ಕಾಲದಲ್ಲಿ ಅವುಗಳು ಒಣಗಿ ಹೋಗುತ್ತಿವೆ. ಸಣ್ಣ ಮಕ್ಕಳಿಗೆ ಉಯ್ಯಾಲೆ, ಜಾರುಬಂಡಿ ಇತ್ಯಾದಿಗಳಿದ್ದರೂ ತುಕ್ಕು ಹಿಡಿದು ನಾಶವಾಗುತ್ತಿವೆ. ರಜಾ ದಿನಗಳಲ್ಲಿ ಹಲವಾರು ಕುಟುಂಬಗಳು ಪಾರ್ಕ್ ಸಂದರ್ಶಿಸಲು ಆಗಮಿಸುತ್ತಾರೆ.

ಈ ಪಾರ್ಕ್‌ನಲ್ಲಿ ಹಾಯಾಗಿ ಕುಳಿತರೆ ನದಿ, ನೆಲ್ಲಿಕುಂಜೆ ಬಂದರು, ಸಮುದ್ರಕ್ಕೆ ಹೊಳೆ ಸಂಗಮಿಸುವ ಸ್ಥಳ ಮೊದಲಾದ ಮನೋಹರವಾದ ದೃಶ್ಯಗಳನ್ನು ಇಲ್ಲಿ ಆಸ್ವಾದಿಸಬಹುದು. ಇನ್ನಾದರೂ ಕಾಸರಗೋಡು ನಗರಸಭೆ ಅತ್ಯುತ್ತಮ ಸೌಕರ್ಯ ಅನುಷ್ಠಾನಗೊಳಿಸಿದರೆ ಸೀ ವ್ಯೂ ಪಾರ್ಕ್‌ಗೆ ಹೆಚ್ಚೆಚ್ಚು ಮಂದಿಯನ್ನು ಆಕರ್ಷಿಸಲು ಸಾಧ್ಯವಿದೆ.

ಮೊದಲನೇ ಪುಟದಿಂದ

ಮಳೆಗೆ ನಲುಗಿದ ಇಳೆ

ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಬನ್ನೂರು ಕರ್ಮಲದ ಬಳಿ ಹಮೀದ್ ಎಂಬವರ ಮನೆಗೆ ತೆಂಗಿನ ಮರವೊಂದು ಬಿದ್ದು ಹಾನಿಯಾಗಿದೆ. ಅದೃಷ್ಟವಶಾತ್ ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ಕಡಬ ತಾಲೂಕಿನಲ್ಲಿ ಅಪಾರ ಹಾನಿ

ಕಡಬ ತಾಲೂಕಿನ ಹಲವು ಗ್ರಾಮಗಳಲ್ಲಿ ಶುಕ್ರವಾರ ಸಂಜೆ ಬೀಸಿದ ಭಾರೀ ಗಾಳಿ ಮಳೆಗೆ ಅಪಾರ ಪ್ರಮಾಣದ ಕೃಷಿ , ವಿದ್ಯುತ್ ಕಂಬಗಳು ಹಾಗೂ ಮರಗಳು ನಾಶವಾಗಿವೆ. ಕಡಬದಿಂದ ಹಿಡಿದು, ಉಪ್ಪಿನಂಗಡಿ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯಲ್ಲಿ ಅಲ್ಲಲ್ಲಿ ಮರಗಳು ಬಿದ್ದು ಸಂಚಾರಕ್ಕೆ ತೊಡಕುಂಟಾಯಿತು. ಕಡಬ, ಕುಟ್ರುಪ್ಪಾಡಿ, ಬಲ್ಯ, ಪೆರಾಬೆ, ಕುಂತೂರು, ಆಲಂಕಾರು, ರಾಮಕುಂಜ, ಕೊಲ, ಸವಣೂರು, ಬೆಳಂದೂರು, ಚಾರ್ವಾಕ, ಕಾಣಿಯೂರು, ದೋಳ್ಪಾಡಿ, ಎಡಮಂಗಲ, ನೂಜಿಬಾಳ್ತಿಲ, ಬಿಳಿನೆಲೆ, ಕೊಂಬಾರು ಮುಂತಾದ ಗ್ರಾಮಗಳಲ್ಲಿ ಭಾರೀ ಗಾಳಿ ಮಳೆಯಾಗಿದೆ. ಕ್ಯೂಲ ಗ್ರಾಮದ ಕೆಮ್ಮಾರ ಬಡಿಲ ನಿವಾಸಿ ಮೋಹನ್‌ದಾಸ್ ಶೆಟ್ಟಿ ಎಂಬವರಿಗೆ ಸೇರಿದ ಕೋಳಿ ಫಾರ್ಮ್ ಕಟ್ಟಡಕ್ಕೆ ಮರಬಿದ್ದು ಛಾವಣಿಗೆ ಕುಸಿದಿದೆ. ಮನೆಯ ಪಕ್ಕದ ತೆಂಗಿನ ಮರವೊಂದು ಗಾಳಿಯ ಆರ್ಭಟಕ್ಕೆ ಮುರಿದು ಬಿದ್ದಿದೆ, ಐವತ್ತಕ್ಕೂ ಹೆಚ್ಚು ಅಡಕೆ ಮರಗಳು ಧರೆಗೆ ಉರುಳಿವೆ. ಮಳೆ ಅನಾಹುತದಿಂದಾಗಿ ಮೋಹನ್‌ದಾಸ್ ಶೆಟ್ಟಿಯವರಿಗೆ ಲಕ್ಷಾಂತರ ರೂ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಪೆರಾಬೆ ಗ್ರಾಮದ ಮೂಲೆತ್ತಮಜಲು ಸರೋಜಿನಿ ಎಂಬವರಿಗೆ ಸೇರಿದ ಐವತ್ತಕ್ಕೂ ಹೆಚ್ಚು ಅಡಕೆ ಮರಗಳು ನಾಶವಾಗಿವೆ. ಚಾರ್ವಾಕ ಗ್ರಾಮದ ಕಂಡಿಗ ದೇವಯ್ಯ ಗೌಡ ಅವರಿಗೆ ಸೇರಿದ ಇಪ್ಪತ್ತಕ್ಕೂ ಹೆಚ್ಚು ಅಡಕೆ , ಕುಂಬ್ಲಾಡಿ ಗೌಡ ಮನೆ ಸದಾನಂದ ಗೌಡರ 20ಕ್ಕೂ ಹೆಚ್ಚು ಅಡಕೆ ಮರಗಳು, ನಾಲ್ಕು ವಿದ್ಯುತ್ ಕಂಬ, ಶಿವರಾಮ ಗೌಡಮನೆ ಅವರ 25ಕ್ಕೂ ಹೆಚ್ಚು ಅಡಕೆ, ಅಭಿಕಾರ ದಲಾಡಿ ವಸಂತ ಪೂಜಾರಿ ಅವರಿಗೆ ಸೇರಿದ 150ಕ್ಕೂ ಹೆಚ್ಚು ಅಡಕೆ ಮರಗಳು, ಮೋನಪ್ಪ ಗೌಡ ಗೌಡಮನೆ ಅವರ 25ಕ್ಕೂ ಹೆಚ್ಚು ಅಡಕೆ ಮರಗಳು, ಕುಂಬ್ಲಾಡಿ ರುಕ್ಮಯ್ಯ ಗೌಡ ಅವರ 15ಕ್ಕೂ ಹೆಚ್ಚು ಅಡಕೆ ಮರಗಳು, ಕಾಣಿಯೂರು ಸಮೀಪದ ಬೈತಡ್ಕ ಕುಶಾಲಪ್ಪ ಗೌಡ ಅವರಿಗೆ ಸೇರಿದ 20ಕ್ಕೂ ಹೆಚ್ಚು ಅಡಕೆ ಮರಗಳು ನಾಶವಾಗಿವೆ. ಕಾಣಿಯೂರು ಸಮೀಪದ ಕಟ್ಟತ್ತಾರು ಕುಶಾಲಪ್ಪ ಗೌಡ ಅವರ ಮನೆಯಲ್ಲಿ ಶುಕ್ರವಾರ ಸಂಜೆ ಕುಟುಂಬದ ನೇಮೋತ್ಸವ ಇದ್ದ ಕಾರಣ ನೇಮೋತ್ಸವಕ್ಕೆ ಹಾಕಿದ ಶಾಮಿಯಾನ, ಚಪ್ಪರ ಕಿತ್ತು ಹೋಗಿ ಎಲ್ಲೆಲ್ಲೋ ಬಿದ್ದಿದೆ. ನೇಮೋತ್ಸವ ಕಾರ್ಯಕ್ರಮ ಅಸ್ತವ್ಯಸ್ತವಾಯಿತು.

ಕಾಣಿಯೂರು ಹಾಗೂ ಚಾರ್ವಾಕ ಗ್ರಾಮದಲ್ಲಿ ವಿದ್ಯುತ್ ಲೈನ್‌ಗಳಿಗೆ ಮರಗಳು ಬಿದ್ದು 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ, ನಾಣಿಲ ಪ್ರದೇಶದಲ್ಲಿ ಒಂದರಲ್ಲೇ ನಾಲ್ಕು ಕಂಬಗಳು ಮುರಿದಿವೆ.

ಪರಿಣಾಮ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು ಶನಿವಾರ ಮಧ್ಯಾಹ್ನ ತನಕ ಮೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ದುರಸ್ತಿ ಕಾರ್ಯವನ್ನು ಮಾಡಿ ಮುಗಿಸಿದ್ದಾರೆ. ಕಡಬ ಸಮೀಪದ ಕೋಡಿಂಬಾಳ ಗ್ರಾಮದ ಹಲವೆಡೆ ಮರಗಳು ವಿದ್ಯುತ್ ಕಂಬಕ್ಕೆ ಬಿದ್ದು ವಿದ್ಯುತ್ ಕಂಬಗಳು ತುಂಡಾಗಿ ಬಿದ್ದಿವೆ. ಒಟ್ಟಾರೆ ಗಾಳಿ ಮಳೆಯ ಅಬ್ಬರಕ್ಕೆ ಹಲವಾರು ರೈತರಿಗೆ, ಮೆಸ್ಕಾಂಗೆ ಇಲಾಖೆಗೆ ಲಕ್ಷಾಂತರ ರೂ ನಷ್ಟ ಉಂಟಾಗಿದೆ. ಬಹುತೇಕ ಹಾನಿಗೊಳಗಾದ ಪ್ರದೇಶಗಳಿಗೆ ಕಂದಾಯ ಅಧಿಕಾರಿಗಳು, ಗ್ರಾಮ ಪಂಚಾಯಯತ್ ಅಧಿಕಾರಿಗಳು, ಸಿಬ್ಬಂದಿ, ಜನಪ್ರತಿನಿಧಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಾಗರಿಕರ ಆಕ್ರೋಶ

ಇದು ಕೇವಲ ರಸ್ತೆ ಸಮಸ್ಯೆ ಅಲ್ಲ, ಸಾವಿರಾರು ಕುಟುಂಬಗಳ ಸುರಕ್ಷತೆಯ ಪ್ರಶ್ನೆ. ಎರಡೂ ಕಡೆ ವೈಜ್ಞಾನಿಕವಾಗಿ ತಡೆಗೋಡೆ ನಿರ್ಮಿಸದೆ ಒಂದು ಕಡೆಗೆ ಮಾತ್ರ ಗೋಡೆ ಕಟ್ಟಿದರೆ ಅದು ಮಾನವ ನಿರ್ಮಿತ ಪ್ರವಾಹಕ್ಕೆ ನಾಂದಿಯಾಗಲಿದೆ. ಮುಂದೆ ಅನಾಹುತ ಸಂಭವಿಸಿದರೆ ಅದಕ್ಕೆ ಸಂಬಂಧಪಟ್ಟ ಚುನಾಯಿತ ಪ್ರತಿನಿಧಿಗಳು ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳೇ ಸಂಪೂರ್ಣ ಹೊಣೆ ಹೊರಬೇಕಾಗುತ್ತದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಮಳೆಗಾಲ ಆರಂಭವಾಗಲು ಇನ್ನು ದಿನಗಳು ಮಾತ್ರ ಬಾಕಿ ಇರುವ ಹಿನ್ನೆಲೆಯಲ್ಲಿ ಮನಪಾ ಅಧಿಕಾರಿಗಳು ತಕ್ಷಣ ಹಸ್ತಕ್ಷೇಪ ಮಾಡಿ ಕಾಮಗಾರಿ ಪರಿಶೀಲಿಸಬೇಕು. ಇಲ್ಲದಿದ್ದರೆ ಈ ಅವೈಜ್ಞಾನಿಕ ತಡೆಗೋಡೆ ನಿರ್ಮಾಣವನ್ನು ಸ್ಥಳೀಯ ನಾಗರಿಕರು ಬಲವಾಗಿ ವಿರೋಧಿಸಿ ನಿಲ್ಲಿಸಬೇಕಾದ ಅನಿವಾರ್ಯತೆ ಎದುರಾಗಲಿದೆ ಎಂದು ಸುಭಾಷಿತನಗರ ಮತ್ತು ಸುರತ್ಕಲ್‌ನ ಜನತೆ ಎಚ್ಚರಿಕೆ ನೀಡಿದ್ದಾರೆ.

ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶಾಖೆ ಕಟ್ಟಡ ಲೋಕಾರ್ಪಣೆ, ನಿವೃತ್ತ ಸಿಇಒಗೆ ಬೀಳ್ಕೊಡುಗೆ

ಪ್ರತಿವರ್ಷ ಪ್ರಶಸ್ತಿ ಪಡೆಯುವ ಸಹಕಾರ ಸಂಘ: ಬಾಲ್ಯೋಟ್ಟು

ಸುಳ್ಯ: ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಶಾಖೆಯ ನೂತನ ಕಟ್ಟಡ ಲೋಕಾರ್ಪಣೆ ಹಾಗೂ ಬೀಳ್ಕೊಡುಗೆ ಸಮಾರಂಭವು ಶನಿವಾರ ಕಲ್ಲೇಗ ಪೂವಣಿ ಹೆಗ್ಡೆ ಸಭಾಭವನದಲ್ಲಿ ನಡೆಯಿತು.

ಸಂಘದ ಕೇನ್ಯ ಶಾಖೆಯ ನೂತನ ಕಟ್ಟಡದ ಉದ್ಘಾಟನೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮಂಗಳೂರು ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೋಟ್ಟು ನೆರವೇರಿಸಿ ಮಾತನಾಡಿ, ಅಪೆಕ್ಸ್ ಬ್ಯಾಂಕ್‌ನಿಂದ ಪ್ರತಿ ವರ್ಷವು ಪ್ರಶಸ್ತಿ ಪಡೆಯುವ ಒಂದು ಸಹಕಾರಿ ಸಂಸ್ಥೆ ಇದ್ದರೆ ಅದು ಪಂಜ ಸಹಕಾರಿ ಸಂಘವಾಗಿದ್ದು ಜೊತೆಗೆ ಕೇಂದ್ರ ಮತ್ತು ರಾಜ್ಯದ ಸಬ್ಸಿಡಿ ಮತ್ತು ಸಾಲಮನ್ನಗಳು ನೇರವಾಗಿ ಸಿಗುವ ಒಂದು ಸಂಸ್ಥೆ ಇದ್ದಲ್ಲಿ ಅದು ಸಹಕಾರಿ ಸಂಸ್ಥೆಗಳಾಗಿವೆ ಎಂದು ಹೇಳಿದರು.

ಜಾಕೆ ಮಾಧವ ಗೌಡ ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೇಮಿರಾಜ್ ಕುರಿತು ಅಭಿನಂದನಾ ಮಾತುಗಳನ್ನಾಡಿದರು.

ಭದ್ರತಾ ಕೊಠಡಿಯನ್ನು ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಉದ್ಘಾಟಿಸಿ, ಸಂಘದ ಅಭಿನಂದನೆ ಸ್ವೀಕರಿಸಿ ಶುಭಹಾರೈಸಿದರು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ ವಹಿಸಿದ್ದರು.

ಇದೇ ಸಂಧರ್ಭದಲ್ಲಿ ನೂತನವಾಗಿ ನಿರ್ಮಿಸಿದ ವಸತಿಗೃಹ ಉದ್ಘಾಟನೆಯನ್ನು ಗುತ್ತಿಗಾರು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಅಧ್ಯಕ್ಷ ನಿತ್ಯಾನಂದ ಮುಂಡೋಡಿ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ದ.ಕ. ಜಿಲ್ಲಾ ಕೇಂದ್ರ ಬ್ಯಾಂಕ್ ನಿರ್ದೇಶನ ಐವರ್ನಾಡು ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಎಸ್.ಎನ್. ಮನ್ಮಥ, ಸಹಕಾರ ಸಂಘಗಳ ಉಪನಿಬಂಧಕ ರಘು ಎಸ್.ಎಂ. ಹಾಗೂ ನಿವೃತ್ತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೇಮಿರಾಜ ಪಿ., ಉಪಾಧ್ಯಕ್ಷ ಸದಾನಂದ ಕಾರ್ಜು, ಸಿಇಒ ಪ್ರದೀಪ್ ಕೆ., ನಿರ್ದೇಶಕರಾದ ಸುಬ್ರಹ್ಮಣ್ಯ ಕುಳ, ವಾಸುದೇವ ಕೆರೆಕ್ಕೋಡಿ, ತಿಮ್ಮಪ್ಪ ಗೌಡ ಕೂತ್ಕುಂಜ, ವಾಚಣ್ಣ ಕೆರೆಮೂಲೆ, ಅರುಣ ರೈ ಗೆಜ್ಜೆವನತಾ ಅತ್ಯಡ್ಕಲಿಗೋಧರ ಆಚಾರ್ಯ ಎನ್., ಚನ್ನಪ್ಪ ಗೌಡ ಚೊಟ್ಟೆಮಜಲು, ಬೇಬಿ ಕಟ್ಟ ಮುದರ ಐವತ್ತೊಕ್ಲು ದೀಪಕ್ ದೊಡ್ಡಮನೆ ಇದ್ದರು. ಆದ್ಯ ಬಾಬ್ಲುಬೆಟ್ಟು ಪ್ರಾರ್ಥಿಸಿದರು. ಸುಬ್ರಹ್ಮಣ್ಯ ಕುಳ ಸ್ವಾಗತಿಸಿದರು. ಉಪಾಧ್ಯಕ್ಷ ಸದಾನಂದ ಕಾರ್ಜು ವಂದಿಸಿದರು. ಸೋಮಶೇಖರ ನೇರಳ ನಿರೂಪಿಸಿದರು.





ಡಿಸಿಸಿ ಬ್ಯಾಂಕ್‌ನಿಂದ 10 ಲಕ್ಷ ರೂ. ನೆರವು

ಪಂಜ ಸಹಕಾರಿ ಸಂಘಕ್ಕೆ ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಅಧ್ಯಕ್ಷರ ಅನುಮತಿ ಮೇರೆಗೆ ಹತ್ತು ಲಕ್ಷ ನೀಡುವುದಾಗಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮಂಗಳೂರು ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೋಟ್ಟು ಘೋಷಿಸಿದರು.

ಯುವವಾಹಿನಿ ಕ್ರಿಕೆಟ್, ತ್ರೋ ಬಾಲ್ ಸ್ಪರ್ಧೆ | ಜಯಂತ್ ನಡುಬೈಲ್ ಅಭಿಪ್ರಾಯ

ಕ್ರೀಡಾಕೂಟ ಆಯೋಜನೆ ಶ್ಲಾಘನೀಯ

ಸುರತ್ಕಲ್: ಯುವವಾಹಿನಿ ಪಣಂಬೂರು, ಕುಳಾಯಿ ಘಟಕ ಆಯೋಜಿಸಿದ್ದ ಯುವವಾಹಿನಿ ಪ್ರೀಮಿಯರ್ ಲೀಗ್ ಸೀಸನ್-1 ಕ್ರಿಕೆಟ್ ಮತ್ತು ತ್ರೋ ಬಾಲ್ ಪಂದ್ಯಾಟವು ಸುರತ್ಕಲ್ ವಿದ್ಯಾದಾಯಿನಿ ಶಾಲಾ ಮೈದಾನದಲ್ಲಿ ನಡೆಯಿತು.

ಕ್ರೀಡಾಕೂಟವನ್ನು ಹೊಸಬೆಟ್ಟು ವಾರ್ಡ್ ಮಾಜಿ ಕಾರ್ಪೊರೇಟರ್ ವರುಣ್ ಚೌಟ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿದ್ದ ಪುತ್ತೂರು ಅಕ್ಷಯ ಕಾಲೇಜಿನ ಅಧ್ಯಕ್ಷ ಜಯಂತ್ ನಡುಬೈಲ್ ಮಾತನಾಡಿ, ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ರೀಡೆಯು ಮನುಷ್ಯನಿಗೆ ಆರೋಗ್ಯ ನೀಡುವುದು. ಘಟಕದ ಸದಸ್ಯರಿಗೆ ಕ್ರೀಡಾಕೂಟ ಆಯೋಜನೆ ಮಾಡಿರುವುದು ಶ್ಲಾಘನೀಯ ಎಂದರು.

ವೇದಿಕೆಯಲ್ಲಿ ಹಿರಿಯರಾದ ಮಾದವ ಅಂಚನ್, ಕೇಂದ್ರ ಸಮಿತಿಯ ದ್ವಿತೀಯ ಉಪಾಧ್ಯಕ್ಷ ಸುರೇಶ್ ಪೂಜಾರಿ, ರಮಾನಾಥ್ ಸನಿಲ್, ಜಗದೀಶ್ ಕೋಟ್ಯಾನ್, ಕ್ರೀಡಾ ಸಂಚಾಲಕ ಸುದೇಶ್, ಉಪಸ್ಥಿತರಿದ್ದರು.

ಕ್ರೀಡಾ ಕೂಟದಲ್ಲಿ ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು, ಉಪಾಧ್ಯಕ್ಷೆ ವಿದ್ಯಾ ರಾಕೇಶ್, ಮಾಜಿ ಅಧ್ಯಕ್ಷ ತಾರಾನಾಥ್ ಹೆಜಮಾಡಿ, ಕ್ರೀಡಾಪಟುಗಳಿಗೆ ಶುಭ ಕೋರಿದರು.

ಘಟಕದಲ್ಲಿರುವ ಎಲ್ಲಾ ಸದಸ್ಯರನ್ನು ಸೇರಿಸಿ, 4 ತಂಡ ರಚಿಸಿ ಕ್ರಿಕೆಟ್ ಹಾಗೂ ತ್ರೋ ಬಾಲ್ ಸ್ಪರ್ಧೆಯನ್ನು ಏರ್ಪಡಿಸಲಾಯಿತು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಘಟಕದ ಅಧ್ಯಕ್ಷ ಸುನೀಲ್ ಸಾಲ್ಯಾನ್ ಅಧ್ಯಕ್ಷತೆಯಲ್ಲಿ ವಹಿಸಿದ್ದರು. ಉಪ್ಪಿನಂಗಡಿಯ ದಂತ ವೈದ್ಯ ಡಾ. ರಾಜಾರಾಮ್ ಕೆ.ಬಿ. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ವೇದಿಕೆಯಲ್ಲಿ ಕೇಂದ್ರ ಸಮಿತಿಯ ಮಾಜಿ ಅಧ್ಯಕ್ಷ ಅಶೋಕ್ ಕುಮಾರ್, ತುಕಾರಾಮ್, ಉದಯ ಅಮೀನ್ ಮಟ್ಟು ಮತ್ತು ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ಇಂದಿರಾ, ತಂಡದ ನಾಯಕರಾದ ವಿಶ್ವನಾಥ್, ರವಿಚಂದ್ರ ಕೋಡಿಕಲ್, ಹೊನ್ನಯ್ಯ ಸುವರ್ಣ, ಸಂಜೀವ ಸುವರ್ಣ, ಕ್ರೀಡಾ ಸಂಚಾಲಕ ಸುದೇಶ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಡಾ. ರಾಜಾರಾಮ್ ಅವರು ಮಾತನಾಡಿ, ಇಂತಹ ಕ್ರೀಡಾಕೂಟದ ಮೂಲಕ ಸದಸ್ಯರಲ್ಲಿ ಇನ್ನಷ್ಟು ಭಾಂದವ್ಯ ಹೆಚ್ಚುವುದು, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕೆಂದರು. ಈ ಸಂದರ್ಭದಲ್ಲಿ ಕ್ರೀಡಾ ನಿರ್ದೇಶಕರನ್ನು ಗೌರವಿಸಲಾಯಿತು. ಅಲ್ಲದೆ ನಾಲ್ಕು ತಂಡದ ಯಜಮಾನರನ್ನು ಅಧ್ಯಕ್ಷರು ಗೌರವಿಸಿದರು. ಘಟಕದ ಕಾರ್ಯದರ್ಶಿ ಸಂದೀಪ್ ಕೋಟ್ಯಾನ್ ವಿಜೇತರ ಹೆಸರನ್ನು ಪ್ರಕಟಿಸಿದರು. ಕ್ರೀಡಾಕೂಟದಲ್ಲಿ ವಿಜಯಶಾಲಿಗಳಿಗೆ ಟ್ರೋಫಿ ನೀಡಿ ಗೌರವಿಸಲಾಯಿತು. ಘಟಕದ ಮಾಜಿ ಅಧ್ಯಕ್ಷ ಸಂಜೀವ ಸುವರ್ಣ ಕಾರ್ಯಕ್ರಮ ನಿರೂಪಿಸಿದರು.



ಕಲ್ಲತಡಮೆ ಶ್ರೀ ರಕ್ತೇಶ್ವರೀ, ಜುಮಾದಿ ಬಂಟ, ಮೈಸಂದಾಯ ದೈವಸ್ಥಾನ

ದೈವಗಳ ಪುನರ್ ಪ್ರತಿಷ್ಠೆ, ಸಾನಿಧ್ಯ ಕಲಶಾಭಿಷೇಕ

ಬಂಟ್ವಾಳ: ತಾಲೂಕಿನ ಫರಂಗಿಪೇಟೆ ಸಮೀಪದ ಕೆರೆಬಿತ್ತಿಲು, ಕಲ್ಲತಡಮೆಯಲ್ಲಿ ನೂತನವಾಗಿ ಶಿಲಾಮಯವಾಗಿ ನಿರ್ಮಾಣಗೊಂಡ ಶ್ರೀರಕ್ತೇಶ್ವರೀ, ಜುಮಾದಿ ಬಂಟ, ಮೈಸಂದಾಯ ದೈವಸ್ಥಾನದಲ್ಲಿ ಶ್ರೀದೈವಗಳ ಪುನರ್ ಪ್ರತಿಷ್ಠೆ ಸಾನಿಧ್ಯ ಕಲಶಾಭಿಷೇಕ ಹಾಗೂ ನೇಮ ನಡೆಯಿತು.

ಕಲ್ಲತಡಮೆ ಶ್ರೀನಾಗಬನದ ಬಳಿಯ ಕಟ್ಟೆಯಲ್ಲಿ ಶ್ರೀರಕ್ತೇಶ್ವರೀ ಹಾಗೂ ಕೆರೆಬಿತ್ತಿಲಿನ ನೂತನ ದೈವಸ್ಥಾನದಲ್ಲಿ ಜುಮಾದಿ ಬಂಟ ಮತ್ತು ಮೈಸಂದಾಯ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಸಾನಿಧ್ಯ ಕಲಶಾಭಿಷೇಕವು ಪೊಳಲಿ ಶ್ರೀ ಸುಬ್ರಹ್ಮಣ್ಯ ತಂತ್ರಿಗಳ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನೆರವೇರಿತು.

ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಕಲ್ಲಡ್ಕ ಶ್ರೀರಾಮ ವಿದ್ಯಾ ಕೇಂದ್ರದ ನಿವೃತ್ತ ದೈಹಿಕ ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯ ಅವರು ಧಾರ್ಮಿಕ ಉಪನ್ಯಾಸ ನೀಡಿದರು. ಧರ್ಮ ಸಭೆಯ ಅಧ್ಯಕ್ಷತೆ ಕಲ್ಲತಡಮೆ ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಸುರೇಶ್ ನಾಯಕ್ ಸುಜೀರ್ ವಹಿಸಿದ್ದರು.

ಸಭೆಯಲ್ಲಿ ಅರ್ಕುಳ ಉಳ್ಳಾಕ್ಲು ಕ್ಷೇತ್ರದ ಧರ್ಮದರ್ಶಿ ವಜ್ರನಾಭ ಶೆಟ್ಟಿ ಉದ್ಯಮಿಗಳಾದ ಸದಾನಂದ ಆಳ್ವ ಐತ್ತಪ್ಪ ಆಳ್ವ ಸುಜೀರುಗುತ್ತು, ಅಜಿತ್ ಚೌಟ, ಭುವನೇಶ್ ಪಚ್ಚಿನಡ್ಕ, ಸ್ಕ್ವಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ, ಪ್ರಮುಖರಾದ ಸುಧಾಕರ ಪೈ, ಸುಧೀರ್ ನಾಯಕ್, ಚಂದ್ರಶೇಖರ ಗಾಂಭೀರ, ಉಮೇಶ್ ಸಾಲಿಯಾನ್ ಉಪಸ್ಥಿತರಿದ್ದರು.

ಸಂದೀಪ್ ನಾಯಕ್ ಸುಜೀರ್ ಸ್ವಾಗತಿಸಿದರು. ನಾಗರತ್ನ ರೈ ವಂದಿಸಿದರು. ಮಹಾಪೂಜೆಯ ನಂತರ ಅನ್ನ ಸಂತರ್ಪಣೆ ನೆರವೇರಿತು. ಮಂಗಳೂರು ದಾಸನಮನೆ ಬಳಗದಿಂದ 'ಭಜನ್ ಗಂಗಾ' ಸಾಂಸ್ಕೃತಿಕ ಕಾರ್ಯಕ್ರಮವು ಜರಗಿತು.



ಧರ್ಮದೈವಗಳಿಗೆ ವಿಜೃಂಭಣೆಯ ನೇಮ

ರಾತ್ರಿ ಸುಜೀರುಗುತ್ತು ಅರಸು, ಜುಮಾದಿ ಬಂಟ ದೈವಸ್ಥಾನದ ಭಂಡಾರ ಮನೆಯಿಂದ ಭಂಡಾರ ಆಗಮಿಸಿ ಧರ್ಮದೈವಗಳಿಗೆ ವಿಜೃಂಭಣೆಯಿಂದ ನೇಮ ನಡೆಯಿತು ಸಮಿತಿ ಪದಾಧಿಕಾರಿಗಳಾದ ಸುರೇಶ್ ನಾಯಕ್ ಸುಜೀರ್, ಸುಂದರ ಶೆಟ್ಟಿ ಕಲ್ಲತಡಮೆ, ಕೆ.ಜಿ. ವಿಠಲ ಆಳ್ವ ಗರೋಡಿಮನೆ, ಆನಂದ ಆಳ್ವ ಗರೋಡಿಮನೆ, ವೇದವ್ಯಾಸ ನಾಯಕ್, ವರದರಾಜ್ ನಾಯಕ್, ಮೋಹನ್ ನಾಯಕ್, ಸಂಜೀವ ಹೆಗ್ಡೆ ಗರೋಡಿಮನೆ, ಚಂದ್ರಶೇಖರ ಪೂಜಾರಿ ತೆಕ್ಕಿತ್ತು, ಕಿರಣ್ ರಾಜ್ ಕುಂಪನಮಜಲು ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.

ಪುತ್ತೂರು ಅಕ್ಷಯ ಕಾಲೇಜ್‌ನಲ್ಲಿ 'ಸಾಫ್ಟ್ ಸ್ಕಿಲ್ಸ್ ಮಾಸ್ಟರಿ ಸೆಷನ್' ಯಶಸ್ವಿ



ಪುತ್ತೂರು: ಇಲ್ಲಿನ ಅಕ್ಷಯ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗ, ಬೈಟ್ ಬ್ಲಿಟ್ಜ್ ಐಟಿ ಕ್ಲಬ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ಕ್ಲಾಸ್ ರೂಮ್‌ನಿಂದ ಉದ್ಯೋಗ ಜೀವನದತ್ತ ಭವಿಷ್ಯಕ್ಕೆ ಸಿದ್ಧರಾಗಿ' ಎಂಬ ಆಶಯದೊಂದಿಗೆ 'ಸಾಫ್ಟ್ ಸ್ಕಿಲ್ಸ್ ಮಾಸ್ಟರಿ ಸೆಷನ್' ಕಾರ್ಯಕ್ರಮವು ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಪದವಿ ಪಡೆದರಷ್ಟೇ ಸಾಲದು

ಕಾರ್ಯಕ್ರಮಕ್ಕೆ ವೃತ್ತಿಪರ ತರಬೇತುದಾರರಾದ ರಾಚ್ ಮಾಸ್ಸಿಂಗ್ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಕೇವಲ ಪದವಿ ಪಡೆಯುವುದಷ್ಟೇ ಸಾಕಾಗುವುದಿಲ್ಲ; ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ಸು ಸಾಧಿಸಲು ಆತ್ಮವಿಶ್ವಾಸ, ಪ್ರಾಯೋಗಿಕ ಜ್ಞಾನ ಹಾಗೂ ಉತ್ತಮ ಸಂವಹನ ಕೌಶಲ್ಯ ಅಗತ್ಯವೆಂದು ಅವರು ತಿಳಿಸಿದರು.

ಸಂವಹನ ಕೌಶಲ್ಯ, ಉದ್ಯೋಗ ಸಿದ್ಧತೆ ಮಾಹಿತಿ

ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ, ವೃತ್ತಿಪರ ವ್ಯಕ್ತಿತ್ವ ವಿಕಾಸ, ಕ್ರಿಟಿಕಲ್ ಥಿಂಕಿಂಗ್, ತಂಡದ ಕೆಲಸ, ಭಾವನಾತ್ಮಕ ಬುದ್ಧಿಮತ್ತೆ ಹಾಗೂ ಉದ್ಯೋಗ ಸಿದ್ಧತೆ ಕುರಿತ ಉಪಯುಕ್ತ ಮಾಹಿತಿಯನ್ನು ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದ ತರಬೇತುದಾರ ರಾಚ್ ಮಾಸ್ಸಿಂಗ್ ನೀಡಿದರು.

ಕಾಲೇಜಿನ ಪ್ರಾಂಶುಪಾಲರು, ವಿಭಾಗ ಮುಖ್ಯಸ್ಥರು, ಸಂಯೋಜಕರು ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಅಭಿನಂದನೆ ಸಲ್ಲಿಸಿದರು.

ಮೇ 12: ಪಾಣೆಮಂಗಳೂರಿನಲ್ಲಿ ಬಂಟ್ವಾಳ ಬ್ಯಾರಿ ಸಾಹಿತ್ಯ ಸಮ್ಮೇಳನ

ಬಂಟ್ವಾಳ: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಮೇ 12ರಂದು ಪಾಣೆಮಂಗಳೂರು ಆಲಡ್ಕದ ಎಸ್.ಎಸ್. ಆಡಿಟೋರಿಯಂನಲ್ಲಿ ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮ್ಮರ್ ಯು.ಎಚ್. ಹೇಳಿದ್ದಾರೆ.

ಬಿ.ಸಿ.ರೋಡಿನಲ್ಲಿರುವ ಸಮ್ಮೇಳನ ಸ್ವಾಗತ ಸಮಿತಿ ಕಚೇರಿಯಲ್ಲಿ ಶನಿವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಶ್ರೀ ಶಾರದಾ ಪ್ರೌಢಶಾಲಾ ಬಳಿಯಿಂದ ಸಮ್ಮೇಳನ ಸಭಾಂಗಣದ ತನಕ ನಡೆಯಲಿರುವ ಸಮ್ಮೇಳನಾಧ್ಯಕ್ಷರ ಮೆರವಣಿಗೆಯನ್ನು ಸಮ್ಮೇಳನ ಸ್ವಾಗತ ಸಮಿತಿಯ ಗೌರವ ಸಲಹೆಗಾರ ಹಾಜಿ ಪಿ. ಮುಹಮ್ಮದ್ ರಫೀಕ್ ಉದ್ಘಾಟಿಸಲಿದ್ದು, 10ಗಂಟೆಗೆ ಧ್ವಜಾರೋಹಣ ನಡೆಯಲಿದೆ ಎಂದರು.

ಬೆಳಗ್ಗೆ 10.30ಕ್ಕೆ ಕರ್ನಾಟಕ ವಿಧಾನ ಸಭಾಧ್ಯಕ್ಷ ಡಾ. ಯು.ಟಿ. ಖಾದರ್ ಫರೀದ್ ಸಮ್ಮೇಳನ ಉದ್ಘಾಟಿಸಲಿದ್ದು, ಹಿರಿಯ ಕವಿ, ಗಾಯಕ ರಹೀಂ ಬಿ.ಸಿ. ರೋಡು ಸಮ್ಮೇಳನಾಧ್ಯಕ್ಷರ ಭಾಷಣ ಮಾಡಲಿದ್ದಾರೆ. ಶಾಸಕ ಯು. ರಾಜೇಶ್ ನ್ಯಾಕ್ ಉಮ್ಮರತ್ ಕುಮೇರ್ ಬೈಲ್ ಮಲೆ (ಬ್ಯಾರಿ ಕಥಾಸಂಕಲನ) ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಬಿ.ಎಚ್. ಖಾದರ್, ದ.ಕ. ಜಿ.ಪಂ. ಮಾಜಿ ಉಪಾಧ್ಯಾಕ್ಷ ಎಂ.ಎಸ್. ಮುಹಮ್ಮದ್, ಮೊಹಿದ್ದಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ. ಅಬ್ದುಲ್ ಸಲಾಂ ತುಂಬೆ, ಜನಪ್ರಿಯ ಸಮೂಹ ಸಂಸ್ಥೆಯ ಆಡಳಿತ ನಿರ್ದೇಶಕ ಡಾ. ಅಬ್ದುಲ್ ಬಶೀರ್ ವಿ.ಕೆ., ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ಸೆನೆಟ್ ಸದಸ್ಯ ಡಾ. ಮುಸ್ತಫಾ ಬಸ್ತಿಕೋಡಿ ಭಾಗವಹಿಸಲಿದ್ದಾರೆ ಎಂದರು. ಸಂಜೆ 4.30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭ ನಡೆಯಲಿದೆ.

ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಹಾಜಿ ಮುಹಮ್ಮದ್ ಹನೀಫ್ ಗೋಳ್ತಮಜಲು, ಬಂಟ್ವಾಳ ಬ್ಯಾರಿ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಎಂ. ಅಬ್ಬಾಸ್ ಅಲಿ, ಬ್ಯಾರಿ ಸಾಹಿತ್ಯ ಅಕಾಡೆಮಿ ಸದಸ್ಯ ಅಬುಬಕರ್ ಅನಿಲಕಟ್ಟೆ ತಾಲೂಕು ಸಮ್ಮೇಳನ ಕೋಶಾಧಿಕಾರಿ ಹಂಝು ಬಸ್ತಿಕೋಡಿ, ಬ್ಯಾರಿ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಲತೀಫ್ ನೇರಳಕಟ್ಟೆ, ಕೋಶಾಧಿಕಾರಿ ಮಹಮ್ಮದ್ ಸಾಗರ್, ಉಪಾಧ್ಯಕ್ಷರಾದ ಯೂಸುಫ್ ಕರಂದಾಡಿ, ಯು.ಮುಸ್ತಫಾ, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಎಂ.ಅಶ್ರಫ್, ಪಿ.ಮಹಮ್ಮದ್ ಪಾಣೆಮಂಗಳೂರು ಇದ್ದರು.


ಆಶೆಲ್ ಯೋಹಾನ್ ಸಿಮ್ಸನ್ ಅವರ ಕೃತಿ ಬಿಡುಗಡೆ



ಮಂಗಳೂರು: ಕಾನೂನು ವಿದ್ಯಾರ್ಥಿ ಆಶೆಲ್ ಯೋಹಾನ್ ಸಿಮ್ಸನ್ ಅವರ ಚೊಚ್ಚಲ ಕೃತಿ 'ವೆಡೆಮೆಕವ್ ಡಿಸ್ ಪ್ಯೂಟೋರಿಸ್' ಇತ್ತೀಚೆಗೆ ಬಿಡುಗಡೆಗೊಂಡಿತು.

ಕೊಚ್ಚಿಯ ರಾಷ್ಟ್ರೀಯ ಕಾನೂನು ವಿವಿ ಕುಲಪತಿ ಡಾ.ಜಿ.ಬಿ. ರೆಡ್ಡಿ ಕೃತಿ ಬಿಡುಗಡೆಗೊಳಿಸಿದರು. ಎಸ್‌ಡಿಎಂ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ. ತಾರಾನಾಥ, ವಕೀಲ ರಾಘವೇಂದ್ರ ರಾವ್ ಇದ್ದರು. ಯೋಹಾನ್ ಸಿಮ್ಸನ್ ಅವರು ಬಜ್ಪೆಯ ಆಯುಧ ವ್ಯಾಪಾರಿ ರೊಯ್ ಪ್ರಕಾಶ್ ಸಿಮ್ಸನ್, ಚೆರಿಲ್ ಸಿಮ್ಸನ್ ಪುತ್ರ. ಪ್ರಸ್ತುತ ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ 4ನೇ ವರ್ಷದ ಬಿಎಎಲ್ ಎಲ್‌ಬಿ ವಿದ್ಯಾರ್ಥಿ. ಈ ಕೃತಿಯು ಅಣಕು ನ್ಯಾಯಾಲಯ ತಯಾರಿಗೆ ಕೈಪಿಡಿಯಾಗಿದ್ದು ಆಶೆಲ್ ಯೋಹಾನ್ ಸಿಮ್ಸನ್ ಅವರು ಕಾನೂನು ಕ್ಷೇತ್ರದಲ್ಲಿ ಕೃತಿ ರಚನೆ ಮಾಡಿರುವ ಅತ್ಯಂತ ಕಿರಿಯ ಲೇಖಕ ಆಗಿದ್ದಾರೆ.

ದೇಲಂಪಾಡಿ ಯೋಗ ಪ್ರತಿಷ್ಠಾನಕ್ಕೆ ಯೋಗ ಪ್ರಶಸ್ತಿ



ಮಂಗಳೂರು: ಬೆಂಗಳೂರಿನಲ್ಲಿ 4ನೇ ಡಬ್ಲ್ಯು. ಎಫ್.ಎಫ್.ವೈ.ಎಸ್ ಕರ್ನಾಟಕ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ವತಿಯಿಂದ ನಡೆದ ಯೋಗಾಸನ ಸ್ಪರ್ಧೆಯಲ್ಲಿ ದೇಲಂಪಾಡಿ ಯೋಗ ಪ್ರತಿಷ್ಠಾನದ ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ, ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿ ಅವರ ಶಿಷ್ಯೆ ಸುಶೀಲಾ ಕುಮಾರಿ ಎ. ಮಾಸ್ಟರ್-ಸಿ ವಿಭಾಗದಲ್ಲಿ ತೃತೀಯ ಬಹುಮಾನ ಮತ್ತು ಶ್ರೀಲಕ್ಷ್ಮೀ-ಸೀನಿಯರ್ ಗರ್ಲ್ಸ್ ಎ ವಿಭಾಗದಲ್ಲಿ ತೃತೀಯ ಬಹುಮಾನ ಪಡೆದಿದ್ದಾರೆ. ಇಬ್ಬರೂ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಗಳಿಸಿದ್ದಾರೆ.

ಮೂಡುಬಿದಿರೆ ಆಳ್ವಾಸ್ ಕಾಲೇಜ್ ಆಫ್ ನರ್ಸಿಂಗ್‌ನಿಂದ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆ | ಡಾ. ಜುಡಿತ್ ಆಂಜೆಲಿಟಾ ನೊರೊನ್ಹಾ ಆಶಯ

ನರ್ಸಿಂಗ್ ಕೇವಲ ಒಂದು ವೃತ್ತಿಯಲ್ಲ; ದಯೆ, ಸೇವೆ, ಸಮರ್ಪಣೆಯ ದೀಪವಾಗಿರಿ

ಮೂಡುಬಿದಿರೆ: ನರ್ಸಿಂಗ್ ಒಂದು ಕೇವಲ ವೃತ್ತಿಯಲ್ಲ; ಅದು ಮಾನವೀಯತೆ, ಕರುಣೆ ಮತ್ತು ಸೇವೆಯ ಸಂಕೇತವಾದ ಮಹೋನ್ನತ ಜೀವನಪಥ ಎಂದು ಮಣಿಪಾಲ ಕಾಲೇಜ್ ಆಫ್ ನರ್ಸಿಂಗ್‌ನ ಡೀನ್ ಡಾ. ಜುಡಿತ್ ಆಂಜೆಲಿಟ್ಟಾ ನೊರೊನ್ಹಾ ಹೇಳಿದರು.

ಆಳ್ವಾಸ್ ಕಾಲೇಜ್ ಆಫ್ ನರ್ಸಿಂಗ್‌ವತಿಯಿಂದ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆಯ ಅಂಗವಾಗಿ ಶನಿವಾರ ನಡೆದ ದೀಪ ಪ್ರಜ್ವಲನೆ ಹಾಗೂ ಪ್ರತಿಜ್ಞಾ ಸ್ವೀಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ನರ್ಸಿಂಗ್ ವಿದ್ಯಾರ್ಥಿನಿಯರನ್ನು ಅಭಿನಂದಿಸಿದ ಅವರು, ಇಂದು ನಿಮ್ಮ ಶೈಕ್ಷಣಿಕ ಜೀವನದ ಆರಂಭ ಮಾತ್ರವಲ್ಲ; ಇದು ಸೇವೆ, ಕಾಳಜಿ ಮತ್ತು ಮಾನವೀಯ ಮೌಲ್ಯಗಳಿಗೆ ಸಮರ್ಪಿತವಾದ ಜೀವನಯಾನದ ಆರಂಭ ಎಂದರು.

ದೀಪ ಪ್ರಜ್ವಲನೆಯ ಮಹತ್ವವನ್ನು ವಿವರಿಸಿದ ಅವರು, ಫ್ಲಾರೆನ್ಸ್ ನೈಟಿಂಗೇಲ್ ಅವರ ಸೇವಾ ಮನೋಭಾವವನ್ನು ಸ್ಮರಿಸಿದರು. ಕ್ರಿಮಿಯನ್ ಯುದ್ಧದ ಸಂದರ್ಭದಲ್ಲಿ ರಾತ್ರಿ ಹೊತ್ತು ದೀಪ ಹಿಡಿದು ಗಾಯಾಳು ಸೈನಿಕರ ಸೇವೆ ಮಾಡಿದ ಫ್ಲಾರೆನ್ಸ್ ನೈಟಿಂಗೇಲ್ ಅವರ ತ್ಯಾಗವೇ ಇಂದಿನ ದೀಪ ಪ್ರಜ್ವಲನೆ ಸಂಪ್ರದಾಯಕ್ಕೆ ಪ್ರೇರಣೆಯಾಗಿದೆ ಎಂದರು.

ಎ. ಪಿ. ಜೆ. ಅಬ್ದುಲ್ ಕಲಾಂ ಅವರ ಯಶಸ್ಸಿನ ನಾಲ್ಕು ಸೂತ್ರಗಳನ್ನು ಉಲ್ಲೇಖಿಸಿದ ಅವರು, ಜೀವನದಲ್ಲಿ ಸ್ಪಷ್ಟ ಗುರಿ, ನಿರಂತರ ಜ್ಞಾನಾರ್ಜನೆ, ಕಠಿಣ ಪರಿಶ್ರಮ ಮತ್ತು ಸವಾಲುಗಳನ್ನು ಎದುರಿಸುವ ಧೈರ್ಯ ಅವಶ್ಯ ಎಂದು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು. ಸೃಜನಶೀಲತೆ, ಸತ್ಯನಿಷ್ಠೆ ಮತ್ತು ಧೈರ್ಯ ಈ ಮೂರು ಗುಣಗಳು ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು. ನರ್ಸಿಂಗ್ ವೃತ್ತಿಯಲ್ಲಿ ಜ್ಞಾನ ಮತ್ತು ಕೌಶಲ್ಯದ ಜೊತೆಗೆ ಮೌಲ್ಯಗಳು ಹಾಗೂ ಸರಿಯಾದ ಮನೋಭಾವ ಅತ್ಯಂತ ಮುಖ್ಯವೆಂದು ತಿಳಿಸಿದರು.

ಬೆಳಕನ್ನು ಹಂಚುವ ಸಂಕೇತವಾಗಿದೆ

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ನರ್ಸಿಂಗ್ ಕಾಲೇಜು ಸ್ಥಾಪನೆಯಾದ ದಿನದಿಂದಲೇ ನೂತನವಾಗಿ ಸೇರ್ಪಡೆಯಾದ ವಿದ್ಯಾರ್ಥಿಗಳಿಂದ ದೀಪ ಪ್ರಜ್ವಲನೆಯನ್ನು ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿ. ದೀಪ ಪ್ರಜ್ವಲನೆ ಕೇವಲ ಒಂದು ಸಂಪ್ರದಾಯವಲ್ಲ. ಅದು ಜ್ಞಾನ, ಸೇವೆ ಮತ್ತು ಮಾನವೀಯತೆಯ ಬೆಳಕನ್ನು ಸಮಾಜಕ್ಕೆ ಹಂಚುವ ಸಂಕೇತವಾಗಿದೆ. ಜೀವನದಲ್ಲಿ ಯಾವುದೇ ಒಳ್ಳೆಯ ಕಾರ್ಯವನ್ನು ಆರಂಭಿಸಲು ಸರಿಯಾದ ಸಮಯಕ್ಕಾಗಿ ಕಾಯುವ ಅಗತ್ಯವಿಲ್ಲ, ಕಾಲ ಯಾರನ್ನೂ ಕಾಯುವುದಿಲ್ಲ, ಅವಕಾಶಗಳು ಬಂದಾಗ ಧೈರ್ಯವಾಗಿ ಮುಂದೆ ಸಾಗಬೇಕು. ಒಂದು ಕೆಲಸವನ್ನು ಆರಂಭಿಸಲು ಬೇಕಾಗಿರುವುದು ಆತ್ಮವಿಶ್ವಾಸ ಮತ್ತು ಸಂಕಲ್ಪ ಎಂದು ಹೇಳಿದರು. ನರ್ಸಿಂಗ್ ವೃತ್ತಿ ಸೇವೆ, ಕರುಣೆ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ನಿಂತಿರುವ ಮಹತ್ವದ ಕ್ಷೇತ್ರವಾಗಿದ್ದು, ವಿದ್ಯಾರ್ಥಿಗಳು ಜ್ಞಾನ ಮತ್ತು ಕೌಶಲ್ಯದ ಜೊತೆಗೆ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರತಿಜ್ಞೆ ಸ್ವೀಕರಿಸಿ ಸೇವಾ ಮನೋಭಾವದೊಂದಿಗೆ ಸಮಾಜ ಸೇವೆಗೆ ತೊಡಗುವ ಸಂಕಲ್ಪ ಮಾಡಿದರು. ಪ್ರಾಂಶುಪಾಲ ಡಾ. ಯತಿಕುಮಾರ್ ಸ್ವಾಮಿಗೌಡ, ಶೈಲಾ ಮೆಂಡೀಸ್, ಉಪಪ್ರಾಂಶುಪಾಲೆ ರೇಣುಕಾ ಭಂಡಾರಿ ಇದ್ದರು. ಕವಿತಾ ಡಿಸಿಲ್ವಾ ನಿರೂಪಿಸಿ, ವಂದಿಸಿದರು.



ಸುತ್ತಮುತ್ತ

ಇಂದು ದಶಮಾನೋತ್ಸವ ಸಂಭ್ರಮ ಕಾರ್ಯಕ್ರಮ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಆದಿದ್ರಾವಿಡ ಸಮಾಜ ಸೇವಾ ಸಂಘ ಇದರ ವಿಂಶತಿ ಮಹೋತ್ಸವ ಹಾಗೂ ಚೈತನ್ಯ ಸಹಕಾರಿ ಸಂಘ ಮಂಗಳೂರು ಇದರ ದಶಮಾನೋತ್ಸವ ಸಮಾರಂಭ ಇಂದು (ಮೇ 10) ಪೂರ್ವಾಹ್ನ 10 ಗಂಟೆಗೆ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ.
ಮಧ್ಯಾಹ್ನ 12 ಗಂಟೆಗೆ ಸಮಾರೋಪ ಸಮಾರಂಭವು ಜಿಲ್ಲಾಧ್ಯಕ್ಷ ಸಂಜೀವ ಕೋಟ್ಯಾನ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.
ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಕಟೀಲು ಶ್ರೀ ಕ್ಷೇತ್ರದ ಆನುವಂಶಿಕ ಮೊಕ್ತೇಸರ ಹರಿ ನಾರಾಯಣದಾಸ ಅಸ್ರಣ್ಣ, ಶಾಸಕರಾದ ಡಿ.ವೇದವ್ಯಾಸ ಕಾಮತ್, ಭಾಗೀರಥಿ ಮುರುಳ್ಯ, ಡಾ.ವೈ.ಭರತ್ ಶೆಟ್ಟಿ,ಐವನ್ ಡಿಸೋಜ, ಚೈತನ್ಯ ಸಹಕಾರಿ ಸಂಘದ ಅಧ್ಯಕ್ಷ ರಘುನಾಥ ಅತ್ತಾವರ, ರಾಜ್ಯ ಆದಿ ದ್ರಾವಿಡ ಸಮಾಜ ಸೇವಾ ಸಂಘದ ಗೌರವಾಧ್ಯಕ್ಷ ಶಂಕರ್ ಬಿ ಹಾಸನ ಮುಂತಾದವರು ಭಾಗವಹಿಸಲಿದ್ದಾರೆ.

ಇಂದು ಕುಬೆವೂರುನಲ್ಲಿ ಶ್ರೀ ಶನೈಶ್ಚರ ಪೂಜೆ

ಮುಲ್ಕಿ: ಕುಬೆವೂರು ಶ್ರೀ ಜಾರಂದಾಯ ದೈವಸ್ಥಾನ, ಕುಬೆವೂರು ಜಾರಂದಾಯ ಸೇವಾ ಮಿತ್ರಮಂಡಳಿ ಹಾಗೂ ಮಹಿಳಾ ಮಂಡಳಿ ವತಿಯಿಂದ 11 ನೇ ವರ್ಷದ ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆಯು ಮೇ 10 ರಂದು ಬೆಳಿಗ್ಗೆ 8 ಕ್ಕೆಕುಬೆವೂರು ಶ್ರೀ ಜಾರಂದಾಯ ದೈವಸ್ಥಾನ ದೈವಸ್ಥಾನದಲ್ಲಿ ತಾಳಮದ್ದಳೆ ರೂಪದಲ್ಲಿ ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆ ಜರಗಲಿದೆ. ಬೆಳಿಗ್ಗೆ 8 ಕ್ಕೆ ಸಾಮೂಹಿಕ ಶ್ರೀ ಶನಿಪೂಜೆ ಆರಂಭ, ಮಧ್ಯಾಹ್ನ ಮಹಾ ಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ಜರಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 12: ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾಪನಾ ಮಹೋತ್ಸವ ವರ್ಷಾಚರಣೆ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾಪನಾ ಮಹೋತ್ಸವದ ವರ್ಷಾಚರಣೆ ಮೇ 12 ರಂದು ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಯವರ ನೇತೃತ್ವದಲ್ಲಿ ನಡೆಯಲಿದೆ. ಮೇ 12 ರ ಬೆಳಿಗ್ಗೆ 6ಕ್ಕೆ ದೇವರಿಗೆ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10.05ಕ್ಕೆ ಮಿಥುನ ಲಗ್ನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ನವಚತ್ವಾರಿಂಷತ್ ಕಲಶಾಭಿಷೇಕ, ಪ್ರಸನ್ನ ಪೂಜೆ,ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 6 ಕ್ಕೆ ದೊಡ್ಡರಂಗಪೂಜೆ,ರಾತ್ರಿ 7 ಕ್ಕೆ ಬಲಿ ಮಹೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ

ತೈವಾಂಗ್‌ನಲ್ಲಿ ಉಪನ್ಯಾಸ

ಮಂಗಳೂರು: ಇಲ್ಲಿನ ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಕಂಪ್ಯೂಟರ್ ಅನಿಮೇಷನ್ ವಿಭಾಗದ ಹಿರಿಯ ಉಪನ್ಯಾಸಕರಾದ ಸಂತೋಷ್ ನೋಟಗಾರ್ ಅವರು ಮೇ 15ರಿಂದ 17ರವರೆಗೆ ತೈವಾನ್‌ನ ಕೌಶಿಯಾಂಗ್‌ನಲ್ಲಿ ನಡೆಯಲಿರುವ ಏಷ್ಯಾ ಪ್ಯಾಸಿಫಿಕ್ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಅವರು 'ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಮುಕ್ತ ಜ್ಞಾನ ಏಕೀಕರಣ ಮಾದರಿ' ಕುರಿತು ಉಪನ್ಯಾಸ ನೀಡಲಿದ್ದಾರೆ.
ಕಂಪ್ಯೂಟರ್ ಅನಿಮೇಷನ್ ವಿಭಾಗದಲ್ಲಿ ಕಳೆದ 16 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸಂತೋಷ್ ನೋಟಗಾರ್ ಅವರು ಪ್ರಸ್ತುತ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ, ಅಂತರರಾಷ್ಟ್ರೀಯ ಮತ್ತು ದೇಶೀಯ ಸಂಪರ್ಕ ಕೋಶದ ಸಹಾಧ್ಯಕ್ಷರಾಗಿ ಸಹ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಅವರು ವಿಕಿಪೀಡಿಯ ಏಷ್ಯನ್ ತಿಂಗಳು ಅಭಿಯಾನದ ದಕ್ಷಿಣ ಏಷ್ಯಾ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯಾದ್ಯಂತ ಗುಡುಗು ಸಹಿತ ಬೇಸಿಗೆ ಮಳೆ

ಕಾಸರಗೋಡು: ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಬಿರುಸಿನ ಮಳೆ ಸುರಿದಿದೆ. ಮಳೆಯೊಂದಿಗೆ ಮಿಂಚು ಗುಡುಗಿನ ಅಬ್ಬರವೂ ಜೋರಾಗಿತ್ತು. ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಹಾಗೂ ವೆಳ್ಳರಿಕುಂಡು ತಾಲೂಕುಗಳ ವಿವಿಧೆಡೆ ಹಾಗೂ ಕರಾವಳಿ, ಮಲೆನಾಡು ಅಲ್ಲದೆ ಕಾಸರಗೋಡು ನಗರ ಪ್ರದೇಶಗಳಲ್ಲೂ ಉತ್ತಮ ಮಳೆಯಾಗಿದೆ. ಈ ಮಧ್ಯೆ ಮಳೆಯೊಂದಿಗೆ ಬಲವಾದ ಗಾಳಿಯೂ ಬೀಸಿದೆ. ದಿಢೀರನೆ ಸುರಿದ ಮಳೆಯಿಂದಾಗಿ ಜಿಲ್ಲೆಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತು.

ಇಡ್ಯಾ ಸುರತ್ಕಲ್ ಬ್ರಹ್ಮಶ್ರೀ ನಾರಾಯಣ ಗುರು ಮಂದಿರ ಪುನಃಪ್ರತಿಷ್ಠಾ ಬ್ರಹ್ಮಕಲಶ | ಧಾರ್ಮಿಕ ಸಭೆ

ಎಲ್ಲರೊಂದಿಗೂ ಬೆರೆತು ಜೀವಿಸಿದಾಗ ಸದೃಢ ಸಮಾಜ ನಿರ್ಮಾಣ

ಸುರತ್ಕಲ್: ಇಡ್ಯಾ ಸುರತ್ಕಲ್ ಶ್ರೀ ವಿಠೋಭ ರುಕುಮಾಯಿ ಕ್ಷೇತ್ರ, ಬ್ರಹ್ಮಶ್ರೀ ನಾರಾಯಣ ಗುರು ಮಂದಿರ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಪ್ರಯುಕ್ತ ಧಾರ್ಮಿಕ ಸಭೆ ಜರಗಿತು. ಕಾರ್ಯಕ್ರಮಕ್ಕೆ ವರ್ಕಳದ ಶಿವಗಿರಿ ಮಠದ ಶ್ರೀ ಸತ್ಯಾನಂದ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ ಶಿಕ್ಷಣದಿಂದ ಸಂಘಟನೆಯಿಂದ ಸಮುದಾಯವು ಬೆಳೆಯುವ ಜೊತೆಗೆ ಗುರುವಾಣಿಯಂತೆ ಎಲ್ಲರೊಂದಿಗೂ ಬೆರೆತು ಜೀವಿಸಿದಾಗ ಸದೃಢ ಸಮಾಜ ನಿರ್ಮಾಣವಾಗುತ್ತದೆ ಎಂದು ನುಡಿದರು.
ಇಡ್ಯಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಿ ಶ್ರಮ ವಹಿಸಿದ್ದರಿಂದ ಭವ್ಯ ಕ್ಷೇತ್ರ ಒಂದು ಬೆಳೆದು ನಿಂತಿದೆ ಎಂದು ಶ್ಲಾಘಿಸಿದರು. ಕಾರ್ಯಕ್ರಮವನ್ನು ಶ್ರೀ ಗೋಕರ್ಣನಾಥ ಕ್ಷೇತ್ರ ಕುದ್ರೋಳಿಯ ಟ್ರಸ್ಟಿ ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಎಚ್.ಎಸ್. ಸಾಯಿರಾಮ್ ಉದ್ಘಾಟಿಸಿದರು. ಕ್ಷೇತ್ರ ಪುನರ್ನಿರ್ಮಾಣ ಸಮಿತಿ ಗೌರವಾಧ್ಯಕ್ಷರು ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಗೌರವ ಸಂಚಾಲಕರಾದ ಮಹಾಬಲ ಪೂಜಾರಿ ಕಡಂಬೋಡಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಬಿಲ್ಲವ ಅಸೋಸಿಯೇಶನ್ ಬೆಂಗಳೂರು ಅಧ್ಯಕ್ಷರಾದ ವೇದ ಕುಮಾರ್, ವಕೀಲರು ಹಾಗೂ ಮೊಗವೀರ ಸಂಘ ಹೊಸಬೆಟ್ಟು ಗುರಿಕಾರರಾದ ಗಂಗಾಧರ ಎಚ್. ಹೊಸಬೆಟ್ಟು, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಗಳೂರು ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್, ಸೌತ್ ಇಂಡಿಯಾ ಟೀ,ಕಾಫಿ ಎಸ್ಟೇಟ್ಸ್ ಲಿಮಿಟೆಡ್ ಬೈಕಂಪಾಡಿಯ ನಿರ್ದೇಶಕರಾದ ಶೀಲಾ ಕೊಯೆಲೊ, ಮುಕ್ಕದ ಭಂಡಾರಮನೆಯ ದೇವೇಂದ್ರ ಪೂಜಾರಿ ಇಡ್ಯಾ, ಬಿಲ್ಲವ ಸಮಾಜ ಸೇವಾ ಸಂಘ ಅಧ್ಯಕ್ಷರಾದ ಐ. ಯಮುನಶೇಖರ, ಉದ್ಯಮಿ ರಾಜಾರಾಂ ಸಾಲ್ಯಾನ್, ಖಿಲಿಯಾ ಮಸೀದಿ ಇಡ್ಯಾದ ಅಧ್ಯಕ್ಷರಾದ ರಫೀಕ್ ಇಡ್ಯಾ, ಬ್ರಹ್ಮಶ್ರೀ ನಾರಾಯಣ ಗುರು ಸಮೂಹ ಶಿಕ್ಷಣ ಸಂಸ್ಥೆ ಕಾಟಿಪಳ್ಳದ ಟ್ರಸ್ಟಿ ದಯಾಕರ ಕುಳಾಯಿ ಹಾಗೂ ಸೌತ್ ಇಂಡಿಯಾ ಟೀ ಮತ್ತು ಕಾಫಿ ಎಸ್ಟೇಟ್ ಲಿ., ಬೈಕಂಪಾಡಿಯ ಮೆನೇಜರ್ ಉಮೇಶ್ ಕೋಟ್ಯಾನ್, ಎಂ ಆರ್ ಪಿ ಎಲ್ ನಿವೃತ್ತ ಜನರಲ್ ಮ್ಯಾನೇಜರ್ ರಾಬರ್ಟ್ ಪೌಲ್ ಡಿಸೋಜ ಭಾಗವಹಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಕ್ಷೇತ್ರ ಪುನರ್ ನಿರ್ಮಾಣ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ನಾನಿಲ್ ಸ್ವಾಗತಿಸಿದರು. ಸಮಿತಿಯ ಉಪಾಧ್ಯಕ್ಷರಾದ ಯೋಗೀಶ್ ಕೋಟ್ಯಾನ್ ಮಾತನಾಡಿದರು. ರಮೇಶ್ ಅಂಚನ್ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಸ್ವರ್ಣಿಕ ಸುಶೀಲ್ ಆಗರ ಮೇಲು ಅವರು ಬರೆದ ಇಡ್ಯಾದ ಹರಿ ಗುರು ಧ್ವನಿಸುರುಳಿ ಬಿಡುಗಡೆ ನಡೆಯಿತು.



ಇಂದು ಬ್ರಹ್ಮಕಲಶ

ಇಂದು ಬೆಳಿಗ್ಗೆ ಪ್ರತಿಷ್ಠೆ, ಬಳಿಕ ಶ್ರೀ ದೇವರಿಗೆ ಬ್ರಹ್ಮಕಲಶ ನಡೆಯಲಿದೆ. ಮಧ್ಯಾಹ್ನ ಪಲ್ಲಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಸಭಾ ಕಾರ್ಯಕ್ರಮದಲ್ಲಿ ಕ್ಷೇತ್ರದ ಅರ್ಚಕರಾದ ಸರ್ವಶ್ರೀ ಗಂಗಾಧರ್ ಶಾಂತಿ, ದಯಾನಂದ ಶಾಂತಿ ಹೇಮನಾಥ ಶಾಂತಿ ಹಾಗೂ ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರ್ತಿ ಕು. ಧನಲಕ್ಷ್ಮಿ ಪೂಜಾರಿ ಇಡ್ಯಾ ಅವರಿಗೆ ಗೌರವಾಭಿನಂದನೆ ನಡೆಯಲಿದೆ. ಸಂಜೆ 6.30ಕ್ಕೆ ಶ್ರೀ ನಾರಾಯಣ ಗುರು ಬಾಲಗೋಕುಲ ಇಡ್ಯಾ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ , 7ಕ್ಕೆ ದೇವರಿಗೆ ರಂಗಪೂಜೆ, ರಾತ್ರಿ 8ಕ್ಕೆ ಅನ್ನ ಸಂತರ್ಪಣೆ, ರಾತ್ರಿ 8-30ಕ್ಕೆ ಶಿವಾನಿ ಸುರತ್ಕಲ್ ತಂಡದ ವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮೇ. 11ರಂದು ರಕ್ತೇಶ್ವರೀ ನೇಮ ನಡೆಯಲಿದೆ.

ಬೇಸಿಗೆ ಶಿಬಿರ ಮಕ್ಕಳ ಮನೋವಿಕಾಸ ಜೊತೆ ಸುಸಂಸ್ಕೃತರನ್ನಾಗಿಸಲಿ: ಪ್ರೇಮಾನಂದ ಶೆಟ್ಟಿ



ಕೋಟ: ಬೇಸಿಗೆ ಶಿಬಿರಗಳು ಬರೇ ರಜಾ ಶಿಬಿರಗಳಾಗದೆ ಮಕ್ಕಳ ಮನೋವಿಕಾಸದ ಜೊತೆ ಸುಸಂಸ್ಕೃತರನ್ನಾಗಿಸಲಿ ಎಂದು ಸಮಾಜಸೇವಕ ಕಟ್ಕೇರೆ ಪ್ರೇಮಾನಂದ ಶೆಟ್ಟಿ ಅಭಿಪ್ರಾಯಪಟ್ಟರು.
ಶನಿವಾರ ಕೋಟ ಪಂಚಾಯತ್ ಸಭಾಂಗಣದಲ್ಲಿ ಕೋಟ ಗ್ರಾಮಪಂಚಾಯತ್, ಅರಿವು ಡಿಜಿಟಲ್ ಗ್ರಂಥಾಲಯ ಕೇಂದ್ರ ಕೋಟ, ಪಂಚವರ್ಣ ಸಂಘಟನೆ ಕೋಟ,ಇಂಡಿಕಾ ಕಲಾ ಬಳಗ ಪಡುಕರೆ, ಪ್ರಕೃತಿ ಸಂಜೀವಿನಿ ಸಂಘ ಕೋಟ ಪಂಚಾಯತ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಐದು ದಿನಗಳ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.
ಪ್ರಸ್ತುತ ದಿನಗಳಲ್ಲಿ ಮಕ್ಕಳಲ್ಲಿ ಹಿರಿ ಕಿರಿಯರ ಬಗ್ಗೆ ಗೌರವ ಕುಂಠಿತಗೊಂಡಿದೆ ಇದಕ್ಕೆ ಈಗಿನ ವ್ಯವಸ್ಥೆಯೇ ಕಾರಣವೇ ಅಥವಾ ಪೋಷಕರಿಂದಾಗುತ್ತಿದೆ ಎಂಬ ಪ್ರಶ್ನೆ ಕಾಡುತ್ತಿದೆ,ಮಕ್ಕಳಿಗೆ ಶಿಕ್ಷಣದ ಜೊತೆಗೆ ಕೌಶಲ್ಯಾಭಿವೃದ್ಧಿಗೆ ಪ್ರೋತ್ಸಾಹಿಸುವುದರೊಂದಿಗೆ ಸಂಸ್ಕಾರಭರಿತರನ್ನಾಗಿಸಿ ಎಂದರು.

ಗೌರವ

ಈ ಸಂದರ್ಭದಲ್ಲಿ ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ನಾಗರತ್ನ ಉಡುಪ,ಜಯಲಕ್ಷ್ಮೀ ,ವಸಂತಿ , ಪ್ರಜ್ಞಾ ಹಂದಟ್ಟು ಅವರನ್ನು ಗೌರವಿಸಲಾಯಿತು.
ಪಂಚವರ್ಣ ಯುವಕ ಮಂಡಲದ ಉಪಾಧ್ಯಕ್ಷ ದಿನೇಶ್ ಆಚಾರ್,ಇಂಡಿಕಾ ಕಲಾ ಬಳಗದ ಅಧ್ಯಕ್ಷ ಎಂ.ಜಯರಾಮ ಶೆಟ್ಟಿ, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಪ್ರಕೃತಿ ಸಂಜೀವಿನಿ ಸಂಘದ ಮಾಲತಿ ಶೇಖರ್ ಉಪಸ್ಥಿತರಿದ್ದರು. ಅರಿವು ಡಿಜಿಟಲ್ ಗ್ರಂಥಾಲದ ಗ್ರಂಥಪಾಲಕಿ ಜ್ಯೋತಿ ಗಿಳಿಯಾರು ಸ್ವಾಗತಿಸಿ,ಪಂಚವರ್ಣದ ಸುಜಾತ ಬಾಯರಿ ನಿರೂಪಿಸಿದರು. ಪಂ. ಪಿಡಿಒ ಉಮೇಶ್ ವಂದಿಸಿದರು.

ಮಂಗಳೂರು ಎಸ್‌ಡಿಎಂ ಕಾನೂನು ಕಾಲೇಜು: ವಿಪತ್ತು ನಿರ್ವಹಣಾ ಶಿಬಿರ



ಮಂಗಳೂರು: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್‌ಕ್ರಾಸ್, ರೋವರ್ಸ್ ರೇಂಜರ್ಸ್ ಹಾಗೂ ದೈಹಿಕ ಶಿಕ್ಷಣ ವಿಭಾಗ ಆಶ್ರಯದಲ್ಲಿ ಭಾರತೀಯ ರೆಡ್‌ಕ್ರಾಸ್, ದಕ್ಷಿಣ ಕನ್ನಡ ಜಿಲ್ಲಾ ಘಟಕದ ಸಹಯೋಗದೊಂದಿಗೆ ಎರಡು ದಿನಗಳ ವಿಪತ್ತು ನಿರ್ವಹಣಾ ಶಿಬಿರ ಪಿಲಿಕುಳದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಭವನದಲ್ಲಿ ನಡೆಯಿತು.
ಮಂಗಳೂರಿನವಕೀಲ, ವಿಪತ್ತು ನಿರ್ವಹಣಾ ತರಬೇತುದಾರ ಸಂತೋಷ್ ಪೀಟರ್ ಡಿಸೋಜ ಶಿಬಿರವನ್ನು ಉದ್ಘಾಟಿಸಿದರು.
ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಪುಷ್ಪರಾಜ್ ಕೆ.ಪ್ರಾಸ್ತಾವಿಕ ಮಾತುಗಳನ್ನಾಡಿದರು. ದೈಹಿಕ ಶಿಕ್ಷಣ ನಿರ್ದೇಶಕ ಶಶಿಪ್ರಸಾದ್, ವಿದ್ಯಾರ್ಥಿ ನಾಯಕರಾದ ನರಸಿಂಹ ಭಂಡಾರಿ, ಹೇಮಂತ್, ಸಂಜನ್, ಸ್ವೀಕಾರ್, ಅಶ್ರಫ್ ಉಪಸ್ಥಿತರಿದ್ದರು. ಶೃತಿಕಾ ಸ್ವಾಗತಿಸಿ, ನಿಶ್ಮಾ ವಂದಿಸಿದರು. ದೀಕ್ಷಾ ಕಾರ್ಯಕ್ರಮ ನಿರೂಪಿಸಿದರು.
ವೆನ್ಲಾಕ್‌ನ ವೈದ್ಯಾಧಿಕಾರಿ ಡಾ.ಅಣ್ಣಯ್ಯ ಕುಲಾಲ್ ಹಾಗೂ ಸಂತೋಷ್ ಪೀಟರ್ ಡಿಸೋಜ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ ಒಟ್ಟು 60 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೂಲಭೂತ ಕೌಶಲ್ಯ ತಿಳಿಯುವುದು ಅವಶ್ಯ

ವಿಪತ್ತುಗಳು ಯಾವುದೇ ಕ್ಷಣದಲ್ಲೂ ಯಾವುದೇ ರೀತಿಯಲ್ಲೂ ಸಂಭವಿಸಬಹುದು. ಅಂತಹ ಕ್ಷಣದಲ್ಲಿ ಅವುಗಳನ್ನು ಧೈರ್ಯವಾಗಿ ನಿರ್ವಹಿಸಲು ಬೇಕಾಗುವ ಮೂಲಭೂತ ಕೌಶಲ್ಯಗಳನ್ನು ಪ್ರತಿಯೊಬ್ಬರು ತಿಳಿದಿರುವುದು ಅವಶ್ಯಕ.
● ಸಂತೋಷ್ ಪೀಟರ್ ಡಿಸೋಜ

ಶಿಮಂತೂರು ಶ್ರೀ ಆದಿ ಜನಾರ್ದನ ದೇವಳದಲ್ಲಿ ಬ್ರಹ್ಮಕಲಶ ಸಂಭ್ರಮ



ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಶಿಮಂತೂರು ಶ್ರೀ ಆದಿ ಜನಾರ್ಧನ ದೇವಸ್ಥಾನದಲ್ಲಿ ಬ್ರಹ್ಮಕಲಶ ದಿನಾಚರಣೆ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.
ಶನಿವಾರ ಬೆಳಿಗ್ಗೆ ವಿಶೇಷ ಪ್ರಾರ್ಥನೆ, ತುಲಾಭಾರ ಸೇವೆ, 108 ತೆಂಗಿನ ಕಾಯಿಗಳ ಗಣಯಾಗ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಮಹಾ ಅನ್ನಸಂತರ್ಪಣೆ ನಡೆಯಿತು.
ಈ ಸಂದರ್ಭ ಕ್ಷೇತ್ರದ ಆಡಳಿತ ಮೊಕ್ತೇಸರ ಉದಯ ಕುಮಾರ್ ಶೆಟ್ಟಿ, ಮಾಜಿ ಮೊಕ್ತೇಸರ ಚಂದ್ರಹಾಸ ಎನ್. ಶೆಟ್ಟಿ, ವಿಷ್ಣುಮೂರ್ತಿ ಭಟ್, ಸೀತಾರಾಮ ಭಟ್, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಶೇಖರ್ ಎಂ., ರೂಪಾ ವಿಷ್ಣುಮೂರ್ತಿ ಭಟ್, ನಂದನ ಶೆಟ್ಟಿ ಕುಬೆವೂರು, ಶಶಿಕಲಾ ಎನ್ ಕುಂದರ್, ಶಾಂತರಾಮ ಶೆಟ್ಟಿ ತೆಂಗಾಳಿ, ಜಯಕರ ಶೆಟ್ಟಿ ಮುಂಬೈ, ನಾಗರಾಜ ಶೆಟ್ಟಿ, ಉದಯ ಕುಮಾರ್ ಶೆಟ್ಟಿ ಅಧಿಥನ್, ಪದ್ಮಿನಿ ವಿಜಯ ಶೆಟ್ಟಿ, ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ವಿಶ್ವನಾಥ ಶೆಟ್ಟಿ, ರಘುರಾಮ ಶೆಟ್ಟಿ ಪರೆಂಕಿಲ, ಸುರೇಶ್ ಶೆಟ್ಟಿ , ಹರೀಶ್ ಶೆಟ್ಟಿ , ಪ್ರವೀಣ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಅಂಡಿಂಜೆ ಗ್ರಾಮ ಪಂಚಾಯತ್: ಮಕ್ಕಳ ಬೇಸಿಗೆ ಶಿಬಿರ ಸಮಾರೋಪ



ಬೆಳ್ತಂಗಡಿ: ನಮ್ಮ ನಡತೆ ಬೇರೆಯವರಿಗೆ ಹಾಸ್ಯಾಸ್ಪದವಾಗಬಾರದು ಮತ್ತು ಕೆಟ್ಟ ಪರಿಣಾಮ ಬೀಳಬಾರದು ಎಂದು ನೈತಿಕ ಶಿಕ್ಷಣದ ಮೌಲ್ಯಗಳ ಬೇಸಿಗೆ ಶಿಬಿರದ ಶಿಕ್ಷಕಿ ವಂದನಾ ಹೇಳಿದರು.
ಅವರು ಶುಕ್ರವಾರ ಅಂಡಿಂಜೆ ಗ್ರಾಮ ಪಂಚಾಯತ್ ವಠಾರದಲ್ಲಿ ನಡೆದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತಾಡಿದರು.
ಮೇ 4ರಿಂದ 8ರ ತನಕ ಒಟ್ಟು 5 ದಿನಗಳ ಅಂಡಿಂಜೆ ಪಂಚಾಯತ್ ವಠಾರದಲ್ಲಿ ಜರಗಿತು. ಒಟ್ಟು ಐದು ದಿನ ನಡೆದ ಶಿಬಿರದ ಪ್ರಾಯೋಜಕತ್ವವನ್ನು ಊರಿನ ಪ್ರಮುಖರು ವಹಿಸಿದ್ದರು.
ಅಂಡಿಂಜೆ ಗ್ರಾಮ ಪಂಚಾಯತ್ ಹಾಗೂ ಅರಿವು ಕೇಂದ್ರ ಸಂಯುಕ್ತವಾಗಿ ಶಿಬಿರವನ್ನು ಏರ್ಪಡಿಸಿತ್ತು. ಸಮಾರಂಭದ ವೇದಿಕೆಯಲ್ಲಿ ನಿಸರ್ಗ ಸಂಜೀವಿನಿ ಒಕ್ಕೂಟದ ಎಂಬಿಕೆ ಮಲ್ಲಿಕಾ ಶೆಟ್ಟಿ ರಾಜಶೇಖರ ಅಂಡಿಂಜೆ ಇದ್ದರು. ಅಧ್ಯಕ್ಷತೆಯನ್ನುಅಂಡಿಂಜೆಗ್ರಾ.ಪಂ. ಮಾಜಿ ಸದಸ್ಯ ಹರೀಶ್ ಹೆಗ್ಡೆ ವಹಿಸಿದ್ದರು.

- ಅಂಡಿಂಜೆ ಪಂಚಾಯತ್ ವಠಾರದಲ್ಲಿ 5 ದಿನಗಳ ಕಾಲ ನಡೆದ ಬೇಸಿಗೆ ಶಿಬಿರ
- ಹಿರಿಯ ಪತ್ರಕರ್ತ ರವಿರಾಜ ಅಜ್ರಿಗೆ ಸನ್ಮಾನ

ಬಹುಮಾನ ವಿತರಣೆ

ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.
ಗ್ರಾಮ ಪಂಚಾಯತ್ ಸಿಬ್ಬಂದಿ ಕೆ. ಶೀನ ಸ್ವಾಗತಿಸಿದರು. ಶಿಬಿರದ ವರದಿಯನ್ನು ಗ್ರಾ.ಪಂ.ನ ಗ್ರಂಥಪಾಲಕಿ ಮಮತಾ ಮಂಡಿಸಿದರು. ಶಿಕ್ಷಕ ಪ್ರಥ್ವೀರಾಜ್ ಜೈನ್ ಕಾರ್ಯಕ್ರಮ ನಿರೂಪಿಸಿದರು.

ಮೇ 13ರಿಂದ 18ರವರೆಗೆ ಪಾಡಿ ಶ್ರೀ ಇಗುತ್ತಪ್ಪ ದೇವಳ ಬ್ರಹ್ಮಕಲಶೋತ್ಸವ

ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬೆಯ ಪಾಡಿ ಶ್ರೀ ಇಗುತ್ತಪ್ಪ ದೇವಸ್ಥಾನದ ಅಷ್ಟ ಬಂಧ ಬ್ರಹ್ಮಕಲಶೋತ್ಸವ ಮೇ 13 ರಿಂದ 18ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.
ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಮೇ 13 ರಂದು ಸಾಮೂಹಿಕ ಪ್ರಾರ್ಥನೆ, ಪುಣ್ಯಾಹ ಅಂಕುರಾರ್ಪಣೆ, ವಾಸ್ತು ರಾಕ್ಷೋಘ್ನ ಹೋಮ ನೆರವೇರಲಿದೆ.
ಮೇ 14ರಂದು ಗಣಪತಿ ಹೋಮ ಅಂಕುರ ಪೂಜೆ, ಬಿಂಬಶುದ್ಧಿ ಕಳಶ ಪೂಜೆ ಕಲಶಾಭಿಷೇಕ ಪ್ರಾಯಶ್ಚಿತ್ತ ಹೋಮಗಳು ನೆರವೇರಲಿವೆ. ರಾತ್ರಿ ಅಂಕುರ ಪೂಜೆ ಹಾಗೂ ದುರ್ಗಾ ನಮಸ್ಕಾರ ಪೂಜೆಗಳು ನೆರವೇರಲಿವೆ. ಮೇ 15ರಂದು ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ ಅಂಕುರ ಪೂಜೆ, ಶಾಂತಿ ಹೋಮಗಳು ಹೋಮ ಕಲಶಾಭಿಷೇಕ ನಡೆಯಲಿದ್ದು ಮಧ್ಯಾಹ್ನ ಪೂಜೆ ಹಾಗೂ ರಾತ್ರಿ ಅಂಕುರ ಪೂಜೆ, ದುರ್ಗಾ ನಮಸ್ಕಾರ ಪೂಜೆಗಳು ನಡೆಯಲಿವೆ. ಮೇ 16ರಂದು ಬೆಳಿಗ್ಗೆ 7 ರಿಂದ ಗಣಪತಿ ಹೋಮ ಅಂಕುರ ಪೂಜೆ ತತ್ವ ಹೋಮ ತತ್ವ ಕಲಶ ಪೂಜೆ ತತ್ವ ಕಲಶಾಭಿಷೇಕ ನಡೆಯಲಿದೆ.
ಮೇ 17ರಂದು ಬೆಳಿಗ್ಗೆ 7 ಗಂಟೆಯಿಂದ ಗಣಪತಿ ಹೋಮ, ಅಂಕುರ ಪೂಜೆ , ಕಲಶ ಪೂಜೆ ಕುಂಭೇಶ ಕರ್ಕರಿ ಕಲಶ ಪೂಜೆ ಅಧಿವಾಸ ಹೋಮಗಳು ನಡೆಯಲಿವೆ.
ಮೇ 18ರಂದು ಬೆಳಿಗ್ಗೆ 8 ಗಂಟೆಗೆ ಯಿಂದ ರೋಹಿಣಿ ನಕ್ಷತ್ರ ಮಿಥುನ ಲಗ್ನದಲ್ಲಿ ಅಷ್ಟಬಂಧ ಲೇಪನ ಪರಿಕಲಶಾಭಿಷೇಕ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಮಧ್ಯಾಹ್ನ ಪೂಜೆ ಪ್ರಸಾದ ವಿತರಣೆ ಮಂತ್ರಾಕ್ಷತೆ ಜರುಗಲಿದೆ ಎಂದು ಪಾಡಿ ಇಗ್ಗುತ್ತಪ್ಪ ದೇವಾಲಯದ ತಕ್ಕ ಮುಖ್ಯಸ್ಥರು ಹಾಗೂ ಭಕ್ತಜನಸಂಘದ ಅಧ್ಯಕ್ಷಪರದಂಡಸುಮನ್ ಸುಬ್ರಮಣಿ ಆಡಳಿತ ಮಂಡಳಿ ಮತ್ತು ಪಾಡಿ ಇಗ್ಗುತ್ತಪ್ಪ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಾಚಮಂಡ ರಾಜ ಪೂವಣ್ಣ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



- ಮೇ 13ರಿಂದ 18ರವರೆಗೆ ನಡೆಯಲಿದೆ ವೈದಿಕ ಕಾರ್ಯಕ್ರಮ
- ಮೇ 18ರಂದು ಬೆಳಿಗ್ಗೆ 8ರಿಂದ ಅಷ್ಟಬಂಧ ಲೇಪನ ಪರಿಕಲಶಾಭಿಷೇಕ ಬ್ರಹ್ಮಕಲಶಾಭಿಷೇಕ

ಮುನ್ನೂರು ಸೋಮನಾಥ ಉಳಿಯ ಕ್ಷೇತ್ರದಲ್ಲಿ ವಾರ್ಷಿಕ ಜಾತ್ರೆಗೆ ಚಾಲನೆ

ಬಂಟ್ವಾಳ: ಮುನ್ನೂರು ಗ್ರಾಮದ ಶ್ರೀ ಕೇತ್ರ ಸೋಮನಾಥ ಉಳಿಯದ ಶ್ರೀ ಸೋಮೇಶ್ವರೀ ದೇವಸ್ಥಾನ, ಶ್ರೀ ನಾಗದೇವರು ಹಾಗೂ ಶ್ರೀ ಅರಸು, ಧೂಮಾವತಿ ಬಂಟ ಮತ್ತು ಪರಿವಾರ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರೆಗೆ ಚಾಲನೆ ನೀಡಲಾಯಿತು.
ಕ್ಷೇತ್ರದ ತಂತ್ರಿ ಕುಂಟಾರು ರವೀಶ್ ತಂತ್ರಿ ನೇತೃತ್ವದಲ್ಲಿ ಶುಕ್ರವಾರ ರಾತ್ರಿ ವಿವಿಧ ವೈಧಿಕ ವಿಧಾನಗಳ ಬಳಿಕ ರಂಗಪೂಜೆ ನಡೆದು ದೇವರ ಬಲಿ,ಭೂತಬಲಿ ಉತ್ಸವ ನಡೆಯಿತು. ಶನಿವಾರ ಬೆಳಿಗ್ಗೆ ಬಲಿ ಉತ್ಸವ ನಡೆದು ರಾಜಾಂಗಣ ಪ್ರಸಾದ, ಮಂತ್ರಾಕ್ಷತೆ ವಿತರಣೆ,ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನಸಂತರ್ಪಣೆಯು ನೆರವೇರಿತು.
ಭಾನುವಾರ ಕ್ಷೇತ್ರದ ನಾಗದೇವರಿಗೆ ತಂಬಿಲ ಸೇವೆ ರಾತ್ರಿ ಅರಸು ದೈವಗಳಿಗೆ ನೇಮ ಹಾಗೂ ಸೋಮವಾರ ರಾತ್ರಿ ಮೈಸಂದಾಯ ಮತ್ತು ಪ್ರಧಾನ ದೈವಗಳಾದ ಧೂಮಾವತಿ ಬಂಟ ದೈವಗಳಿಗೆ ನೇಮ ಮಂಗಳವಾರ ಕೊರಗಜ್ಜ ಹಾಗೂ ಪರಿವಾರ ದೈವಗಳಗೆ ಕೋಲ ನಡೆಯಲಿದೆ.
ಕ್ಷೇತ್ರದ ಗಡಿಪ್ರದಾನರಾದ ಬಸಪ್ಪಯಾನೆ ಜೆ.ರವೀಂದ್ರ ನಾಯಕ್, ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ,
ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಬಂಟ್ವಾಳ, ಗೌರವಾಧ್ಯಕ್ಷರಾದ ಯು.ದಯಾನಂದ ನಾಯಕ್, ಗಾಳದಕೊಂಕಣಿ ಅಭ್ಯುದಯ ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ, ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಜಯರಾಜ್ ನಾಯಕ್ ಮುಂಬೈ, ವಿವಿಧ ಸಮಿತಿ ಪ್ರಮುಖರಾದ ವಿಶ್ವನಾಥ ನಾಯಕ್ ಕಲ್ಲಾಪು, ಶ್ರೀರಿಷ್ ನಾಯಕ್ ಕಾಪಿಕಾಡ್, ಮಿಥಿಲೇಶ್ ನಾಯಕ್, ಪ್ರವೀಣ್ ನಾಯಕ್ ಬಂಟ್ವಾಳ, ಯೋಗೀಶ್ ನಾಯಕ್ ಪಂಪ್ ವೆಲ್,ಆಶಾ ಎಸ್ ನಾಯಕ್,ಹೇಮಾ ಕೇಶವ ನಾಯಕ್, ಉಷಾ ಡಿ.ನಾಯಕ್ ಕಲ್ಲಾಪು, ಮುಂಬೈ ಸಜ್ಜನ್ ಸೇವಾ ಸಂಘದ ಕಾರ್ಯದರ್ಶಿ ಮನೋಜ್ ನಾಯಕ್ ಮುಂಬೈ, ಶ್ರೀ ಸೋಮೇಶ್ವರೀ ಮಹಿಳಾ ಮಂಡಲದ ಅಧ್ಯಕ್ಷೆ ಜಯಶೀಲ ನಾಯಕ್,ಯುವ ಉದ್ಯಮಿ ವಿಶಾಲ್ ಕೊಲ್ಯ ಮೊದಲಾದವರಿದ್ದರು.



ಕೊಡಗು ವಿಶ್ವವಿದ್ಯಾನಿಲಯದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ 'ಕಲಾ ವೈಭವ' ಉದ್ಘಾಟನೆ

ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಕಲೆವೈಭವ ಪೂರಕ: ಮೇಜರ್ ಪ್ರೊ.ರಾಘವ

ಮಡಿಕೇರಿ: ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಲೆ ಸಹಕಾರಿಯಾಗಿದೆ, ಕಲಾವೈಭವದಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳ ಪ್ರತಿಭಾ ಅನಾವರಣಕ್ಕೆ ವೇದಿಕೆ ಕಲ್ಪಿಸಿದಂತಾಗುತ್ತದೆ ಎಂದು ಮೇಜರ್ ಪ್ರೊ.ರಾಘವ ಬಿ. ಕರೆ ನೀಡಿದ್ದಾರೆ.
ನಗರದ ಕೊಡಗು ವಿಶ್ವ ವಿದ್ಯಾನಿಲಯದ ಫೀ.ಮಾ. ಕೆ.ಎಂ.ಕಾರ್ಯಪ್ಪ ಕಾಲೇಜು ವತಿಯಿಂದ ಕಾಲೇಜ್‌ನಲ್ಲಿ ನಡೆದ ಪ್ರತಿಭಾನ್ವೇಷಣೆಯ ಕಲೆಯ ಹಬ್ಬ 'ಕಲಾ ವೈಭವ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಶಿಕ್ಷಣದ ಜೊತೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾಲೇಜು ಶ್ರಮಿಸುತ್ತಿದ್ದು ಕಲಾ ವೈಭವ ಇದರ ಒಂದು ಭಾಗವಾಗಿದೆ. ಇಂತಹ ವೇದಿಕೆಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದರು.



ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ವಿದ್ಯಾರ್ಥಿಗಳ ರೂಪದಲ್ಲಿ ನೀಡುವ ಕಾರ್ಯ ನಿಸ್ವಾರ್ಥವಾಗಿ ಕಾಲೇಜುಗಳು ಮಾಡುತ್ತಿವೆ. ಎಲ್ಲರೂ ಕೈ ಜೋಡಿಸಿದರೆ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಕಾಲೇಜು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದರು.
ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಫೀ.ಮಾ. ಕೆ.ಎಂ.ಕಾರ್ಯಪ್ಪ ಕಾಲೇಜು ವಿದ್ಯಾರ್ಥಿ ಸಂಘದ ಸಂಚಾಲಕ ಡಾ.ಶ್ರೀಧರ್ ಹೆಗಡೆ ಅವರು ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಯ 'ಕಲಾ ವೈಭವ' ಕಾರ್ಯಕ್ರಮದ ಆಯೋಜನೆ ಇತರರಿಗೆ ಮಾದರಿಯಾಗಿದೆ ಮತ್ತು ಹೆಮ್ಮೆಯ ವಿಚಾರವಾಗಿದೆ ಎಂದು ಶ್ಲಾಘಿಸಿದರು.
ಕಲಾ ಲೋಕದಲ್ಲಿ 64 ಪ್ರಕಾರದ ಕಲೆಗಳಿದ್ದು ಅದನ್ನು ಅಧ್ಯಯನ ಮಾಡಬೇಕು. ಇಂತಹ ವೇದಿಕೆಗಳ ಮೂಲಕ ಕೌಶಲ್ಯ ಇತರರಿಗೂ ಪರಿಚಯಿಸಿ ಮುಂದಿನ ಪೀಳಿಗೆಗೂ ಇದನ್ನು ಹಸ್ತಾಂತರಿಸಬೇಕು ಎಂದರು.
ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಡಾ.ಕೃಷ್ಣ ಮಾತನಾಡಿ, ಕಾಲೇಜು ಪ್ರಗತಿ ಪಥದಲ್ಲಿ ಸಾಗಲು ಇಂತಹ ಕಾರ್ಯಕ್ರವ ಸಹಕಾರಿಯಾಗಿದೆ ಎಂದರು.
ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಡಾ.ನಯನ ಕಶ್ಯಪ್, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಪ್ರತಿಬಿಂಬಿಸಲು ಸೂಕ್ತ ವೇದಿಕೆಯ ಅಗತ್ಯವಿರುತ್ತದೆ, ಕೆಲವೊಮ್ಮೆ ವೇದಿಕೆ ಸಿಗದೆ ವಿದ್ಯಾರ್ಥಿಗಳು ವಂಚಿತರಾಗುತ್ತಾರೆ. ಇಂತಹ ಕಾರ್ಯಕ್ರಮ ಆಯೋಜಿಸುವುದರಿಂದ ಪ್ರತಿಭೆಗಳಿಗೆ ಜೀವ ಕಳೆ ತುಂಬಿದಂತಾಗುತ್ತದೆ ಎಂದರು. ಸುಮಾರು 77 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಾ ಬಂದಿ ರುವ ಫೀ.ಮಾ.ಕಾರ್ಯಪ್ಪ ಕಾಲೇಜು ಸಹಸ್ರಾರು ವಿದ್ಯಾರ್ಥಿಗಳಿಗೆ ಉನ್ನತ ಹುದ್ದೆಗಳ ಮೂಲಕ ಬದುಕನ್ನು ಕಟ್ಟಿಕೊಟ್ಟಿದೆ. ಇದು ಹೆಮ್ಮೆಯ ವಿಚಾರ ಎಂದರು.
ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಶಿವ್ವೇಸ್ವಾಮಿ, ಕಾರ್ಯಕ್ರಮದ ಸಂಚಾಲಕಿ ಡಾ.ಎ.ಎನ್.ಗಾಯತ್ರಿ, ಇಂಗ್ಲಿಷ್ ವಿಭಾಗದ ಉಪನ್ಯಾಸಕಿ ಡಾ.ಡೀನಾ ಎಂ.ಪಿ., ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿ ಮೋನಿಕಾ ಎ.ಎನ್., ಸೂಕ್ಷ್ಮಾಣು ವಿಭಾಗದ ಉಪನ್ಯಾಸಕಿ ಡಾ. ಸೌಮ್ಯ ಕೃಷ್ಣ ಮೂರ್ತಿ, ಭೂಗೋಳ ವಿಭಾಗದ ಉಪನ್ಯಾ ಸಕಿ ಡಾ.ಭೈರವಿ, ವಿದ್ಯಾರ್ಥಿ ಸಂಘಟನೆ ಸಂಚಾಲಕಿ ಟಿ.ವಿ.ವರ್ಷ ಮತ್ತಿತರರಿದ್ದರು.

ಗಮನ ಸೆಳೆದ ಕಾರ್ಯಕ್ರಮ

ಕಾರ್ಯಕ್ರಮದಲ್ಲಿ ಸಮೂಹ ನೃತ್ಯ, ಹಾಡುಗಾರಿಕೆ, ನಾಟಕ, ಏಕ ಪಾತ್ರಾಭಿನಯ, ರಂಗೋಲಿ, ಫಯರ್ ಲೆಸ್ ಕುಕ್ಕಿಂಗ್, ಚರ್ಚಾ ಕೂಟ ಸಹಿತ ವಿವಿಧ ಕಲೆಗಳ ಪ್ರದರ್ಶನ ಆಕರ್ಷಿಸಿತು. ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಟಿಟಿಕಲಾ ವೈಭವಟಿಟಿ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡು ಗಮನ ಸೆಳೆದರು.

ಸುತ್ತಮುತ್ತ

ಮೇ 12: ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಮಧುವನ ಉಪಕೇಂದ್ರದಲ್ಲಿ ಬಸ್‌ಬಾರ್ ಮತ್ತು ಇದಕ್ಕೆ ಸಂಬಂಧಿಸಿದ ಉಪಕರಣಗಳ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 12ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಉಪಕೇಂದ್ರದಿಂದ ಹೊರಡುವ ಫೀಡರುಗಳಾದ ಮಂದಾರ್ತಿ, ಬಾರ್ಕೂರು, ಆನೆಗುಡ್ಡೆ, ಶಿರಿಯಾರ, ಮಣೂರು, ಸಾಸ್ತಾನ ಮತ್ತು ಬಿಲ್ಲಾಡಿ ಮಾರ್ಗಗಳಲ್ಲಿ ಉಳ್ತೂರು, ಕೆದೂರು, ಬೇಳೂರು, ವಡ್ಡರ್ಸೆ, ಗಿಳಿಯಾರು, ಬನ್ನಾಡಿ, ಮಣೂರು, ಕೋಟತಟ್ಟು, ಸಾಲಿಗ್ರಾಮ ಟಿ.ಎಮ್.ಸಿ, ಕಾರ್ಕಡ, ಚಿತ್ರಪಾಡಿ, ಪಾರಂಪಳ್ಳಿ, ಪಾಂಡೇಶ್ವರ, ಮೂಡಹಡು, ಐರೋಡಿ, ಕೋಡಿ, ಹಂಗಾರಕಟ್ಟೆ, ಬಾಳ್ಕುದ್ರು, ಶಿರಿಯಾರ, ಶಿರೂರು, ಬಿಲ್ಲಾಡಿ, ವಂಡಾರು, ಆವರ್ಸೆ, ಗುಡ್ಡಟ್ಟು, ಕಕ್ಕುಂಜೆ, ಅಚ್ಲಾಡಿ, ಹಳ್ನಾಡಿ-ಹರ್ಕಾಡಿ, ಹೆಸ್ಕತ್ತೂರು, ಯಡ್ತಾಡಿ, ಕಾವಡಿ, ಮತ್ತು ಕೊರ್ಗಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ. ಹಾಲಾಡಿಯಲ್ಲಿ ಬಸ್ ಬಾರ್ ಮತ್ತು ಇದಕ್ಕೆ ಸಂಬಂಧಿಸಿದ ಉಪಕರಣಗಳ ತ್ರೈಮಾಸಿಕ ನಿರ್ವಹಣೆಯ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 12ರಂದು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಶಂಕರನಾರಾಯಣ, ಆವರ್ಸೆ, ಹೈಕಾಡಿ, ಬಿದ್ಕಲ್‌ಕಟ್ಟೆ ಬೆಳ್ವೆ, ಬೈಲೂರು, ವಾರಾಹಿ, ಕೆ.ಎನ್.ಎನ್.ಎಲ್, ಸಿ.ಎಂ.ಸಿ ಉಡುಪಿ ಮತ್ತು ಹಾಲಾಡಿ ಮಾರ್ಗಗಳಲ್ಲಿ ಬಿದ್ಕಲ್‌ಕಟ್ಟೆ, ಹಾಲಾಡಿ, ಮೊಳಹಳ್ಳಿ, ರಟ್ಟಾಡಿ, ಅಮಾಸೆಬೈಲು, ಶಂಕರನಾರಾಯಣ, ಹಾಲಾಡಿ-76, ಮಚ್ಚಟ್ಟು, ಹಾಲಾಡಿ-28, ಹೆಂಗವಳ್ಳಿ, ಮಡಾಮಕ್ಕಿ, ಸಿದ್ದಾಪುರ, ಉಳ್ಳೂರು-74, ಕಾರೇಬೈಲು, ಬೆದ್ರಾಡಿ, ಕೋಣಿಹರ, ಕಕ್ಕುಂಜೆ, ಹೆಸ್ಕತ್ತೂರು, ಯಡಾಡಿ-ಮತ್ಯಾಡಿ, ಹಳ್ನಾಡಿ-ಹರ್ಕಾಡಿ, ಅಲ್ಬಾಡಿ, ಶೇಡಿಮನೆ, ಹೈಕಾಡಿ, ಗೋಳಿಯಂಗಡಿ, ಹಾರ್ದಳ್ಳಿ-ಮಂಡಳ್ಳಿ, ಬೆಳ್ವೆ, ಸೂರ್ಗೋಳಿ, ಬೈಲೂರು, ಕಾಜಾಡಿ, ಕೊಂಡಳ್ಳಿ, ಭರತ್‌ಕಲ್ಲು, ಕುಳಂಜೆ, ಅಲ್ಬಾಡಿ ಮತ್ತು ಶೇಡಿಮನೆ, ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೇ 13: ಎಲೆಕ್ಟ್ರಾನಿಕ್ಸ್ ವೃತ್ತಿ ಅವಕಾಶಗಳ ಕಾರ್ಯಾಗಾರ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗವು ಮೇ 13ರಂದು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಎಲೆಕ್ಟ್ರಾನಿಕ್ಸ್ ಮತ್ತು ವೃತ್ತಿ ಅವಕಾಶಗಳ ಕುರಿತು ಪ್ರಾಯೋಗಿಕ ಕಾರ್ಯಾಗಾರವನ್ನು ಆಯೋಜಿಸಿದೆ. ಕಾರ್ಯಾಗಾರ ಮುಖ್ಯ ಉದ್ದೇಶ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಂವಾದಾತ್ಮಕ ಕಲಿಕೆ ಮತ್ತು ಪ್ರಾಯೋಗಿಕ ಮಾನ್ಯತೆಯ ಮೂಲಕ ವಿದ್ಯುನ್ಮಾನ ಮತ್ತು ಸಂವಹನ ಇಂಜಿನಿಯರಿಂಗ್‌ನ ಮೂಲಭೂತ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುವುದಾಗಿದೆ. ಕಾರ್ಯಾಗಾರದಲ್ಲಿ ಸರಳ ಸರ್ಕ್ಯೂಟ್ ನಿರ್ಮಾಣ, ಪ್ರಾಯೋಗಿಕ ಪ್ರಯೋಗಗಳು ಮತ್ತು ಪ್ರದರ್ಶನಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ ಮತ್ತು ವಿದ್ಯುನ್ಮಾನ ಮತ್ತು ಸಂವಹನ ವಿಭಾಗವನ್ನು ಏಕೆ ಆಯ್ಕೆ ಮಾಡಬೇಕು. ಐಒಟಿ, ಕೃತಕ ಬುದಿಮತ್ತೆ, ರೋಬೋಟಿಕ್ಸ್ ಮತ್ತು ವಿಎಲ್‌ಎಸ್‌ಐನಂತಹ ಉದಯೋನ್ಮುಖ ಕ್ಷೇತ್ರಗಳ ಜೊತೆಗೆ ಕೋರ್ ಇಂಜಿನಿಯರಿಂಗ್ ಮತ್ತು ಐಟಿ ವಲಯಗಳಲ್ಲಿನ ವೃತ್ತಿ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ. ಆಸಕ್ತ ವಿದ್ಯಾರ್ಥಿಗಳು ಕೆಳಗಿನ ಲಿಂಕ್ http://form.gle/NqS4TywnHz7zDQV86 ಬಳಸಿ ನೊಂದಾಯಿಸಿ ಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಮೊಬೈಲ್ ಸಂಖ್ಯೆ -9686323734 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೋಟದ ಕಾರಂತ ಥೀಮ್ ಪಾರ್ಕನಲ್ಲಿ ಗಾಡಿ ಕೂಸಣ್ಣನಿಗೆ ನುಡಿ ನಮನ

ಕೋಟ: ತನ್ನ ವಿಶಿಷ್ಟವಾದ ಕಾರ್ಯದ ಮೂಲಕ ಮನೆ ಮಾತಾಗಿದ್ದ ಮತ್ತು ಸಾಮಾಜಿಕ ಸೇವೆಗಳಿಗೆ ತನ್ನನ್ನು ತಾನು ಅರ್ಪಿಸಿಕೊಂಡ, ಜೊತೆಗೆ ವ್ಯವಹಾರಗಳಲ್ಲಿ ತನ್ನದೇ ವಿಶಿಷ್ಟ ಛಾಪನ್ನು ಮೂಡಿಸಿದ ಗಿಳಿಯಾರು ಗಾಡಿ ಕೂಸ ಪೂಜಾರಿಯವರಿಗೆ ಇತ್ತೀಚೆಗೆ ಕಾರಂತ ಥೀಂ ಪಾರ್ಕ್‌ನಲ್ಲಿ ಸಮಾರೋಪಗೊಂಡ ಬೇಸಿಗೆ ಶಿಬಿರ ವಿಕಸನದಲ್ಲಿ ನುಡಿನಮನ ಸಲ್ಲಿಸಲಾಯಿತು. ಗಾಡಿ ಕೂಸ ಪೂಜಾರಿ ಅವರ ಪುತ್ರ ಬೋಜ ಪೂಜಾರಿ ತಂದೆಯ ಕಾರ್ಯಗಳನ್ನು ಅವರು ನೀಡಿದ ಸಂದೇಶಗಳನ್ನು ವಿದ್ಯಾರ್ಥಿಗಳ ಜೊತೆ ಹಂಚಿಕೊಂಡರು. ಪ್ರತಿಷ್ಠಾನದ ಸದಸ್ಯ ಎಂ.ಸುಬ್ರಾಯ ಆಚಾರ್, ಶಿಬಿರದ ನಿರ್ದೇಶಕ ನರೇಂದ್ರ ಕುಮಾರ್ ಕೋಟ ಸ್ವಾಗತಿಸಿ ವಂದಿಸಿದರು. ಸೃಷ್ಟಿ ಮಾನ್ವಿ ಸಮೀಕ್ಷಾ ಮತ್ತಿತರರು ನುಡಿನಮನ ಸಲ್ಲಿಸಿದರು.

ತಾಯಂದಿರ ದಿನ

ಕುಂದಾಪುರ: ತಲ್ಲೂರು ಸಂತ ಫ್ರಾನ್ಸಿಸ್ ಆಸ್ಸಿಸಿ ಚರ್ಚನಲ್ಲಿ ಮಹಿಳಾ ಆಯೋಗದ ಸಹಯೋಗದಲ್ಲಿ ತಾಯಂದಿರ ದಿನವನ್ನು ಆಚರಿಸಲಾಯಿತು. ಮೂಡಬೆಳ್ಳೆ ಸೆಮಿನರಿಯ ಆಧ್ಯಾತ್ಮಿಕ ನಿರ್ದೇಶಕ ಸಿರಿಲ್ ಲೋಬೋ ಪ್ರಧಾನ ಯಾಜಕರಾಗಿ ಅಂದು ಬೆಳಗಿನ ದಿವ್ಯ ಬಲಿಪೂಜೆಯನ್ನು ನೆರವೇರಿಸಿದರು. ಚರ್ಚಿನ ಧರ್ಮಗುರು ಎಡ್ವಿನ್ ಡಿಸೋಜಾ ಸಂದೇಶ ನೀಡಿದರು. ಸ್ತ್ರೀ ಸಂಘಟನೆಯ ಕೇಂದ್ರೀಯ ಅಧ್ಯಕ್ಷೆ ಸಿಲ್ವಿಯಾ ಸುವಾರಿಸ್, ಪಾಲನಾ ಮಂಡಳಿಯ ಉಪಾಧ್ಯಕ್ಷ, ಕಾರ್ಯದರ್ಶಿ, ಆಯೋಗಗಳ ಸಂಯೋಜಕ ಹಾಗೂ ಧರ್ಮ ಭಗಿನಿಯರು ಉಪಸ್ಥಿತರಿದ್ದರು. ವಿಲ್ಮಾ ಅಂದ್ರಾದೆ ಸ್ವಾಗತಿಸಿದರು. ನಿರ್ಮಲ ಮಿನೇಜಸ್ ವರದಿ ವಾಚಿಸಿದರು. ಸವಿತಾ ಮೆಂಡೊನ್ಸಾ ವಂದಿಸಿದರು. ರೀನಾ ಮೆಂಡೊನ್ಸಾ ನೀತಾ ಮೆಂಡೊನ್ಸಾ ಮನರಂಜನಾ ಆಟಗಳನ್ನು ನಡೆಸಿಕೊಟ್ಟರು. ಡಯಾನ ಮಿನೇಜಸ್ ನಿರೂಪಿಸಿದರು.

ಕೃಷಿ ಭೂಮಿಗೆ ಉಪ್ಪು ನೀರು ನುಗ್ಗಿ ಹಾನಿ | ಕೋಡಿ ಕನ್ಯಾಣದಲ್ಲಿ ಧರಣಿ ನಡೆಸಿದ ಕೃಷಿಕರ ಎಚ್ಚರಿಕೆ

ಒಂದು ವಾರದೊಳಗೆ ಪರಿಹಾರ ಸಿಗದಿದ್ದರೆ ಬೃಹತ್ ಪ್ರತಿಭಟನೆ

ಕೋಟ: ಕೋಟ: ಅನ್ನ ನೀಡುವ ಭೂತಾಯಿಯನ್ನು ನಂಬಿ ಬದುಕುತ್ತಿರುವ ಕೃಷಿಕರಿಗೆ ಈಗ ನದಿಯ ಉಪ್ಪುನೀರು ಮೃತ್ಯುಪಾಶವಾಗಿ ಪರಿಣಮಿಸಿದೆ. ಇಲ್ಲಿನ ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಕನ್ಯಾಣ ಭಾಗದ ನೂರಾರು ಎಕರೆ ಕೃಷಿ ಭೂಮಿಗೆ ಸೀತಾ ನದಿಯ ಉಪ್ಪುನೀರು ನುಗ್ಗಿ ಬೆಳೆಗಳೆಲ್ಲಾ ನಾಶವಾಗುತ್ತಿದ್ದು, ಈ ಗಂಭೀರ ಸಮಸ್ಯೆಯನ್ನು ಖಂಡಿಸಿ ಹಾಗೂ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ನೊಂದ ಕೃಷಿಕರು ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು.



ಉಪ್ಪುನೀರಿನ ಹಾವಳಿ: ಸಂಕಷ್ಟದಲ್ಲಿ ಅನ್ನದಾತ

ಕಳೆದ ಹಲವಾರು ದಶಕಗಳಿಂದ ಈ ಭಾಗದ ಫಲವತ್ತಾದ ನೂರಾರು ಎಕರೆ ಭೂಮಿಯಲ್ಲಿ ರೈತರು ಭತ್ತ, ಉದ್ದು ಹಾಗೂ ವಿವಿಧ ಬಗೆಯ ತರಕಾರಿಗಳನ್ನು ಸಮೃದ್ಧವಾಗಿ ಬೆಳೆಯುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ದಿನನಿತ್ಯ ಉಪ್ಪುನೀರು ಕೃಷಿ ಭೂಮಿಗೆ ನುಗ್ಗುತ್ತಿರುವುದರಿಂದ ಬೆಳೆಗಳು ಕಮರಿ ಹೋಗುತ್ತಿವೆ. ಕೃಷಿಯನ್ನೇ ಜೀವನಾಧಾರವಾಗಿಸಿಕೊಂಡ ನಮಗೆ ಈಗ ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿ ಬಂದಿದೆ. ಸಮಸ್ಯೆಯ ಬಗ್ಗೆ ಜನಪ್ರತಿನಿಧಿಗಳಿಗೆ ಹತ್ತಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ, ಅಧಿಕಾರಿಗಳ ಈ ನಿರ್ಲಕ್ಷ್ಯದಿಂದಾಗಿ ನಾವು ಕೃಷಿಯಿಂದಲೇ ವಿಮುಖರಾಗುವಂತಾಗಿದೆ" ಎಂದು ಪ್ರತಿಭಟನಾಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಸರಕಾರದ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ

ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಕೃಷಿಕ ಮಹಿಳೆ ಲಕ್ಷ್ಮೀ ಮರಕಾಲ್ತಿ, ಸರಕಾರದ ದ್ವಂದ್ವ ನೀತಿಯನ್ನು ತೀವ್ರವಾಗಿ ಟೀಕಿಸಿದರು. ರಸ್ತೆ ಅಭಿವೃದ್ಧಿ ಹಾಗೂ ಅನಗತ್ಯ ಕಾಮಗಾರಿಗಳಿಗೆ ಕೋಟ್ಯಂತರ ರೂ. ಹಣ ವ್ಯಯಿಸುವ ಸರಕಾರಕ್ಕೆ ದೇಶದ ಆರ್ಥಿಕತೆಯ ಬೆನ್ನೆಲುಬಾದ ಕೃಷಿಕರ ನೋವು ಕಾಣಿಸುತ್ತಿಲ್ಲವೇ? ಕೃಷಿ ಭೂಮಿಯನ್ನು ಉಳಿಸಲು ಬೇಕಾದ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಸರಕಾರ ಮತ್ತು ಜನಪ್ರತಿನಿಧಿಗಳು ಸಂಪೂರ್ಣ ವಿಫಲರಾಗಿದ್ದಾರೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕಾಂಡ್ಲವನ, ತಡೆದಂಡೆಯ ಅನಿವಾರ್ಯತೆ

ಸ್ಥಳೀಯ ಕೃಷಿಕ ಬಚ್ಚ ಪೂಜಾರಿ ಮಾತನಾಡಿ, ಸೀತಾ ನದಿಯಲ್ಲಿ ಸೃಷ್ಟಿಯಾಗಿರುವ ಕಾಂಡ್ಲವನವು ಕೃಷಿಕರ ಪಾಲಿಗೆ ಶಾಪವಾಗಿ ಪರಿಣಮಿಸಿದೆ ಎಂಬ ಅನುಮಾನ ಕಾಡುತ್ತಿದೆ. ಕಾಂಡ್ಲವನದಿಂದಾಗಿ ನದಿಯ ನೀರು ಸರಾಗವಾಗಿ ಹರಿದು ಹೋಗದೆ ಕೃಷಿ ಭೂಮಿಯತ್ತ ನುಗ್ಗುತ್ತಿದೆ. ಈ ಸಮಸ್ಯೆಗೆ ಹೊಳೆ ತಟಕ್ಕೆ ಶಾಶ್ವತವಾದ ತಡೆದಂಡೆ ನಿರ್ಮಾಣ ಮಾಡುವುದೊಂದೇ ದಾರಿ. ಕೂಡಲೇ ಸಂಬಂಧಪಟ್ಟ ಇಲಾಖೆ ತಡೆದಂಡೆ ನಿರ್ಮಿಸಿ ಕೃಷಿಕರು ನಿರಾಳವಾಗಿ ಕೃಷಿ ಮಾಡುವ ವಾತಾವರಣ ನಿರ್ಮಿಸಿಕೊಡಬೇಕು'' ಎಂದು ಒತ್ತಾಯಿಸಿದರು.

ದೊಡ್ಡ ಮಟ್ಟದ ಹೋರಾಟದ ಎಚ್ಚರಿಕೆ

ಮುಂದಿನ ಒಂದು ವಾರದೊಳಗೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡಿ ವೈಜ್ಞಾನಿಕ ಕ್ರಮ ಕೈಗೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಇಡೀ ಗ್ರಾಮಸ್ಥರನ್ನು ಸಂಘಟಿಸಿ ಬೃಹತ್ ಮಟ್ಟದ ಹೋರಾಟಕ್ಕೆ ಇಳಿಯುವುದಾಗಿ ಕೃಷಿಕರು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಸುದಿನ ಕೋಡಿ, ರಾಜೇಶ್ ಉಪಾಧ್ಯ, ಅನಂತ್ ಹೊಳ್ಳ, ಮಹೇಶ್ ಉಪಾಧ್ಯ, ಪ್ರಕಾಶ್ ನಾವಡ, ರಘುರಾಮ್ (ಮಂಗು), ಲಕ್ಷ್ಮಣ ಪೂಜಾರಿ, ಹರ್ಷ ಪೂಜಾರಿ, ಸುಮತಿ ಪೂಜಾರ್ತಿ, ವಾಸು ಪೂಜಾರಿ, ರಾಮ ಪೂಜಾರಿ ಹಾಗೂ ನೂರಾರು ಸ್ಥಳೀಯ ಕೃಷಿಕರು ಉಪಸ್ಥಿತರಿದ್ದು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅಜ್ಜರಕಾಡು ಮಹಿಳಾ ಕಾಲೇಜು, ಪಿಜಿ ಸೆಂಟರ್ ವಾರ್ಷಿಕೋತ್ಸವ

ಶಿಕ್ಷಕರ ಪಾತ್ರ ಅನನ್ಯ: ಶಾಸಕ ಯಶ್‌ಪಾಲ್

ಉಡುಪಿ: ವಿದ್ಯಾರ್ಥಿಗಳಲ್ಲಿ ಕೇವಲ ಪಠ್ಯದ ಜ್ಞಾನವಷ್ಟೇ ಅಲ್ಲದೆ ಜೀವನ ಮೌಲ್ಯ, ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಒಲವು ಮೂಡಿಸಿ, ಅವರನ್ನು ಭವಿಷ್ಯದ ಜವಾಬ್ದಾರಿಯುತ ನಾಗರಿಕರನ್ನಾಗಿ ಬೆಳೆಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ ತಿಳಿಸಿದ್ದಾರೆ.

ನಗರದ ಮಹಾತ್ಮಾ ಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಅಜ್ಜರಕಾಡು ಡಾ. ಜಿ. ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕಾದರೆ ತರಗತಿಯ ಬೋಧನೆಯ ಜೊತೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲೂ ಅವರನ್ನು ಸಕ್ರಿಯವಾಗಿ ತೊಡಗಿಸಬೇಕು. ಯುವಜನತೆ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಮಾನವೀಯತೆ, ಸಮಾಜ ಸೇವೆ ಮತ್ತು ರಾಷ್ಟ್ರೀಯತೆಯಂತಹ ಉದಾತ್ತ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಅತಿಥಿಯಾಗಿದ್ದ ಅದಾನಿ ಗ್ರೂಪ್‌ನ ಅಧ್ಯಕ್ಷ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಕಿಶೋರ್ ಆಳ್ವ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಗಳಿಸಲು ಪ್ರತಿಯೊಂದು ಕೆಲಸದಲ್ಲಿಯೂ ಸೃಜನಶೀಲತೆ ಬಹಳ ಮುಖ್ಯ. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಸೃಜನಶೀಲತೆಯನ್ನು ಅಳವಡಿಸಿಕೊಂಡಾಗ ಮಾತ್ರ ವಿಶೇಷ ಸಾಧನೆ ಮಾಡಲು ಸಾಧ್ಯ ಎಂದರು.

ಮತ್ತೋರ್ವ ಅತಿಥಿ ಶ್ಯಾಮಿಲಿ ನವೀನ್ ಕಾಲೇಜಿನ ಪ್ರಗತಿಗೆ ಶುಭ ಹಾರೈಸಿದರು.



ಸಾಧಕರಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ಎನ್‌ಸಿಸಿ, ರೇಂಜರ್ಸ್ ಮತ್ತು ಕ್ರೀಡಾಕೂಟಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿನಿಯರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಪ್ರಾಂಶುಪಾಲ ಪ್ರೊ. ಸೋಜನ್ ಕೆ.ಜಿ. ವಾರ್ಷಿಕ ವರದಿ ಮಂಡಿಸಿದರು. ವೇದಿಕೆಯಲ್ಲಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಕೃಷ್ಣ ಭಟ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ. ನಿಕೇತನ, ಐಕ್ಯೂಎಸಿ ಸಂಚಾಲಕಿ ಡಾ. ಶ್ರೀಮತಿ ಅಡಿಗ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಡಾ. ರಾಮಚಂದ್ರ ಪಾಟ್ಕರ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಸಂಘದ ಪ್ರತಿನಿಧಿಗಳಾದ ಕೀರ್ತಿ ಶೆಟ್ಟಿ, ಸುಮನ, ಸ್ವೀಕೃತಿ ರಾವ್, ಶರಣ್ಯ, ಉಷಾ ಮತ್ತು ಸುಚಿತ ಭಾಗವಹಿಸಿದ್ದರು. ಕಾಲೇಜಿನ ಸಾಸ್ಕೃತಿಕ ಸಮಿತಿಯ ಸಂಚಾಲಕ ಡಾ. ರಾಜೇಂದ್ರ ಕೆ. ಸ್ವಾಗತಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಮಂಜುನಾಥ್ ವಂದಿಸಿದರು. ಸಹಾಯಕ ಪ್ರಾಧ್ಯಾಪಕ ಶರತ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ನಿರಾಮಯ ಸೊಸೈಟಿ ವಂಡ್ಸೆ ಆಡಳಿತ, ಕಾರ್ಯನಿರ್ವಾಹಕ ಮಂಡಳಿ ಸಭೆ

ಉತ್ತಮ ಆರೋಗ್ಯ ಸೇವೆ ನೀಡುವ ಬಗ್ಗೆ ಚರ್ಚೆ

ಕುಂದಾಪುರ: ನಿರಾಮಯ ಸೊಸೈಟಿ ವಂಡ್ಸೆ ಇದರ ಆಡಳಿತ ಮತ್ತು ಕಾರ್ಯನಿರ್ವಾಹಕ ಮಂಡಳಿ ಸಭೆ ಸೊಸೈಟಿಯ ಕಚೇರಿಯಲ್ಲಿ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಉಪಸ್ಥಿತಿಯಲ್ಲಿ ನಿರಾಮಯ ಸೊಸೈಟಿ ಅಧ್ಯಕ್ಷ ಉದಯ್ ಕುಮಾರ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಗುರುವಾರ ಜರುಗಿತು.

ಸೊಸೈಟಿ ವತಿಯಿಂದ ಇನ್ನಷ್ಟು ವಿವಿಧ ರೀತಿಯ ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡುವ ಬಗ್ಗೆ ಹಾಗೂ ಸಂಪನ್ಮೂಲ ಕ್ರೋಢಿಕರಣದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ಸೊಸೈಟಿಯ ಗೌರವ ಸದಸ್ಯರಾದ ಡಾ. ನಾಗಭೂಷಣ ಉಡುಪ, ಡಾ. ಅತುಲ್ ಕುಮಾರ್ ಶೆಟ್ಟಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಪ್ರಶಾಂತ್ ಭಟ್, ಡಾ. ಲತಾ ನಾಯಕ್, ಡಾ. ಅಂಜಲಿ ರಾಜ್, ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ್, ಕುಂದಾಪುರ ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕಿ ದೀಪಾ, ಹಕ್ಲಾಡಿ ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ರಮೇಶ್ ಕುಲಾಲ್, ಆಲೂರು ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ನಾರಾಯಣ ಶೆಟ್ಟಿ ನಿರಾಮಯ ಸೊಸೈಟಿಯ ಕಾರ್ಯದರ್ಶಿ ಸುದರ್ಶನ ಶೆಟ್ಟಿ ಕೆರಾಡಿ, ಕೋಶಾಧಿಕಾರಿ ಆಶಾ ಆಚಾರ್ಯ ಇಡೂರು, ಚಿತ್ತೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ರವೀಂದ್ರ ಶೆಟ್ಟಿ ಆಲೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ರಾಜೇಶ್ ದೇವಾಡಿಗ, ಹಕ್ಲಾಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಜ್ಯೋತಿ, ವಂಡ್ಸೆ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಗೋವರ್ಧನ್ ಜೋಗಿ, ಹಕ್ಲಾಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಸುಭಾಷ್ ಶೆಟ್ಟಿ ಇಡೂರು ಕುಂಜ್ಞಾಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಅರುಣ್ ಕುಮಾರ್ ಶೆಟ್ಟಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಭಾವನ, ರೂಪ ಗೋಪಿ, ಗಣೇಶ ಹೆಬ್ಬಾರ್, ಚಂದ್ರ ಬಿಲ್ಲವ, ಸುಶೀಲಾ, ಪಂಚಾಯತ್ ಕಾರ್ಯದರ್ಶಿಗಳಾದ ಜಯ, ಸುರೇಶ್, ಮಿಥುನ್ ಹೆಮ್ಮಾಡಿ ಮತ್ತಿತರರು ಉಪಸ್ಥಿತರಿದ್ದರು.



ಜಿ.ಪಂ. ಸಿಇಓಗೆ ಸನ್ಮಾನ

ಈ ಸಂದರ್ಭದಲ್ಲಿ ನಿರಾಮಯ ಸೊಸೈಟಿಯ ಬೆಳವಣಿಗೆ ಹಿಂದಿನ ಮಹಾಶಕ್ತಿ ಹಾಗೂ ವಂಡ್ಸೆ ಗ್ರಾಮ ಪಂಚಾಯತ್‌ಗೆ ಆರೋಗ್ಯಕರ ಗ್ರಾಮ ಪಂಚಾಯತ್ ವಿಭಾಗದಲ್ಲಿ ನ್ಯಾಶನಲ್ ಪಂಚಾಯತ್ ಅವಾರ್ಡ್‌ಗೆ ಆಯ್ಕೆಯಾಗುವ ಮೂಲಕ 75 ಲಕ್ಷ ರೂ. ಪ್ರಶಸ್ತಿ ಮೊತ್ತ ದೊರೆಯುವಲ್ಲಿ ನಿರಂತರ ಮಾರ್ಗದರ್ಶನ ನೀಡಿದ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಅವರನ್ನು ಸನ್ಮಾನಿಸಲಾಯಿತು.

ವೈಕುಂಠ ಬಾಳಿಗ ಕಾನೂನು ಕಾಲೇಜು ಎನ್ನೆಸ್ಸೆಸ್‌ನ ವಾರ್ಷಿಕ ವಿಶೇಷ ಶಿಬಿರ



ಉಡುಪಿ: ಕುಂಜಿಬೆಟ್ಟು ವೈಕುಂಠ ಬಾಳಿಗ ಕಾನೂನು ಮಹಾ ವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2ರ ವತಿಯಿಂದ 2025-26ನೇ ಸಾಲಿನ ವಿಶೇಷ ಶಿಬಿರವು ಬ್ರಹ್ಮಾವರ ತಾಲೂಕಿನ ಗೋಳಿಯಂಗಡಿಯ ಸರಕಾರಿ ಪದವಿಪೂರ್ವ ಕಾಲೇಜು ಮತ್ತು ಪ್ರೌಢ ಶಾಲಾ ವಿಭಾಗದಲ್ಲಿ ಆಯೋಜಿಸಲಾಗಿತ್ತು.

ಬೆಳ್ವೆಯ ಉದ್ಯಮಿ ರಾಜೇಂದ್ರ ಕಿಣಿ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಮಾಜ ಸೇವೆಯಲ್ಲೂ ತೊಡಗಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಸುರೇಖಾ ಕೆ. ಮಾತನಾಡಿ, ವಿದ್ಯಾರ್ಥಿಗಳು ಗ್ರಾಮೀಣ ಬದುಕಿನ ಅರಿವು ಪಡೆದು ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಶಿಬಿರದ ಅವಧಿಯಲ್ಲಿ ಸ್ವಚ್ಛತಾ ಅಭಿಯಾನ, ಗಿಡ ನೆಡುವ ಕಾರ್ಯಕ್ರಮ, ಆರೋಗ್ಯ ಜಾಗೃತಿ, ಬೀದಿ ನಾಟಕ, ಪರಿಸರ ಸಂರಕ್ಷಣೆ ಸಹಿತ ವಿವಿಧ ಹಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಗೋಳಿಯಂಗಡಿ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಮುಂಜುನಾಥ್ ಪಟಗಾರ ಹಾಗೂ ಜಯರಾಮ ಶೆಟ್ಟಿ ಮಾತನಾಡಿದರು. ಉಪ ಪ್ರಾಂಶುಪಾಲೆ ಡಾ. ಪ್ರೀತಿ ಹರೀಶ್ ರಾಜ್, ಐಕ್ಯೂಎಸಿ ಸಂಯೋಜನಾಧಿಕಾರಿ ಡಾ. ಜಯಮೋಲ್ ಪಿ.ಎಸ್., ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಅಮೋಘ ಗಾಡ್ಕರ್, ಎನ್‌ಎಸ್‌ಎಸ್ ಘಟಕದ ಕಾರ್ಯದರ್ಶಿ ಸಂದೇಶ್ ಇದ್ದರು. ಎನ್ನೆಸ್ಸೆಸ್ ಅಧಿಕಾರಿ ಡಾ.ನವೀನ್ ಚಂದ್ರ ಸಿಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮೀರ್ ಸ್ವಾಗತಿಸಿದರು. ಅಂಕಿತಾ ವಂದಿಸಿದರು. ರಕ್ಷಿತಾ ನಿರೂಪಿಸಿದರು.

ಯಕ್ಷಗಾನ ಅಭಿನಯ, ಹೆಜ್ಜೆ ತರಬೇತಿ ಶಿಬಿರದ ಸಮಾರೋಪ



ಕೋಟ: ಮಕ್ಕಳಿಗೆ ನೀಡುವ ಯಕ್ಷಗಾನ ಮತ್ತು ಶಿಸ್ತಿನ ತರಬೇತಿ ಅವರ ಭವಿಷ್ಯದ ಬೆಳವಣಿಗೆಗೆ ಪೂರಕವಾಗಿದೆ ಎಂದು ಶ್ರೀ ಗುರುನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ ಕಾರಂತರು ಅಭಿಪ್ರಾಯಪಟ್ಟರು.

ಗುಂಡ್ಮಿ ಹಂಗಾರಕಟ್ಟೆ ಐರೋಡಿ ಯಕ್ಷಗಾನ ಕಲಾಕೇಂದ್ರ ಇಲ್ಲಿ ಯಕ್ಷಗಾನ ಅಭಿನಯ ಮತ್ತು ಹೆಜ್ಜೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಯಕ್ಷಗಾನ ಕ್ಷೇತ್ರದ ಹೆಸರಾಂತ ಕಲಾಕೇಂದ್ರವಾದ ಯಕ್ಷಗಾನ ಕಲಾಕೇಂದ್ರ ಮತ್ತು ಪಾಚಾರ್ಯ ಸದಾನಂದ ಐತಾಳರಂತ ಗುರುಗಳಿಂದ ತರಬೇತಿ ಪಡೆದಿರುವ ಈ ಶಿಬಿರದ ಮಕ್ಕಳಲ್ಲಿ ಖಂಡಿತಾ ಬದಲಾವಣೆಯನ್ನು ಕಾಣಬಹುದು. ಅವರ ಕೌಶಲ್ಯ ರೂಪಿಸಿ, ಜೀವನದ ಪಾಠವನ್ನು ನೀಡಲಾಗಿದೆ ಎಂದು ಹೇಳಿದರು.

ಕಲಾ ಕೇಂದ್ರದ ಅಧ್ಯಕ್ಷ ಆನಂದ.ಸಿ.ಕುಂದರ್ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಕಿರಣ್ ಕುಮಾರ್ ಕೊಡ್ಗಿ ಕಲಾಕೇಂದ್ರದ ಶಿಕ್ಷಣ ಸೇವೆಯನ್ನು ಶ್ಲಾಘಿಸಿದರು. ಸಾಲಿಗ್ರಾಮದ ಉದ್ಯಮಿ, ಕಲಾಪೋಷಕ ಚಂದ್ರಶೇಖರ ಕಾರಂತ, ಕಲಾಕೇಂದ್ರದ ಆರ್ಥಿಕ ಸಮಿತಿ ಅಧ್ಯಕ್ಷ ಅನಂತಪದ್ಮನಾಭ ಐತಾಳ, ಪ್ರಾಚಾರ್ಯ ಸದಾನಂದ ಐತಾಳ ಇದ್ದರು. ಶ್ರೀ ಗುರುನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ ಕಾರಂತ, ಟ್ರಸ್ಟಿ ಕಾರ್ಕಡ ತಾರನಾಥ ಹೊಳ್ಳರನ್ನು ಅಭಿನಂದಿಸಲಾಯಿತು. ಶಿಬಿರದ ಪ್ರಾಚಾರ್ಯರನ್ನು ಮತ್ತು ಸಹ ಗುರುಗಳನ್ನು ಸಮ್ಮಾನಿಸಲಾಯಿತು. ಕಾರ್ಯದರ್ಶಿ ರಾಜಶೇಖರ ಹೆಬ್ಬಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನರಸಿಂಹ ತುಂಗ ಕಾರ್ಯಕ್ರಮ ಸಂಯೋಜಿಸಿದರು. ಸೀತಾರಾಮ ಸೋಮಯಾಜಿ ವಂದಿಸಿದರು.

ಕಾರ್ಮಿಕ ದಿನಾಚರಣೆ, ಸನ್ಮಾನ



ಬೈಂದೂರು: ಸಮಾಜದ ನಿಸ್ವಾರ್ಥ ಸಮಾಜ ಸೇವಕ ಲಕ್ಷ್ಮಣ ಮೊಗವೀರ ಅವರು ವೃತ್ತಿಯಿಂದ ದಿನಗೂಲಿ ಕಾರ್ಮಿಕರಾಗಿದ್ದರೂ, ಊರಿನ ಯಾವುದೇ ದೇವಸ್ಥಾನಗಳ ಧಾರ್ಮಿಕ ಕಾರ್ಯಕ್ರಮಗಳು, ಭಜನಾ ಸಂಜೆಗಳು, ರಥೋತ್ಸವಗಳು ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ಅವರು ಮುಂಚೂಣಿಯಲ್ಲಿ ನಿಂತು ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಅವರ ಕಾರ್ಯ ವೈಖರಿ ಮಾದರಿಯಾಗಿದೆ ಎಂದು ಜೆಸಿಐ ಬೈಂದೂರು ಸಿಟಿ ಅಧ್ಯಕ್ಷೆ ಚೈತ್ರಾ ಸತೀಶ್ ಹೇಳಿದರು.

ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ, ಜೆಸಿಐ ಬೈಂದೂರು ಸಿಟಿ ಘಟಕದ ವತಿಯಿಂದ ಅವರನ್ನು ಸನ್ಮಾನಿಸಿ ಮಾತನಾಡಿದರು. ಘಟಕದ ಮಾಜಿ ರಾಜು ಮೊಗವೀರ, ಕಾರ್ಯದರ್ಶಿ ಪ್ರೇಮಾ ಎ. ಶೆಟ್ಟಿ ಸಂಯೋಜಕಿ ಸೂರ್ಯಕಾಂತಿ, ಸದಸ್ಯರಾದ ರಾಘವೇಂದ್ರ ಹೊಳ್ಳ ಅವಿನಾಶ್, ಹುಲಿಯಪ್ಪ ಗೌಡ, ರಾಘವೇಂದ್ರ ಸೂರ್ಕುಂದ, ಸುರೇಂದ್ರ ಶೇಟ್ ಇದ್ದರು.

ನೀರಿನ ಸಮಸ್ಯೆ: ಸಹಾಯವಾಣಿ ಸ್ಥಾಪನೆ

ಉಡುಪಿ: ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಸಹಾಯವಾಣಿಯನ್ನು ಕುಂದಾಪುರ ತಾಲೂಕು ಪಂಚಾಯತ್ ಕಛೇರಿಯಲ್ಲಿ ತೆರೆಯಲಾಗಿದ್ದು ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ಸಹಾಯವಾಣಿ ಸಂಖ್ಯೆ 9980757181 ಗೆ ಕರೆ ಮಾಡುವಂತೆ ಕುಂದಾಪುರ ತಾಲೂಕು ಪಂಚಾಯತ್‌ನ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೈಂದೂರು ತಾಲೂಕು ಕಚೇರಿ ಉದ್ಘಾಟನೆ | ಗೋಪಾಲ ಪೂಜಾರಿ ಆಶಯ

ನೌಕರರ ಪ್ರಾಮಾಣಿಕ ಕರ್ತವ್ಯದಿಂದ ಅಧಿಕಾರಿಗಳ, ಸರ್ಕಾರದ ಗೌರವ ವೃದ್ಧಿ

ಬೈಂದೂರು: ಸರ್ಕಾರಿ ನೌಕರರ ಸಂಘಟನೆ ಎಂದರೆ ಅದೊಂದು ಚಿಂತಕರ ಚಾವಡಿ ಇದ್ದಂತೆ. ಇಂತಹ ಚಿಂತಕರ ಸೇವೆಗಳು ಸದಾ ಕಾಲ ಸಮಾಜಕ್ಕೆ ದೊರಕುವಂತಾಬೇಕು ಎಂದು ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೈಂದೂರು ತಾಲೂಕು ಇದರ ನೂತನ ಕಚೇರಿಯನ್ನು ಉದ್ಘಾಟಿಸಿ, ಬಳಿಕ ರೋಟರಿ ಸಮುದಾಯ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿದರು.

ರಾಜ್ಯದಲ್ಲಿ ಅತ್ಯಂತ ಬಲಿಷ್ಠ ಮತ್ತು ದೊಡ್ಡ ಸಂಘಟನೆಯಾಗಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನೌಕರರು ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ಮುಟ್ಟಿಸುವಲ್ಲಿ



ಪ್ರಾಮಾಣಿಕ ಪ್ರಯತ್ನದ ಜತೆಗೆ ತಮ್ಮ ಕರ್ತವ್ಯವನ್ನೂ ಸಮರ್ಪಕವಾಗಿ ನಿರ್ವಹಿಸಬೇಕು ಇದರಿಂದಾಗಿ ಅಧಿಕಾರಿಗಳ ಮತ್ತು ಸರ್ಕಾರದ ಗೌರವ ಕೂಡ ಹೆಚ್ಚಿಸಲಿದೆ ಅಲ್ಲದೇ ಜನಸಾಮಾನ್ಯರ ಆಶಯಗಳು ಈಡೇರಲಿವೆ ಎಂದರು.

ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ ನಾಯ್ಕ, ನೌಕರರ ಸಂಘದ ಜಿಲ್ಲಾಧ್ಯಕ್ಷ ಅಂಪಾರು ದಿನಕರ ಶೆಟ್ಟಿ ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ, ಡಾ. ನಾಗೇಶ, ಬೈಂದೂರು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಾಜೇಶ್, ಸಿದ್ದಾಪುರ ಜ್ಞಾನಸರಸ್ವತಿ ವಿದ್ಯಾಕೇಂದ್ರದ ಅಧ್ಯಕ್ಷ ಬಿ. ಎಸ್. ಸುರೇಶ ಶೆಟ್ಟಿ ಉಪ್ಪುಂದ, ಜಿಪಂ ಮಾಜಿ ಅಧ್ಯಕ್ಷ ಎಸ್. ರಾಜು ಪೂಜಾರಿ, ಜಿಪಂ ಮಾಜಿ ಸದಸ್ಯರಾದ ಮದನ್ ಕುಮಾರ್ ಉಪ್ಪುಂದ, ಗೌರಿ ದೇವಾಡಿಗ, ಬೈಂದೂರು ತಾಲೂಕು ರೈತ ಸಂಘದ ಅಧ್ಯಕ್ಷ ನೆಲ್ಯಾಡಿ ದೀಪಕ್ ಕುಮಾರ್ ಶೆಟ್ಟಿ ತಾಲೂಕು ಕೆಡಿಪಿ ಸದಸ್ಯ ಶೇಖರ ಪೂಜಾರಿ, ಡಿಡಿಪಿಯು ಬಿ. ಟಿ ಲೋಕೇಶ್, ಅಕ್ಷರ ದಾಸೋಹ ಸಮಿತಿಯ ಚಂದ್ರ ನಾಯ್ಕ, ಎಂಎಂ ಚಾರಿಟೇಬಲ್ ಟ್ರಸ್ಟಿನ ಟ್ರಸ್ಟಿ ಅರುಣ್ ಕುಮಾರ್ ಶಿರೂರು, ಕ.ರಾ.ನೌ.ಸಂಘದ ಗೌರವಾಧ್ಯಕ್ಷ ಷರೀಫ್, ಖಜಾಂಚಿ ಉದಯಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಶಿಕ್ಷಕ ಸುಧಾಕರ ದೇವಾಡಿಗ ಸ್ವಾಗತಿಸಿದರು. ಕ.ರಾ.ಪ್ರಾ. ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶೇಖರ ಪೂಜಾರಿ ಪ್ರಾಸ್ತಾವಿಸಿದರು. ಶಿಕ್ಷಕರಾದ ಸುಬ್ರಹ್ಮಣ್ಯ ಜಿ. ಉಪ್ಪುಂದ ಕಾರ್ಯಕ್ರಮ ನಿರೂಪಿಸಿದರು. ಗಣಪತಿ ಹೋಬಳಿದಾರ್ ವಂದಿಸಿದರು. ಬಳಿಕ ಬೈಂದೂರು ಗಾಂಧಿಮೈದಾನದಲ್ಲಿ ತಾಲೂಕು ಸರ್ಕಾರಿ ನೌಕರರ ಕ್ರೀಡಾಕೂಟ ನಡೆಯಿತು.

ಸಾಧಕ ಶಿಕ್ಷಕರು, ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿಭಾಗದಲ್ಲಿ ಅತೀ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿವಿಧ ಕ್ಷೇತ್ರದ ಸಾಧಕ ಶಿಕ್ಷಕರನ್ನು ಸನ್ಮಾನಿಸಲಾಯಿತು

ಸುತ್ತ ಮುತ್ತ

ಇಂದು ಸಾಮೂಹಿಕ ಬ್ರಹ್ಮೋಪದೇಶ

ಕಾಸರಗೋಡು: ಕೊರಕೋಡು ಶ್ರೀ ದುರ್ಗಾಪರಮೇಶ್ವರೀ ಮಹಾಕಾಳಿ ಕಾಶಿಕಾಲಭೈರವೇಶ್ವರ ದೇವರ ಸನ್ನಿಧಿಯಲ್ಲಿ ಮೇ 10ರಂದು ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ಉಪಸ್ಥಿತಿಯಲ್ಲಿ ಸಾಮೂಹಿಕ ಬ್ರಹ್ಮೋಪದೇಶ ಕಾರ್ಯಕ್ರಮವು ಜರಗಲಿದೆ. ಭಕ್ತಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶ್ರೀ ಕ್ಷೇತ್ರದ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಮಂಜೇಶ್ವರದಲ್ಲಿ ಎಡರಂಗದ ಮತ ಮುಸ್ಲಿಂಲೀಗ್ ಅಭ್ಯರ್ಥಿಗೆ ಕ್ರಾಸ್: ಬಿಜೆಪಿ

ಮಂಜೇಶ್ವರ: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ಒಕ್ಕೂಟವು 2021ರ ಚುನಾವಣೆಗಿಂತ 22,000ದಷ್ಟು ಮತಗಳನ್ನು ಕಡಿಮೆ ಪಡೆದು ಅಪಹಾಸ್ಯಕ್ಕೀಡಾಗಿದೆ. ಎಡರಂಗದ ಮತಗಳು ನೇರವಾಗಿ ಮುಸ್ಲಿಂಲೀಗ್ ಅಭ್ಯರ್ಥಿಗೆ ಕ್ರಾಸ್ ಆಗಿರುವುದು ವೋಟ್ ಮಾರಾಟದ ಸ್ಪಷ್ಟ ನಿದರ್ಶನವಾಗಿದೆ ಎಂದು ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಹೇಳಿದ್ದಾರೆ.
ಮುಸ್ಲಿಂಲೀಗ್ ಪಕ್ಷಕ್ಕೆ ಮುಸ್ಲಿಂ ಮತಗಳನ್ನು ಕ್ರೋಢೀಕರಿಸಿ ಒದಗಿಸಲು ಜಿಹಾದಿಗಳ ಸಹಾಯ ಹಾಗೂ ತಂತ್ರಗಾರಿಕೆ ಎದ್ದು ಕಾಣುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಾರಕ ಎಂದು ಆದರ್ಶ್ ಬಿ.ಎಂ. ಅಭಿಪ್ರಾಯ ವ್ಯಕ್ತಪಡಿಸಿದರು.
ಬಿಜೆಪಿ ತನ್ನ ವೋಟಿಂಗ್ ಶೇರು ಹೆಚ್ಚು ಮಾಡಿದೆ. ಬಿಜೆಪಿ ಕಾರ್ಯಕರ್ತರ ಶ್ರಮಕ್ಕೆ ಅಭಿನಂದನೆಗಳು. ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರಂತಹ ಅಪ್ಪಟ ನಾಯಕರನ್ನು ಮಂಜೇಶ್ವರದಿಂದ ಗೆಲ್ಲಿಸಲಾ ಗದ ಬೇಸರವಿದೆ.
ಮಂಜೇಶ್ವರ ಬಿಜೆಪಿಯ ಶಕ್ತಿ ಕೇಂದ್ರವಾಗಿದ್ದು ಬಿಜೆಪಿಗೆ 67 ಸಾವಿರದಷ್ಟು ಮತದಾರರ ಬೆಂಬಲ ಲಭಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸಲಾಗುವುದು. ಮುಸ್ಲಿಂಲೀಗ್‌ನ ಏಕಾಧಿಪತ್ಯ ಧೋರಣೆಯನ್ನು ಬಿಜೆಪಿ ನಿರಂತರವಾಗಿ ಎದುರಿಸ ಲಿದೆ ಎಂದು ಮಂಡಲಾಧ್ಯಕ್ಷರು ಹೇಳಿದ್ದಾರೆ.

ನಾಳೆ ಕುಂಟಾರಿನಲ್ಲಿ ಮೊಗೇರ ಪೊಲಿಮೆ

ಮುಳ್ಳೇರಿಯ: ಮೊಗೇರ ಸಮಾಜದ ವತಿಯಿಂದ ಮೊಗೇರ ಪೊಲಿಮೆ ಎಂಬ ವಿಶೇಷ ಕಾರ್ಯಕ್ರಮವು ಮೇ 11ರಂದು ಕುಂಟಾರು ಶಾಲಾ ಪರಿಸರದಲ್ಲಿ ಜರಗಲಿದೆ. ಮೊಗೇರ ಸಮುದಾಯದ ಒಗ್ಗಟ್ಟು ಮತ್ತು ಏಳಿಗೆಗಾಗಿ ವರ್ಷಕ್ಕೊಮ್ಮೆ ಮಲ್ಲಾವರ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಧನುಪೂಜೆ ಹಮ್ಮಿಕೊಳ್ಳಲಾಗುತ್ತಿದೆ.
ಬೆಳಿಗ್ಗೆ 8.30ಕ್ಕೆ ಮೊಗೇರ ಸಮಾಜದ ಹಿರಿಯರಾದ ಅಣ್ಣು ಆರೋಟುಮೊಳೆ ಜಯನಗರ ಕಾರ್ಯಕ್ರಮವನ್ನು ಉದ್ಘಾಟಿಸುವರು. 9ಗಂಟೆಗೆ ವಿವಿಧ ಆಟೋಟ ಸ್ಪರ್ಧೆಗಳು, ಕಲಾ ಸ್ಪರ್ಧೆಗಳು, ಮಧ್ಯಾಹ್ನ ಅನ್ನ ಸಂತರ್ಪಣೆ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ.
ಮೊಗೇರ ಸಮಿತಿ ಆದೂರು ಗ್ರಾಮದ ಅಧ್ಯಕ್ಷ ಸುಂದರ ಎ.ಕೆ. ಅಧ್ಯಕ್ಷತೆ ವಹಿಸುವರು.
ಕಾರ್ಯಕ್ರಮವನ್ನು ಸತೀಶ್ ಸಾಲಿಯಾನ್ ನೆಲ್ಲಿಕುಂಜೆ ಉದ್ಘಾಟಿಸಿ ಮಾತನಾಡುವರು. ಬಾಬು ಯು. ಪಚ್ಲಂಪಾರೆ, ಎ.ಕೆ.ಶಂಕರ, ಮಾಲಿನಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಈ ವೇಳೆ ಆದೂರು ಗ್ರಾಮದ ಮೊಗೇರ ದೈವಪಾತ್ರಿಗಳನ್ನು ಮತ್ತು ನಲಿಕೆ ಸಮಾಜದ ಹಿರಿಯರಾದ ಪಾಚು ಅವರನ್ನು ಗೌರವಿಸಲಾಗುವುದು.
ಸಂಜೆ 6.30ಕ್ಕೆ ನೃತ್ಯ ಗಾನ ವೈಭವ ನಡೆಯಲಿದೆ.

ಮೇ 12: ನೆಕ್ರಾಜೆ ಕ್ಷೇತ್ರದಲ್ಲಿ ವಿವಿಧ ಕಾರ್ಯಕ್ರಮ

ಮುಳ್ಳೇರಿಯ: ನೆಕ್ರಾಜೆ ಶ್ರೀ ಸಂತಾನ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮೇ 12ರಂದು ಶ್ರೀ ಕ್ಷೇತ್ರದ ಪ್ರತಿಷ್ಠಾ ವಾರ್ಷಿಕೋತ್ಸವ ಹಾಗೂ ಸಹಸ್ರ ನಾಮಾವೃತಿ ವಿಷ್ಣು ಸಹಸ್ರನಾಮ ಪಾರಾಯಣ ಮಹಾಯಜ್ಞ ಜರಗಲಿದೆ.
ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳು ಕಾರ್ಯಕ್ರಮಗಳ ನೇತೃತ್ವ ವಹಿಸಲಿದ್ದಾರೆ. ಬೆಳಗ್ಗೆ 8ಗಂಟೆಗೆ ಪೂಜೆ, 10ಗಂಟೆಗೆ ನವಕಾಭಿಷೇಕ, ಶ್ರೀ ವನಶಾಸ್ತಾವಿಗೆ ನವಕಾಭಿಷೇಕ, 11ರಿಂದ ಸಹಸ್ರ ನಾಮಾವೃತಿ ವಿಷ್ಣು ಸಹಸ್ರನಾಮ ಪಾರಾಯಣ ಮಹಾಯಜ್ಞ ಆರಂಭ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ರಾತ್ರಿ 8ಕ್ಕೆ ದೀಪಾಲಕೃತ ವಿಶೇಷ ಕಾರ್ತಿಕ ಪೂಜೆ ನೆರವೇರಲಿದೆ. ಭಕ್ತರಿಗೆ ವಿಷ್ಣು ಸಹಸ್ರನಾಮ ಪಾರಾಯಣಕ್ಕೆ ಅವಕಾಶವಿದೆ ಎಂದು ಶ್ರೀ ಕ್ಷೇತ್ರದ ಪದಾಧಿಕಾರಿಗಳು ತಿಳಿಸಿದ್ದಾರೆ.

ಇಂದು ವಾರ್ಷಿಕ ಸಭೆ

ಕಾಸರಗೋಡು: ಆಲ್ ಕೇರಳ ವೆಲ್ಫೇರ್ ಅಸೋಸಿಯೇಶನ್ ಆಫ್ ಎಕ್ಸ್ ಆರ್ಮಿ ಏವಿಯೇಷನ್ ಟೆಕ್ಸ್‌ನ ವಾರ್ಷಿಕ ಸಭೆ ಮತ್ತು ಹೊಸ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮ ಮೇ 10ರಂದು ಜರಗಲಿದೆ.

ಬೇಡಡ ಸಾಹಿತ್ಯ ವೇದಿಕೆಯಿಂದ ಕವಿಗೋಷ್ಠಿ

ಕಾಸರಗೋಡು: ಬೇಡಡ್ಕ ಸಾಹಿತ್ಯ ವೇದಿಕೆಯ ನೇತೃತ್ವದಲ್ಲಿ ಕುಂಡಂಗುಳಿ ಸಹೃದಯ ವಾಚನಾಯಲದಲ್ಲಿ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.
ಲೇಖಕ ರಾಘವನ್ ಬೆಳ್ಳಿಪ್ಪಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿ.ರಾಘವನ್ ಅಧ್ಯಕ್ಷತೆ ವಹಿಸಿದ್ದರು. ಬರಹಗಾರರಾದ ಕೃಷ್ಣನ್ ಮೇಲತ್, ಉಮೇಶ್ ವಾರಿಕುಳ, ಸುನೀತಾ ಕರಿಚ್ಚೇರಿ, ರಾಜೇಶ್ ಮಡಕ್ಕಲ್, ಶೋಭಾ ಬೇಡಡ್ಕ, ನಿಶಾ ಪೆರಿಯ, ಜಯಶ್ರೀ ಪೆರ್ಲಡ್ಕಂ, ಬಿ.ಗಂಗಾಧರನ್, ಮುರಳೀಧರನ್ ಬೀಂಬುಂಗಾಲ್, ಪಂಕಜಾಕ್ಷನ್ ತೋರೋತ್ ಅವರು ಕವನಗಳನ್ನು ವಾಚಿಸಿದರು.
ಎಂ.ಮುಹಮ್ಮದ್, ವಕೀಲೆ ಇಂದಿರಾ, ಸುರೇಶ್ ಪಯ್ಯಂಗಾನಂ ಕೆ.ವಿನೋದ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಳೆಗಾಲಕ್ಕೆ ಯಾವುದೇ ರೀತಿಯಲ್ಲಿ ಪೂರ್ವ ತಯಾರಿ ನಡೆಸದ ಕಾಸರಗೋಡು ನಗರ

ವಿವಿಧೆಡೆ ಮಾಲಿನ್ಯ ರಾಶಿ, ಗುರಿ ತಲುಪದ ಶುಚಿತ್ವ ಕಾರ್ಯ





ಕಾಸರಗೋಡು: ಕಾಸರಗೋಡು ನಗರಸಭಾ ವ್ಯಾಪ್ತಿಯಲ್ಲಿ ಮಳೆಗಾಲ ಪೂರ್ವ ಯಾವುದೇ ರೀತಿಯಲ್ಲಿ ಸಿದ್ಧತೆ ನಡೆಸದಿರುವುದು ಕಂಡುಬರುತ್ತಿದೆ. ಅದರಂತೆ ನಗರದ ವಿವಿಧೆಡೆ ತ್ಯಾಜ್ಯ ರಾಶಿ ತುಂಬಿ ತುಳುಕುತ್ತಿದ್ದು, ಶುಚೀಕರಣ ಕಾರ್ಯ ಗುರಿ ತಲುಪದೆ ಮಳೆಗಾಲದಲ್ಲಿ ಜನರು ಅಪಾರ ಸಂಕಷ್ಟ ಎದುರಿಸಬೇಕಾಗಬಹುದು.
ಮಳೆಗಾಲ ಸಮೀಪಿಸುತ್ತಿದ್ದರೂ ನಗರದ ಹದಗೆಟ್ಟ ರಸ್ತೆಗಳ ದುರಸ್ತಿಗೆ ಕೂಡಾ ಸಂಬಂಧಪಟ್ಟ ಇಲಾಖೆಗಳು ಮುತುವರ್ಜಿ ವಹಿಸದಿರುವುದು ದುರಂತವಾಗಿದೆ. ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಕೂಡಲೇ ನಗರದ ವಿವಿಧ ರಸ್ತೆಗಳ ದುರಸ್ತಿಗೆ ಇಲಾಖೆ ಕ್ರಮ ಕೈಗೊಳ್ಳುತ್ತವೆ ಎಂಬ ನಂಬಿಕೆ ಸದ್ಯಕ್ಕೆ ಈಡೇರುವ ಲಕ್ಷಣಗಳು ಗೋಚರಿಸುತ್ತಿಲ್ಲ.
ತಾಯಲಂಗಾಡಿ ಕ್ಲಾಕ್ ಟವರ್ ಮೂಲಕ ಮಾಲಿಕ್ ದಿನಾರ್‌ಗೆ ತೆರಳುವ ಹಳೆಯ ರೈಲು ನಿಲ್ದಾಣ ರಸ್ತೆ ತೀರಾ ಶೋಚನೀಯ ಸ್ಥಿತಿಯಲ್ಲಿದ್ದು, ಸಂಚಾರಕ್ಕೆ ಅಯೋಗ್ಯವೆನಿಸಿದೆ. ದೈನಂದಿನ ನೂರಾರು ವಾಹನಗಳು ಹಾದುಹೋಗುವ ಈ ರಸ್ತೆಯಲ್ಲಿ ಹೊಂಡ ಗುಂಡಿಗಳು ಸೃಷ್ಟಿಯಾಗಿ ಸಾರಿಗೆ ಸಂಚಾರಕ್ಕೆ ತೊಡಕು ಉಂಟಾಗಿದೆ.
ಸಂಪೂರ್ಣವಾಗಿ ರೈಲ್ವೆ ಅಧೀನದಲ್ಲಿರುವ ಈ ರಸ್ತೆಯ ಅಭಿವೃದ್ಧಿಗೆ ಬೇರೆ ಇಲಾಖೆಗಳು ಏನೂ ಮಾಡಲು ಸಾಧ್ಯವಾಗದ ಪರಿಸ್ಥಿತಿಯಿದೆ. ಈ ರಸ್ತೆ ಬದಿಯಲ್ಲಿ ರೈಲ್ವೆ ಇಲಾಖೆ ಅಧೀನದಲ್ಲಿ ಅತ್ಯಾಧುನಿಕ ಮಾದರಿಯ ಪಾರ್ಕಿಂಗ್ ಸೌಕರ್ಯ ಸಜ್ಜಾಗುತ್ತಿದೆ. ಆದರೆ ಈ ಭಾಗದ ರಸ್ತೆ ದುರಸ್ತಿಗೊಳಿಸುವ ನಿಟ್ಟಿನಲ್ಲಿ ರೈಲ್ವೆ ಇಲಾಖೆ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸವಾಗಿದೆ.
ರೈಲುಗಾಡಿಗಳಿಂದ ಇಳಿದು ಬರುವ ಹಲವಾರು ಜನರು ಶಿಕ್ಷಣ ಸಂಸ್ಥೆ ಉದ್ಯೋಗ ಹಾಗೂ ಇನ್ನಿತರ ವಲಯಗಳಿಗೆ ನಡೆದಾಡಲು ಬಳಸುವ ರಸ್ತೆ ಇದಾಗಿದೆ. ಮಳೆಗಾಲಕ್ಕಿಂತ ಮೊದಲು ಈ ರಸ್ತೆಯನ್ನು ದುರಸ್ತಿಗೊಳಿಸದಿದ್ದರೆ ಹೊಂಡ ಗುಂಡಿಗಳಲ್ಲಿ ಕೆಸರು ನೀರು ತುಂಬಿ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆ ಇದೆ.
ರೈಲ್ವೆ ಹಾಗೂ ಇತರ ಪ್ರಧಾನ ಇಲಾಖೆಗಳ ಕಚೇರಿಗಳು ಈ ರಸ್ತೆಯ ಆಸುಪಾಸಿನಲ್ಲಿ ಕಾರ್ಯಾಚರಿಸುತ್ತಿದೆ. ರಸ್ತೆ ಅಗಲ ಕಡಿಮೆಯಾಗಿರುವುದು, ಅತ್ಯಂತ ಶೋಚನೀಯವಾಗಿರುವುದು ಸಮಸ್ಯೆಯಾಗಿ ಕಾಡುತ್ತಿದೆ.
ಬಂದರು ಇಲಾಖೆ ಈ ರಸ್ತೆಯಲ್ಲಿ 600 ಮೀಟರ್ ಉದ್ದಕ್ಕೆ ಮತ್ತು 3 ಮೀಟರ್ ಅಗಲದಲ್ಲಿ ದುರಸ್ತಿಗೆ 44.35 ಲಕ್ಷ ರೂಪಾಯಿಯ ಅಂದಾಜು ಪಟ್ಟಿ ತಯಾರಿಸಿ ಸಹಾಯಕ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹಸ್ತಾಂತರಿಸಿದ್ದರೂ ರೈಲ್ವೆ ಇಲಾಖೆಯಿಂದ ಅನುಮತಿ ಲಭಿಸದ ಕಾರಣ ಯಾವುದೇ ಪ್ರಯೋಜನವಾಗಿಲ್ಲ.

ಕ್ರಮ ಕೈಗೊಳ್ಳಿ

ಜೂನ್ 1ರಂದು ಶಾಲಾರಂಭವಾಗಲಿದ್ದು ಹಲವಾರು ಶಾಲಾ ವಾಹನಗಳು ಈ ರಸ್ತೆ ಮೂಲಕ ಸಂಚರಿಸುತ್ತವೆ. ಈ ಮಧ್ಯೆ ಪ್ರಸ್ತುತ ರಸ್ತೆ ಬದಿಯಲ್ಲಿ ಒಣಗಿ ಬಾಗಿ ನಿಂತಿರುವ ಮರಗಳು ಯಾವುದೇ ಕ್ಷಣದಲ್ಲಿ ಧರೆಗುರುಳುವ ಸ್ಥಿತಿಯಲ್ಲಿವೆ. ಇದು ಅತ್ಯಂತ ಅಪಾಯದ ಆತಂಕಕ್ಕೂ ಕಾರಣವಾಗುತ್ತಿದೆ. ಜನರ ಜೀವಕ್ಕೆ ಭೀತಿ ಸೃಷ್ಟಿಸುವ ಇಂತಹ ಅನೇಕ ಸಮಸ್ಯೆಗಳು ಕಾಸರಗೋಡು ನಗರದಲ್ಲಿವೆ. ಈ ಬಗ್ಗೆ ರೈಲ್ವೆ ಇಲಾಖೆ -ನಗರಸಭಾ ಆಡಳಿತವು ಹೆಚ್ಚಿನ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಕಾಸರಗೋಡು ನಗರದಲ್ಲಿ ವಿವಿಧೆಡೆ ಮಾಲಿನ್ಯ ರಾಶಿ

ಕಾಸರಗೋಡು ನಗರದ ಹಲವೆಡೆಗಳಲ್ಲಿ ಮಾಲಿನ್ಯ ರಾಶಿ ಯದ್ವಾತದ್ವವಾಗಿ ಬಿದ್ದುಕೊಂಡಿದೆ. ಅದರಲ್ಲೂ ಕೆಲವು ಪ್ರಮುಖ ರಸ್ತೆ ಬದಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡದೆ ಸಮಸ್ಯೆಗಳು ಜೀವಂತವಾಗಿವೆ. ರೈಲ್ವೆ ನಿಲ್ದಾಣ ರಸ್ತೆ, ಬೀಚ್ ರೋಡ್, ನಾಯಕ್ ರೋಡ್, ಹೊಸ ಬಸ್ ನಿಲ್ದಾಣ ಪರಿಸರ, ಹಳೆ ಬಸ್ ನಿಲ್ದಾಣ ವಠಾರ ಅಲ್ಲದೆ ಇನ್ನಿತರ ಭಾಗಗಳಲ್ಲಿ ಮಾಲಿನ್ಯ ರಾಶಿ ಅಸಹ್ಯ ಸೃಷ್ಟಿಸುತ್ತಿದೆ. ರಾತ್ರಿ ವೇಳೆ ರಸ್ತೆ ಬದಿಗಳಲ್ಲಿ ಎಸೆಯಲಾಗುವ ತ್ಯಾಜ್ಯವನ್ನು ಬೀದಿನಾಯಿಗಳು ಎಳೆದಾಡಿ ರಸ್ತೆಗೆ ತರುವ ಕಾರಣ ಈ ಮೂಲಕ ಪ್ರಯಾಣಿಸುವವರು ಅಸಹನೀಯ ದುರ್ಗಂಧವನ್ನು ಸಹಿಸುವಂತಾಗಿದೆ. ಈ ವಿಚಾರದಲ್ಲಿ ನಗರಸಭಾ ಆಡಳಿತ ಮತ್ತು ಆರೋಗ್ಯ ಇಲಾಖೆಯು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಪೆರ್ಲ ನೇತಾಜಿ ಗ್ರಂಥಾಲಯದಲ್ಲಿ ರೀಡಿಂಗ್ ಥಿಯೇಟರ್ ಕಾರ್ಯಕ್ರಮ



ಪೆರ್ಲ: ಪೆರ್ಲ ನೇತಾಜಿ ಸಾರ್ವಜನಿಕ ಗ್ರಂಥಾಲಯದಲ್ಲಿ ಬಾಲ ವೇದಿಕೆಯ ಮಕ್ಕಳ ವಾಚನಾ ಕಳರಿ ಅಂಗವಾಗಿ ರೀಡಿಂಗ್ ಥಿಯೇಟರ್ ಕಾರ್ಯಕ್ರಮ ಜರಗಿತು. ಈ ಸಂದರ್ಭ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಅಲ್ಲದೆ ಜಾಗೃತಿ ಮೂಡಿಸಲಾಯಿತು.
ಕವಿ ಶ್ರೀನಿವಾಸ ಪೆರಿಕ್ಕಾನ ಅವರು ರೀಡಿಂಗ್ ಥಿಯೇಟರ್ ಉದ್ಘಾಟಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.
ಬಳಿಕ ಸಂಪನ್ಮೂಲ ವ್ಯಕ್ತಿಯಾಗಿ ರಂಗಕರ್ಮಿ ಅಶೋಕ್ ಮಾಸ್ತರ್ ಕೊಡ್ಲಮೊಗರು ತರಗತಿ ನಡೆಸಿಕೊಟ್ಟರು. ಅವರು ನಾಟಕ ಓದು, ಕಥಾ ಓದು ಮುಂತಾದ ಸಾಹಿತ್ಯ ಪ್ರಕಾರಗಳನ್ನು ರೀಡಿಂಗ್ ಥಿಯೇಟರ್ ನಲ್ಲಿ ಅಳವಡಿಸುವಿಕೆಯ ಅಂಶಗಳ ಬಗ್ಗೆ ಪರಿಣಾಮಕಾರಿಯಾಗಿ ತರಗತಿ ನಡೆಸಿ ಮಕ್ಕಳಲ್ಲಿ ಉತ್ತಮ ಓದುಗಾರನಲ್ಲಿರಬೇಕಾದ ಗುಣಗಳ ಬಗ್ಗೆ ಮಾಹಿತಿ ನೀಡಿದರು.
ಸಮಾರಂಭದಲ್ಲಿ ಗ್ರಂಥಾಲಯದ ಅಧ್ಯಕ್ಷ ರಾಮಕೃಷ್ಣ ರೈ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಕಾರ್ಯಕರ್ತ ವಿನೋದ್ ಅಮೆಕ್ಕಳ ಉಪಸ್ಥಿತರಿದ್ದರು. ಗ್ರಂಥಾಲಯದ ಕಾರ್ಯದರ್ಶಿ ಉದಯ ಸಾರಂಗ್ ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಿಸಿದರು.

ಹೊಸ ಭರವಸೆ ಮೂಡಿಸುತ್ತದೆ

ಮಕ್ಕಳ ರಚನಾ ಕೌಶಲ್ಯತೆ ಎಳೆವೆಯಲ್ಲೇ ಬೆಳೆಯಲು ವಾಚನಾ ಕಳರಿ ಹೊಸ ಭರವಸೆಯನ್ನು ಮೂಡಿಸುತ್ತದೆ. ಅವರಿಗೆ ಅವಕಾಶಗಳನ್ನು ಒದಗಿಸಿ ಕೊಡುವುದು ಅತೀ ದೊಡ್ಡ ಕೆಲಸವಾಗಿದೆ.

● ಶ್ರೀನಿವಾಸ ಪೆರಿಕ್ಕಾನ

ಕೆವಿಎಸ್‌ಇಬಿ ಇಂಜಿನಿಯರ್ಸ್ ಅಸೋಸಿಯೇಶನ್ 73ನೇ ಕೇರಳ ರಾಜ್ಯ ವಾರ್ಷಿಕ ಮಹಾಸಭೆ

ಕಾಸರಗೋಡು: ಕೆಎಸ್‌ಇಬಿ ಇಂಜಿನಿಯರ್ಸ್ ಅಸೋಸಿಯೇಶನ್‌ನ 73ನೇ ಕೇರಳ ರಾಜ್ಯ ವಾರ್ಷಿಕ ಮಹಾಸಭೆ ಮೇ 10ರಂದು ಚೆಮ್ನಾಡು ಕಾನ್ಜ್ ಮಾರವಲ್ ಕನ್‌ವೆನ್ಷನ್ ಸೆಂಟರ್ ನಲ್ಲಿ ಜರಗಲಿದೆ ಎಂದು ಸಂಘಟನೆ ಪದಾಧಿಕಾರಿಗಳು ಶನಿವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಆ ಪ್ರಯುಕ್ತ ಬೆಳಿಗ್ಗೆ 6.30ಕ್ಕೆ ಕಾಸರಗೋಡು ಹೊಸ ಬಸ್ ನಿಲ್ದಾಣ ಪರಿಸರದಲ್ಲಿ ಗ್ರೀನ್ ಎನರ್ಜಿ ವಾಕಥಾನ್ ಜರಗಲಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ವಿ.ವಿಜಯ್ ಭರತ್ ರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುವರು.
ವಾರ್ಷಿಕ ಮಹಾಸಭೆಯನ್ನು ಬೆಳಿಗ್ಗೆ 10 ಗಂಟೆಗೆ ಕಾಸರಗೋಡು ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಉದ್ಘಾಟಿಸುವರು. ಉದುಮ ಶಾಸಕ, ವಕೀಲ ಕೆ.ನೀಲಕಂಠನ್ ಅತಿಥಿಯಾಗಿ ಪಾಲ್ಗೊಳ್ಳುವರು. ಬೆಳಿಗ್ಗೆ 11 ಗಂಟೆಗೆ ನಡೆಯುವ ವಿಚಾರಗೋಷ್ಠಿಯನ್ನು ಮಿನಿಸ್ಟ್ರಿ ಆಫ್ ಪವರ್‌ನ ಎಸ್‌ಆರ್‌ಪಿಸಿ ಸಿಇಒ ಮೆಂಬರ್ ಸೆಕ್ರೆಟರಿ ಅಸಿಟ್ ಸಿಂಗ್ ಐಇಎಸ್ ಉದ್ಘಾಟಿಸಿ ಮಾತನಾಡುವರು.
ಆರ್‌ಡಿಎಸ್‌ಎಸ್ ನವೀಕರಣ, ಫೀಡರ್ ಆಟೋಮೆಷಿನ್, ದುರಂತ ಪ್ರತಿರೋಧ ಮತ್ತು ಸೈಬರ್ ಸುರಕ್ಷೆ, ಬ್ಯಾಟರಿ ಎನರ್ಜಿ ಸ್ಟೋರೇಜ್, ತಾರೀಫ್ ಪರಿಷ್ಕರಣೆ, ಗ್ರೀನ್ ಓಪನ್ ಆಕ್ಸಸ್, ಇಂಜಿನಿಯರಿಂಗ್ ಮಾನವ ಶಕ್ತಿ ಅಭಿವೃದ್ಧಿ ಇತ್ಯಾದಿ ವಿಷಯಗಳ ಕುರಿತು ವಿಚಾರಗೋಷ್ಠಿಯಲ್ಲಿ ಸಮಾಲೋಚಿಸಿ ಬಳಿಕ ಅದರ ಸಮಗ್ರ ವರದಿಯನ್ನು ಕೇರಳದ ಹೊಸ ಸರಕಾರಕ್ಕೆ ಸಲ್ಲಿಸಲಾಗುವುದು.
ಗೋಷ್ಠಿಯಲ್ಲಿ ಎಂ.ಮುಹಮ್ಮದ್ ರಾಫಿ, ಎಸ್.ಸುರೇಶ್‌ಕುಮಾರ್, ನಾಗರಾಜ ಭಟ್, ಎಂ.ಸಜಿತ್‌ಕುಮಾರ್, ವಿ.ಜಿ.ಪ್ರಭಾಕರನ್ ಮುಂತಾದವರು ಉಪಸ್ಥಿತರಿದ್ದರು.

ಗಮನ ಹರಿಸಬೇಕು

ರಾಜ್ಯದಲ್ಲಿ ಇನ್ನಷ್ಟು ವಿದ್ಯುತ್ ಉತ್ಪಾದನೆಯ ಅಗತ್ಯವಿದೆ. ವಿದ್ಯುತ್ ಬಳಕೆ ಪ್ರಮಾಣವು ದಿನ ಕಳೆದಂತೆ ಏರಿಕೆಯಾಗುತ್ತಿದೆ. ಕಳೆದ ವರ್ಷ ಕೇರಳದಲ್ಲಿ ಏಪ್ರಿಲ್ ತಿಂಗಳಿ ನಲ್ಲಿ 5800 ಮೆಗಾವಾಟ್ ವಿದ್ಯುತ್ ಬಳಕೆಯಾ ಗಿದ್ದರೆ, ಈ ವರ್ಷದ ಏಪ್ರಿಲ್‌ನಲ್ಲಿ 6200 ಮೆಗಾವಾಟ್ ಆಗಿದೆ. ಕೇರಳದಲ್ಲಿ ಒಟ್ಟು ಬಳಕೆಯ ಶೇ.30ರಷ್ಟು ಮಾತ್ರ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಮುಂದಿನ ವರ್ಷ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ವಿದ್ಯುತ್ ಬಳಕೆಯ ಪ್ರಮಾಣವು 10,000 ಮೆಗಾವಾಟ್‌ಗೆ ತಲುಪಲಿದೆ. ಆದ್ದರಿಂದ ರಾಜ್ಯ ಸರಕಾರವು ಈ ಕುರಿತು ಹೆಚ್ಚಿನ ಗಮನಹರಿಸಬೇಕೆಂದು ಪದಾಧಿಕಾರಿಗಳು ಒತ್ತಾಯಿಸಿದರು.

ಶ್ರೀ ಶಾಸ್ತಾವೇಶ್ವರ ಕ್ಷೇತ್ರ ಪ್ರಥಮ ಹಂತದ ಜೀರ್ಣೋದ್ಧಾರದ ಕಾರ್ಯಕ್ಕೆ ಚಾಲನೆ



ಮಂಜೇಶ್ವರ: ಹೊಸಂಗಡಿ ವಾಮಂಜೂರು ಶ್ರೀ ಶಾಸ್ತಾವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯದ ಪ್ರಥಮ ಹಂತದ ಕಾಮಗಾರಿಗಳ ಪ್ರಯುಕ್ತ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಶುಕ್ರವಾರ ಬೆಳಗ್ಗೆ ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದ ಆಡಳಿತ ಮೊಕ್ತೇಸರ ಹಾಗೂ ವಾಮಂಜೂರು ದೇವಾಲಯದ ಪುನರ್ ನಿರ್ಮಾಣ ಸಮಿತಿಯ ಸಲಹೆಗಾರ ನಾರಾಯಣ ಹೆಗ್ಡೆ ಕೋಡಿಬೈಲು ನೆರವೇರಿಸಿದರು.
ಈ ಕಾರ್ಯಕ್ರಮದಲ್ಲಿ ಗುರುನರಸಿಂಹ ದತ್ತಿ ಮಂಡಳಿಯ ಸದಸ್ಯರು, ಸೇವಾ ಸಮಿತಿ ಸದಸ್ಯರು, ಪುನರ್ ನಿರ್ಮಾಣ ಮಂಡಳಿಯ ಸದಸ್ಯರು ಹಾಗೂ ಊರ ಪರವೂರ ಅಪಾರ ಸಂಖ್ಯೆಯ ಭಕ್ತಾದಿಗಳು ಭಾಗವಹಿಸಿದ್ದರು.

ಕುಂಟಾರು ನೇಮ: ಆಮಂತ್ರಣ ಬಿಡುಗಡೆ

ಮುಳ್ಳೇರಿಯ: ಕುಂಟಾರು ಶ್ರೀರಾಮ ನಗರದ ಶ್ರೀ ದುರ್ಗಾ ರಕ್ತೇಶ್ವರಿ ಬನದಲ್ಲಿ ಮೇ 21 ಮತ್ತು 22ರಂದು ನಡೆಯಲಿರುವ ಶ್ರೀ ರಕ್ತೇಶ್ವರೀ ದೈವದ ನೇಮೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭವು ಕುಂಟಾರು ಶ್ರೀ ಅಯ್ಯಪ್ಪ ಭಜನಾ ಮಂದಿರದ ಪರಿಸರದಲ್ಲಿ ಜರಗಿತು.
ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿಯವರು ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಬನ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಅಯ್ಯಪ್ಪ ಮಂದಿರ ಸಮಿತಿಯ ಅಧ್ಯಕ್ಷ ಗಣೇಶ ಕೆ., ರಾಮಚಂದ್ರ, ರಮಣಿ ಕೆ. ಮುಂತಾದವರು ಉಪಸ್ಥಿತರಿದ್ದರು. ಸಮಿತಿಯ ಕಾರ್ಯದರ್ಶಿ ಪ್ರಭಾಕರ ಕೆ. ಸ್ವಾಗತಿಸಿ, ಕೋಶಾಧಿಕಾರಿ ದಿಲೀಪ್ ವಂದಿಸಿದರು.

ಯಶೋಧಾ ಟೀಚರ್‌ನ ಸೇವಾ ಬದ್ಧತೆ ಇತರರಿಗೆ ಮಾದರಿ: ಫಾತಿಮತ್ ಜೌರಾ



ಮಂಜೇಶ್ವರ: ಮಂಜೇಶ್ವರ ಸಮೀಪದ ಉದ್ಯಾವರ ಗುತ್ತು ಅಂಗನವಾಡಿ ಶಾಲೆಯಲ್ಲಿ ಕಾರ್ಯಕರ್ತೆಯಾಗಿ ನಿವೃತ್ತರಾದ ಯಶೋಧಾ ಟೀಚರ್ ಅವರನ್ನು ಕೇಂದ್ರದ ಮಕ್ಕಳ ಪೋಷಕರು ಹಾಗೂ ಸ್ಥಳೀಯ ನಾಗರಿಕರ ಪರವಾಗಿ ಸನ್ಮಾನಿಸಲಾಯಿತು.
ಸಭಾಧ್ಯಕ್ಷತೆ ವಹಿಸಿ ಮಾತನಾಡಿದ ಮಂಜೇಶ್ವರ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಫಾತಿಮತ್ ಜೌರಾ ಅವರು, ಯಶೋಧಾ ಟೀಚರ್ ಅವರ ಸೇವಾ ಬದ್ಧತೆ ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.
ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಹಾಗೂ ಅಂಗನವಾಡಿಗೆ ಆಗಮಿಸುವ ಪುಟಾಣಿಗಳ ಬಗ್ಗೆ ಕಾಳಜಿ ವಹಿಸುವಲ್ಲಿ ಯಶೋಧಾ ಟೀಚರ್ ಅವರಿಗೆ ವಿಶೇಷ ಶ್ರದ್ಧೆ, ಆಸಕ್ತಿ, ಪ್ರಾಮಾಣಿಕತೆ ಇತ್ತು ಎಂದು ಅವರು ಶ್ಲಾಘನೆ ವ್ಯಕ್ತಪಡಿಸಿದರು.
ಸಮಗ್ರ ಶಿಶು ಅಭಿವೃದ್ಧಿ ಸೇವೆ ಯೋಜನೆ (ಐಸಿಡಿಎಸ್) ಮೇಲ್ವಿಚಾರಕಿ ಸುಮತಿ ಮಾತನಾಡಿ, ಓರ್ವ ಜನಾನುರಾಗಿ ಅಂಗನವಾಡಿ ಕಾರ್ಯಕರ್ತೆಯನ್ನು ಊರಿನ ಜನರು ಯೋಗ್ಯ ರೀತಿಯಲ್ಲಿ ಬೀಳ್ಕೊಡುತ್ತಿರುವುದು ಒಂದು ಆರೋಗ್ಯಕರ ಸಮಾಜದ ಲಕ್ಷಣವಾಗಿದೆ ಎಂದು ನುಡಿದರು.
ಸ್ಥಳೀಯ ಮುಖಂಡರಾದ ನೈನಾರ್ ಅಹಮ್ಮದ್, ನಾರಾಯಣ ನಾಯ್ಕ್, ನಾರಾಯಣನ್, ರವಿಚಂದ್ರ, ಸುಲೋಚನಾ ಮುಂತಾದವರು ಶುಭಾಶಂಸನೆಗೈದರು. ಆರೋಗ್ಯ ಇಲಾಖೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಮಕ್ಕಳ ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಆಶಾ ಕಾರ್ಯಕರ್ತೆ ಸೀತಾ ಸ್ವಾಗತಿಸಿ, ವಂದಿಸಿದರು. ರವಿಚಂದ್ರ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಬಹು ನೃತ್ಯ ಪ್ರತಿಭೆ ದೀಕ್ಷಾ ಕುಲಾಲ್‌ಗೆ 'ಪ್ರತಿಷ್ಠಿತ ಕಲಾ ಸಾರಥಿ 2026' ಗೌರವ



ಮಂಜೇಶ್ವರ: ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವಾರ್ಷಿಕ ಜಾತ್ರೋತ್ಸವದ ಪ್ರಯುಕ್ತ ನಡೆದ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ಸಾಂಸ್ಕೃತಿಕ ಕಲಾ ವೈಭವ ಕಾರ್ಯಕ್ರಮದ ವೇದಿಕೆಯಲ್ಲಿ ಬಹು ನೃತ್ಯ ಪ್ರತಿಭೆ ದೀಕ್ಷಾ ರಾಧಾಕೃಷ್ಣ ಕುಲಾಲ್ ಅವರನ್ನು ತನ್ನ ಕಲಾ ಪ್ರಸ್ತುತಿ 20 ವೇದಿಕೆ ಪೂರೈಸಿ ಪ್ರತಿಭಾ ಪ್ರದರ್ಶನದ ಸಾಧನೆ ಗಮನಿಸಿ ಅವರ ಅಪ್ರತಿಮ ಪ್ರತಿಭೆಗೆ ಪ್ರೋತ್ಸಾಹಕವಾಗಿ ಸಂಸ್ಥೆ ವತಿಯಿಂದ ಪ್ರತಿಷ್ಠಿತ ಕಲಾ ಸೌರಭ 2026 ಬಿರುದು ನೀಡಿ ಸನ್ಮಾನಿಸಲಾಯಿತು.
ಸಂಸ್ಥೆ ಪ್ರಧಾನ ಕಾರ್ಯದರ್ಶಿ ಗುರುರಾಜ್ ಕಾಸರಗೋಡು ಮುಂದಾಳತ್ವದಲ್ಲಿ ನಡೆದ ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ನಾರಾಯಣ ಹೆಗ್ಡೆ ಕೋಡಿಬೈಲು, ಸೇವಾ ಸಮಿತಿ ಅಧ್ಯಕ್ಷ ಸುಧೀಶ್ಚಂದ್ರ ಶೆಟ್ಟಿಇಚ್ಲಂಗೋಡು, ಪ್ರಧಾನ ಕಾರ್ಯದರ್ಶಿ ಎಂ.ವಿಜಯ ಕುಮಾರ್ ರೈ, ಕೃಷ್ಣ ಕುಮಾರ್ ಐಲ, ಪುರುಷೋತ್ತಮ ಐಲ, ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆ ಗೌರವಾಧ್ಯಕ್ಷ ಗಣೇಶ್ ಪ್ರಸಾದ್ ಆಳ್ವ, ಜಯಪ್ರಭಾ ವೈ., ಅನ್ನಪೂರ್ಣ ಶೆಟ್ಟಿ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಜರಗಿತು.
ದೀಕ್ಷಾ ರಾಧಾಕೃಷ್ಣ ಕುಲಾಲ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ನಿವಾಸಿ ರಾಧಾಕೃಷ್ಣ ಕುಲಾಲ್ ಮತ್ತು ಸರಸ್ವತಿ ದಂಪತಿಯ ಪುತ್ರಿ. ಎಳವೆಯಿಂದಲೇ ಕಲೆಯಲ್ಲಿ ಆಸಕ್ತಿ ಹೊಂದಿರುವ ಅವರು ಓದಿನ ಜೊತೆಗೆ ನೃತ್ಯವನ ಅಭ್ಯಾಸ ಮಾಡಿ ಹಲವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕಲಿಕೆ ಸಂದರ್ಭ ಶಾಲಾ ಕಾಲೇಜುಗಳಲ್ಲಿ ಹಲವು ಕಲಾ ವೇದಿಕೆ ಹಾಗೂ ಕ್ರೀಡೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನ , ಪ್ರಶಸ್ತಿ ಪಡೆದು ಮಿಂಚಿರುವ ಅವರು ಪ್ರಸ್ತುತ ಬ್ಯುಟೀಶಿಯನ್ ಕೋರ್ಸ್ ಮಾಡುತ್ತಿದ್ದಾರೆ.



ಕಾಸರಗೋಡು ಸಿರಿಬಾಗಿಲು ಪ್ರತಿಷ್ಠಾನದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರವನ್ನು ಮೇ 12 ರಂದು ಶೃಂಗೇರಿ ಜಗದ್ಗುರುಗಳು ಲೋಕಾರ್ಪಣೆಗೊಳಿಸಲಿದ್ದು, ಈ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಭವನದಲ್ಲಿ ಬಿಡುಗಡೆ ಮಾಡಲಾಯಿತು.



ಮುಳ್ಳೇರಿಯ ಮುಂಡೋಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರಿ ಶಾಸ್ತಾರ ಕ್ಷೇತ್ರದಲ್ಲಿ ವಾರ್ಷಿಕ ನೇಮದ ಅಂಗವಾಗಿ ಶ್ರೀ ಧೂಮಾವತಿ, ಮೂವಾಳಂಕುಯಿ ಚಾಮುಂಡಿ ದೈವದ ನರ್ತನ ನಡೆಯಿತು.

ಬಾರ ಶ್ರೀ ವಣ್ಣಾರತ್ ಭಗವತೀ ದೇವಳದಲ್ಲಿ ಬ್ರಹ್ಮಕಲಶ, ಹೊರೆಕಾಣಿಕೆ ಮೆರವಣಿಗೆ



ಕಾಸರಗೋಡು: ಬಾರ ಶ್ರೀ ವಣ್ಣಾರತ್ ಭಗವತೀ ದೇವಸ್ಥಾನದ ಬ್ರಹ್ಮಕಲಶ ಮಹೋತ್ಸವದ ಅಂಗವಾಗಿ ಹಸಿರುವಾಣಿ ಹೊರೆಕಾಣಿಕೆ ಸಮಾರಂಭವು ಯಶಸ್ವಿಯಾಗಿ ನಡೆಯಿತು. ಮುತ್ತುಕೊಡೆ ಮತ್ತು ಶಂಖನಾದದೊಂದಿಗೆ ಬಾರ ಶ್ರೀ ವಣ್ಣಾರತ್ ಭಗವತೀ ದೇವಸ್ಥಾನಕ್ಕೆ ಹೊರೆಕಾಣಿಕೆಗಳನ್ನು ಸಮರ್ಪಿಸಲಾಯಿತು.
ಹಸಿರುವಾಣಿ ಹೊರೆಕಾಣಿಕೆ ಕಾರ್ಯಕ್ರಮವನ್ನು ತರವಾಡು ಸ್ಥಾನಿಕ ಮನೋಜ್ ತಚ್ಚಂಗಾಡ್ ದೀಪ ಬೆಳಗಿಸುವ ಮೂಲಕ ನೆರವೇರಿಸಿ ಶುಭಕೋರಿದರು. ನಂತರ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರನ್ನು ಪೂರ್ಣಕುಂಭದೊಂದಿಗೆ ಶ್ರೀ ಕ್ಷೇತ್ರಕ್ಕೆ ಸ್ವಾಗತಿಸಲಾಯಿತು.
ಬಳಿಕ ಜರಗಿದ ಧಾರ್ಮಿಕ ಸಭೆಯನ್ನು ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ದೀಪ ಬೆಳಗಿಸಿ ಉದ್ಘಾಟಿಸಿದರು. ಆಚರಣಾ ಸಮಿತಿಯ ಅಧ್ಯಕ್ಷ ಕುಂಞಿಕೃಷ್ಣನ್ ನಾಯರ್ ಅಧ್ಯಕ್ಷತೆ ವಹಿಸಿದ್ದರು.
ಸ್ಥಾನಿಕ ಮನೋಜ್ ತಚ್ಚಂಗಾಡ್, ತರವಾಡು ಪ್ರಧಾನ ಕಾರ್ಯದರ್ಶಿ ಕೆ.ವಿ.ಸುಕುಮಾರನ್ ಎಡನೀರು, ವಕೀಲ ಎ.ಬಾಲಕೃಷ್ಣನ್ ನಾಯರ್, ಪ್ರಧಾನ ಕಾರ್ಯದರ್ಶಿ ಅಂಜುರೂರು ನಾಯರ್ ಮಹಾಸಭಾ ಕೀಜೂರು, ಶಿವರಾಮನ್ ಮೇಸ್ತರಿ, ನಾರಾಯಣನ್ ಚೆರುಟ್ಟ ಭಾಗವಹಿಸಿದ್ದರು. ಅಖಿಲೇಶ್ ನಗುಮುಗಂ ನೆಟ್ಟಣಿಗೆ ಸ್ವಾಗತಿಸಿ, ಆಚರಣಾ ಸಮಿತಿಯ ಉಪಾಧ್ಯಕ್ಷ ಎಂ. ಬಾಲಕೃಷ್ಣನ್ ನಾಯರ್ ಮಳಿಯಕ್ಕಲ್ ವಂದಿಸಿದರು. ತಂತ್ರಿವರ್ಯ ಬ್ರಹ್ಮಶ್ರೀ ಅರವತ್ ಕೆ.ಯು. ಪದ್ಮನಾಭತಂತ್ರಿ ಅವರನ್ನು ಬಾರ ಶ್ರೀ ಮಹಾವಿಷ್ಣು ದೇವಳದಿಂದ ಮುತ್ತುಕೊಡೆ ತಾಳಮೇಳಗಳೊಂದಿಗೆ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು.

ಎಣ್ಣೆಯು ಹಲವು ವ್ಯಾಧಿಗಳಿಗೆ ದಿವ್ಯೌಷಧಿ

ಭಗವತೀ ಸಾನಿಧ್ಯ ಕೇರಳದಲ್ಲಿ ಅತ್ಯಂತ ವಿಶೇಷ ಭಗವತೀ ಸಾನಿಧ್ಯವು ಕೇರಳದಲ್ಲಿ ಬಹಳ ವಿಶೇಷ. ಭಗವತಿಯನ್ನು ಧ್ಯಾನಿಸಿದರೆ ನಮ್ಮ ಮನಸ್ಸಿನ ಕ್ಲೇಶಗಳನ್ನು ಹೋಗಲಾಡಿಸಿ ನಮ್ಮನ್ನು ಸಕಲ ಸುಖ ಸಂಪತ್ತನ್ನು ನೀಡಿ ಕಾಪಾಡುವರು ಎಂಬುದು ಅಚಲ ನಂಬಿಕೆ. ಇಲ್ಲಿನ ಎಣ್ಣೆಯು ಹಲವು ವ್ಯಾಧಿಗಳಿಗೆ ದಿವ್ಯೌಷಧಿಯಾಗಿದೆ ಎಂಬುದು ನಂಬಿಕೆ. 13 ವರ್ಷಗಳ ಬಳಿಕ ನಡೆಯುವ ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವವು ನಿರ್ವಿಘ್ನವಾಗಿ ನಡೆಯಲಿ. ಇಲ್ಲಿನ ತುಪ್ಪಕ್ಕೆ ಅದರದ್ದೇ ಮದ್ದಿನ ಶಕ್ತಿ ಇದೆ. ಈ ಕ್ಷೇತ್ರಕ್ಕೆ ಎಲ್ಲಾ ಸಮುದಾಯದವರು ಬಂದು ಸೇವೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಕ್ಷೇತ್ರಕ್ಕೆ ಬರುವ ಭಕ್ತರು ಹಲವು ಪಂಗಡದವರು ಇರುತ್ತಾರೆ. ಆದರೆ ದೇವರಿಗೆ ಎಲ್ಲರೂ ಸಮಾನರು. ಇಲ್ಲಿ ಪ್ರಕೃತಿಯನ್ನು ಸಂರಕ್ಷಣೆ ಮಾಡಿಕೊಂಡು ನಮ್ಮ ಹಿರಿಯರು ಹಾಕಿಕೊಟ್ಟ ಅಡಿಪಾಯದಡಿ ಕಾಪಾಡಿಕೊಂಡು ಬರುತ್ತಿರುದು ಸಂತೋಷದ ವಿಷಯ ಮತ್ತು ಉತ್ತಮ ಬೆಳವಣಿಗೆಯಾಗಿದೆ.

● ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಎಡನೀರು ಮಠಾಧೀಶರು


ADMISSION OPEN 2026-27
St Philomena P.U. College
Estd 1958
Philonagar, Darbe-574202, Puttur, D.K. District
Accredited with 'A' Grade | www.sppucputtur.org
ADMISSION Enquiries Contact : 9880069586
SCIENCE
PCMB | PCMC
PCME | PCMS
COMMERCE
SEBA | SCBA| ECBA
ARTS
HEPS
II PUC RESULTS 2026
Hearty Congratulations
STATE ACHIEVERS
5TH RANK 595/600 APOORVA SCIENCE
6TH RANK 595/600 SAPEEDA COMMERCE
9TH RANK 592/600 SONICA CUTINHA COMMERCE
10TH RANK 591/600 DEEPTHI K C COMMERCE
90% AND ABOVE MARKS HOLDERS
SCIENCE
582 THRISHA K N
578 JAHNAVI M
577 SHAMMA
577 SHAINEY SANCITA VEIGAS
577 PRADHI CLARE PINTO
574 SOUJANYA K H
574 FATHIMATH ASNA K
574 AYSHA SALHA
574 ABHIJNA D
573 ANVITH RAI
570 MUHAMMAD AFSAL
569 KRITHI S RAI
569 KADHEEJATH NIDHA
568 AYSHA SHIZA
565 SANJANA P B
565 MANVITH M
564 SAMHITHA P B
564 RAASHI RAI
564 FATHIMATH MARIYAM SIFANA
563 JASMINE P
562 VINEETH P
561 ERROL SHAMAN DSOUZA
560 THRISHA RAI
560 MANEESH C G
558 FATHIMATH NAJA
558 DHEERAJ HEGDE
556 SUHAILA HAJIRA K
556 MOHAMMAD KAAMIR
555 SHAUN SEQUIERA
554 KRUTHI K L
552 LAKSHMIKANTH H H
552 AIRA KHANAM
551 HALIMATH SHAHINA
549 BHUVAN A J
549 ANAS MOHAMMED ILLIYAS
548 WILLMA JOYCY
548 NISBAH ABDUL MAJEED
548 DEENA PEARL LOBO
547 VARUN C D
546 AYISHATH SAHLA
544 MAHAMMED MISBAH
543 RIYAN LOBO
543 AMULYA H A
543 ABDULLA SAIFULLAHILL MASLOOL K M
540 HITHASHREE K S
COMMERCE
590 PRANAM K
590 B V ANU
590 AYSHA MAHFOOLA
587 AYESHA ASNA
586 K SHRAVYA
585 SPARSHA J SHETTY
585 DHANVANTH K J
584 SHREYASHREE
583 K MUHAMMED AZMAL
583 CHINMAY RAO
583 CHETHAN B A
581 K G PALLAVI
580 RIZAMINA
579 CHAITHANYA P J
579 AKASHRAJ
578 SHEK MOHAMMAD JASIF
578 NEHA YADHUKUMAR
576 JAHNAVI K
575 SHIFANA K
574 BHOOMIKA A
574 ABHIN GOWDA H S
574 A MOHAMMAD MUHAD
573 NAFEESATH SHAMNAZ
572 THANVI K S
572 ROHAN BOPANNA A N
572 POOJITHA H B
572 MUHAMMAD BILAAL
572 DAYAN DEVAIAH G T
571 ALIMA RAIZA
570 LAVANYA
569 SRIJIT
567 NISHANTH
567 MOHAMMAD AFRAZ
567 MAHAMMAD AFIL
566 SAWBAN HUSSAIN.png
565 AISHANI N ACHARYA
564 TANMAY P GOWDA
564 MOHAMMAD FARAZ
564 MAHAMMAD SHAAHID
562 WANBHAKUPAR S
562 KRIPASHREE P
562 FATHIMATH SHIBA
562 AVIN P
559 MAHAMMAD KASHIF
558 SHUNAIBATH JAFRINA A R
558 HALEEMA ROOBY
556 SUJAN D S
556 PANNAG RAI T
556 AYSHATH SUNAINA M
555 VINOL DIYA PINTO
555 AYISHATH MASHEEA
554 RITHESH K H
554 AISHATH ANA
554 ABOOBAKAR AMISH
553 FATHIMA SHAZA
553 AFREENA D K
552 MUHAMMAD SABUHAN
552 LEANNA CLARINE DSOUZA
552 JANAVIJERUSHA J
552 ASHEL JANE DCUNHA
551 MOHAMMAD ANAS
550 P M MOHAMMAD NAMSHIM
549 SHEIK MAHAMMAD SHAHIL
549 HASTHA
548 AYISHATH SAFA
545 SNEHA K S
545 KISHORI M
545 A M MUHAMMAD SHAMIL
543 NEFISATHUL FIZA
542 NIHAL A
541 VIDHITHA P K
541 GURUPRASAD C S
ARTS
580 ASHWIN GEORGE
558 MONICA MASCARENHAS
541 AJAY NAYAK H
We are PROUD OF You
aarvi 89 70 80 20 40